ಸಂವಾದ

ಅಕ್ಟೋಬರ್
೨೦೧೦
ರೂ. ೨೦

ಧರ್ಮರಾಜಕಾರಣ

ದೇಶಭಕ್ತಿ!
ಗೋರಕ್ಷಣೆ!!
ಹಿಂದೂರಾಷ್ಟ್ರ!!!

ಸಂವಾದ

ಮಾಸ ಪತ್ರಿಕೆ

ಸಂಪುಟ ೮ ಸಂಚಿಕೆ ೧೨
ಅಕ್ಟೋಬರ್ ೨೦೧೧

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ Editorial: 9448048306
✆ Circulation: 9945264687,
080-23480278
e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

❑ ಪತ್ರಗಳು ೦೩
❑ ಹೊಸ ಪುಸ್ತಕ ೦೪
❑ ಸಂಪಾದಕರೊಂದಿಗೆ ಸಂವಾದ:
○ ಅಪೂರ್ವ ಡಿ.ಸಿಲ್ವ ೦೬
○ ಡಾ.ಎಸ್ ನರೇಂದ್ರ ಕುಮಾರ್ ೦೭
❑ ತುಕ್ಕು ಹಿಡಿದ ಪ್ರಗತಿಪರತೆಯೂ, ಅದರ ಬೌದ್ಧಿಕ ಗುತ್ತೇದಾರಿಕೆಯೂ,
○ ಡಿ.ಎಸ್ ನಾಗಭೂಷಣ ೧೦
❑ ಬೇಕಾದುದು ವೈಷ್ಣವ ದೀಕ್ಷೆಯಲ್ಲ: ತ್ರಿಜ ದೀಕ್ಷೆ
○ ದೇವನೂರ ಮಹಾದೇವ ೧೫
❑ ಧರ್ಮ, ಮಠ ಮತ್ತು ರಾಜಕಾರಣ
○ ನಾ ದಿವಾಕರ ೧೬
❑ ದೇಶಭಕ್ತಿ, ಗೋರಕ್ಷಣೆ ಮತ್ತು "ಹಿಂದೂ ರಾಷ್ಟ್ರ"
○ ಸುರೇಶ್ ಭಟ್ ೨೦





❑ ಪಶ್ಚಿಮ ಬಂಗಾಳ: ರಕ್ತಸಿಕ್ತ ಚುನಾವಣೆ ಕಾದಿದೆಯೇ?
○ ತುಷಾ ಮಿತ್ತಲ್ ೨೪
❑ ಉರಿ ಬೆಂಕಿಯ ಒಂದು ಎಳೆ
○ ಕೆ.ಎಲ್ ಚಂದ್ರಶೇಖರ್ ಐಜೂರ್ ೨೬
❑ ತಾರತಮ್ಯದ ಲೂಟಿಕೋರ ಶಿಕ್ಷಣ ದಂಧೆ ಮತ್ತು ಸಾಮಾಜಿಕ ನ್ಯಾಯ
○ ವೈ. ಮರಿಸ್ವಾಮಿ ೩೨
❑ ಒಳಮೀಸಲಾತಿ ಪ್ರಜಾತಾಂತ್ರಿಕ ಅಗತ್ಯ
○ ಮಾರುತಿ. ಹೆಚ್ ೩೪
❑ ಧರ್ಮವೋ? ರಾಜಕೀಯ ತಂತ್ರವೋ?
ಜ್ಯೋತಿ ಗುರುಪ್ರಸಾದ್ ೩೬
❑ ಕಾಲಮಾನ...೧೧
○ ಡಾ. ಮುಜಾಫ್ಫರ್ ಅಸ್ಸಾದಿ ೩೮
❑ ಧರೆ ಹತ್ತಿ ಉರಿದರೆ... ೨೬
○ ಡಾ. ಟಿ.ಆರ್ ಚಂದ್ರಶೇಖರ್ ೪೨
❑ ದಲಿತ್ ಡೈರಿ
○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬
❑ ಬುದ್ಧಾಯಣ
○ ಸಿ. ಎಚ್ ರಾಜಶೇಖರ್ ೫೦

ಕವನಗಳು : ❑ ದಿವ್ಯ ಸುಂದರಿ ಮತ್ತು ನಗ್ನ ಸತ್ಯಗಳು ೦೪ ❑ ಎಚ್ಚರಿಕೆ ೪೫

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಜಾತಿ ಶ್ರೇಷ್ಠತೆಯ ಯಜಮಾನಿಕೆ

ಮಾನ್ಯ ಸಂಪಾದಕರಿಗೆ,

'ದೊಂಬರಾರಟ' ಶಬ್ದವನ್ನು ರೂಪಕವಾಗಿ ತಿಳಿಯಬೇಕೆಂತಲೂ, ಅದು ದೊಂಬ ಜಾತಿಯವರನ್ನು ಅವಮಾನಿಸಿದಂತೆ ಎನ್ನುವುದೇ ಒಂದು ಪಕ್ಷಪಾತಿ ಅರ್ಥೈಸುವಿಕೆ. ಜಾತಿನಿಂದನೆಯ ಯಾವ ಅಂಶವೂ ಅದರಲ್ಲಿ ಕಾಣುವುದಿಲ್ಲ, ಎಂದು ಡಿ.ಎಸ್. ನಾಗಭೂಷಣ ಅವರು ಸಲೀಸು ಉತ್ತರವನ್ನು ಕೊಟ್ಟಿದ್ದಾರೆ. ಸಮಾಜದ ನಡುವೆ ಆಳವಾಗಿ ಬೇರೂರಿರುವ ಜಾತಿಗಳ ಸಂಕೀರ್ಣತೆಯನ್ನು, ತರಗತಿಯಲ್ಲಿ ಮೇಷ್ಟರ ಮುಂದೆ ಕೈಕಟ್ಟಿ ಮಗ್ಗಿ ಒಪ್ಪಿಸಿದಂತೆ ಹೇಳಿದಂತಾಗಿದೆ ನಾಗಭೂಷಣರ ಈ ವಿವರಣೆ.

ಕರ್ನಾಟಕದಲ್ಲಿ ದೊಂಬರ ಕುಲದವರು, ಎಲ್ಲ ಬಗೆಯ ಸಾಮಾಜಿಕ ನ್ಯಾಯದಿಂದ ವಂಚಿತರಾಗಿ ಸಂಖ್ಯಾ ಬಲದಿಂದ ದಿನೆ ದಿನೆ ಕ್ಷೀಣಿಸುತ್ತಿರುವ ಹಿಂದುಳಿದ ಜಾತಿಗಳ ಯಾದಿಗೆ ಸೇರಿದವರು. 'ಕೊರಮ' 'ಕೊರಚ' 'ಹಜಾಮ' ಮುಂತಾದ ಜಾತಿಗಳ ಹೆಸರಗಳು ಇಂದು ಹೀಗಳೆಯುವ ಅರ್ಥದಲ್ಲಿ ಬಯ್ಗುಳದ ಪದವಾಗಿ ಬಳಕೆಯಾಗುತ್ತಿರುವುದು ಸತ್ಯವಾಗಿದೆ. ಅದೇ'ಬ್ರಾಹ್ಮಣ', 'ಒಕ್ಕಲಿಗ', 'ಲಿಂಗಾಯತ'ಎಂಬ ಜಾತಿಗಳು ನಿಂದನಾ

ಪತ್ರಾಗ್ನಿ

ಶಬ್ದಗಳಾಗಿ ಲಾಗಾಯ್ತಿನಿಂದಲೂ ಬಳಕೆಯಾಗಿಲ್ಲ.

ಜಾತಿ ಶ್ರೇಷ್ಠತೆ ಎನ್ನುವುದು ನಮ್ಮ ನಿತ್ಯದ ಭಾಷೆಯಲ್ಲಿಯೂ ತನ್ನ ಯಜಮಾನಿಕೆಯನ್ನು ಹೇಗೆ ಉಳಿಸಿಕೊಂಡಿದೆ ಎನ್ನುವುದನ್ನು ಸಮಾಜದ ನಡುವೆ ಉಸಿರಾಡುವವರಿಗೆ ತೆರೆದು ಹೇಳಬೇಕಾಗಿಲ್ಲ! ಆದರೆ, ನಾಗಭೂಷಣರಂತಹ ವಿದ್ವಾಂಸರಿಗೆ ಇದು ಜಾತಿ ನಿಂದನೆಯಾಗಿ ಕಾಣಿಸುವುದಿಲ್ಲ!

ನಾಗಭೂಷಣರ ಬಳಿ ಇರುವ ನಿಘಂಟಿನಲ್ಲಿ ದೊಂಬ ಜಾತಿಗೆ ಅಪಮಾನಿಸುವ ಅರ್ಥ ಇಲ್ಲದಿರಬಹುದು! ಆದರೆ ಕೊರಮ, ಕೊರಚ, ದಕ್ಕಲೋರು, ಮಾದಿಗ, ಹಜಾಮ, ದೊಂಬರು ಮುಂತಾದ ನಿರ್ಲಕ್ಷಿತ ಜಾತಿಗಳನ್ನು ಅವಕಾಶ ಸಿಕ್ಕಾಗಲೆಲ್ಲ ಬಯ್ಗುಳಗಳ ಮೂಲಕ ಅಪಮಾನಿಸುವ ಕಠೋರ ಮನಸ್ಸು ಸಮಾಜದಲ್ಲಿ ಸುಪ್ತವಾಗಿದೆ. ಅದು ಆಗಾಗ್ಗೆ ವ್ಯಕ್ತವಾಗುತ್ತಲೇ ಇರುತ್ತದೆ.

ಅಂದು ನಿಘಂಟು ರಚನಾ ಸಮಿತಿಯಲ್ಲಿ ಯಾರಾದರೂ ಒಬ್ಬ ಕೊರಮ, ಕೊರಚ ಅಥವಾ ದೊಂಬ ಜಾತಿಯವನು ಇದ್ದಿದ್ದರೆ, ಈಗಿರುವ ಅರ್ಥದಲ್ಲಿ ಅದು ಅಚ್ಚಾಗುತ್ತಿರಲಿಲ್ಲ! ಆದರೆ ಆಗ ಇದ್ದವರೆಲ್ಲ ನಾಗಭೂಷಣ ರಂತಹ ವಿದ್ವಾಂಸರೆ ಆಗಿದ್ದಿರಬಹುದು!ಯಾವುದೇ ರೂಪದಲ್ಲಾದರೂ ಸರಿ, ಒಂದು ಜಾತಿಯವರನ್ನು ಜಾತಿಯ ಕಾರಣಕ್ಕಾಗಿ ಅಪಮಾನಿಸುವುದು ನಾಗರಿಕ ಸನ್ನಡತೆಯಲ್ಲ.

ಪತ್ರಿಕೆಗಳಲ್ಲಿ ದ್ವಾರಕಾನಾಥ್ ಅವರು ದೊಂಬರಾಟ ಶಬ್ದದ ಬಳಕೆಯ ಬಗೆಗೆ ಎತ್ತಿರುವ ತಕರಾರು ಅಂತಃಕರಣ ದಿಂದ ಕೂಡಿದೆ. ಆದ್ದರಿಂದ ಇಂತಹ ಅಪಮಾನಕ್ಕೆ ಒಳಗಾಗುತ್ತಿರುವ ಜಾತಿಗಳಿಗೆ ಈಗಿರುವ ವ್ಯವಸ್ಥೆಯಲ್ಲಿ ಸೂಕ್ಷ್ಮ ಇಲ್ಲದ ರಾಜಕಾರಣಿಗಳಿಂದ ಸಾಮಾಜಿಕ ನ್ಯಾಯ, ಗೌರವ ಸಿಗದಿರಬಹುದು, ಆದರೆ ಯಾವ ಕಾರಣಕ್ಕೂ ಅವರ ಆತ್ಮಗೌರವಕ್ಕೆ ಚ್ಯುತಿ ತರದಂತೆ ಸಾರ್ವಜನಿಕವಾಗಿ ನಡೆದುಕೊಳ್ಳುವುದು ವಿವೇಕವಂತರ ಕರ್ತವ್ಯವಾಗಬೇಕು. ಬುದ್ಧದೇವ, ಬಸವಣ್ಣನವರು ಮತ್ತು ಕುವೆಂಪು ಅವರನ್ನು ಓದಿರುವವರಿಗೆ ದೊಂಬರು ಜನಾಂಗದ ನೋವು ಅರ್ಥವಾಗಬಹುದು ಎಂದು ಭಾವಿಸಿದ್ದೇನೆ.

ವೈ.ಆರ್. ರಂಗದಾಸಪ್ಪ
ತುಮಕೂರು

'ದೊಂಬರಾಟ' ಪದ ಬಳಕೆ ಕುರಿತಂತೆ ಹಲವಾರು ಪತ್ರಗಳು ಬಂದಿವೆ. ಆಯ್ದ ಕೆಲವನ್ನು ಪುಟ ೯ರಲ್ಲಿ ಪ್ರಕಟಿಸಲಾಗಿದೆ. –ಸಂ

ಸಮಂಜಸ ಮತ್ತು ದುಡುಕು

ಮಾನ್ಯ ಸಂಪಾದಕರೇ,

'ಸಂವಾದ ಸೆಪ್ಟೆಂಬರ್–೨೦೧೦ರ ಸಂಚಿಕೆಯಲ್ಲಿ ಡಿ.ಎಸ್. ನಾಗಭೂಷಣ ಅವರು ಮರಿಸ್ವಾಮಿಯವರ 'ಜನಾದೇಶದಿಂದ ದೈವ ಕೃಪೆಯೆಡೆಗೆ', ಮತ್ತು ತರೀಕೆರೆಯವರ 'ಯಶೋಧರೆಯ ಕಷ್ಟಗಳು' ಲೇಖನಗಳ ಬಗ್ಗೆ, ಹಾಗೂ ಬಾಪು ಹೆದ್ದೂರ ಶೆಟ್ಟರು ಶಿವಸುಂದರ್ ಅವರ ಲೇಖನಕ್ಕೆ (ಆಗಸ್ಟ್–೨೦೧೦ರ ಸಂವಾದ) ವ್ಯಕ್ತಪಡಿಸಿರುವ ಪ್ರತಿಕ್ರಿಯೆಗಳು ಸರಿಯಾಗೇ ಇವೆ ಎನಿಸುತ್ತದೆ. ಅದರಲ್ಲೂ ಶೆಟ್ಟರ ಲೇಖನದ ಬಗೆಗಿನ ಪ್ರತಿಕ್ರಿಯೆ ಅತ್ಯಂತ ಸಮಂಜಸವಾದುದೇ ಆಗಿದೆ.

ಆದರೆ, ನಮ್ಮ ಬಹುಮುಖ್ಯ ಸಂಸ್ಕೃತಿ ಚಿಂತಕರಲ್ಲಿ ಒಬ್ಬರಾದ ರಹಮತ್ ತರೀಕೆರೆಯವರ 'ಕರ್ನಾಟಕ ಸಂಸ್ಕೃತಿ ಮತ್ತು ಲೋಹಿಯಾವಾದ' (ಸಂವಾದ–ಆಗಸ್ಟ್–೨೦೧೦) ಲೇಖನಕ್ಕೆ ವ್ಯಕ್ತಪಡಿಸಿದ ಪ್ರತಿಕ್ರಿಯೆ ತುಂಬ ಅಮಾನವೀಯ ಅನಿಸುತ್ತಿದೆ.

ನಮ್ಮ ನಡುವಿನ ಸೂಕ್ಷ್ಮ ಸಂವೇದನಾ ಚಿಂತಕರಲ್ಲಿ ಒಬ್ಬರಾದ ನಾಗಭೂಷಣ ಅವರು ಇಲ್ಲಿ ದುಡುಕಿದಂತೆ ಕಾಣುತ್ತದೆ. ಅವರಿಗೆ ಪ್ರತಿಕ್ರಿಯಿಸಿರುವ ತರೀಕೆರೆಯವರ ಲೇಖನದಲ್ಲಿ ಅವರಿಗಾಗಿರುವ ನೋವು ಮಡುಗಟ್ಟಿದಂತಿದೆ! ಯಾಕೆ ನಾಗಭೂಷಣರೇ ಇಷ್ಟೊಂದು ನಿಷ್ಕರುಣಿಯಾದಿರಿ?! ಇದು ಖಂಡಿತ ತರೀಕೆರೆ ಅವರ ಬಗೆಗಿನ ವಕೀಲಿಕೆ ಪ್ರತಿಕ್ರಿಯೆಯಲ್ಲ, ಹಾಗೇ ಸ್ವಲ್ಪ ಸಮಾಧಾನವಾಗಿ ಯೋಚಿಸಿ ನೋಡಿ, ಎಂಬುದು ನನ್ನ ಮನವಿಯಷ್ಟೆ.

ಬಿ. ರಾಜಣ್ಣ
ಬೆಂಗಳೂರು



ಸಂವಿಧಾನವನ್ನು ಉಳಿಸೋಣ

ಮಾನ್ಯ ಸಂಪಾದಕರೇ,

ಸೆಪ್ಟೆಂಬರ್ ತಿಂಗಳ 'ಸಂವಾದ'ದಲ್ಲಿ ಬಂದಿರುವ ಎಲ್ಲಾ ಲೇಖನಗಳು ಸೊಗಸಾಗಿ ಮೂಡಿ ಬಂದಿವೆ. ಸಮಾಜಮುಖಿಯಾಗಿ ಚಿಂತಿಸುವವರಲ್ಲಿ ಅಂತಃ ಶಕ್ತಿಯನ್ನು ಉದ್ದೀಪನಗೊಳಿಸಲು ಸಹಕಾರಿಯಾಗಿವೆ. ಆ ಪೈಕಿ ನಾ. ದಿವಾಕರ ಅವರ ಲೇಖನ "ಟೆರರ್ ಅಲ್ಲ ಪ್ಯಾಸಿಜಂ" ಅಂತೂ ಪ್ರಬುದ್ಧವಾಗಿದೆ. ಹಿಂದೂಗಳ ರಕ್ಷಕರೆಂದು ಗೋರಕ್ಷಕರೆಂದು ರಾಮ ರಕ್ಷಕರೆಂದೂ ಬೊಗಳೆಬಿಡುವ ಬಲ ಪಂಥೀಯ ಸಂಘ ಪರಿವಾರದ ನಿಜವಾದ ಮುಖವಾಡವನ್ನು ತೆರೆದಿಡುವ ಮೂಲಕ ಕೇಸರಿ ಭಯೋತ್ಪಾದನೆಯ ಕರಾಳ ಮುಖವನ್ನು ಎಳೆ ಎಳೆಯಾಗಿ ತೆರೆದಿಟ್ಟಿದೆ.

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ

ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ
ರೂ.೨೦೦/- ರೂ.೫೦೦/- ರೂ.೮೦೦/-

ಸಂಘ–ಸಂಸ್ಥೆಗಳು/ಉದ್ಯಮಿಗಳಿಗೆ
ರೂ.೨೪೦/- ರೂ.೬೦೦/- ರೂ.೧೦೦೦

ವಿಶೇಷ ಹಿತೈಷಿ ಚಂದದಾರರಿಗೆ
ರೂ.೫೦೦/- ರೂ.೧೫೦೦/- ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ.

ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜಾತ್ಯಾತೀತವಾಗಿ, ಧರ್ಮಾತೀತವಾಗಿ, ಆದರ್ಶಗಳನ್ನು ಮೈ ಹೊದ್ದುಕೊಂಡು ಮಾನವನಿಂದ ಮಾನವನ ಶೋಷಣೆ ನಿಲ್ಲಬೇಕೆಂಬ ಮಹಾದಾಸೆಯಿಂದ ಹೋರಾಡಿದ ಕ್ರಾಂತಿಕಾರಿಗಳನ್ನ ಮಹಾನ್ ನಾಯಕರನ್ನೇ ಇಂದಿನ ದೇಶ ದ್ರೋಹಿಗಳು ಅವರಿಗೆ ಜನಿವಾರಗಳನ್ನು ಬಲವಂತವಾಗಿ ತೊಡಿಸುವ ಮೂಲಕ ಅಪವಿತ್ರಗೊಳಿಸುವ ಹೀನ ಕೃತ್ಯಕ್ಕೆ ಕೈಹಾಕಿದ್ದಾರೆ ಬುದ್ಧ, ಬಸವ, ಅಂಬೇಡ್ಕರ್, ಭಗತ್ ಸಿಂಗ್, ಲಾಲ ಲಜಪತಿರಾಯ್, ಖುದಿರಾಂ ಬೋಸ್ ರಂತಹವರ ಮೇಲೆ ಸಂಘ ಪರಿ ವಾರಪರ ಹದ್ದಿನ ಕಣ್ಣುಗಳು ಬಿದ್ದಿರುವುದು ವಿಪರ್ಯಾಸದ ಸಂಗತಿ.

ಮನುಷ್ಯನು ತಿನ್ನುವ ಆಹಾರವನ್ನು ನಿಯಂತ್ರಿಸುವ, ಗೋರಕ್ಷಣೆ ಹೆಸರಿನಲ್ಲಿ ಗೋಮುಖವ್ಯಾಘ್ರತನವನ್ನು ಪ್ರದರ್ಶಿಸುವ ಪ್ರಗತಿ ವಿರೋಧಿಗಳ ಬಗ್ಗೆ ಸಮಾಜದಲ್ಲಿ ಮೂಢ ನಂಬಿಕೆ ಅಂಧಕಾರಗಳ ಬಿತ್ತುವ ದುಷ್ಟ ಶಕ್ತಿಗಳ ಬಗ್ಗೆ ಎಲ್ಲರೂ ಒಂದಾಗಿ ಹೋರಾಟ ಮಾಡುವ ಮೂಲಕ ನಮ್ಮ ಸಂವಿಧಾನವನ್ನು ಎತ್ತಿ ಹಿಡಿಯುವ ಹಾಗೂ ಸಾಮಾಜಿಕ ನ್ಯಾಯಕ್ಕೆ ಬೆಲೆ ಹೆಚ್ಚಿಸಲು ಶ್ರಮಿಸೋಣ.

ಡಾ. ವೀರೇಶ್ ಬಳ್ಳಾರಿ,
ಬೆಂಗಳೂರು

ಹೊಸ ಪುಸ್ತಕ

ಅನನ್ಯತೆ
ಲೇ: ಕೆ.ಎಸ್. ಭಗವಾನ್
ಬೆಲೆ: ರೂ. ೧೨೫/-

ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡು ಪುಸ್ತಕರೂಪ ಪಡೆದಿರುವ ಇಲ್ಲಿನ ಲೇಖನಗಳು ಅಸಹಾಯಕರ ಮೇಲಿನ ದಬ್ಬಾಳಿಕೆ, ಹಾಗೂ ವಿಧ್ವಂಸಕಾರಿ ಚಟುವಟಿಕೆಗಳನ್ನು ಮತ್ತಷ್ಟು ವಿಸ್ತರಿಸಲು ಹವಣಿಸುತ್ತಿರುವ ಸನಾತನ ವ್ಯವಸ್ಥೆಗಳ ಹುನ್ನಾರಗಳನ್ನು ಬಯಲುಗೊಳಿಸುತ್ತವೆ. ವೈಚಾರಿಕ ನಿಲುವು, ಸಂಶೋಧಾನಾತ್ಮಕ ವಿಮರ್ಶೆಗಳಿಂದ ಮತೀಯವಾದಿಗಳಿಗೆ ಮರ್ಮಾಘಾತವಾಗುವಂತ ತೀಕ್ಷ್ಣತೆಯನ್ನು ಹೊಂದಿರುವ ಈ ಪುಸ್ತಕ ಮಾನವೀಯ ಪ್ರಜ್ಞೆಯನ್ನು ಎಚ್ಚರಿಸುವಲ್ಲಿ ಸಫಲವಾಗಿದೆ.

ಪ್ರಕಾಶಕರು: ಶ್ರುತಿಲೋಕ ಪ್ರಕಾಶನ
ಕೆ.ಜಿ.ಕೊಪ್ಪಲು, ಮೈಸೂರು-೬



ಕೋಮುವಾದಿ ಕಾರ್ಯಚರಣೆ ಮತ್ತು ದಲಿತ ಪ್ರತಿಸ್ಪಂದನೆ, ಬೆಲೆ:ರೂ:೧೨೦.
ಸಂ: ಆನಂದ್ ತೇಲ್ತುಂಬ್ಡೆ
ಅನು: ವಿವಿಧ ಲೇಖಕರು

ಈ ದೇಶದಲ್ಲಿ ಫಾಸಿಸಂ ಬೇರು ಬಿಡುತ್ತಿರುವ ಬಗೆಯನ್ನು ಹಾಗೂ ಎದುರಿಸಲು ಬೇಕಾಗಿರುವ ಸಿದ್ಧತೆಯ ಬಗ್ಗೆ ವಿಸ್ತಾರವಾದ ವಿಶ್ಲೇಷಣೆಯುಳ್ಳ ಮಹತ್ವದ ಕೃತಿ. ಪ್ರಮುಖ ದಲಿತ ಚಿಂತಕ ಡಾ. ಆನಂದ್ ತೇಲ್ತುಂಬ್ಡೆಯವರು ಸಂಪಾದಿಸಿದ ಆಂಗ್ಲ ಕೃತಿಯ ಲೇಖನಗಳನ್ನು ಪ್ರಬುದ್ಧ ಲೇಖಕರು ಕನ್ನಡೀಕರಿಸಿದ್ದಾರೆ. ಗುಜರಾತ್‌ನ ಮುಸ್ಲಿಮರ ಹತ್ಯಾಕಾಂಡದಲ್ಲಿ ದಲಿತರು ವಹಿಸಿದ ಮುಖ್ಯಪಾತ್ರ, ತಮ್ಮ ದಮನಕ್ಕೆ ನೇರ ಕಾರಣವಾಗಿರುವ ಹಿಂದೂತ್ವ ಸಿದ್ಧಾಂತದ ರಕ್ಷಣೆಗೆ ಕಂಕಣ ಬದ್ಧರಾಗಿ ನಿಂತ ಬಗ್ಗೆ ಹಾಗೂ ಹಿಂದೂತ್ವದ ಜಾತಿ ಅಂತಸ್ತುಗಳನ್ನು ಒಪ್ಪಿಕೊಂಡು ಅದರ ಜೊತೆ ಹೆಜ್ಜೆ ಹಾಕತೊಡಗಿರುವ ದಲಿತರು ಪ್ರಲೋಭನೆಗಳಿಗೆ ಒಳಗಾಗಲು ಕಾರಣಗಳೇನು ಎಂಬುದರ ವ್ಯಾಪಕ ಚರ್ಚೆಗಳನ್ನು ಒಳಗೊಂಡಿದೆ.

ಅಪರಿಮಿತದ ಕತ್ತಲೆ
ಲೇ:ಡಾ. ಮೂಡ್ನಾಕೂಡು ಚಿನ್ನಸ್ವಾಮಿ
ಬೆಲೆ: ರೂ. ೮೦/-

ಎಲ್ಲಾ ತಾರತಮ್ಯಗಳು ತೊಲಗಿ ತಿಳಿವು ಬೆಳಗಲಿ ಎನ್ನುವ ಆಶಯದ ಅಲ್ಲಲ್ಲಿ ಈಗಾಗಲೇ ಪ್ರಕಟಗೊಂಡ 25 ಲೇಖನಗಳನ್ನೊಳಗೊಂಡ ಕೃತಿ ಇದು. ಜಾತಿಮತಗಳಿಗೆ ಅಂತಃಕರಣವಿರುವುದಿಲ್ಲ. ಜಾತಿ, ಭ್ರಷ್ಟಾಚಾರಕ್ಕಿಂತಲು ಹೆಚ್ಚು ಅಪಾಯಕಾರಿ, ಕ್ರಾಂತಿ ಎಂದರೆ ಕೊಲೆ, ರಕ್ತಪಾತವಲ್ಲ, ಬದಲಾವಣೆ: ಬೆಳವಣಿಗೆಯಾಗಲು ನಿರಂತರ ಪ್ರಯತ್ನ ಅಗತ್ಯ ಹಾಗೂ ಸಾಂಸ್ಕೃತಿಕ ಕ್ರಾಂತಿಯೇ ನಿಜವಾದ ಕ್ರಾಂತಿ ಎಂಬ ಆಶಾವಾದದ ತುಡಿತವಿದೆ. 'ಹಸಿವು ಮತ್ತು ಅವಮಾನ'ದಿಂದ ನಲುಗುತ್ತಿರುವವರ ಬಗ್ಗೆ ಆಳವಾದ ಚಿಂತನೆಯಿದೆ.

ಪ್ರಕಾಶಕರು: ಸುಮೇಧ ಪ್ರಕಾಶನ
ಗುಲ್ಬರ್ಗ-೫೮೫೧೦೨





ಮಹಿಳಾ ಮಾರ್ಗ,
ಸಂ: ಡಾ. ಕೆ. ಷರೀಫಾ-ಬಸವರಾಜ ಸೂಳಿಭಾವಿ
ಬೆಲೆ: ರೂ. ೮೦/-

ಗೀತಾ ನಾಗಭೂಷಣ ಕನ್ನಡದ ಪ್ರಖರ ಚಿಂತಕಿ. ಅವರ ಚಿಂತನಾ ಕ್ರಮ, ಕನ್ನಡ ಸಾಹಿತ್ಯಕ್ಕೆ ಅವರು ಕೊಟ್ಟ ಕೊಡುಗೆ, ಸಮಕಾಲೀನ ಸಮಸ್ಯೆಗಳ ವಿರುದ್ಧ ಇಟ್ಟ ದಿಟ್ಟ ಹೆಜ್ಜೆ, ಚಳವಳಿಗಳಿಗೆ ವಿಶ್ವಾಸ ಮತ್ತು ಶಕ್ತಿಗಳನ್ನು ತುಂಬಿದ ಬಗ್ಗೆ ವಿವಿಧ ಲೇಖಕರು ಈ ಪುಸ್ತಕದಲ್ಲಿ ಪ್ರಸ್ತಾಪಿಸಿದ್ದಾರೆ. ಸ್ವತಹ ಲೇಖಕರೆ ತನ್ನ ಬದುಕಿನ ಬಗ್ಗೆ ಬರೆದುಕೊಂಡ ದೀರ್ಘ ಲೇಖನವೂ ಇದ್ದು, ಒಟ್ಟಾರೆ ಅವರ ಬದುಕಿನ ಎಲ್ಲಾ ಮಜಲುಗಳನ್ನು ತೆರೆದಿಡುವ ಪ್ರಯತ್ನ ಈ ಕೃತಿಯಲ್ಲಡಗಿದೆ.

ಈ ಎರೆಡು ಪುಸ್ತಕಗಳ ಪ್ರಕಾಶಕರು:
ಲಡಾಯಿ ಪ್ರಕಾಶನ, ಗದಗ



ಪಡುವಣದಿ ರವಿಯ ಜೊತೆಗೆ
ಲೇ: ನಾರಾಯಣ್ ತಿರುಮಲಾಪುರ
ಬೆಲೆ: ರೂ. ೫೦/-

ಐವತ್ತಾರು ಕವನಗಳನ್ನೊಳಗೊಂಡ ಲೇಖಕರ ಚೊಚ್ಚಲ ಕೃತಿ ಇದು. ಗ್ರಾಮ ಜೀವನದ ವೈವಿಧ್ಯತೆಯ ಸಡಗರಗಳು ಹಾಗೂ ಅಸ್ಪೃಶ್ಯತೆಗೆ ನಲುಗಿದ ವಾಸ್ತವಿಕ ಸಂವೇದನೆಗಳೆರಡೂ ಅವರ ಕವನಗಳಲ್ಲಿ ಹೊರಹೊಮ್ಮಿವೆ. ಸಾಮಾಜಿಕ ಕಳಕಳಿ, ಮನುಷ್ಯ ಸಂಬಂಧಗಳ ಬಗ್ಗೆ ಕಾಳಜಿ ಹೊಂದಿರುವ ಇಲ್ಲಿನ ಕವನಗಳಲ್ಲಿ ಜೀವನೋತ್ಸಾಹವಿದೆ. ಹಳ್ಳಿ ಬದುಕಿನ ಸರಾಗತನ ಹಾಗೂ ನಗರ ಜೀವನದ ಸಂಕೀರ್ಣತೆಗಳನ್ನು ಕಂಡುಂಡ ಅನುಭವಗಳನ್ನು ಕವಿ ಇಲ್ಲಿ ಸರಳವಾಗಿ ನಿರೂಪಿಸಿದ್ದಾರೆ.

ಪ್ರಕಾಶಕರು: ಪ್ರತಿಭಾ ಪ್ರಕಾಶನ
ಮಂಗಲ ಗ್ರಾಮ, ಮಂಡ್ಯ-೫೭೧೪೦೩



ಬೆಳಕ ಹೆಜ್ಜೆಯನರಸಿ
ಲೇ: ವಿ. ಹರಿನಾಥ ಬಾಬು
ಬೆಲೆ: ರೂ.೮೦/-

ಯಾವ ಪೂರ್ವಾಗ್ರ[illegible]ಾರ ಕುರಿತಾದ ದ್ವೇಷವನ್ನು ಸುಳಿಯಗೊಡದ ನಿಷ್ಕಲ್ಮಷಭಾವ ಇಲ್ಲಿನ ಕವಿತೆಗಳದು. ಒಡತನದ ಬೇಗೆ, ಅಮ್ಮನ ವಾತ್ಸಲ್ಯ, ತ್ಯಾಗಗಳು ಇಲ್ಲಿನ ವಸ್ತುವಾಗಿರುವುದರಿಂದ ಸಹಜವಾಗಿಯೇ ಅವುಗಳ ನಿರೂಪಣೆಯಲ್ಲಿ ಭಾವಪರವಶತೆಯಿದೆ. ಧನ್ಯತಾಭಾವನೆಗೆ ಒಳಗಾಗಿ ಸರಳವಾಗಿ ರೂಪಿತಗೊಂಡ ಕವಿತೆಗಳಾದ್ದರಿಂದ ಪಾಂಡಿತ್ಯ ಕಸರತ್ತುಗಳಿಂದ ಹೊರತಾದಂತೆ ಕಾಣುತ್ತದೆಯಾದರೂ ದೇಸಿ ಶೈಲಿಯ ಸೊಬಗಿದೆ ಹಾಗೂ ಅಭಿವ್ಯಕ್ತಿ ಸಾಮರ್ಥ್ಯದಲ್ಲಿ ಪಕ್ವತೆಯಿದೆ.

ಪ್ರಕಾಶಕರು: ಪಲ್ಲವ ಪ್ರಕಾಶನ
ಚನ್ನಪಟ್ಟಣ, ಬಳ್ಳಾರಿ

ವಿಶ್ವ ಸುಂದರಿ ಮತ್ತು ನಗ್ನ ಸತ್ಯಗಳು

ಕಾವ್ಯ

ಅವಳ ಗುಳಿಕೆನ್ನೆಯ
ಗುಲಾಬಿ ತೋಟದಲ್ಲಿ
ಗೂಡು ಕಟ್ಟಿದ್ದ ಗುಬ್ಬಚ್ಚಿಗಳನ್ನು
ಯಾರೋ ಸುಟ್ಟು ತಿಂದಿದ್ದಾರೆ

ಅವಳ ಚೆಂದುಟಿಯ ಬಂದರಲ್ಲಿ
ಲಂಗುರು ಬಿಗಿದಿದ್ದ
ನಗೆಯ ನೌಕೆಯನ್ನು
ಯಾರೋ ಶೋಕ ಸಾಗರದಲ್ಲಿ
ದೂಡಿ ಬಿಟ್ಟಿದ್ದಾರೆ.

ಅವಳ ಮುಂಗುರುಳ ಜೋಕಾಲಿಯಲ್ಲಿ
ಮಲಗಿದ್ದ ತಂಗಾಳಿಯನ್ನು
ಯಾವುದೋ ವಿಹಾರತಪ್ತ ಪ್ರೇಮಿಗಳ
ನಿಟ್ಟುಸಿರು ಸುಟ್ಟು ಹಾಕಿದೆ

ಅವಳ ಕಣ್ಣ ಕನ್ನಡಿಯಲ್ಲಿ
ಪ್ರತಿಬಿಂಬವಾಗಿದ್ದ ಕನಸುಗಳನ್ನು
ಯಾರೋ ವಿಘ್ನ ಸಂತೋಷಿಗಳು
ಭಗ್ನಗೊಳಿಸಿದ್ದಾರೆ!

ಅವಳ ಮೈಯ್ಯ
ಮಲ್ಲಿಗೆಯ ಪುನುಗಲ್ಲಿ
ಗೂಡು ಕಟ್ಟಿದ್ದ ಜೇನು ಹುಟ್ಟಿಗೆ
ಯಾರೊ ವ್ಯಸನಿಗಳು
ಸಿಗರೇಟಿನ ಹೊಗೆಬಿಟ್ಟು ಎಬ್ಬಿಸಿ ಬಿಟ್ಟಿದ್ದಾರೆ

ಅವಳ
ಅಮ್ಮನ ಎದೆಹಾಲಿಗೆ
ಹಂಬಲಿಸುತ್ತಿದ್ದ ಕಂದಮ್ಮಗಳಿಗೆ
ಹಾಲೂಡುತ್ತಿದ್ದ ಮೊಲೆಗಳನ್ನೇ
ಯಾರೋ ತಾಯಿಗಂಡರು
ಕಚ್ಚಿ ತಿಂದಿದ್ದಾರೆ!

ಈಗ
ಅವಳ
ನೋಡುವ ಕಂಗಳ
ಸಿರಿಯಾಗಿದ್ದ ಕಣ್ಣುಗಳು
ಕಣ್ಣಾಸ್ಪತ್ರೆಯ ಫಿಕ್ಸೆಡ್ ಡೆಪಾಸಿಟ್ಟಿನಲ್ಲಿ
ಬಡ್ಡಿ ದುಡಿಯುತ್ತಿವೆ
'ಮಾತಾಡುವ ಬಾಯ್ಗಳ
ರಸಾಯನ'ವಾಗಿದ್ದ ಸವಿಮಾತುಗಳು
ಮೊಬೈಲ್ ಕಂಪನಿಯ ರಿಂಗ್ಟೋನಾಗಿವೆ
'ಕೂಡುವ ತೋಳ್ಗಳ ಪುಣ್ಯ'ವಾಗಿದ್ದ
ರೂಪರಾಶಿ
ಸಾಬೂನು ಕಂಪನಿಯ
ರೂಪದರ್ಶಿಗಳ ಪೇಟೆಂಟ್ ಆಗಿದೆ

○ ಪ್ರೊ॥ ಟಿ. ಯಲ್ಲಪ್ಪ

ದುಃಖನಿವಾರಣೆಯ ಜ್ಞಾನ ವಿಜ್ಞಾನವನ್ನು ಮೀರಿದ್ದು

ಸಂಪಾದಕರೊಡನೆ ಸಂವಾದ

ಅಪೂರ್ವ ಡಿ.ಸಿಲ್ವ

ಬುದ್ಧನ ಹುಟ್ಟು, ಪರಿನಿರ್ವಾಣ, ಅಶೋಕ ಯುದ್ಧ ತ್ಯಜಿಸಿ ಬೌದ್ಧನಾದ ದಿನಗಳು ಹಬ್ಬದ, ಸ್ತುತಿಸುವ ದಿನಗಳಾಗಿವೆ. ಆದರೆ ತ್ರಿಪಿಟಕಗಳಲ್ಲಿ ಆಚರಣೆಗಳ ಬಗ್ಗೆ ಎಲ್ಲೂ ಹೇಳಿಲ್ಲ. ಹಾಗೆ ನೋಡಿದರೆ ಈ ಆಚರಣೆಗಳೂ ಹಿಂದೂ ಧರ್ಮಕ್ಕೆ ಪರ್ಯಾಯವೆ. ನನ್ನ ಪ್ರಕಾರ ಬೋದಿಜ್ಞಾನ ಈ ಆಚರಣೆಗಳಿಂದ ಏನೂ ಉಪಯೋಗವಿಲ್ಲ. ಬೋದಿ ಜ್ಞಾನಕ್ಕೆ ಇಂತಹ ಆಚರಣೆಗಳು ಅವಲಂಬನೆಗಳಾಗಿ ಅಡಚಣೆಯಾಗುತ್ತವೆ.

ಮಾನ್ಯ ಸಂಪಾದಕರೇ,

ಕಳೆದ ಸಂವಾದದಲ್ಲಿನ ಬೌದ್ಧಧಮ್ಮ ವಿಚಾರವಾಗಿ ನಾಗಭೂಷಣ್‌ರವರ ಪತ್ರಕ್ಕೆ ಹಾಗೂ ರಹಮತ್‌ರವರ ಕೆಲ ವಿಚಾರಗಳಿಗೆ ಸಂವಾದ ನಡೆಸಲು ಇಚ್ಚಿಸುವೆ.

ರಹಮತ್‌ರವರ ಯಶೋಧರೆಯ ಕಷ್ಟಗಳು ಎಂಬ ಲೇಖನವು ಬುದ್ಧಿಸ್ಟ್ ಆಗಿ ಮತಾಂತರಗೊಂಡ ಪತ್ನಿಯರನ್ನು ಯಶೋಧರೆಗೆ ಹೋಲಿಸಿದ್ದು ನನಗೂ ಸರಿಕಾಣಲಿಲ್ಲ. ಬುದ್ಧ, ಯಶೋಧರೆಗೆ ತನಗೆ ಲಭಿಸಿದ ಜ್ಞಾನವನ್ನು ಧಾರೆಯೆರೆಯಲು ಸಾಧ್ಯವಾಗದಿದ್ದರೆ ಬೌದ್ಧ ಧಮ್ಮಕ್ಕೆ ಇಷ್ಟು ವ್ಯಾಪಕತೆ ಸಿಗುತ್ತಿರಲಿಲ್ಲ. ಬುದ್ಧನ ಕಾಲದಲ್ಲಿ ಬಿಕ್ಕುಣಿಯರಿಗೆ ಸಮಾನತೆ ಇರುವ ಬಗ್ಗೆ ಸುತ್ರವಿಭಂಗದ (ವಿನಯಪಿಟಿಕ) ಭಿಕ್ಕುಣಿ ವಿಭಂಗದಲ್ಲಿ ನೀತಿ ನಿಯಮ ವಿವರಿಸಲಾಗಿದೆ.

ಇನ್ನು ಇವತ್ತಿನ ಸಂದರ್ಭದಲ್ಲಿ ಹಿಂದೂ ಧರ್ಮದ ಹೆಂಗಸರ ಮೇಲೆ ದೇವರು ಬಂದು ಅವರ ಗಂಡಂದಿರ ಮೇಲೆ ಅವರ ಮನಸ್ತಾಪವನ್ನೆಲ್ಲಾ ತೀರಿಸಿಕೊಂಡಿರುವ ಬಗ್ಗೆ ನಾವು ಕಾಣುತ್ತೇವೆ. ಇನ್ನು ಮುಸ್ಲಿಂ ಧರ್ಮದ ಮಹಿಳೆಯರು ಸಿಡಿದೇಳಬೇಕಾದ ಗುಣಗಳ ಬಗ್ಗೆ ಬಾನು ಮುಸ್ತಾಕ್‌ರವರು, ಸಾರಾ ಅಬೂಬ್ಕ್ಕರ್ ಹೇಳುತ್ತಿದ್ದಾರೆ. ಆದರೆ ಇದು ಎಲ್ಲಾ ಧರ್ಮದ ಒಳಗೆ ನಡೆಯುವ ವಿದ್ಯಾಮಾನ. ಇನ್ನು ತತ್ವ ಆದರ್ಶಗಳನ್ನು ನಂಬಿ ದೇವರನ್ನೇ ನಿರಾಕರಿಸುತ್ತಾ, ವಾದ ಮಂಡಿಸುವ ಗಂಡ-ಹೆಂಡತಿ ಯಾರೇ ಆಗಿರಲಿ ಅವರ ಕುಟುಂಬದಲ್ಲಿ ಘರ್ಷಣೆಗಳು ನಡೆದಿರುವುದು ನಮಗೆಲ್ಲಾ ತಿಳಿದೇ ಇದೆ.

ಇಂತವೆಲ್ಲಾ ಮಾನಸಿಕ ವಿದ್ಯಾಮಾನಗಳು. ಬದುಕಿನ ಸಂಕೀರ್ಣತೆಯಲ್ಲಿ ಹಾಸುಹೊಕ್ಕಾಗಿರುವ ವಿದ್ಯಾಮಾನ ನಾಗಭೂಷಣ್‌ರವರು ಹೇಳಿದ ಹಾಗೆ, ಮನೆ ಒಡತಿಯರ ಕ್ರೋಧಕ್ಕೆ ಒಳಗಾದ ಕೊಡಲೇ ಅದು ಬೌದ್ಧ ಧಮ್ಮ ಅಲ್ಲ ಎನ್ನುವುದು ಎಷ್ಟು ಸರಿ? ಇನ್ನೂ ಕಟ್ಟಾ ಅಂಬೇಡ್ಕ ರ್‌ವಾದಿಗಳಲ್ಲಿ ಹಿಂದೂ ಧರ್ಮದ ವಿಚಾರಗಳ ಬಗ್ಗೆ ಬೇಸರವಿದೆ ಹೊರತು ಎಲ್ಲರನ್ನು ಸಮಾನವಾಗಿ ನೋಡಬಹು ದಾದ ಧರ್ಮದಲ್ಲಿ ಅಲ್ಲ. ಪಿಳ್ಳೆಜುಟ್ಟು ಬಿಟ್ಟು ಕಟ್ಟಾ ಸಂಪ್ರದಾ ಯವಾದಿಯಾಗಿದ್ದ ಗಾಂಧೀಜಿಯವರು ಅದನ್ನೆಲ್ಲ ಮೀರಿ ಅಂತರ್‌ಜಾತಿ- ಅಂತರ್ ಧರ್ಮಿಯ ವಿವಾಹಗಳಿಗೆ ಮಾತ್ರ ಹೋಗುತ್ತೇನೆ ಎಂದು ಹೇಳುವುದು, ಸಮಾನತೆಯಿಲ್ಲದಿದ್ದರೆ ದೇವಸ್ಥಾನಕ್ಕೆ ಹೋಗುವುದಿಲ್ಲವೆಂದು ಹೇಳಿದ್ದು ಕಡೆಗೆ ಅವರು ಬಾಳಬೇಕೆಂದಿದ್ದ ವಯಸ್ಸಿನವರೆವಿಗೂ ಹಿಂದೂ ಧರ್ಮವನ್ನು ಕ್ರಾಂತಿಕಾರಿಯಾಗಿ ಬದಲಾಯಿಸುವ ಕನಸು ಕಂಡಿದ್ದು ಇವೆಲ್ಲಾ ಧರ್ಮದಲ್ಲಿ ಕಾಣಬಹುದಾದ ಸಮಾನತೆ. ಆದರೆ ಹಿಂದೂಗಳ ವರ್ಣಾಶ್ರಮ, ಬದುಕಿನ ಕಾರ್ಯಕರಣಗಳಿಗೆ ಸಂಬಂಧಪಟ್ಟಿರುವುದರಿಂದ ಗಾಂಧೀ ಜಿಯವರ ಹಿಂದೂ ಸಮಾನತೆ ಶ್ರೇಣಿಕೃತ ವ್ಯವಸ್ಥೆಯಲ್ಲಿ ಅಷ್ಟು ಸುಲಭವಲ್ಲ ಎಂದು ಅಂಬೇಡ್ಕರ್‌ರವರಿಗೆ ಮನವರಿಕೆಯಾಗಿತ್ತು.

ಗಾಂಧೀಜಿಯವರೊಡನೆ ಅಂಬೇಡ್ಕರ್‌ರವರ ವಾಗ್ವದ ನೇರ ಗಾಂಧೀಜಿಯೊಟ್ಟಿಗೆ ಆಗಿರದೆ ಆ ಮೂಲಕ ಶ್ರೇಣಿಕೃತ ವ್ಯವಸ್ಥೆಯನ್ನು ಬದುಕಿಗೆ ಅಳವಡಿಸಿಕೊಂಡ ಕಟ್ಟಾ ಹಿಂದುತ್ವ ವಾದಿಗಳ ವಿರುದ್ಧವಾಗಿತ್ತು ಎಂದು ನನಗನಿಸಿದೆ. ಯಾಕೆಂದರೆ ಗಾಂಧೀಜಿ ಸಾವಿನ ನಂತರ ಸ್ವಲ್ಪವಾದರೂ ಬದಲಾಗಬಹುದಾದ ಹಿಂದೂ ಧರ್ಮ ಇನ್ನು ಮೂಲಭೂತವಾದಿಗಳ ಕೈಗೆ ಸಿಕ್ಕಿ ನರಳುತ್ತದೆ ಎಂಬ ಆತಂಕ ಅಂಬೇಡ್ಕರ್‌ರವರಿಗೆ ಇತ್ತು ಎಂಬುದಾಗಿ ನಾನು ಒಂದು ನಾಟಕದಲ್ಲಿ ನೋಡಿದ ನೆನಪು. ಭಾರತದ ಬೌದ್ಧ ಧರ್ಮವನ್ನು ಅಂಬೇಡ್ಕರ್ ಸ್ವೀಕರಿಸಿದ್ದೆ ಹಿಂದೂ ಧರ್ಮಕ್ಕೆ ಪರ್ಯಾಯವಾಗಿ. ಇನ್ನು ಬುದ್ಧ ವಚನ ಟ್ರಸ್ಟ್‌ನವರು ಹೊರತಂದಿರುವ 'ಬೌದ್ಧ ನಿತ್ಯಾಚರಣೆಗಳು' ಎಂಬ ಪುಸ್ತಕದಲ್ಲಿ ಜಾತಕಗಳನ್ನು ನೋಡದೆ ಮದುವೆ ಮಾಡುವುದು ಅಂತರ್‌ಜಾತಿ ವಿವಾಹಗಳನ್ನು ಮಾನ್ಯ ಮಾಡಿರುವುದು ನೋಡಬಹುದು. ಬುದ್ಧನಿಗೆ ಅಭಿನಂದನೆ ಸಲ್ಲಿಸಲು ಗಂಧದಕಡ್ಡಿ ಹಚ್ಚುವುದು, ದೀಪ ಬೆಳಗುವುದು ಇದೆ.

ಬುದ್ಧನ ಹುಟ್ಟು, ಪರಿನಿರ್ವಾಣ, ಅಶೋಕ ಯುದ್ಧ ತ್ಯಜಿಸಿ ಬೌದ್ಧನಾದ ದಿನಗಳು ಹಬ್ಬದ, ಸ್ತುತಿಸುವ ದಿನಗಳಾಗಿವೆ. ಆದರೆ ತ್ರಿಪಿಟಕಗಳಲ್ಲಿ ಆಚರಣೆಗಳ ಬಗ್ಗೆ ಎಲ್ಲೂ ಹೇಳಿಲ್ಲ. ಹಾಗೆ ನೋಡಿದರೆ ಈ ಆಚರಣೆಗಳೂ ಹಿಂದೂ ಧರ್ಮಕ್ಕೆ ಪರ್ಯಾಯವೆ. ನನ್ನ ಪ್ರಕಾರ ಬೋದಿಜ್ಞಾನ ಈ ಆಚರಣೆಗಳಿಂದ ಏನೂ ಉಪಯೋಗವಿಲ್ಲ. ಬೋದಿಜ್ಞಾನಕ್ಕೆ ಇಂತಹ ಆಚರಣೆಗಳು ಅವಲಂಬನೆಗಳಾಗಿ ಅಡಚಣೆಯಾಗುತ್ತವೆ. ಬುದ್ಧನು ಹೇಳುವ ಆಲೋ ಚನೆ ಇಲ್ಲದಂತೆ ಹೊರಬರುವ ಕ್ರಿಯೆ ಸಾಧಕರಿಗೆ ಉಪಯೋಗ. ಹಾಗೆಂದು ಅವರೆಲ್ಲಾ ಗುಹೆ-ಕಾಡುಗಳಿಗೆ ಹೋಗಬೇಕಿಲ್ಲ. ಗಿಜಿಗುಡುವ ಜನಸಂದಣಿಯಲ್ಲಿದ್ದೆ ಅವಲಂಬನರಹಿತರಾಗಿ-ಆಲೋಚನೆ ಇಲ್ಲದಂತೆ ಇರಬಹುದು. ಇನ್ನು ಈ ಆಚರಣೆಗಳು ಎಲ್ಲಾ ಧರ್ಮದಲ್ಲಿರುವಂತೆ ಮನಸ್ಸಿಗೆ ಹಿತಕೊಡುವ ಒಂದು ವಿದ್ಯಾಮಾನ ಇದನ್ನು ಮೀರಿ ನಿಲ್ಲುವವರು ಬುದ್ಧರಾಗುತ್ತಾರೆ.

ಬೋದಿಪ್ರಾಪ್ತಿ ಎನ್ನುವುದು ಎಲ್ಲಾ ಧರ್ಮದಲ್ಲೂ ಇದೆ. ಅದು ಗುರುನಾನಕ್ ಆಗಿರಬಹುದು, ಜೀಸಸ್, ರಮಣರು, ಕಬೀರರಾಗಿರಬಹುದು. ಆದರೆ ಬುದ್ಧನಿಗೆ ಬೋದಿ ಪ್ರಾಪ್ತಿಯಾದ ಮೇಲೆ ದೇವರ ಬಗ್ಗೆ ಎಲ್ಲೂ ಹೇಳಲಿಲ್ಲ. ಅದರಿಂದಲೂ ಬಿಡುಗಡೆಯನ್ನೇ ಹೇಳಿದ. ಎಲ್ಲಕ್ಕಿಂತ ಮುಖ್ಯವಾಗಿ ದುಃಖ ನಿವಾರಣೆಯನ್ನು ತಿಳಿಸಿಕೊಟ್ಟ. ದುಃಖ ನಿವಾರಣೆ ಎನ್ನುವುದು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬಹುದಾದ ಬಹು ಸರಳ ವಿಧಾನ ಇದನ್ನು ಹೇಳಿ ಕೊಡಬೇಕಾದ ಬಂತೇಜಿಗಳಿಗೆ ಈ ಬಗ್ಗೆ ಅರಿವಿರಬೇಕು ಅಷ್ಟೆ. ದುಃಖ ನಿವಾರಣೆ ಬೋದಿ ಪ್ರಾಪ್ತಿಯಾದವರಿಗೆ ಅರಿವಿಗೆ ಬರುತ್ತದೆ. ಇಲ್ಲದಿದ್ದರೆ ಆಲೋಚನೆಗಳಿಂದ ಹೊರತಾಗಿ ದೇಹದ ದುಃಖದ ವಿದ್ಯಮಾನಗಳನ್ನು (ಹುಟ್ಟುವ-ನಶಿಸುವ ಅಂಶಗಳನ್ನು) ತಟಸ್ಥವಾಗಿ ನೋಡುವುದರಿಂದ ಅನುಭವಕ್ಕೆ ಬರುತ್ತದೆ. ಇದನ್ನು ಸಂವಾದದಲ್ಲೇ ಪ್ರಕಟವಾದ "ನಮ್ಮೊಳಗೆ ಬುದ್ಧಪೋರ್ಣಿಮೆ"ಯಲ್ಲಿ ಹೇಳಿದ್ದೇನೆ. ಈ ಲೇಖನಕ್ಕೆ ಪ್ರತಿಕ್ರಿಯೆಯಾಗಿ ಹಲವಾರು ಜನ ನನ್ನೊಡನೆ ಚರ್ಚಿಸಿದರು. ಗುರುತಿಲ್ಲದವರು ನನ್ನನ್ನು ಹುಡುಕಿ ಕೊಂಡು ಬಂದರು, ಆದರೆ ಅವರ್‍ಯಾರಿಗೂ ಮನಸಿಲ್ಲದ ಸ್ಥಿತಿಯ ಬಗ್ಗೆ (Nomend) ಗೊತ್ತಾಗುತ್ತಿಲ್ಲ. ಒಟ್ಟಿನಲ್ಲಿ ಅವರಿಗೆಲ್ಲಾ ಹೊಸದಾದ ಬುದ್ಧನನ್ನು ಕಂಡ ಹಾಗೆ ಆಗಿದೆ. ಇತ್ತೀಚಿಗೆ ವಿಜ್ಞಾನವೇ ಬುದ್ಧನ ಹತ್ತಿರಕ್ಕೆ ಬರುತ್ತಿದೆ.

ಇತ್ತೀಚಿಗೆ ನಮ್ಮಂತ ಸಮಾನ ಆಸಕ್ತ ಗೆಳೆಯರ ನಡುವೆ ಒಂದು ಪುಸ್ತಕ ಹರಿದಾಡುತ್ತಿದೆ. ಫ್ರಿಟ್ಸ್ ಕಾಪುರವರ "ತಾವೊ ಫಸಿಕ್ಸ್" ಎನ್ನುವ ಪುಸ್ತಕ ಇದರ ಬಗ್ಗೆ ಮುರಾರಿ ಬಲ್ಲ್‌ಳ್‌ರವರು ಸತ್ಯದರ್ಶನ ಎಂದು ಕನ್ನಡಕ್ಕೆ ತಂದಿದ್ದಾರೆ ಎಂದು ಕೇಳಿದ್ದೇನೆ ಕಾಪ್ರಗೆ ಪ್ರಕೃತಿಯಲ್ಲಿನ ಅಣುಪರಮಾಣುವಿನ ವಿದ್ಯಮಾನ ಕಣ್ಣಿಗೆ ಕಾಣುತ್ತದೆ. ಆ ಒಂದುಕ್ಷಣದ ಘಟನೆ ಭೌತಶಾಸ್ತ್ರಜ್ಞನಾದ ಕಾಪ್ರಗೆ ಬುದ್ಧ, ಜೆನ್ ತಾವೂ ಹಾಗೂ ಶಿವನ ಕಾಸ್ಮಿಕ್ ಡ್ಯಾನ್ಸ್ ಇವುಗಳ ಬಗೆಗಿನ ಅಧ್ಯಯನಕ್ಕೆ ಪ್ರೋತ್ಸಾಹ ನೀಡುತ್ತದೆ. ಆತ ವಿಜ್ಞಾನದ ಅರಿವಿಗೆ ಬಂದಿರುವ ಅಣುವಿನೊಳಗೆ ಇರುವ ನೋಡುವ ಸ್ಥಿತಿ (ಪ್ರಜ್ಞೆ)ಯ ಬಗ್ಗೆ ಹೇಳುತ್ತಾನೆ. ಆದರೆ ಅದು ವಿಜ್ಞಾನಕ್ಕೆ ಒಳಪಡಿಸಲು ಗಣಿತ ಸೂತ್ರಗಳಿಂದ ಹೇಳಲು ಕಷ್ಟವಾಗುತ್ತದೆ ಎನ್ನುತ್ತಾನೆ. ಆ ಸ್ಥಿತಿ ಮುಟ್ಟಲು ನಮ್ಮ ನಡುವಿನ ಸಾಧಕರಿಗೆ ಸಾಧ್ಯವಾಗಿದೆ. ಅದು ಬುದ್ಧ

ಇರಬಹುದು. ಕಬೀರ ಇರಬಹುದು. ಬೋಧಿ ಪ್ರಾಪ್ತಿ ಎಂದರೆ ಮನುಷ್ಯನ ನಿಜಸ್ಥಿತಿಯಾದ ಅಂತಹ ಪ್ರಜ್ಞೆಗೆ ಮರಳುವುದು. ಅದು ಚರಾಚರಾದೊಳಗಿನ ಅಣುಪರಮಾಣುವಿನೊಡನೆ ಮಿಳಿತವಾಗಿ ತಟಸ್ಥನಾಗಿ ನೋಡುವ ಸ್ಥಿತಿ ಅಲ್ಲಿ ನಮ್ಮ ದೇಹದ ಅರಿವೇ ಇರುವುದಿಲ್ಲ. ಇನ್ನು ಆಲೋಚನೆ ಎಲ್ಲಿ ಇರುತ್ತದೆ ಹೇಳಿ! ಇಲ್ಲಿ ಇದನ್ನು ಪ್ರಸ್ತಾಪಿಸುತ್ತಿರುವುದು ಎಷ್ಟು ಸಮಂಜಸವೊ ನಾನರಿಯೆ ನಾನಿದಕ್ಕೆ ವಿಜ್ಞಾನದ ಆಧಾರ ಕೊಡದಿದ್ದರೆ ನಾನೂ ಒಬ್ಬ ಮೂಢ ನಂಬಿಕೆಯವನಾಗಿ ಬಿಡುತ್ತಿದ್ದೆ.

ನಾನು ಬೆಂಗಳೂರಿನ ಗಾಂಧಿ ಭವನದಲ್ಲಿ ಬುದ್ಧ ಕುರಿತು ಮಾತಾಡುವಾಗ ಅಣುವಿನ-ನಮ್ಮೊಳಗಿನ ಪ್ರಜ್ಞೆಯ ಬಗ್ಗೆ ಹೇಳಿದೆ. ಎಲ್ಲರಿಗೂ ಹೊಸ ವಿಚಾರವಾಗಿ ಕಂಡಿತು ಆದರೆ ಇದು ಯಾರಿಗೂ ಅರ್ಥವಾಗಲಿಲ್ಲ; ಒಬ್ಬರನ್ನು ಬಿಟ್ಟು. ಅದು ಕನ್ನಡದ ಬಹುಮುಖ್ಯ ಕವಿಯಾದ ಕೆ.ಬಿ ಸಿದ್ದಯ್ಯನವರಿಗೆ. ಅವರು ಈ ಬಗ್ಗೆ ನನ್ನೊಡನೆ ಮಾತಾಡುತ್ತ ಟಿಬೇಟಿಯನ್ ದೇವತೆಯೊಬ್ಬಳು ಅಹಂಕಾರಿಯಾದ ಪುರುಷನಿಗೆ ಅವನ ಅಹಂ ಮುರಿಯಲು ಹೆಣ್ಣು ಮಾಡುತ್ತಾಳೆ.

ಆ ದೇವತೆ ನೀನು ಹೇಳಿದ ಪ್ರಜ್ಞೆಯಾಗಿದ್ದಾಳೆ ಎಂದು. ಕಾಪ್ರ ಕೂಡ ಅಣುವಿನೊಳಗಿನ ಪ್ರಜ್ಞೆಗೆ ಅಣುವಿನ ವಿದ್ಯಮಾನಗಳನ್ನು ಬದಲಾಯಿಸಲು ಸಾಧ್ಯವಿದೆ ಎಂದು ಹೇಳುತ್ತಾನೆ. ಇವತ್ತಿನ ನ್ಯಾನೊ ಟೆಕ್ನಾಲಜಿಯೂ ಇದನ್ನೇ ಹೇಳುತ್ತೆ. ಇದ್ದಲಿನ ಅಣುಗಳನ್ನು ಪರಿವರ್ತಿಸಿ ವಜ್ರ ಮಾಡಬಹುದಾಗಿದೆ ಅಂದರೆ ವಜ್ರದೊಳಗಿನ ಅಣುಬಂಧವಾಗಿ ಇದ್ದಲಿನ ಅಣುಬಂಧವನ್ನು ರೂಪಾಂತರಿಸಬೇಕು ಅಷ್ಟೆ. ಅಣು-ಪರಮಾಣು ಬಗೆಗಿನ ಜ್ಞಾನ ಪಡೆದ ಸಾಧಕರು ಈ ಕಾರಣಗಳಿಗಾಗಿ ಕೆಲ ಪವಾಡಗಳನ್ನು ಮಾಡಬಹುದಾಗಿದೆ. ಆದರೆ ಬುದ್ಧ ಇಂತಹ ಪವಾಡಗಳನ್ನು ಮಾಡಬಾರದೆಂದು ತನ್ನ ಬಿಕ್ಕುಗಳಿಗೆ ಹೇಳುತ್ತಾನೆ. (ಸುತ್ತ ಪಿಟಿಕ-ಕೇವಟ್ಟಸುತ್ತ?) ಇಂತಹ ಬೋಧಿ ಪ್ರಾಪ್ತಿಯ ಹೊತ್ತಿಗೆ ಅಣುವಿನೊಳಗಿನ ಬ್ರಹ್ಮಾಂಡವೇ ಅರಿವಿಗೆ ಬರುವುದರಿಂದ ಅಪಾರ ಆನಂದದ ಸ್ಥಿತಿ ಪ್ರಕಟವಾಗುತ್ತದೆ.

ಆದರೆ ಬುದ್ಧ ಅಲ್ಲೂ ಎಚ್ಚರದ ಸಮಾಧಿಯನ್ನು ಹೇಳುವ ಮೂಲಕ ಬಹುದೊಡ್ಡವನಾಗಿ ಬಿಡುತ್ತಾನೆ. ನಮ್ಮಲ್ಲಿ ಆಧ್ಯಾತ್ಮಿಕವಾಗಿ ಸಣ್ಣಪುಟ್ಟ ಅನುಭವವಾಗಿರುವ ಎಚ್.ಎಸ್.ಶಿವಪ್ರಕಾಶ್ ಆ ಅನುಭವಲ್ಲೇ ಮೈಮರೆತು ಕಂಡಕಂಡ ದೇವರಿಗೆ ಸಾಧುಗಳಿಗೆ ಕೈ ಮುಗಿಯುತ್ತಾ, ಅವರ ಬಗ್ಗೆ ಇನ್ನಿಲ್ಲದ ಉತ್ಸಾಹದಿಂದ ನೋಡುತ್ತಿರುವ ನಮ್ಮಂತವರಿಗೂ ದಿಕ್ಕು ತಪ್ಪಿಸುತ್ತಿದ್ದಾರೆ! ಸಿದ್ಧಯ್ಯನಂತವರೂ ಆಕಸ್ಮಾತ್ ಎಚ್ಚರ ತಪ್ಪಿದರೆ ಕನ್ನಡದ ಮಟ್ಟಿಗೆ ಬೋಧಿ ಪ್ರಾಪ್ತಿಯಾಗುವ ಇನ್ನೊಬ್ಬ ಕವಿಯನ್ನು ಕಳೆದುಕೊಂಡತೆ. ಇಷ್ಟು ಹೇಳಿ ಸಮಾಧಿಯಲ್ಲೂ ಎಚ್ಚರಿಕೆಯ ಸ್ಥಿತಿಯನ್ನು ಹೇಳಿಕೊಟ್ಟ ಅದರಲ್ಲೂ ವಿಜ್ಞಾನವನ್ನು ಮೀರಿಸುವ ದುಃಖ ನಿವಾರಣೆಯ ಜ್ಞಾನವನ್ನು ಹೇಳಿಕೊಟ್ಟ ಬುದ್ಧ ಗುರುವನ್ನು ಪ್ರಸ್ತುತಗೊಳಿಸಿಕೊಳ್ಳುವುದು ಅವರವರ ಸಾಧನೆಯ ಮೇಲೆ ನಿಂತಿದೆ.

"ಇಹಲೋಕ ಪರಲೋಕ ತಾನಿದ್ದಲ್ಲ; ಗಗನಮೇರು
ಮಂದಿರ ತಾನಿದ್ದಲ್ಲಿ; ಸಕಲಭುವನ ತಾನಿದ್ದಲ್ಲಿ;
ಸತ್ಯ ನಿತ್ಯ ನಿರಂಜನತತ್ವ ತಾನಿದ್ದಲ್ಲಿ; ಉತ್ತರೋತ್ತರ
ಚತುರ್‌ವಲಯ ತಾನಿದ್ದಲ್ಲಿ; ಚಂದ್ರ ಸೂರ್ಯ ತಾರಾ
ಮಂಡಲ
ತಾನಿದ್ದಲ್ಲಿ; ಅಂತರ ಮಹಂತರ ತಾನಿದ್ದಲ್ಲಿ
ಸ್ವತಂತ್ರ ಗುಹೇಶ್ವರಲಿಂಗ ತಾನಿದ್ದಲ್ಲಿ!"- ಪ್ರಭುದೇವ □

ಸಂಪಾದಕರೊಡನೆ ಸಂವಾದ

ಪರಂಪರೆಯೊಂದಿಗೆ ಮುಖಾಮುಖಿ ಆಗಬೇಕಾದ ಧಮ್ಮ

ಡಾ. ಎಸ್ ನರೇಂದ್ರಕುಮಾರ್

ಮಾನ್ಯ ಸಂಪಾದಕರೇ,

ನಮ್ಮ ನಡುವಿನ ಚಿಂತಕ, ವಿಮರ್ಶಕರಾದ ರಹಮತ್ ತರೀಕೆರೆಯವರ 'ಯಶೋಧರೆಯ ಕಷ್ಟಗಳು' ಲೇಖನ ಓದಿದ ಮೇಲೆ ಕೆಲವು ಅಭಿಪ್ರಾಯಗಳನ್ನು ಬರೆಯಬೇಕೆನಿಸಿತು. ಮಾನವೀಯವಾದ ಜೀವಪರ ವೈಚಾರಿಕ ತತ್ತ್ವಗಳನ್ನು ಬಿತ್ತಿದ ಬುದ್ಧನತ್ತ ಹೋಗುವಾಗಲೂ ಎಷ್ಟೊಂದು ಗೊಂದಲ, ತೊಡಕು, ಅಸ್ಪಷ್ಟತೆ, ನೋವುಗಳು ಏರ್ಪಡುತ್ತಿವೆ ಎನ್ನುವ ಸೂಕ್ಷ್ಮಗ್ರಹಿಕೆ ಇಡೀ ಲೇಖನದ್ದು. ಮುಖ್ಯವಾಗಿ ಬುದ್ಧನತ್ತ ಹೋಗುತ್ತಿರುವ ಎಲ್ಲರೂ ತಮ್ಮನ್ನು ಮರುವಿಮರ್ಶೆ ಮಾಡಿಕೊಳ್ಳಬೇಕಾದ ಅಗತ್ಯವನ್ನು ಇದು ನೆನಪಿಸುವಂತಿದೆ.

ಕಳೆದ ವರ್ಷ ಗದಗ್‌ನಲ್ಲಿ ಗೆಳೆಯರಾದ ಅರ್ಜುನ್ ಗೊಳಸಂಗಿ ಅವರು ನಡೆಸಿದ ದಲಿತ ಸಾಹಿತ್ಯ ಸಮ್ಮೇಳನಕ್ಕೆ ಹೋಗಿದ್ದಾಗ, ಕಥೆಗಾರ ಹನೂರು ಚೆನ್ನಪ್ಪ ಹಾಗೂ ನನಗೂ- 'ಮದ್ಯ'ರಾತ್ರಿಯಲ್ಲಿ ಈ ಹಿನ್ನೆಲೆಯ ದೀರ್ಘ ಚರ್ಚೆಯೇ ನಡೆಯಿತು. "ಬುದ್ಧನನ್ನು ಒಪ್ಪಿಕೊಳ್ತಿರೋದು ದಲಿತರಲ್ಲಿ ಕೇವಲ ಶೇ10ರಷ್ಟು ಮಾತ್ರ. ಅದೂ ಹೆಚ್ಚಾಗಿ ಅಕ್ಷರಸ್ಥರು ಅವರ ಸಂಖ್ಯೆಯೂ ಕಡಿಮೆ. ಇಡೀ ಸಮುದಾಯ ಹೋಗದೆ ಒಂದಷ್ಟೆ ಜನ ಹೋಗೋದರಿಂದ ಸಮುದಾಯಕ್ಕೆ ದೊಡ್ಡ ತೊಡಕಾಗುವುದಿಲ್ಲವಾ?" ಎನ್ನುವ ಪ್ರಶ್ನೆ ಚೆನ್ನಪ್ಪ ಅವರದು. ಬಹುಶಃ ಇಂತದ್ದೆ ಗೊಂದಲ ಬುದ್ಧನತ್ತ ಹೋಗಿರುವ ಹಾಗೂ ಹೋಗುತ್ತಿರುವ ಕುಟುಂಬಗಳಲ್ಲು ಮುಂದುವರೆದು ಸಮುದಾಯದಲ್ಲೂ ಏರ್ಪಟ್ಟಿದೆ. ಈ ಹಿನ್ನೆಲೆಯಲ್ಲಿ ಸ್ಪಷ್ಟತೆ ಕಂಡುಕೊಂಡವರು ಕಡಿಮೆ ಇದ್ದು, ಅಸ್ಪಷ್ಟತೆಯಲ್ಲಿ ಉಳಿದವರ ಸಂಖ್ಯೆಯೆ ಹೆಚ್ಚಾಗಿದೆ.

ಈ ನೆಲೆಯಲ್ಲಿ ನಾವು ಅಂಬೇಡ್ಕರ್ ಅವರನ್ನೆ ಉದಾಹರಣೆಯಾಗಿ ತೆಗೆದುಕೊಳ್ಳಬಹುದೇನೊ. ಅವರು 'ನಾನು ಹಿಂದೂ ಆಗಿ ಹುಟ್ಟಿದ್ದೇನೆ ಆದರೆ ಹಿಂದೂ ಆಗಿ ಸಾಯುವುದಿಲ್ಲ' ಎಂದು ಘೋಷಿಸಿದ್ದು ಸರಿಸುಮಾರು ಅಕ್ಟೋಬರ್ 13, 1935ರಲ್ಲಿ. ಆದರೆ ಬೌದ್ಧಧಮ್ಮದತ್ತ ಸಾಗಿದ್ದು 1956ರ ಅಕ್ಟೋಬರ್ 14ರಂದು. ಈ ಅಂತರ ಸುಮಾರು ಇಪ್ಪತ್ತೊಂದು ವರ್ಷ. ಈ ನಡುವೆ ಅವರು ಬೇರೆಬೇರೆ ಧರ್ಮಗಳ ಅಧ್ಯಯನಕ್ಕೆ ತೊಡಗಿದರು. ಅವರ ಈ ಬಗೆಯ ಹುಡುಕಾಟದಲ್ಲಿ ಬೌದ್ಧಧಮ್ಮ ದಲಿತರ ಸಾಂಸ್ಕೃತಿಕ ಚರಿತ್ರೆಯಾಗಿ ಸಿಕ್ಕಿದ ಅತ್ಯಮೂಲ್ಯ ಸಾಕ್ಷಿಯಾಯ್ತು. ಈ ಖಚಿತತೆಯ ಹಿನ್ನೆಲೆಯಲ್ಲೇ ಅಂಬೇಡ್ಕರ್ ಅವರು ಬೌದ್ಧಧಮ್ಮದತ್ತ ಹೋಗುವುದನ್ನು ಮತಾಂತರ ಎನ್ನುವುದಕ್ಕಿಂತ 'ಮರಳಿ ಮನೆಗೆ' ಎನ್ನುವ ಪರಿಕಲ್ಪನೆಯಲ್ಲಿಯೆ ಅರ್ಥೈಸಿ ಅದರತ್ತ ಸಾಗಿದರು. ಅಂಬೇಡ್ಕರ್ ಅವರು ಹೋದಾಗ ಲಕ್ಷಾಂತರ ಮಂದಿಯೂ ಅವರೊಟ್ಟಿಗೆ ಹೋದರು. ಆಗ ಉಂಟಾದ ತಲ್ಲಣಗಳೆಷ್ಟೋ. ಆದರೆ ಸ್ವತಃ ಅಂಬೇಡ್ಕರರಿಗಿದ್ದ ಖಚಿತತೆ ಇವರಲ್ಲಿ ಎಷ್ಟು ಮಂದಿಗೆ ಸಾಧ್ಯವಾಗಿತ್ತು? ಉತ್ತರಿಸುವುದು ಕಷ್ಟ. ಆದರೆ ಇಂದಿಗೂ ಬುದ್ಧನತ್ತ ಹೋಗುವುದು ಪ್ರವಾಹೋಪಾದಿಯಲ್ಲಿ ನಿರಂತರವಾಗಿ ನಡೆಯುತ್ತಲಿದೆ. ದಲಿತ ಚಳವಳಿಯಲ್ಲಿ ಒಂದು ಆಂದೋಲನವಾಗಿ ರೂಪುಗೊಂಡಿದೆ.

ಬಹಳ ಆಸಕ್ತಿದಾಯಕ ವಿಷಯವೆಂದರೆ ಅಂಬೇಡ್ಕರ್ ಅವರು ತಾವು ಸಂಶೋಧಿಸಿ ಬರೆದ 'ಅಸ್ಪೃಶ್ಯರು ಯಾರು' ಕೃತಿ. ಇದರಲ್ಲಿ ದಲಿತರು ಇಲ್ಲಿನ ಮೂಲನಿವಾಸಿಗಳೆಂದೂ ಬುದ್ಧನ ಆಗಮನದ ಬಳಿಕ ಇವರ ಮೂಲ ಧರ್ಮ ಬೌದ್ಧವೆಂದೂ ಬಹುಪಾಲು ದಲಿತರು ಅದರಲ್ಲೂ ಅಸ್ಪೃಶ್ಯರು ಆದಿಬೌದ್ಧರೆಂಬ ಕುರುಹುಗಳನ್ನು ಬಹಿರಂಗ

ಅಂಬೇಡ್ಕರ್ ಅವರು ಬೌದ್ಧಧಮ್ಮದತ್ತ ಹೋಗುವುದನ್ನು ಮತಾಂತರ ಎನ್ನುವುದಕ್ಕಿಂತ 'ಮರಳಿ ಮನೆಗೆ' ಎನ್ನುವ ಪರಿಕಲ್ಪನೆಯಲ್ಲಿಯೆ ಅರ್ಥೈಸಿ ಅದರತ್ತ ಸಾಗಿದರು. ಅಂಬೇಡ್ಕರ್ ಅವರು ಹೋದಾಗ ಲಕ್ಷಾಂತರ ಮಂದಿಯೂ ಅವರೊಟ್ಟಿಗೆ ಹೋದರು. ಆಗ ಉಂಟಾದ ತಲ್ಲಣಗಳೆಷ್ಟೋ. ಆದರೆ ಸ್ವತಃ ಅಂಬೇಡ್ಕರರಿಗಿದ್ದ ಖಚಿತತೆ ಇವರಲ್ಲಿ ಎಷ್ಟು ಮಂದಿಗೆ ಸಾಧ್ಯವಾಗಿತ್ತು? ಉತ್ತರಿಸುವುದು ಕಷ್ಟ. ಆದರೆ ಇಂದಿಗೂ ಬುದ್ಧನತ್ತ ಹೋಗುವುದು ಪ್ರವಾಹೋಪಾದಿಯಲ್ಲಿ ನಿರಂತರವಾಗಿ ನಡೆಯುತ್ತಲಿದೆ.

ಪಡಿಸಿದರು. ಹೀಗೆ ಅಸ್ಪೃಶ್ಯರ ಸಾಂಸ್ಕೃತಿಕ ಅನನ್ಯತೆಯನ್ನು ಎತ್ತಿಹಿಡಿದ ಅಂಬೇಡ್ಕರ್ ಅವರು ಈ ಕೃತಿಯನ್ನು ಅರ್ಪಣೆ ಮಾಡಿರುವುದು ಕುತೂಹಲಕಾರಿಯಾದದ್ದು. ಅರ್ಪಣೆ ಹೀಗಿದೆ "ಅಸ್ಪೃಶ್ಯರಾಗಿ ಜನಿಸಿ ತಮ್ಮ ವೈಯಕ್ತಿಕ ಶ್ರದ್ಧಾ ಭಕ್ತಿ ಮತ್ತು ಸದ್ಗುಣಗಳಿಂದ ಸರ್ವರ ಗೌರವಕ್ಕೆ ಪಾತ್ರರಾದಂತಹ ಮೂವರು ಸುಪ್ರಸಿದ್ಧ ಸಂತರಾದ ನಂದ ವೀರ್, ರವಿದಾಸ್ ಜೋಖಾಮೇಳಾ ಇವರ ಪುಣ್ಯಸ್ಮೃತಿಗೆ ಸಮರ್ಪಣೆ". ಅಂಬೇಡ್ಕರ್ ಈ ಮೂಲಕ ಅಸ್ಪೃಶ್ಯರೆಂದು ಪರಿಗಣಿಸಲ್ಪಟ್ಟ ಸಮುದಾಯದ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ನೆನಪಿಸುತ್ತಿದ್ದಾರೆ ಎನಿಸುವುದಿಲ್ಲವೇ?

ಬೌದ್ಧಧಮ್ಮಕ್ಕೆ ಪರಿವರ್ತನೆಗೊಳ್ಳುವ ಭರದಲ್ಲಿ ಇಂತಹ ಪರಂಪರೆಗಳನ್ನು ಮರೆತ ಅಥವಾ ನಿರ್ಲಕ್ಷಿಸಿದ ಮನಸ್ಸುಗಳೇ ಹೆಚ್ಚು. ಆದರೆ ಇಂತಹ ಪರಂಪರೆಯಲ್ಲಿ ವೈದಿಕೇತರ ಹಾಗೂ ಎಲ್ಲ ಬಗೆಯ ಅಸಮಾನತೆಗಳನ್ನು ನಿರಾಕರಿಸಿ ಮಾನವೀಯತೆಯನ್ನೆ ಹಾರೈಸಿದ ಸಾಂಸ್ಕೃತಿಕ ನಾಯಕರ ನೆನಪಿದೆ. ಇಂತಹ ನಾಯಕರ ಪ್ರಭಾವ ಜನಸಮುದಾಯಗಳಲ್ಲಿ, ಅವರ ಸಾಂಸ್ಕೃತಿಕ ಪರಂಪರೆಯಲ್ಲಿ ಹಾಸುಹೊಕ್ಕಾಗಿ ಬೆರೆತಿರುತ್ತದೆ. ಈ ಕಾರಣಕ್ಕಾಗಿಯೇ ಅಂಬೇಡ್ಕರ್ ಅಸ್ಪೃಶ್ಯರನ್ನು ಬೌದ್ಧರೆಂದು ಗುರುತಿಸಿದ ಕೃತಿಯನ್ನು ಸಂತರಿಗೆ ಅರ್ಪಣೆ ಮಾಡಿದ್ದಾರೆ. ಯಾವುದೇ ಬಗೆಯ ಅಸಮಾನತೆ, ಶೋಷಣೆ, ಮೌಢ್ಯಗಳನ್ನು ಒಪ್ಪದ ಇಂತಹ ಪರಂಪರೆಗಳೊಂದಿಗೆ ಗುರುತಿಸಿಕೊಂಡ ಸಮುದಾಯಗಳಿಗೆ ಪರ್ಯಾಯ ಎಂಬುದು ಗೊಂದಲಗಳನ್ನು ಮೂಡಿಸುತ್ತದೇನೊ? ಹಾಗೆಯೇ ಇಂತಹ ಪರಂಪರೆಗಳನ್ನು ಸಕಾರಣಗಳಿಲ್ಲದೆ ಸಾರಾಸಗಟಾಗಿ ನಿರಾಕರಿಸಿದಾಗ, ನಿರಾಕರಿಸಿದವರು ಸಮುದಾಯಕ್ಕೆ ಹೊರಗಿನವರಾಗಿ ಕಾಣತೊಡಗುತ್ತಾರೆ. ಇಂತಹ ಕಡೆಗಳಲ್ಲಿ ಬುದ್ಧನ ವಿಚಾರಗಳತ್ತ ಜನರನ್ನು ಪರಿವರ್ತಿಸುವಾಗ ಅನುಸಂಧಾನ ಬಹಳ ಮುಖ್ಯವಾಗುತ್ತದೆ. ರಹಮತ್ ತರೀಕೆರೆಯವರ ಲೇಖನ ಇಂತದ್ದೊಂದು ಅನಿವಾರ್ಯತೆಯನ್ನು ನೆನಪಿಸುವಂತಿದೆ.

ಕೊಳ್ಳೇಗಾಲ, ಚಾಮರಾಜನಗರ, ಮಂಡ್ಯ ಮೈಸೂರು ..... ಈ ಸುತ್ತಮುತ್ತಲ ಭಾಗಗಳಲ್ಲಿ ಹೆಚ್ಚಾಗಿ ಮಂಟೇಸ್ವಾಮಿ ಹಾಗೂ ಮಾದೇಶ್ವರರ ಪರಂಪರೆ ಸಂಸ್ಕೃತಿಯನ್ನು ಆರಾಧಿಸುವ ಅನುಸರಿಸುವ ಜನಸಮುದಾಯಗಳು ಅಪಾರ. ವಿಚಿತ್ರವೆಂದರೆ ಮಂಟೇಸ್ವಾಮಿ ಹಾಗೂ ಮಾದೇಶ್ವರ ಕೂಡ ನಂದವೀರ್, ರವಿದಾಸ್, ಜೋಖಾ ಮೇಳಾ ಅವರಂತೆ ಅಸ್ಪೃಶ್ಯ ಹಿನ್ನೆಲೆಯ ಮತ್ತು ಎಲ್ಲಾ ಜಾತಿ ಜನಸಮುದಾಯಗಳನ್ನು ತಮ್ಮ ಚಿಂತನೆಗಳಿಂದ ಪ್ರಭಾವಿಸಿದವರು. ಜಾತ್ಯಾತೀತವಾಗಿ ಆರಾಧನೆಗೊಳ್ಳುತ್ತಿರುವವರು. ಇಂತ ಕಡೆಗಳಲ್ಲಿ ಬುದ್ಧನತ್ತ ಹೋಗುವ ಪರಿವರ್ತನೆಯ ಕಾರ್ಯಕ್ರಮಗಳನ್ನು ರೂಪಿಸಿದಾಗ ಬಹಳಷ್ಟು ಮಂದಿ ನಾವು ಈಗಿರುವಲ್ಲಿ ಯಾವ ಬಗೆಯ ಶೋಷಣೆ, ಹಿಂಸೆ ಅನುಭವಿಸುತ್ತಿದ್ದೇವೆ ತಿಳಿಸಿ ಎಂದು ಕೇಳತೊಡಗುತ್ತಾರೆ. ಈ ಸ್ಥಿತಿಯಲ್ಲಿ ಅದನ್ನು ದಾಟಿ ಬರದವರೂ ಇದ್ದಾರೆ. ಹಾಗೆಯೇ ಅದನ್ನು ಒಳಗೊಂಡು ಬುದ್ಧನನ್ನು ಆರಾಧಿಸುವ ಕುಟುಂಬಗಳೂ ಇಲ್ಲಿವೆ. ಅಲ್ಲದೆ ಈ ಪರಂಪರೆಯನ್ನು ಸಂಪೂರ್ಣ ನಿರಾಕರಿಸಿ ಬುದ್ಧನನ್ನು ಮಾತ್ರ ಒಪ್ಪಿಕೊಂಡ ಕುಟುಂಬಗಳೂ ಇವೆ. ಆದರೆ ಈ ಎಲ್ಲಾ ಸ್ಥಿತ್ಯಂತರಗಳ ಕುಟುಂಬ ಹಾಗೂ ಜನರ ನಡುವೆ ಒಳಸಂಘರ್ಷ ನಡೆಯುತ್ತಲಿವೆ.

ಈಗ ಮತ್ತೆ ಅಂಬೇಡ್ಕರ್ ಅವರ ವಿಚಾರದತ್ತ ಹೋದರೆ ಅವರು ತಮ್ಮ ಗುರುಗಳೆಂದು ಅತ್ಯಂತ ಹೆಮ್ಮೆಯಿಂದ ಕರೆದುಕೊಂಡಿದ್ದು ಬುದ್ಧ, ಕಬೀರ್, ಫುಲೆ ಅವರನ್ನು. ಇಲ್ಲಿ ಬುದ್ಧ ಪೂರ್ವದ ಸಾಂಸ್ಕೃತಿಕ ಸಂಕೇತವೂ ವಿಮೋಚನೆಯ ಬೆಳಕೂ ಆಗಿದ್ದಾನೆ. ಕಬೀರ್ ಅಂಬೇಡ್ಕರರ ಮನೆತನದ ಆರಾಧ್ಯ ಸಂತ. ಯಾವುದೇ ಶೋಷಣೆ ಹಿಂಸೆಗಳಿಲ್ಲದ ತತ್ತ್ವ ಪ್ರತಿಪಾದಕ ಕಬೀರ್. ಅಂಬೇಡ್ಕರರಿಗೆ ಸ್ಥಳೀಯ ಕೂಡ. ಫುಲೆ ಆಧುನಿಕ ಕಾಲಘಟ್ಟದಲ್ಲಿ ಶೂದ್ರ-ದಲಿತ ಹಾಗೂ ಮಹಿಳೆಯರಿಗೆ ಶಿಕ್ಷಣ ಹಾಗೂ ವೈಚಾರಿಕತೆ ನೀಡಿ ದಿಕ್ಕು ತೋರಿದ ವ್ಯಕ್ತಿತ್ವ. ಈ ಮೂವರಲ್ಲೂ ಕಾಲದ ಅಂತರ ಬಹಳವಿದ್ದರೂ ಇವರ ಮಾನವೀಯ ವೈಚಾರಿಕ ಆಧ್ಯಾತ್ಮಿಕ, ಜೀವನ ಪ್ರೀತಿಯ ಚಿಂತನೆಗಳು ಬಹಳಷ್ಟು ಒಂದೇ ನೆಲೆಯವು. ಬಹುಶಃ ಇಂತದ್ದೇ ಪರ್ಯಾಯ ಇಂದು ಅಗತ್ಯವಿದೆ ಎನಿಸುತ್ತದೆ. ಇದನ್ನು ಸ್ವಲ್ಪ ಅದಲು-ಬದಲು ಮಾಡಿಕೊಳ್ಳಬಹುದೇನೊ. ಪರಂಪರೆಯ ಕಾರಣವಾಗಿ ಬುದ್ಧನನ್ನೂ ವಿಮೋಚನೆಯ ಹಾಗೂ ಸಾಮಾಜಿಕ ನ್ಯಾಯ ಪ್ರತಿಪಾದನೆಯ ಕಾರಣವಾಗಿ ಅಂಬೇಡ್ಕರ್ ಅವರನ್ನೂ ಮೂರನೆಯದಾಗಿ ನಮ್ಮ ಸ್ಥಳೀಯ ಪರಂಪರೆಯ ಆದರೆ ಯಾವುದೇ ಬಗೆಯ ಅಸಮಾನತೆ, ಶೋಷಣೆ, ಮೌಢ್ಯ ಹಿಂಸೆಗಳನ್ನು ಬೋಧಿಸದ ಸಂತರನ್ನು (ಮನೆತನದ ಅಥವಾ ಸ್ಥಳೀಯ ಪರಂಪರೆಯ ಕಾರಣವಾಗಿ ಮಂಟೇಸ್ವಾಮಿ, ಮಾದೇಶ್ವರ, ಬಸವಣ್ಣ, ಶಿಶುನಾಳ ಷರೀಫಾ, ಅಲ್ಲಮ ಮುಂತಾದ ಸಂತರನ್ನು) ತಮ್ಮ ಗುರುಗಳೆಂದು ಒಪ್ಪಿಕೊಳ್ಳಬೇಕಾಗಿದೆ ಅಥವಾ ಆ ಪರಂಪರೆಯಲ್ಲಿ ಇರುವವರಿಗೆ ಬುದ್ಧ ಹಾಗೂ ಅಂಬೇಡ್ಕರ್ ಅವರನ್ನು ಪ್ರೀತಿಯಿಂದ ಒಗ್ಗಿಸಬೇಕಾಗಿದೆ. ಇಂತದ್ದಕ್ಕೆ ತೆರೆದ ಮನಸ್ಸು, ಮುಕ್ತ ಸಂವಾದ ಮುಖ್ಯವಾಗುತ್ತದೆ (ಅಂಬೇಡ್ಕರ್ ಅವರು ಬೌದ್ಧಧಮ್ಮ ಸ್ವೀಕರಿಸಿದ ಬಳಿಕ ಬದುಕಿದ್ದದ್ದು ಕೇವಲ 52 ದಿನಗಳು ಮಾತ್ರ. ಬಹುಶಃ ಅವರು ಇನ್ನೂ ಹೆಚ್ಚು ಕಾಲ ಬದುಕಿದ್ದರೆ ಈ ಹಿನ್ನೆಲೆಯಲ್ಲಿ ಜನತೆಗೆ ಹೆಚ್ಚು ಸ್ಪಷ್ಟತೆಯನ್ನು ಒದಗಿಸುತ್ತಿದ್ದರೇನೊ).

ಶೋಷಣೆಗಳನ್ನೆ ಮುಖ್ಯವಾಗಿರಿಸಿಕೊಂಡ ಸಂಪ್ರದಾಯಗಳಿದ್ದು, ಅಲ್ಲಿನ ಉಸಿರುಗಟ್ಟಿಸುವ ಪರಿಸ್ಥಿತಿಗಳ ಅರಿವು ಬಂದೊಡನೆ ಶೋಷಿತ ಸಮೂಹ ಪರ್ಯಾಯದತ್ತ ಚಲಿಸುತ್ತದೆ. ಆದರೆ ಶೋಷಣೆಯೆ ಇಲ್ಲದಿದ್ದಾಗ ಆ ಸಂಸ್ಕೃತಿಗೆ ಪರ್ಯಾಯ ಸಂಸ್ಕೃತಿ ಯಾವುದು? ಇತಿಹಾಸದುದ್ದಕ್ಕೂ ಬುದ್ಧನನ್ನೂ ಒಳಗೊಂಡಂತೆ ಹಲವಾರು ಸಂತರು ತಮ್ಮ ಜೀವಪರ ಕಾರುಣ್ಯ ಹಾಗೂ ಸಮಾನತೆಯ ತತ್ತ್ವಗಳ ಮೂಲಕ ಜನಸಮುದಾಯಗಳನ್ನು ಪ್ರಭಾವ ಬೀರುತ್ತಲೇ ಬಂದಿದ್ದಾರೆ. ಇಂತಹ ಪರಂಪರೆಗಳು ಮಾನವೀಯ ನೆಲೆಗಟ್ಟಿನಲ್ಲಿ ಹುಟ್ಟಿಕೊಂಡಿದ್ದರೂ ಅವುಗಳ ಒಳಗೂ ಕೆಲವು ಮೌಢ್ಯಗಳು ಸೇರಿಕೊಂಡಿರುವುದೂ ಉಂಟು. ಅದರ ವಿನಾಶಕ್ಕೂ ಚರ್ಚೆಗಳೇ ಬೆಳಕು ತೋರಬಲ್ಲವು.

ಇನ್ನು, ಕರ್ನಾಟಕದಲ್ಲಿ ಜನತೆಯನ್ನು ಬುದ್ಧನತ್ತ ಕೊಂಡೊಯ್ಯುವ ಅಪರಿಮಿತ ಕನಸುಗಳನ್ನು ಹೊತ್ತ ಸರಿಸುಮಾರು ಆರೇಳು ಮಂದಿ ಬೌದ್ಧಬಿಕ್ಕುಗಳಾಗಿದ್ದಾರೆ. ಆದರೆ ಒಬ್ಬೊಬ್ಬ ಭಂತೇಜಿಯವರಲ್ಲೂ ತಾತ್ವಿಕವಾದ ಭಿನ್ನಾಭಿಪ್ರಾಯಗಳು ಇರುವಂತೆ ಕಾಣುತ್ತಿದೆ. ಇವರೆಲ್ಲರೂ ಒಟ್ಟಾಗಿ ಕುಳಿತು ಆಗಾಗ ಮುಕ್ತವಾಗಿ ಚರ್ಚೆ ಮಾಡುವ ಅಗತ್ಯವೂ ಹೆಚ್ಚಿದೆ. ಇದರ ಜೊತೆಜೊತೆಗೇ ಬೌದ್ಧಧಮ್ಮದತ್ತ ಈಗಾಗಲೇ ಹೋಗಿರುವ ಹಾಗೂ ಆ ಹಂಬಲದಲ್ಲಿರುವ ಮತ್ತು ಹಿಂದಿನ ಪರಂಪರೆಯನ್ನೆ ನಂಬಿರುವ ಮನಸ್ಸುಗಳ ನಡುವೆ ಆರೋಗ್ಯಕರ ಸಂವಾದ ನಡೆಯಬೇಕಿದೆ. ಜನತೆಯ ಸಾಮೂಹಿಕ ಒಳಿತಿಗಾಗಿ ಇಂತಹ ಚರ್ಚೆ ಅತ್ಯಗತ್ಯ ಹಾಗೂ ಅನಿವಾರ್ಯ.

ಸದಾ ಒಳಿತನ್ನೆ ಹಾರೈಸಿದ ಬುದ್ಧನ ಬಗೆಗೆ ಜನಸಾಮಾನ್ಯರಲ್ಲಿ ಅದರಲ್ಲೂ ಮಹಿಳೆಯರಲ್ಲಿ ನಿಜ ಒಲವು ಮೂಡಿಸಲು ಇಂತ ಪ್ರಯತ್ನ ಬಹಳ ಮುಖ್ಯ. ಅದಕ್ಕೀಗ ಸಕಾಲ. □

ಅಂಬೇಡ್ಕರ್ ಅವರು ತಮ್ಮ ಗುರುಗಳೆಂದು ಅತ್ಯಂತ ಹೆಮ್ಮೆಯಿಂದ ಕರೆದುಕೊಂಡಿದ್ದು ಬುದ್ಧ, ಕಬೀರ್, ಫುಲೆ ಅವರನ್ನು. ಇಲ್ಲಿ ಬುದ್ಧ ಪೂರ್ವದ ಸಾಂಸ್ಕೃತಿಕ ಸಂಕೇತವೂ ವಿಮೋಚನೆಯ ಬೆಳಕೂ ಆಗಿದ್ದಾನೆ. ಕಬೀರ್ ಅಂಬೇಡ್ಕರರ ಮನೆತನದ ಆರಾಧ್ಯ ಸಂತ. ಯಾವುದೇ ಶೋಷಣೆ ಹಿಂಸೆಗಳಿಲ್ಲದ ತತ್ತ್ವ ಪ್ರತಿಪಾದಕ ಕಬೀರ್. ಅಂಬೇಡ್ಕರರಿಗೆ ಸ್ಥಳೀಯ ಕೂಡ. ಫುಲೆ ಆಧುನಿಕ ಕಾಲಘಟ್ಟದಲ್ಲಿ ಶೂದ್ರ-ದಲಿತ ಹಾಗೂ ಮಹಿಳೆಯರಿಗೆ ಶಿಕ್ಷಣ ಹಾಗೂ ವೈಚಾರಿಕತೆ ನೀಡಿ ದಿಕ್ಕು ತೋರಿದ ವ್ಯಕ್ತಿತ್ವ. ಈ ಮೂವರಲ್ಲೂ ಕಾಲದ ಅಂತರ ಬಹಳವಿದ್ದರೂ ಇವರ ಮಾನವೀಯ ವೈಚಾರಿಕ ಆಧ್ಯಾತ್ಮಿಕ, ಜೀವನ ಪ್ರೀತಿಯ ಚಿಂತನೆಗಳು ಬಹಳಷ್ಟು ಒಂದೇ ನೆಲೆಯವು. ಬಹುಶಃ ಇಂತದ್ದೇ ಪರ್ಯಾಯ ಇಂದು ಅಗತ್ಯವಿದೆ ಎನಿಸುತ್ತದೆ. ಇದನ್ನು ಸ್ವಲ್ಪ ಅದಲು-ಬದಲು ಮಾಡಿಕೊಳ್ಳಬಹುದೇನೊ. ಪರಂಪರೆಯ ಕಾರಣವಾಗಿ ಬುದ್ಧನನ್ನೂ ವಿಮೋಚನೆಯ ಹಾಗೂ ಸಾಮಾಜಿಕ ನ್ಯಾಯ ಪ್ರತಿಪಾದನೆಯ ಕಾರಣವಾಗಿ ಅಂಬೇಡ್ಕರ್ ಅವರನ್ನೂ ಮೂರನೆಯದಾಗಿ ನಮ್ಮ ಸ್ಥಳೀಯ ಪರಂಪರೆಯ ಆದರೆ ಯಾವುದೇ ಬಗೆಯ ಅಸಮಾನತೆ, ಶೋಷಣೆ, ಮೌಢ್ಯ ಹಿಂಸೆಗಳನ್ನು ಬೋಧಿಸದ ಸಂತರನ್ನು ತಮ್ಮ ಗುರುಗಳೆಂದು ಒಪ್ಪಿಕೊಳ್ಳಬೇಕಾಗಿದೆ ಅಥವಾ ಆ ಪರಂಪರೆಯಲ್ಲಿ ಇರುವವರಿಗೆ ಬುದ್ಧ ಹಾಗೂ ಅಂಬೇಡ್ಕರ್ ಅವರನ್ನು ಪ್ರೀತಿಯಿಂದ ಒಗ್ಗಿಸಬೇಕಾಗಿದೆ.

'ರೂಪಕ'ದ ಹಿಂದಿರುವ ದಬ್ಬಾಳಿಕೆ, ಕೀಳರಿಮೆ

ಪ್ರೀತಿಯ ಸಂಪಾದಕರೇ,

ಸಂವಾದದ ಸೆಪ್ಟೆಂಬರ್ ಸಂಚಿಕೆಯಲ್ಲಿ ಪ್ರಕಟವಾಗಿರುವ ಶ್ರೀ ಡಿ. ಎಸ್. ನಾಗಭೂಷಣ ಅವರ ಪತ್ರ "ಸಾಮಾಜಿಕ ದೊಂಬರಾಟ ಕುರಿತ ರಾಜಕೀಯ ದೊಂಬರಾಟ" ಕುರಿತು ಪ್ರತಿಕ್ರಿಯೆ. ಸದರಿಯವರು ಉಪಯೋಗಿಸಿರುವ ತರ್ಕ ಹಾಗೂ ನೀಡಿರುವ ತೀರ್ಪುಗಳ ಮಟ್ಟವನ್ನು ಗಮನಿಸಿದರೆ, ನಿಜಕ್ಕೂ ಅವರ ಲೇಖನ ಯಾವುದೇ ಪ್ರತಿಕ್ರಿಯೆಗೆ ಅರ್ಹವಾದದ್ದಲ್ಲ. ಅವರ ಮುಚ್ಚಿರುವ ಮನಸ್ಸನ್ನು ಈ ಪತ್ರ ಎಂದೆಂದಿಗೂ ತರೆಸಲಾರದು. ಆದರೆ ಅವರ ಪತ್ರ ಒಬ್ಬ ಸಾಮಾನ್ಯ ಓದುಗನಲ್ಲಿ ಉಂಟು ಮಾಡಬಹುದಾದ ಗೊಂದಲಗಳನ್ನು ಗಮನದಲ್ಲಿಟ್ಟುಕೊಂಡು ಈ ಪತ್ರ ಬರೆಯಬೇಕಾಯಿತು.

ದೊಂಬರಾಟ ಪದ ಪ್ರಯೋಗದ ಬಗ್ಗೆ ಆ ಜನಾಂಗದವರಿಂದಲೂ ಹಾಗೂ ಜಾತಿ ಅವಹೇಳನ ಖಂಡಿಸುವ ವಿಚಾರವಂತರಿಂದಲೂ ಬಂದಿರುವ ವಿರೋಧವನ್ನು ಬಿಜೆಪಿ ವಿರುದ್ಧದ ಸಂಚೆಂದು ತಿಳಿಸಿದ್ದಾರೆ. ಈ ವಿರೋಧವನ್ನು ಯಾವುದೇ ಸರ್ಕಾರ ಇದ್ದಾಗ ನಡೆಸಿದರೂ ಅದು ಆಯಾ ಆಡಳಿತ ಪಕ್ಷಗಳ ವಿರೋಧಿ ವಿಚಾರವಾಗುವುದರಿಂದ, ಇಂತಹ ಪ್ರತಿಭಟನೆಗಳನ್ನು ಕೇವಲ ರಾಷ್ಟ್ರಪತಿ ಆಳ್ವಿಕೆ ಇದ್ದಾಗ ಮಾತ್ರ ಮಾಡಬೇಕೇನೋ? ಅದೂ ಅಲ್ಲದೆ ಡಿ. ಎಸ್. ನಾಗಭೂಷಣರವರು ತಮ್ಮ ಚಮತ್ಕಾರಿಕ ತರ್ಕದಿಂದ ಜಾತಿ ನಿಂದನೆಯನ್ನು ಬಿಜೆಪಿ ವಿರುದ್ಧದ ಹುನ್ನಾರ ಎಂದು ಪ್ರೂವ್ ಮಾಡುತ್ತಿರುವುದರಿಂದ ಇವರನ್ನು ಬಿಜೆಪಿಯ ಅಧಿಕೃತ ವಕೀಲರೆಂದು ಭಾವಿಸಬಹುದೇ?

ದೊಂಬರಾಟವನ್ನು ಒಂದು 'ರೂಪಕ'ವಾಗಿ ಕಾಣುವ ಇವರಿಗೆ ಇಂತಹ "ರೂಪಕ"ಗಳ ಹಿಂದಿರುವ ಭಾಷೆಯ ದಬ್ಬಾಳಿಕೆ ಹಾಗೂ ಆ ಜನಾಂಗದವರ ಮೇಲೆ ರಗುವ ಕೀಳರಿಮೆ ಕಾಣದಾಗುತ್ತದೆ. ದೊಂಬರಾಟವನ್ನು ಆಡುವವರಿಗೆ ಮಾತ್ರ ಜಾತಿನಿಂದನೆ ಅನ್ವಯವಾಗುತ್ತದೆ ಎಂದು ಭಾವಿಸುವ ಇವರಿಗೆ ಈ ದೇಶದ ಜಾತಿ ಕರ್ಮ ಕಾಂಡದ ಬಗ್ಗೆ ಇರುವುದು ಅತ್ಯಂತ ಬಾಲಿಶ ಕಲ್ಪನೆ. ಕುರಿ ಕಾಯದೇ ಕುರುಬನಾಗುವ, ಮಡಕೆ ಮಾಡದೇ ಕುಂಬಾರನಾಗುವ, ಚಪ್ಪಲಿ ಹೊಲೆಯದೇ ಚಮ್ಮಾರನಾಗುವ, ಮಲ ಹೊರದೇ ಭಂಗಿಯಾಗುವ, ಚಿನ್ನಾಭರಣ ಮಾಡದೇ ವಿಶ್ವಕರ್ಮನಾಗುವ, ಅಂತೆಯೇ ಬ್ರಹ್ಮವಿದ್ಯೆ ತಿಳಿಯದೇ ಬ್ರಾಹ್ಮಣನಾಗುವ ಪವಿತ್ರ ದೇಶ ನಮ್ಮದು. ಇದು ಡಿ.ಎಸ್. ಎನ್‌ಗೆ ತಿಳಿಯದೇನಲ್ಲ. ಮೈಗೆ ಅಂಟಿಕೊಂಡು ಬರುವ ಚರ್ಮದಂತೆ ಜಾತಿಯನ್ನು ಹೊದೆಸಿಕೊಡುವ ಈ ಸಾಮಾಜಿಕ ವ್ಯವಸ್ಥೆಯನ್ನು ಮಾತ್ರ ಬಳಸಿ ಮಂಡಿಸುವ ಇವರ ವಾದಕ್ಕೆ ನನ್ನ ತೀವ್ರ ಅನುಕಂಪವಿದೆ.

ದೊಂಬರಾಟ ಪದವನ್ನು ಎದುರಾಳಿಯನ್ನು ಹಿಯ್ಯಾಳಿಸಲು ಬಳಸುವುದಕ್ಕೂ, ಆ ಆಟವನ್ನು ಮೆಚ್ಚಲು ಬಳಸುವುದಕ್ಕೂ ವ್ಯತ್ಯಾಸಗಳೇ ಇಲ್ಲದಂತೆ ವಿಚಾರ ಮಂಡಿಸುವ ಇವರ ಮೌಢ್ಯಕ್ಕೆ ಅಥವಾ ಚಾಣಾಕ್ಷ್ಯತನಕ್ಕೆ ಏನನ್ನಬೇಕು? ಇಲ್ಲಿ ಬಳಸಿರುವ ಚಾಣಾಕ್ಷ್ಯ ಪದ ಪ್ರಯೋಗವನ್ನು ಗಮನಿಸಿ. ಈ ಪದ ಪ್ರಯೋಗವಾಗಿರುವುದು ಹಿಯ್ಯಾಳಿಕೆಗೋ ಅಥವಾ ಚಾಣಾಕ್ಷ್ಯನನ್ನು ಹೊಗಳುವುದಕ್ಕೋ?

ನಮ್ಮಲ್ಲಿ ಒಂದು ಗಾದೆಮಾತಿದೆ. "ಅಕ್ಕಸಾಲಿಗ ಅಕ್ಕನ ಚಿನ್ನವನ್ನೂ ಬಿಡ" ಎಂದು. ಇದರರ್ಥ ಬಹಳ ಹೀನಾಯವಾಗಿದೆ. ಅಕ್ಕಸಾಲಿಗನಾದವನು ಯಾರಿಗೇ ಆಗಲಿ ಮೋಸ ಮಾಡದೆ ಇರಲಾರ ಎಂಬುದು ಇದರರ್ಥ. ಈ ಗಾದೆಯನ್ನು ಉಪಯೋಗಿಸಿದಾಗ ಅಲ್ಲಿರುವ ಆ ಜನಾಂಗದ ವ್ಯಕ್ತಿಗೆ ಆಗುವ ನೋವನ್ನು ಆ ವ್ಯಕ್ತಿ ಮಾತ್ರ ಬಲ್ಲ. ಅಲ್ಲಿದ್ದವರೇನಾದರೂ ಆ ಗಾದೆಗೆ ಒಪ್ಪಿಗೆ ಕೊಟ್ಟು "ಹೌದೌದು, ನೀವೆನ್ನುವುದು ನಿಜ" ಎಂದರೆ ಆ ವ್ಯಕ್ತಿ ಎಂತಹ ಸಂಕಟದಿಂದ ನರಳಬಹುದು ಎಂಬ ಅರಿವು ಡಿ. ಎಸ್. ಎನ್‌ಗೆ ಇದೆಯೇ?

ಶ್ರೀಯುತ ಡಿ. ಎಸ್. ನಾಗಭೂಷಣರವರು "ನಮ್ಮ ಬುದ್ದಿಜೀವಿಗಳೂ, ಸಾಮಾಜಿಕ ನ್ಯಾಯವಾದಿ ಚಿಂತಕರೂ, ತಮ್ಮ ಚರ್ಚೆಗಳನ್ನು ರಾಜಕೀಯ ಹಿತಾಸಕ್ತಿಗಳಿಗೆ ಒತ್ತೆ ಇಟ್ಟು ಮಾಡುವ ಬದಲು, ಅದನ್ನು ದೊಂಬರಾದಿಯಾಗಿ ಎಲ್ಲಾ ಅವಕಾಶ ವಂಚಿತ ಜಾತಿಗಳ ನಿಜವಾದ ವಿಮೋಚನೆ ಹೇಗೆ ಎಂಬುದರ ಬಗ್ಗೆ ಮಾಡುವುದು ಒಳಿತು" ಎಂದು ಫರ್ಮಾನು ಹೊರಡಿಸಿದ್ದಾರೆ. ಇದು ಹೇಗಿದೆ ಎಂದರೆ ಹುಚ್ಚುನಾಯಿ ಕಡಿತಕ್ಕೊಳಗಾದವ ಅದಕ್ಕೆ ಚಿಕಿತ್ಸೆ ಪಡೆಯದೇ, ಇಡೀ ಜಗತ್ತಿನ ಹುಚ್ಚುನಾಯಿಗಳ ನಿರ್ಮೂಲನೆಗೆ ಹೋರಾಡಬೇಕು ಎಂಬಂತಿದೆ. ಹುಚ್ಚುನಾಯಿಗಳ ಕಡಿತಕ್ಕೆ ಒಳಗಾಗದಂತೆ ಎಚ್ಚರ ಇರಬೇಕಾದದ್ದು, ಕಚ್ಚಿದರೆ ಚಿಕಿತ್ಸೆ ಪಡೆಯ ಬೇಕಾದದ್ದು ಮತ್ತು ಹುಚ್ಚು ನಾಯಿಗಳನ್ನು ನಿರ್ಮೂಲಗೊಳಿಸ ಬೇಕಾದದ್ದು ದೊಂಬರಾದಿಯಾಗಿ ಎಲ್ಲಾ ಸಾಮಾಜಿಕ ಚಿಂತಕರ ಜವಾಬ್ದಾರಿಯಾಗಿದೆ.

ಡಾ॥ ತುಮಕೂರು ಚಂದ್ರಕಾಂತ್
ಬೆಂಗಳೂರು

ಪ್ರಜ್ಞಾ ಪೂರ್ವಕವಾಗಿ ಭಾಷೆ ಪ್ರಯೋಗಿಸಬೇಕು

ಮಾನ್ಯ ಸಂಪಾದಕರೇ,

'ದೊಂಬರಾಟ'ದ ಬಗ್ಗೆ ಶ್ರೀ ನಾಗಭೂಷಣ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ಈ ಪ್ರತಿಕ್ರಿಯೆ. ಒಂದು; ಅವರು ಹೇಳಿರುವುದು ನಿಜ. ಹೀಗೆ, ಇತರರನ್ನು ಹೀಯಾಳಿಸಲು ಜಾತಿ ಸೂಚಕ ಪದಗಳನ್ನು ಬಳಸುವಲ್ಲಿ ಬಿಜೆಪಿಯೇತರ ರಾಜಕೀಯ ಪಕ್ಷಗಳವರೂ ಹಿಂದೆ ಬಿದ್ದಿಲ್ಲ. ಹಾಗಾಗಿ ಕೇವಲ ಒಂದು ಪಕ್ಷದವರನ್ನೇ ಈ ವಿಷಯದಲ್ಲಿ ಟೀಕೆ ಮಾಡುವುದು ಸರಿಯಲ್ಲ. ಹಾಗೆ ನೋಡಿದರೆ ಈ ರೀತಿಯ ಪದಗಳ ಪ್ರಯೋಗ ಈ ರಾಜಕೀಯ ಪಕ್ಷಗಳು ನಮ್ಮ ಸಮಾಜದಿಂದಲೇ ಕಲಿತದ್ದು.

ಎರಡು; 'ದೊಂಬರಾಟ'ದ ಪದದ ಅರ್ಥವನ್ನು ಮಾತ್ರ ಗಣನೆಗೆ ತೆಗೆದುಕೊಂಡು ಅದು ಕೇವಲ ಆ ಸಮುದಾಯದವರ ಕೌಶಲ್ಯವನ್ನು ಮಾತ್ರ ಬಿಂಬಿಸುತ್ತದೆ, ಹಾಗಾಗಿ ಆ ಪದದ ಬಳಕೆಯನ್ನು ನಿಂದೆ ಎಂದು ಪರಿಗಣಿಸಬೇಕಾಗಿಲ್ಲ ಎನ್ನುವ ನಾಗಭೂಷಣರ ನಿಲುವನ್ನು ಒಪ್ಪುವುದು ಕಷ್ಟ. ತಳ ಸಮುದಾಯಗಳನ್ನು ಸೂಚಿಸುವ ಹಲವು ಈ ರೀತಿಯ ಪದಗಳು 'ನಿಂದೆ' ಗಾಗಿಯೇ ಬಳಸಲ್ಪಡುವುದು ಒಂದು ಸಾಮಾಜಿಕ ವಾಸ್ತವ. ಈ ಜನರು ಮಾಡುವ ಕೆಲಸ ಕೀಳು ಮಟ್ಟದ್ದು ಎಂದು ಭಾವಿಸುವ ಮೇಲ್‌ಸ್ತರದವರು ಆ ಸಮುದಾಯಗಳನ್ನು ಗುರುತಿಸಲು ಬಳಸುವ ಪದಗಳನ್ನು ಇತರರನ್ನು ಹೀಯಾಳುಸುವ ಸಂದರ್ಭದಲ್ಲಿಯೇ ಪ್ರಯೋಗಿಸುವುದನ್ನು ಪ್ರತಿದಿನವೂ ಕಾಣಬಹುದು.

ಅದೇ ಕಾರಣದಿಂದಲೇ ದಲಿತರನ್ನು ಸೂಚಿಸುವ ಪದಗಳನ್ನು ಬಳಸುವುದು ಶಿಕ್ಷಾರ್ಹ ಅಪರಾಧ ವೆಂದೂ ಪರಿಗಣಿಸಲಾಗಿದೆ. ಅಷ್ಟು ಮಾತ್ರವಲ್ಲ, ಇನ್ನೂ ಇತರ ಕೇಲವು ಜಾತಿ ಸೂಚಕ ಪದಗಳೂ ಸಹ ನಿಂದೆಗಾಗಿಯೇ ಬಳಸುವುದಿದೆ. ಸ್ವಲ್ಪ ಯೋಚಿಸಿದರೆ ಈ ಪದಗಳು ಯಾವುದೆಂಬುದು ಸ್ಪಷ್ಟವಾಗುತ್ತದೆ. ದುರಂತವೆಂದರೆ ಜಾತಿ, ಲಿಂಗ ತಾರತಮ್ಯವೇ ನಮ್ಮ ಭವ್ಯ ಸಂಸ್ಕೃತಿ'ಯ ಭಾಗವೂ ಆಗಿರುವುದರಿಂದ ಭಾರತದ ಭಾಷೇಗಳಲ್ಲಿಯೂ ಜನರ ಮನೋಭಾವ ಪ್ರತಿಫಲನಗೊಳ್ಳುತ್ತದೆ. ಹೀಗಾಗಿ ನಾಗರಿಕರೆನ್ನಿಸಿಕೊಂಡವರು, ತುಂಬ ಪ್ರಜ್ಞಾಪೂರ್ವಕವಾಗಿ ಭಾಷೆಯನ್ನು ಪ್ರಯೋಗಿಸಬೇಕಾಗಿದೆ. ಇಲ್ಲದಿದ್ದರೆ ನಮ್ಮ ಭಾಷೆಯೊಳಕ್ಕೂ ನುಸುಳಿರುವ ಈ ರೀತಿಯ ಪ್ರಮಾದಗಳು ಘಟಿಸುತ್ತಲೇ ಇರುತ್ತವೆ.

ನಗರಗೆರೆ ರಮೇಶ್
ಬೆಂಗಳೂರು

ಸಮಾಜವಾದಿಗಳ ಅಧಃಪತನ

ಮಾನ್ಯ ಸಂಪಾದಕರೇ,

ಖ್ಯಾತ ಸಮಾಜವಾದಿಗಳೂ, ಲೋಹಿಯಾವಾದಿಗಳೂ ಆದ ಶ್ರೀ ಡಿ.ಎಸ್. ನಾಗಭೂಷಣ ಅವರು 'ದೊಂಬರಾಟ' ಪದ ಬಳಕೆ ಕುರಿತಂತೆ ಮಾಡಿರುವ ವ್ಯಾಖ್ಯಾನ ನಾಡಿನ ಸಮಾಜವಾದಿಗಳು ತಲುಪಿರುವ ಅಧಃಪತನವನ್ನು ಸೂಚಿಸುತ್ತಿದೆ.

ಲೋಹಿಯಾವಾದ ಮತ್ತು ಸಮಾಜವಾದದ ಮೂಲ ಗುರಿಯೇ ಸ್ವಾಭಿಮಾನ ಮತ್ತು ಸಮಾನತೆ. ಅದರಲ್ಲೂ ಭಾರತದ ಜಾತಿ ವ್ಯವಸ್ಥೆ, ಹುಟ್ಟಿನ ಕಾರಣಕ್ಕೆ ಅನುಭವಿಸುವ ಅವಮಾನ, ಯಾತನೆ ಇವುಗಳನ್ನು ಬೇರುಸಹಿತ ಕಿತ್ತೆಸೆದು ಸಮತಾ ಸಮಾಜ ನಿರ್ಮಿಸುವುದೇ ಆಗಿದೆ ಎಂಬುದು ನಮ್ಮ ನಂಬಿಕೆ.

ಆದರೆ ನಾಗಾಭೂಷಣ ಅವರ ವಾದ ನೋಡಿದರೆ ಅವರು ಸಮಾಜವಾದಿಯೋ ಅಥವಾ ಮೂಲಭೂತವಾದಿಯೋ ಎಂಬ ಅನುಮಾನ ಮೂಡುತ್ತದೆ. ಇಂಥ ವಿಕೃತ ಚಿಂತನೆಗಳಿಗೇಕೆ 'ಸಂವಾದ' ಅವಕಾಶ ಮಾಡಿಕೊಡುತ್ತಿದೆಯೋ ಅರ್ಥವಾಗುತ್ತಿಲ್ಲ.

ಕುಮಾರ್ ಎಸ್, ಮುರಳಿ ಎಂ.ಕೆ
ಬೆಂಗಳೂರು

ಪ್ರತಿಕ್ರಿಯೆ

ತುಕ್ಕು ಹಿಡಿದ ಪ್ರಗತಿಪರತೆಯೂ, ಅದರ ಬೌದ್ಧಿಕ ಗುತ್ತೇದಾರಿಕೆಯೂ.

ಡಿ.ಎಸ್ ನಾಗಭೂಷಣ

ರಹಮತ್ ಅವರ ಮೂಲ ಲೇಖನದ ಬಗ್ಗೆ ನಾನು ಎತ್ತಿದ್ದ ಪ್ರಶ್ನೆಗಳು ಅವರು ತಮ್ಮ ಪ್ರತಿಕ್ರಿಯೆಯಲ್ಲಿ ಹೇಳಿಕೊಂಡಿರುವ ಹಾಗೆ ಕೇವಲ ಕಾಗುಣಿತ ದೋಷಗಳಿಗೆ ಸಮನಾದವೋ ಮತ್ತು ಆ ಬಗ್ಗೆ ನಾನು ಮಾಡಿದ್ದ ಆಕ್ಷೇಪಣೆಗಳು ಮತ್ತು ಟೀಕೆಗಳು ಅವರ ಕಣ್ಣುಗುಡ್ಡೆ ಹಾರಿ ಹೋಗುವ ಮತ್ತು ಕೈಮೂಳೆ ಮುರಿದು ಹೋಗುವ ಹಾಗೆ ಬಿದ್ದಿರುವ ದೊಣ್ಣೆ ಏಟುಗಳೋ ಎಂಬುದನ್ನು ತೀರ್ಮಾನಿಸ ಬಹುದಾಗಿದೆ. ಹಾಗೇ ನನ್ನ ಪ್ರಶ್ನೆ ಮತ್ತು ಆಕ್ಷೇಪಣೆಗಳನ್ನು ಇವರು ತಪ್ಪಾಗಿ ಉಲ್ಲೇಖಿಸಿ, ಅರ್ಥೈಸಿ ಚರ್ಚೆಯ ದಾರಿ ತಪ್ಪಿಸಲು ಮಾಡಿರುವ ಹಲವು ಪ್ರಯತ್ನಗಳನ್ನು ಕೂಡ.

ಮಾನ್ಯ ಸಂಪಾದಕರೇ,

'ಸಂವಾದ'ದ ಕಳೆದ(ಸೆಪ್ಟಂಬರ್, 2010)ರ ಸಂಚಿಕೆಯಲ್ಲಿನ ರಹಮತ್ ತರೀಕೆರೆಯವರ 'ಚಿಂತನೆಯ ಪ್ರಖರತೆ; ಪಾಂಡಿತ್ಯದ ಹೂಂಕಾರ...' ಎಂಬ ಬರಹ ಓದಿದೆ. ಓದಿದ ನಂತರ ತಕ್ಷಣ ನನಗೆ ನೆನಪಿಗೆ ಬಂದದ್ದು, ಪುಟ್ಟಣ್ಣ ಕಣಗಾಲರ 'ಮುನಿತಾಯಿ' ಚಿತ್ರದ ಒಂದು ದೃಶ್ಯ. ಅದರಲ್ಲಿ ಹಾಸ್ಯನಟ ಉಮೇಶ ಮನೆಯಲ್ಲಿ ಏನನ್ನೋ ಕದ್ದು ಸಿಕ್ಕಿಹಾಕಿಕೊಂಡು ಅವನ ತಾಯಿ ಓಡಿಸಿಕೊಂಡು ಬಂದೊಡನೆ ದೊಡ್ಡ ಅನ್ಯಾಯಕ್ಕೆ ತುತ್ತಾಗುತ್ತಿರುವವನಂತೆ ಅರಚುತ್ತಾ ಮನೆಯ ಹೊರಗೆ ನುಗ್ಗಿ ಬೀದಿಯಲ್ಲಿ ಹೊರಳಾಡುತ್ತಾ ಊರಿಗೆಲ್ಲ ಕೇಳುವ ಹಾಗೆ ಬಾಯಿ ಬಡಿದುಕೊಳ್ಳತೊಡಗುತ್ತಾನೆ. ಉಮೇಶನಿಗೆ ಅಲ್ಲಿ ಊರ ಜನರ ಕರುಣೆ–ಸಹಾನುಭೂತಿಗಳು ಸಿಕ್ಕವೋ ಇಲ್ಲವೋ ನನಗೆ ನೆನಪಿಲ್ಲ. ಆದರೆ ಇಲ್ಲಿ ರಹಮತರಿಗೆ ಓದುಗರ ಕರುಣೆ–ಸಹಾನುಭೂತಿಗಳು ದೊರೆತು ಅವರಿಗೆ ಭೂತತೃಪ್ತಿಯಾಗಲಿ ಎಂದು ಹಾರೈಸುವೆ.

ಮೊದಲಿಗೆ ಅವರ ಈ ಬರಹದ ಶೀರ್ಷಿಕೆಯಲ್ಲಿನ ಜಾಣತನ ನೋಡಿಯೇ ನಾನು ದಂಗಾದೆ. ಈ ಇಡೀ ಬರಹದ ಹೂರಣ ಮತ್ತು ಶೈಲಿಗಳನ್ನು ಗಮನಿಸಿದಾಗ, ಶೀರ್ಷಿಕೆಯಲ್ಲಿನ 'ಪಾಂಡಿತ್ಯದ ಹೂಂಕಾರ' ಎಂಬ ಬೈಗುಳದ ದುರುದ್ದೇಶಪೂರ್ವಕತೆಯನ್ನು ಮರೆಮಾಚಲೆಂದಷ್ಟೇ 'ಚಿಂತನೆಯ ಪ್ರಖರತೆ' ಎಂಬ ವರ್ಣನೆಯನ್ನು ಸೇರಿಸಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಏಕೆಂದರೆ, ಅವರ ಲೇಖನದಲ್ಲಿನ ತಪ್ಪು ಮಾಹಿತಿ ಮತ್ತು ಅದನ್ನಾಧರಿಸಿದ ತಪ್ಪು ವಿಶ್ಲೇಷಣೆಗಳನ್ನು ಗುರುತಿಸುತ್ತಾ, ಅದರ ಅನಿವಾರ್ಯ ಭಾಗವಾಗಿಯೇ; ಅವುಗಳ ಹಿಂದೆ ಕಾಣುವ ಬೇಜವಾಬ್ದಾರಿತನ ಮತ್ತು ಉಡಾಫೆತನಗಳನ್ನು ಟೀಕಿಸುವ ಕೇವಲ ಪ್ರತಿಕ್ರಿಯೆ ರೂಪದಲ್ಲಿರುವ ನನ್ನ ಲೇಖನದಲ್ಲಿ ಅವರಿಗೆ ಹೂಂಕಾರ ಕಂಡಿದ್ದರೂ ಆಶ್ಚರ್ಯವೇನಿಲ್ಲ. ಆದರೆ ಅಲ್ಲಿ, ಅವರಿಗೆ ಯಾವ, ಎಂತಹ ಪಾಂಡಿತ್ಯ ಕಾಣಲು ಹೇಗೆ ಸಾಧ್ಯವಾಗಿದೆಯೋ ತಿಳಿಯದಾಗಿದೆ! ನಿರ್ದಿಷ್ಟವಾಗಿ ಸೂಚಿಸಿದ್ದರೆ ಹೆಮ್ಮೆಯಾದರೂ ಪಡಬಹುದಿತ್ತು!

ಇರಲಿ, ಪ್ರತಿಕ್ರಿಯೆಯ ಆರಂಭದಲ್ಲೇ ರಹಮತ್, ಯಾವುದೋ ಪುಸ್ತಕದಲ್ಲಿ ಪ್ರಕಟವಾದ ಲೇಖನದ ಬಗ್ಗೆ ಸದರಿ ಪತ್ರಿಕೆಯಲ್ಲಿ ಬರೆದುದನ್ನು ಅನ್ಯಾಯವೆಂದು ಆಕ್ಷೇಪಿಸಿದ್ದಾರೆ. ಹಾಗಾದರೆ ನನಗೆ ತುಂಬ ಅಗತ್ಯವೆನಿಸಿದ ಈ ಪ್ರತಿಕ್ರಿಯೆಯನ್ನು ನಾನು ಎಲ್ಲಿ ಬರೆಯಬೇಕಿತ್ತು? ಅಥವಾ ಬರೆಯಲೇಬಾರದಿತ್ತೆಂದೇನಾದರೂ ರಹಮತ್ ಸೂಚಿಸುತ್ತಿದ್ದಾರಾ? ನನ್ನ ಪ್ರತಿಕ್ರಿಯೆ ಪ್ರಕಟಿಸಿದ 'ಸಂವಾದ'ದ ಸಂಪಾದಕರಿಗೆ ಅಗತ್ಯವೆನಿಸಿದ್ದರೆ, ರಹಮತ್ ಅವರ ಮೂಲ ಲೇಖನವನ್ನು ನನ್ನ ಪ್ರತಿಕ್ರಿಯೆಯ ಜೊತೆಯಲ್ಲಿ ಪ್ರಕಟಿಸಬಹುದಿತ್ತು. ಅದರಿಂದ ನನ್ನ ಪ್ರತಿಕ್ರಿಯೆಗೆ ಇನ್ನಷ್ಟು ಖಚಿತತೆ ದೊರಕುವಂತಾಗುತ್ತಿತ್ತು. ಆದರೆ ಅದು ಆವರ ಆಯ್ಕೆಗೆ ಬಿಟ್ಟ ವಿಷಯವಾಗಿತ್ತು. ಈಗ ರಹಮತ್ ಅವರ ಒತ್ತಾಯದ ಮೇರೆಗೆ ಅದನ್ನು ಅವರ ಪ್ರತಿಕ್ರಿಯೆಯೊಂದಿಗೆ ಪ್ರಕಟಿಸಿದ್ದಾರೆ.

ಈಗ ರಹಮತ್ ಅವರ ಮೂಲ ಲೇಖನ, ಅದರ ಬಗ್ಗೆ ನಾನು ಬರೆದ ಲೇಖನ ಮತ್ತು ಅದನ್ನು ಕುರಿತ ರಹಮತ್ ಅವರ ಪ್ರತಿಕ್ರಿಯೆ ಈ ಮೂರೂ ಈಗ 'ಸಂವಾದ'ದ ಓದುಗರಿಗೆ ಲಭ್ಯವಿವೆ. ಆಸಕ್ತ ಓದುಗರು ಈ ಮೂರೂ ಬರಹಗಳನ್ನು ವಿವರವಾಗಿ ಗಮನಿಸಿ, ರಹಮತ್ ಅವರ ಮೂಲ ಲೇಖನದ ಬಗ್ಗೆ ನಾನು ಎತ್ತಿದ್ದ ಪ್ರಶ್ನೆಗಳು ಅವರು ತಮ್ಮ ಪ್ರತಿಕ್ರಿಯೆಯಲ್ಲಿ ಹೇಳಿಕೊಂಡಿರುವ ಹಾಗೆ ಕೇವಲ ಕಾಗುಣಿತ ದೋಷಗಳಿಗೆ ಸಮನಾದವೋ ಮತ್ತು ಆ ಬಗ್ಗೆ ನಾನು ಮಾಡಿದ್ದ ಆಕ್ಷೇಪಣೆಗಳು ಮತ್ತು ಟೀಕೆಗಳು ಅವರ ಕಣ್ಣುಗುಡ್ಡೆ ಹಾರಿ ಹೋಗುವ ಮತ್ತು ಕೈಮೂಳೆ ಮುರಿದು ಹೋಗುವ ಹಾಗೆ ಬಿದ್ದಿರುವ ದೊಣ್ಣೆ ಏಟುಗಳೋ ಎಂಬುದನ್ನು ತೀರ್ಮಾನಿಸಬಹುದಾಗಿದೆ. ಹಾಗೇ ನನ್ನ ಪ್ರಶ್ನೆ ಮತ್ತು ಆಕ್ಷೇಪಣೆಗಳನ್ನು ಇವರು ತಪ್ಪಾಗಿ ಉಲ್ಲೇಖಿಸಿ, ಅರ್ಥೈಸಿ ಚರ್ಚೆಯ ದಾರಿ ತಪ್ಪಿಸಲು ಮಾಡಿರುವ ಹಲವು ಪ್ರಯತ್ನಗಳನ್ನು ಕೂಡ. ಇದರ ಹೊರತಾಗಿ, ಈ ವಿಷಯಗಳ ಬಗ್ಗೆ ನಾನು ಮತ್ತೇನೂ ವಿವರಣೆ ನೀಡಬಯಸುವುದಿಲ್ಲ. ಆದರೆ ಅವರು ಇದನ್ನೇ ನೆಪ ಮಾಡಿಕೊಂಡು ನನ್ನ ಒಟ್ಟು ಬರಹ ಮಾತ್ರವಲ್ಲದೆ ನನ್ನ ವ್ಯಕ್ತಿತ್ವದ ಬಗೆಗೂ ಸಲ್ಲದ ಟೀಕೆ–ಷರಾಗಳನ್ನು ಬರೆದು, ಹೀನಾಯವೆನ್ನಿಸುವ ಕೆಲವು ವೈಯುಕ್ತಿಕ ಆಪಾದನೆಗಳನ್ನು ಮಾಡಿದ್ದಾರೆ. ಇದು ನೇರವಾಗಿ ಉತ್ತರಿಸಲಾಗದ ನನ್ನ ಆಕ್ಷೇಪಣೆಗಳು ಮತ್ತು ಟೀಕೆಗಳು ಅವರಲ್ಲಿ ಉಂಟು ಮಾಡಿರುವ ಅಸಹಾಯಕ ರೋಷದ ಪರಿಣಾಮವೇ ಆಗಿದೆ ಎಂದು ನಾನು ಭಾವಿಸಿದ್ದೇನೆ. ಇದಕ್ಕೆ 'ಸಂವಾದ'ದಂತಹ ಪತ್ರಿಕೆ ಅವಕಾಶ ಮಾಡಿಕೊಟ್ಟಿರುವುದೂ ನನಗೆ ವ್ಯಥೆ ತಂದಿದೆ.

ಹಿರಿಯನಾದ ನಾನು ಕಿರಿಯನಾದ ಅವರ ಬಗ್ಗೆ ಏನೇನೋ ಬರೆದು ಸಣ್ಣವನಾದ ಬಗ್ಗೆ ಬೇಸರವಾಗಿದೆಯೆಂದು ಹೇಳುವ ರಹಮತ್ ಅವರ ಈ ಉದಾರಮಾತಿನ ಅಪ್ರಾಮಾಣಿಕತೆ, ಅವರು ಈ 'ಹಿರಿಯ'ನ ಮೇಲೆ ವೈಯುಕ್ತಿಕ ನೆಲೆಯ ಈ ಟೀಕೆ–ಷರಾಗಳನ್ನು ಬರೆದಿರುವ ರೀತಿಯಲ್ಲೇ ಎದ್ದು ಕಾಣುವಂತಿದೆ. ಹುಸಿ ಸೌಜನ್ಯದ ಮರೆಯಲ್ಲಿರುವ ಈ ಅಪ್ರಾಮಾಣಿಕತೆಯನ್ನು ಅವರ ಪ್ರತಿಕ್ರಿಯೆಯುದ್ದಕ್ಕೂ ಕಾಣಬಹುದಾಗಿದೆ. ಈ ದೃಷ್ಟಿಯಿಂದ, ನಾನು ಇತರರ ಪ್ರಾಮಾಣಿಕತೆಯನ್ನು ಪ್ರಶ್ನಿಸುತ್ತೇನೆ ಎಂಬ ಅವರ ಆರೋಪ ನನಗೆ ವಿಚಿತ್ರವಾಗಿ ಕಾಣುತ್ತದೆ. ವಾದದಲ್ಲಿ, ವಿವರಣೆಗಳಲ್ಲಿ ಅಪ್ರಾಮಾಣಿಕತೆ ಕಂಡರೆ ಏಕೆ ಹೇಳಬಾರದು? ಸಭ್ಯತೆಯ ಹೆಸರಿನಲ್ಲಿ ಅಪ್ರಮಾಣಿಕತೆ ಯನ್ನು ಮುಚ್ಚಿಡುವುದೇ ದೊಡ್ಡ ಅಸಭ್ಯತನ. ಉದಾಹರಣೆಗೆ, ಅವರು ಸಮಾಜವಾದಿ ಚಳುವಳಿಯ ಚರಿತ್ರೆಯನ್ನು ಅಪನಿರೂಪಣೆಗೊಳಪಡಿಸಿ ಮಾಡಿದ ಕೆಲವು ಆರೋಪಗಳಿಗೆ ನಾನು ನೀಡಿದ ಉತ್ತರ ಮತ್ತು ಉದಾಹರಣೆಗಳು ಅವರಿಗೆ ಲೋಹಿಯಾವಾದಿಗಳ ಇನ್ನೊಂದು ಪಟ್ಟಿ ಮಾತ್ರವಾಗಿ ಕಂಡಿದೆ!

ಇನ್ನು ನಾನು ಅವರ ಮೇಲೆ ಮಾರ್ಕ್ಸ್‌ವಾದಿಯೆಂಬ ಆಪಾದನೆ ಮಾಡಿದ್ದೇನಂತೆ. ಮಾರ್ಕ್ಸ್‌ವಾದಿಯಾಗಿರುವುದು ಈ ದೇಶದಲ್ಲಿ ಎಂದಿನಿಂದ ಅಪರಾಧವಾಯಿತೋ ನಾನರಿಯೆ! ಅಥವಾ ಇದು, 'ಸಾಕಿ'ಯ(ಇವರ ಪೂರ್ಣ ಹೆಸರು ಹೇಳಲೂ ಅಂಜಿಕೆ!) ವಿಚಾರಗಳನ್ನೂ ಸಹಾನುಭೂತಿಯಿಂದ ಉಲ್ಲೇಖಿಸುವ ತಮ್ಮನ್ನು ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಎಂದು ಗುರುತಿಸದೆ ಬರೀ ಮಾರ್ಕ್ಸ್‌ವಾದಿ ಎಂದಷ್ಟೇ ಗುರುತಿಸಿದ್ದರ ಬಗೆಗಿನ ಅಸಮಧಾನವೋ? ನಾನು ಚರ್ಚಿಸಿರುವ ಇವರ ಲೇಖನದಲ್ಲೇ–ಲೋಹಿಯಾ ಕಮ್ಯೂನಿಸ್ಟರನ್ನು ಟೀಕಿಸುತ್ತಿದ್ದುದರಲ್ಲಿ ಕಮ್ಯೂನಿಸ್ಟ್ ಸಿದ್ಧಾಂತಕ್ಕಿಂತಲೂ ಭಾರತದ ಕಮ್ಯೂನಿಸ್ಟರ ಬಗೆಗಿನ ವಿರೋಧವಿತ್ತು ಎಂಬ ಹೇಳಿಕೆಯಲ್ಲಿ(ಇದಕ್ಕೆ ಏನು ಆಧಾರವೋ ತಿಳಿಯದು!) ಮತ್ತು ಜಾಗತೀಕರಣ ಕುರಿತ ನಂಜುಂಡಸ್ವಾಮಿ, ತೇಜಸ್ವಿ, ಲಂಕೇಶರ ನಿಲುವುಗಳನ್ನು ಚರ್ಚಿಸುವ ಸಂದರ್ಭದಲ್ಲಿ–ಇವರ ಮಾರ್ಕ್ಸ್‌ವಾದಿ ಒಲವು ನಿಲುವುಗಳು ಎದ್ದು ಕಾಣುವಂತಿರುವಾಗ ಈ ನಿರಾಕರಣೆ ಏಕೋ ತಿಳಿಯದಾಗಿದೆ! ಆದರೂ ನನಗೆ ಲಾಗಾಯ್ತಿನಿಂದ ಮಾರ್ಕ್ಸ್‌ವಾದಿಗಳ ಬಗೆಗೆ ಸಿಟ್ಟು ಇದ್ದಿತೆಂದೂ, ಅದನ್ನು ಈಗ ತಮ್ಮ ಮೇಲೆ ಕಾರಿಕೊಳ್ಳಲಾಗಿದೆ ಎಂದು ಅವರು ದೂರಬಲ್ಲವರಾಗಿದ್ದಾರೆ!

ಹೀಗೆ ಸದಾ ಮೈಗೆ ಎಣ್ಣೆ ಹಚ್ಚಿಕೊಂಡೇ ವಾಗ್ವಾ

ದಕ್ಕೆ ಇಳಿಯುವ ಇವರಿಗೇ-ಯಾರ ಬಗ್ಗೆಯೂ ಗೌರವವಿದ್ದಂತಿಲ್ಲ. ಗೌರವದ ಮಾತೆಲ್ಲ ಮಾತಿನ ಮಸಲತ್ತು ಮಾತ್ರ. ಇವರಿಗೆ ನನ್ನ ಟೀಕೆಗಳಿಂದ, ನನ್ನ ಮೇಲೆ ಪ್ರಸ್ತುತ ಚರ್ಚೆಗೆ ಸಂಬಂಧವೇ ಇಲ್ಲದ ವಿಷಯಗಳನ್ನೆತ್ತಿಕೊಂಡು ವೈಯುಕ್ತಿಕ ದಾಳಿ ನಡೆಸುವಷ್ಟು ತೀವ್ರ ನೋವಾಗಿದ್ದರೆ, ಅದಕ್ಕೆ ಕಾರಣ, ಬಹುಶಃ ಅವರ ವಿಪರೀತ ಊದಿಕೊಂಡ ವಿದ್ವದಹಂಕಾರವಷ್ಟೆ. ಏಕೆಂದರೆ, ನನ್ನ ಲೇಖನದಲ್ಲಿ ಆವರ ಆವೊಂದು ನಿರ್ದಿಷ್ಟ ಲೇಖನದಲ್ಲಿನ ವಿಚಾರಗಳಿಗೆ ಸೀಮಿತವಾದಂತೆ ಮಾತ್ರ-ಅದೂ ಸಕಾರಣ ಸಹಿತವಾಗಿ-ಟೀಕೆ ಮಾಡಿದ್ದೇನೇಯೇ ಹೊರತು, ಅವರ ಇಡೀ ಸಾಹಿತ್ಯದ ಬಗೆಗಲ್ಲ, ಅವರ ವ್ಯಕ್ತಿತ್ವದ ಬಗೆಗಂತೂ ಅಲ್ಲವೇ ಅಲ್ಲ. ಅಷ್ಟೇ ಅಲ್ಲ, ಓದುಗರು ಗಮನಿಸಬಹುದಾದಂತೆ ಅವರ ತಮ್ಮ ಬರಹಗಳ ಮೂಲಕ ಗಳಿಸಿಕೊಂಡಿರುವ 'ವಿಶ್ವಾಸಾರ್ಹತೆ'ಯೇ ನನ್ನ ಪ್ರತಿಕ್ರಿಯೆಗೆ ಕಾರಣವಾಗಿದೆ ಎಂದು ಸಾಂದರ್ಭಿಕವಾಗಿ ಸೂಚಿಸಿಯೂ ಇದ್ದೇನೆ. ಆದರೆ ನಾನು ಅವರ ಮೇಲೆ ಜನ್ಮಾಂತರದ ಸೇಡು ತೀರಿಸಿಕೊಳ್ಳುವಂತೆ ಬರೆದಿರುವುದಾಗಿ ಅವರು ಗೋಳಾಡಿಕೊಂಡಿದ್ದಾರೆ. ಈ ಗೋಳಾಟವನ್ನು ನಾನು ಅವರ ಬರವಣಿಗೆ ಶೈಲಿಯೆಂದಷ್ಟೇ ತಿಳಿದು, ಟಿವಿ-9ವಾಹಿನಿಯವರಿಗೆ ರಹಮತ್ ಅವರ ಜನ್ಮಾಂತರದ ಕಥೆ ಕೇಳುವಂತೆ ಮನವಿ ಮಾಡುವ ಆಸೆಯನ್ನು ಹತ್ತಿಕ್ಕಿದ್ದೇನೆ.

ನಾನು ರಹಮತ್ ಅವರ ಲೇಖನದ ಬಗ್ಗೆ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿ, ಟೀಕೆಗಳನ್ನು ಮಾಡಿದ್ದು, ಮುಖ್ಯವಾಗಿ ಈ ಐದು ಅಂಶಗಳ ಬಗ್ಗೆ ಮಾತ್ರ:

1. ಸಮಾಜವಾದಿ ಚಳುವಳಿಯ ಚರಿತ್ರೆಯನ್ನು ಅಲ್ಲಲ್ಲಿ ಕಿವಿಗೆ ಬಿದ್ದ ಮಾಹಿತಿ, ಯಾರದೋ ಸಾಂದರ್ಭಿಕ – ವೈಯುಕ್ತಿಕ ಅಭಿಪ್ರಾಯ (ಅವರು ರಹಮತ್ ಉಲ್ಲೇಖಿಸಿ ದಂತಹ ಎಷ್ಟೇ ದೊಡ್ಡ ಹೆಸರುಗಳಾಗಿರಲಿ) ಹಾಗೂ ವದಂತಿಗಳನ್ನಷ್ಟೇ ಆಧರಿಸಿ ಪ್ರಸ್ತುತಪಡಿಸಿ, ಹಲವು ತಪ್ಪು ತಿಳುವಳಿಕೆಗಳಿಗೆ ಮತ್ತು ಕೆಲ ನಾಯಕರ ಮೇಲೆ ಸಲ್ಲದ ಆಪಾದನೆಗಳಿಗೆ ಎಡೆ ಮಾಡಿಕೊಟ್ಟಿರುವುದು.

2. ಸಮಾಜವಾದಿ ತತ್ವ ಮತ್ತು ಸಿದ್ಧಾಂತವನ್ನು ಅದರ ವಿಭಿನ್ನ ಆಯಾಮಗಳೂ ಮತ್ತು ಮುಖ್ಯ ಸೂಕ್ಷ್ಮಗಳೂ ಕಾಣೆಯಾಗುವಷ್ಟು ರೂಕ್ಷವಾಗಿ ಸಾರಾಂಶೀಕರಿಸುವ ಮೂಲಕ-ಮಾರ್ಕ್ಸ್‌ವಾದವನ್ನು ಮುಂದಿಟ್ಟುಕೊಂಡು -ಅದರ ತಾತ್ವಿಕ ಮಹತ್ವ ಮತ್ತು ಪ್ರಸ್ತುತತೆಗಳನ್ನೇ ಅಲ್ಲಗಳೆಯುವ ಪ್ರಯತ್ನ ಮಾಡಲಾಗಿರುವುದು.

3. ಸಮಾಜವಾದಿ ಚಳುವಳಿ ತಾತ್ವಿಕವಾಗಿ ಬ್ರಾಹ್ಮಣ ವಿರೋಧಿ ಭೂಮಾಲೀಕ ಶೂದ್ರ ಜಾತಿಗಳ ಚಳುವಳಿಯಾಗಿದ್ದು, ಅದರೊಂದಿಗೆ ಮತ್ತು ಅದರಿಂದ ಸ್ಫೂರ್ತಿ ಪಡೆದ ಸಂಘಟನೆಗಳೊಂದಿಗೆ ಮುಸ್ಲಿಮರಾಗಲೀ ದಲಿತರಾಗಲೀ ಗುರುತಿಸಿಕೊಳ್ಳಲು ಸಾಧ್ಯವಾಗಲಿಲ್ಲ ಎಂದು ಸಾರಾಸಗಟಾಗಿ ಸಾರುತ್ತಾ 'ಅಪಪ್ರಚಾರದ ರಾಜಕಾರಣ' ಮಾಡಿರುವುದು.

4. ಆಯ್ದ ಕೆಲವರ ಕೆಲವು ವೈಯುಕ್ತಿಕ ವರ್ತನೆಗಳನ್ನು, ಬಿಡಿ ನಿರೂಪಣೆಗಳನ್ನು ಉದಾಹರಿಸಿ ಇಡೀ ಚಳುವಳಿಯ ಬೌದ್ಧಿಕ ಸಮಗ್ರತೆ ಮತ್ತು ಸಾಂಸ್ಕೃತಿಕ ಶೀಲವನ್ನೇ ಅನುಮಾನಾಸ್ಪದಗೊಳಿಸುವಷ್ಟು ಅವನ್ನು ಸಾರ್ವತ್ರೀಕರಿಸಲಾ ಗಿರುವುದು.

5. ಸಮಾಜವಾದಿ ಚಳುವಳಿಗೆ ಆಧಾರವಾಗಿದ್ದ ಪಕ್ಷದ ವಿಸರ್ಜನೆಯಾದ ಬಹುಕಾಲದ ನಂತರದಲ್ಲಿ ಮಾಜಿಸಮಾಜವಾದಿಗಳೆನಿಸಿಕೊಂಡ ಕೆಲವರ ರಾಜಕಾರಣವನ್ನು ಉಲ್ಲೇಖಿಸಿ, ಸಮಾಜವಾದಿಗಳು ಕೋಮುವಾದಿ ರಾಜಕಾರಣಕ್ಕೆ ಕಾರಣರಾದರೆಂಬ ಗಂಭೀರ ಆರೋಪ ಮಾಡಿರುವುದು.

ಇವು ಬರವಣಿಗೆಯ ಮುಗ್ಧ ಕಾಗುಣಿತ ದೋಷಗಳೇನೂ ಅಲ್ಲವೆಂಬುದೂ, ಇವುಗಳ ಹಿಂದೆ ದಟ್ಟ ರಾಜಕೀಯ ಪೂರ್ವಾಗ್ರಹವೊಂದು ಕೆಲಸಮಾಡಿದೆ ಎಂಬುದೂ ಮೇಲ್ನೋಟಕ್ಕೇ ಎದ್ದು ಕಾಣುತ್ತಿದೆಯೆಂಬುದನ್ನು ಓದುಗರು ಮನಗಾಣುವರೆಂದು ಭಾವಿಸುವೆ. ಮಿಕ್ಕಂತೆ ನಾನು ಅವರ ಲೇಖನದ ಇತರ ವಿವರಗಳ ಬಗ್ಗೆ ಏನೂ ಮಾತಾಡಿಲ್ಲ. ಅಂದರೆ, ಅವರು ತಮ್ಮ ಲೇಖನದಲ್ಲಿ ಸಮಾಜವಾದಿ ಚಳುವಳಿಯ ಕೆಲವು ರೀತಿ ನೀತಿಗಳ ಬಗ್ಗೆ ಮತ್ತು ಕೆಲವು ಸಮಾಜವಾದಿ ನಾಯಕರ ವ್ಯಕ್ತಿಪ್ರತಿಷ್ಠೆ, ಹಠಮಾರಿತನ ಮತ್ತು ಅರಾಜಕ ವರ್ತನೆಗಳ ಬಗ್ಗೆ ಮಾಡಿರುವ ಟೀಕೆಗಳನ್ನು ಕುರಿತು ನಾನು ಮೌನ ಸಮ್ಮತಿಯನ್ನೇ ಸೂಚಿಸಿದ್ದೇನೆ. ಏಕೆಂದರೆ, ನಾನೇ ಈ ಹಿಂದಿನ ನನ್ನ ಹಲವು ಲೇಖನಗಳಲ್ಲಿ ಸಮಾಜವಾದಿಗಳ ಇಂತಹ ರೀತಿ ನೀತಿಗಳನ್ನು, ವರ್ತನೆಗಳನ್ನು ಟೀಕಿಸಿದ್ದೇನೆ. ಆದರೆ, ಈಗ ಇವರೊಂದಿಗೆ ನನ್ನ 'ಕ್ರಾಂತಿಕಾರಿ' ಚರಿತ್ರೆಯನ್ನು ಸಾಬೀತುಪಡಿಸುವ ಸ್ಪರ್ಧೆಗೆ ಇಳಿಯಲು, ನಾನು ಇವರಂತೆ ಈ ಹಿಂದೆ ಬರೆದ 'ವಾಚಕರ ವಾಣಿ' ಪತ್ರಗಳ ಅಥವಾ 'ಮಾಸ್ ಮೂವ್‌ಮೆಂಟ್'ಗಳೆಂದು ಇವರು ಭವ್ಯವಾಗಿ ಕರೆಯುವ ಚಳುವಳಿಗಳೊಂದಿಗೆ ಹೊಂದಿದ್ದ ಸಂಬಂಧ-ಸಂಪರ್ಕಗಳ ರೀತಿ ನೀತಿಗಳ ವಿವರಗಳನ್ನು ಇಲ್ಲಿ ನೀಡಲಾರೆ. ನೀಡಿದರೆ, ಇಂತಹ ಯಾವ ಕೆಲಸಗಳನ್ನೂ ಮಾಡದವರು ಈ ಚಳುವಳಿಗಳ ಬಗ್ಗೆ ಮಾತನ್ನಾಡುವ ಹಕ್ಕನ್ನೇ ಕಳೆದುಕೊಂಡು ಬಿಡುತ್ತಾರೆ ಎಂಬ ಅವರ (ಎಡ)ಪಂಥೀಯ ವಾದವನ್ನು ನಾನೂ ಎತ್ತಿ ಹಿಡಿದಂತಾಗುತ್ತದೆ.

ಸದಾ ಮೈಗೆ ಎಣ್ಣೆ ಹಚ್ಚಿಕೊಂಡೇ ವಾಗ್ವಾದಕ್ಕೆ ಇಳಿಯುವ ಇವರಿಗೆ ಯಾರ ಬಗ್ಗೆಯೂ ಗೌರವವಿದ್ದಂತಿಲ್ಲ. ಗೌರವದ ಮಾತೆಲ್ಲ ಮಾತಿನ ಮಸಲತ್ತು ಮಾತ್ರ ಇವರಿಗೆ ನನ್ನ ಟೀಕೆಗಳಿಂದ, ನನ್ನ ಮೇಲೆ ಪ್ರಸ್ತುತ ಚರ್ಚೆಗೆ ಸಂಬಂಧವೇ ಇಲ್ಲದ ವಿಷಯಗಳನ್ನೆತ್ತಿಕೊಂಡು ವೈಯುಕ್ತಿಕ ದಾಳಿ ನಡೆಸುವಷ್ಟು ತೀವ್ರ ನೋವಾಗಿದ್ದರೆ, ಅದಕ್ಕೆ ಕಾರಣ, ಬಹುಶಃ ಅವರ ವಿಪರೀತ ಊದಿಕೊಂಡ ವಿದ್ವದಹಂಕಾರವಷ್ಟೆ. ಏಕೆಂದರೆ, ನನ್ನ ಲೇಖನದಲ್ಲಿ ಆವರ ಆವೊಂದು ನಿರ್ದಿಷ್ಟ ಲೇಖನದಲ್ಲಿನ ವಿಚಾರಗಳಿಗೆ ಸೀಮಿತವಾದಂತೆ ಮಾತ್ರ-ಅದೂ ಸಕಾರಣ ಸಹಿತವಾಗಿ-ಟೀಕೆ ಮಾಡಿದ್ದೇನೇಯೇ ಹೊರತು, ಅವರ ಇಡೀ ಸಾಹಿತ್ಯದ ಬಗೆಗಲ್ಲ, ಅವರ ವ್ಯಕ್ತಿತ್ವದ ಬಗೆಗಂತೂ ಅಲ್ಲವೇ ಅಲ್ಲ.

ಇದೆಲ್ಲಕ್ಕಿಂತ ಹೆಚ್ಚಾಗಿ, ರಹಮತ್ ಅವರ ಈ ದೀರ್ಘ ಪ್ರತಿಕ್ರಿಯೆಯಲ್ಲಿ ಎದ್ದು ಕಾಣುವ ತೀವ್ರ ವಿಷಾದದ ಸಂಗತಿ ಎಂದರೆ, ನನ್ನ ಲೇಖನದಲ್ಲಿ ಎತ್ತಿರುವ ಯಾವ ನಿರ್ದಿಷ್ಟ ಪ್ರಶ್ನೆಗಳಿಗೂ, ಆಕ್ಷೇಪಣೆಗಳಿಗೂ ಉತ್ತರಿಸಲು ಹೋಗದಿರುವುದು.(ಇವರು ತಮ್ಮ ವಾದಕ್ಕೆ ಬೆಂಬಲವಾಗಿ ಉಲ್ಲೇಖಿಸಿರುವ ಕಡಿದಾಳು ಶಾಮಣ್ಣನವರ ಸಂದರ್ಶನದ ಮಾತುಗಳ ಬಗ್ಗೆ ಸ್ವತಃ ಅವರೇ, ಈ ಮಾತುಗಳು ಇನ್ನಷ್ಟು ಪರಿಶೀಲನೆಗೆ ಒಳಗಾಗಬೇಕಿದೆ ಎಂದು ಹೇಳಿರುವುದರಿಂದ ಮತ್ತೆ ನಾನೇನೂ ಹೇಳುವ ಅಗತ್ಯವಿಲ್ಲವೆಂದು ಭಾವಿಸಿದ್ದೇನೆ.) ಬದಲಿಗೆ ಅವರು ಅವೆಲ್ಲವನ್ನೂ, ತಮ್ಮ ಲೇಖನದಲ್ಲಿ ಕೆಲವು ಮಾಹಿತಿ ಕೊರತೆ, ದೋಷಗಳಿರುವುದು ನಿಜ ಎಂದು ಸುಲಭವಾಗಿ ಹೇಳುವ ಮೂಲಕ ಅವನ್ನೆಲ್ಲ ನಾಜೂಕಾಗಿ ಪಕ್ಕಕ್ಕೆ ಗುಡಿಸಿಟ್ಟು, ನಾನು ಎತ್ತಿರುವ ಪ್ರಶ್ನೆಗಳಿಗೆ ಹೊರತಾದ ಅನಗತ್ಯ ಮಾಹಿತಿಯನ್ನು ರಾಗ ಬದಲಿಸಿ-ಲೋಹಿಯಾ ಮತ್ತು ಲೋಹಿಯಾವಾದಿಗಳ ಬಗ್ಗೆ ಮೂಲ ಲೇಖನದಲ್ಲಿ ಕಾಣದ ಪ್ರೀತಿ ಗೌರವಗಳನ್ನು ಉದಾರವಾಗಿ ಚೆಲ್ಲಾಡುತ್ತಾ-ಮಂಡಿಸುತ್ತಾ ಹೋಗಿರುವುದು.

ಉದಾಹರಣೆಗೆ, ಗೋಪಾಲಗೌಡರ ಮೇಲಿನ ಅಲ್ಲಿನ ಗಂಭೀರ ಆರೋಪ ಇಲ್ಲಿ ಅರ್ಧ ತಣ್ಣಗಾಗಿ, ಅವರ ಮೇಲೆ ಹೊಗಳಿಕೆಯ ಸುರಿಮಳೆಯೇ ನಡೆದಿದೆ; ಅಲ್ಲಿನ ಪಟೇಲರ 'ಹೆಣ್ಣಿನ ಹುಚ್ಚು' ಇಲ್ಲಿ 'ರಸಿಕತೆ'ಯಾಗಿ ಮಾರ್ಪಾಟಾಗಿ, ಅವರ ಗುಣಗಾನಕ್ಕೆ ಅವಕಾಶ ಕಲ್ಪಿಸಿಕೊಳ್ಳಲಾಗಿದೆ; ನಾನು ಪಟೇಲರ ಬಗ್ಗೆ ಒಂದೆಡೆ ಮಾತ್ರ ಪ್ರಯೋಗ ಸಹಜವಾಗಿ ಬಳಸಿರುವ ಏಕವಚನ ಇವರಿಗೆ ಈಗ ಮಹಾಪರಾಧವಾಗಿ ಕಂಡಿದೆ! ಇದೆಲ್ಲದರ ಮೂಲಕ ರಹಮತ್ ತಮ್ಮನ್ನು ದುರಂತ ನಾಯಕನಂತೆ ಚಿತ್ರಿಸಿಕೊಂಡು ಸಮರ್ಥಿಸಿಕೊಳ್ಳಲು ಯತ್ನಿಸಿದ್ದಾರಷ್ಟೆ. ಜೊತೆಗೆ ಕೆಲವು ಜನವರ್ಗಗಳನ್ನು ನನ್ನ ವಿರುದ್ಧ ಎತ್ತಿ ಕಟ್ಟುವ ವರಸೆ ಬೇರೆ! ಈ ಪ್ರಯತ್ನದಲ್ಲಿ ಅವರು ನನ್ನ ಕೆಲವು ಸಾಮಾಜಿಕ-ಸಾಂಸ್ಕೃತಿಕ-ರಾಜಕೀಯ ನಿಲುವುಗಳ ಬಗ್ಗೆ ಅಪಾಯಕಾರಿ ಎನ್ನಿಸುವ ಟೀಕೆಗಳನ್ನೂ ಮಾಡಿರುವುದರಿಂದ ಇಲ್ಲಿ ಕೆಲವು ಸ್ಪಷ್ಟೀಕರಣಗಳನ್ನು ನೀಡಲೇಬೇಕಾಗಿದೆ. ಅದರ ಭಾಗವಾಗಿ, ಎಡಪಂಥೀಯ ಮುಖ್ಯ ಲಹರಿ ಅಥವಾ ಜನಪ್ರಿಯ ನಿಲುವುಗಳಿಗಿಂತ ಸ್ವಲ್ಪ ಭಿನ್ನವಾದ ನನ್ನ ಸಾಮಾಜಿಕ-ಸಾಂಸ್ಕೃತಿಕ-ರಾಜಕೀಯ ನಿಲುವುಗಳ ಬಗ್ಗೆ ಕೆಲವು ವಿವರಣೆಗಳನ್ನು ಅಗತ್ಯವಾಗಿ ನೀಡಲೇಬೇಕಾಗಿದೆ. ದೀರ್ಘವೆನಿಸಿದರೆ ಕ್ಷಮಿಸಿ, ಆಸಕ್ತರು ಮಾತ್ರ ಈ ಓದನ್ನು ಮುಂದುವರೆಸಬಹುದು.

2

ನಾನು ಬಂಡಾಯ ಸಂಘಟನೆಯ ಆರಂಭದ ದಿನದಿಂದಲೂ ಅದನ್ನು ವಿರೋಧಿಸಿಕೊಂಡು ಬಂದವನು. ಒತ್ತಾಯಪೂರ್ವಕವಾಗಿ ಭಾಗವಹಿಸಬೇಕಾಗಿ ಬಂದ ಒಂದೆರಡು ಸಭೆಗಳಲ್ಲೂ ಅದರ ಚಿಂತನಾ ಲಹರಿಯ ವಿರುದ್ಧವೇ ಮಾತನಾಡಿ ಬಂದವನು. ಅದರ ಸ್ಥಾಪನೆಯ ಹಿಂದೆ ಒಂದು ನಿರ್ದಿಷ್ಟ ರಾಜಕೀಯ ಹಿತಾಸಕ್ತಿಯ ಕಾರಣವಿತ್ತೇ ಹೊರತು ಯಾವುದೇ ಸಾಹಿತ್ಯಿಕ ಅಥವಾ ಸಾಂಸ್ಕೃತಿಕ ಒತ್ತಾಯಗಳಿರಲಿಲ್ಲ (ಆದರೆ ಆನಂತರ ಡಿ.ಆರ್.ನಾಗರಾಜರಂತಹ ಬುದ್ಧಿವಂತರು ಅವನ್ನು ಆವಿಷ್ಕರಿಸಿ ಕೊಟ್ಟರು ಎಂಬುದು ಬೇರೆ ಮಾತು!) ಎಂಬುದು

ಅವರ ಸ್ಥಾಪನೆಗಾಗಿ ಕರೆದಿದ್ದ ಮೊದಲ ಸಭೆಯಲ್ಲಿ ಭಾಗವಹಿಸಿದ್ದ ನನಗೆ ಮನವರಿಕೆಯಾಗಿತ್ತು. ಅದು ಸಾಹಿತ್ಯ - ಕೃತಿಗಳನ್ನು ರಾಜಕಾರಣದ ಗೂಟಕ್ಕೆ ಕಟ್ಟಿಹಾಕಲು ರಾಜಕೀಯ ಸರ್ವಾಧಿಕಾರ ತತ್ವದಲ್ಲಿ ನಂಬಿಕೆಯಿರುವ ಕೆಲವರು ಹೊಸೆಯುತ್ತಿರುವ ಹಗ್ಗವೆಂದು ನಾನು ಆಗಲೇ ನನ್ನ ಹಲವು-ಲೋಹಿಯಾವಾದಿಗಳೂ ಸೇರಿದಂತೆ-ಸ್ನೇಹಿತರಿಗೆ ವಿವರಿಸಿದ್ದೆ. ಅದನ್ನು ಮತ್ತು ಈ ಸಂಘಟನೆ ಹೇಗೆ ಕೇವಲ ಸಾಹಿತ್ಯ ಪುಢಾರಿಗಳ ಕೂಟವಾಗಿದೆ ಎಂಬುದನ್ನು ಹಲವು ಕಡೆ ಬರೆದೂ ಇದ್ದೇನೆ.(ಉದಾ: ನನ್ನ 'ಗಮನ', 'ಬೇರು ಬಿಳಲು' ವಿಮರ್ಶಾ ಸಂಕಲನಗಳ ಲೇಖನಗಳಲ್ಲಿ) ಇದನ್ನು ಓದಿಲ್ಲದ ರಹಮತ್ ನನ್ನ ಟೀಕೆಯಲ್ಲಿ ಅಗ್ಗದ ವ್ಯಂಗ್ಯ ಮಾತ್ರ ಕಂಡಿದ್ದರೆ ನಾನಾದರೂ ಏನು ಮಾಡಲಿ? ರಹಮತ್ ತಮ್ಮ ಪ್ರತಿಕ್ರಿಯೆಯಲ್ಲಿ ತುಂಬಿರುವ ಕುಹಕ-ವ್ಯಂಗ್ಯಗಳನ್ನು ಒಮ್ಮೆ ಅವಲೋಕಿಸಿದರೆ, ಅವರಿಗೆ ಇವನ್ನು ಇತರರೂ ಏಕೆ ಬಳಸುತ್ತಾರೆ ಎಂಬುದು ಅರ್ಥವಾದೀತು. ಅಥವಾ ತಾವು ಬಳಸಿದ ಕುಹಕ ವ್ಯಂಗ್ಯಗಳೆಲ್ಲ ಅಮೂಲ್ಯವೂ, ಇತರರದೆಲ್ಲ ಅಗ್ಗವೆಂದು ಇವರು ಭಾವಿಸಿದ್ದಾರೋ?

ಅಲ್ಲಾ(ಇದು ಕನ್ನಡದ ಶಬ್ದ) ರಹಮತ್, ಕೋಗಿಲೆಯ ದನಿ ಕಾಗೆಯ ದನಿಗಿಂತ ಮಧುರವಾಗಿಯೇನೂ ಇಲ್ಲ; ಸ್ಥಾಪಿತ ಹಿತಾಸಕ್ತಿಗಳು ಕೋಗಿಲೆಯನ್ನು ಹೊಗಳಿ ಹೊಗಳಿ ನಮಗೆ ಕಾಗೆಯ ಧ್ವನಿ ಕರ್ಕಶವಾಗಿ ಕೇಳುವಂತೆ ಮಾಡಲಾಗಿದೆ ಎಂಬ ವಾದವನ್ನು ಮಂಡಿಸುವ ಮತ್ತು ಅದನ್ನು ಜನಪರವಾದ ಅಭೂತಪೂರ್ವ ವೈಚಾರಿಕ ಚಿಂತನೆಯೆಂಬಂತೆ ಚಪ್ಪಾಳೆ ತಟ್ಟಿ ಮಾನ್ಯ ಮಾಡುವವರನ್ನು ಭಂಡತನ-ಭಂಡರು ಎನ್ನದೆ ಇನ್ನೇನನ್ನಬೇಕು ದಯವಿಟ್ಟು ಹೇಳಿ. ನನಗೆ ನಿಮ್ಮಂತೆ ನಾಜೂಕಾಗಿ ಮಾತನಾಡಲು ಬರುವುದಿಲ್ಲ. ಅದು ಇಷ್ಟವೂ ಇಲ್ಲ. ಏಕೆಂದು ಮುಂದೆ ಹೇಳುತ್ತೇನೆ. ಬಂಡಾಯದಲ್ಲಿರುವ/ಇದ್ದ ಲೋಹಿಯಾವಾದಿಗಳಿಗೂ ನನ್ನ ವರ್ಣನೆ ಅನ್ವಯಿಸುವುದೇ ಎಂದು ನೀವು ಕೇಳಿದ್ದೀರಿ. ಈ ಚರ್ಚೆಯ ಸಂದರ್ಭದಲ್ಲಿ ಇದಕ್ಕಿಂತ ಅಗ್ಗದ ರಾಜಕೀಯ ಪ್ರಶ್ನೆ ಇನ್ನೊಂದಿರಲಾರದು ಎಂಬುದಷ್ಟೇ ನನ್ನ ಉತ್ತರವಾಗಿದೆ. ಏಕೆಂದರೆ ಇಲ್ಲಿ ನಾನು ಲೋಹಿಯಾವಾದ ಅಥವಾ ಲೋಹಿಯಾವಾದಿಗಳ (ಅಂತಹ ಒಂದು ಸಂಘಟಿತ ಗುಂಪು ಇದೆಯೇ ಎಂಬ ಬಗ್ಗೆಯೇ ನನಗೆ ಅನುಮಾನವಿದೆ!) ವಕ್ತಾರನಾಗಿ ಮಾತನಾಡುವ ದರ್ದಿನಿಂದ ಏನನ್ನೂ ಬರೆದಿಲ್ಲ.

ಇನ್ನು ಬಿ.ಕೃಷ್ಣಪ್ಪನವರು ಕುವೆಂಪು ಕಾದಂಬರಿಗಳ ಬಗ್ಗೆ ಮಾಡಿರುವ ಟೀಕೆಗಳನ್ನು ಕುರಿತ ನನ್ನ ಮಾತಿನ ಬಗ್ಗೆ. ಕೃಷ್ಣಪ್ಪ ನನ್ನ ಆಪ್ತ ಸ್ನೇಹಿತರಾಗಿದ್ದವರಷ್ಟೇ ಅಲ್ಲ, ನಮ್ಮ ಕುಟುಂಬ ಸ್ನೇಹಿತರೂ ಹೌದು. ನಾನೊಬ್ಬ ಸಮಾಜವಾದಿಯಾಗಿ ಅವರನ್ನು ನಾನು ಕೇವಲ ದಲಿತ ನಾಯಕನೆಂದು ನೋಡಲಾರೆ. ಅವರು ಹಿರಿಯ ಕನ್ನಡ ಪ್ರಾಧ್ಯಾಪಕರೂ ಆಗಿದ್ದವರು. ಅದನ್ನೇಕೆ ನಿರ್ಲಕ್ಷಿಸಬೇಕು? ಅವರು ದಲಿತರೆಂಬುದು ಅವರ ಇತರೆಲ್ಲ ಗುಣಾವಗುಣಗಳನ್ನೂ ರದ್ದು ಮಾಡಿಬಿಡುವುದೇ? ಈ ದೃಷ್ಟಿಯಿಂದ ನೋಡಿದಾಗ ಅವರು ಕುವೆಂಪು ಕಾದಂಬರಿಗಳ ಬಗ್ಗೆ ಎತ್ತಿದ್ದ ಪ್ರಶ್ನೆಗಳು ತೀರಾ ಬಡಕಲಾದವು ಎನ್ನಿಸುತ್ತದೆ ಮತ್ತು ಸಾಹಿತ್ಯ ರಾಜಕಾರಣ ಮಾಡುವವರ ಹೊರತಾಗಿ, ಇನ್ನಾರಿಗೂ ಅವು ಯಾವುದೇ ನೆಲೆಯಲ್ಲಿ ಗಂಭೀರ ಸಾಹಿತ್ಯ ವಿಮರ್ಶೆಯ ಪ್ರಶ್ನೆಗಳಾಗಿ ಕಾಣಲಾರವು ಎಂದೇ ನನ್ನ ಭಾವನೆ. ಏಕೆಂದರೆ, ಸಾಹಿತ್ಯ ಕೃತಿಯೊಂದನ್ನು ಅದರ ಇಡಿತನದಲ್ಲಿ

ಕೋಗಿಲೆಯ ದನಿ ಕಾಗೆಯ ದನಿಗಿಂತ ಮಧುರವಾಗಿಯೇನೂ ಇಲ್ಲ; ಸ್ಥಾಪಿತ ಹಿತಾಸಕ್ತಿಗಳು ಕೋಗಿಲೆಯನ್ನು ಹೊಗಳಿ ಹೊಗಳಿ ನಮಗೆ ಕಾಗೆಯ ಧ್ವನಿ ಕರ್ಕಶವಾಗಿ ಕೇಳುವಂತೆ ಮಾಡಲಾಗಿದೆ ಎಂಬ ವಾದವನ್ನು ಮಂಡಿಸುವ ಮತ್ತು ಅದನ್ನು ಜನಪರವಾದ ಅಭೂತಪೂರ್ವ ವೈಚಾರಿಕ ಚಿಂತನೆಯೆಂಬಂತೆ ಚಪ್ಪಾಳೆ ತಟ್ಟಿ ಮಾನ್ಯ ಮಾಡುವವರನ್ನು ಭಂಡತನ-ಭಂಡರು ಎನ್ನದೆ ಇನ್ನೇನನ್ನಬೇಕು ದಯವಿಟ್ಟು ಹೇಳಿ. ನನಗೆ ನಿಮ್ಮಂತೆ ನಾಜೂಕಾಗಿ ಮಾತನಾಡಲು ಬರುವುದಿಲ್ಲ. ಅದು ಇಷ್ಟವೂ ಇಲ್ಲ. ಏಕೆಂದು ಮುಂದೆ ಹೇಳುತ್ತೇನೆ. ಬಂಡಾಯದಲ್ಲಿರುವ/ಇದ್ದ ಲೋಹಿಯಾವಾದಿಗಳಿಗೂ ನನ್ನ ವರ್ಣನೆ ಅನ್ವಯಿಸುವುದೇ ಎಂದು ನೀವು ಕೇಳಿದ್ದೀರಿ. ಈ ಚರ್ಚೆಯ ಸಂದರ್ಭದಲ್ಲಿ ಇದಕ್ಕಿಂತ ಅಗ್ಗದ ರಾಜಕೀಯ ಪ್ರಶ್ನೆ ಇನ್ನೊಂದಿರಲಾರದು ಎಂಬುದಷ್ಟೇ ನನ್ನ ಉತ್ತರವಾಗಿದೆ.

ನೋಡಿ ಅದರ ನಿಲುವುಗಳನ್ನೂ, ದರ್ಶನವನ್ನೂ ಅರ್ಥೈಸಿಕೊಳ್ಳಬೇಕೇ ಹೊರತು ಬಿಡಿ ವಿವರ ಅಥವಾ ಆಯ್ದ ಭಾಗಗಳ ಮೂಲಕ ಅಲ್ಲ ಎಂಬ ಸರಳ ಕಲಾಭಿಜ್ಞತೆಯ ಅರಿವೇ ಅಲ್ಲಿ ಕಾಣೆಯಾಗಿದೆ.

ಜೊತೆಗೆ 'ಮಲೆಗಳಲ್ಲಿ ಮದುಮಗಳು' ಬರೆದ ಮುವ್ವತ್ತು ನಲವತ್ತು ವರ್ಷಗಳ ಹಿಂದೆಯೇ 'ಜಲಗಾರ', 'ಶೂದ್ರ ತಪಸ್ವಿ' ಮತ್ತು 'ಬೆರಳ್ಗೆ ಕೊರಳ್'ಗಳಂತಹ ನಾಟಕಗಳನ್ನು ಬರೆದ ಲೇಖಕನ ಮೇಲೆ ದಲಿತ ಪೂರ್ವಾಗ್ರಹದ ಟೀಕೆ ಮಾಡುವುದಾಗಲೀ, ಅದರ ಆಧಾರದ ಮೇಲೆ ವಿಮರ್ಶೆಯ ಸಿದ್ಧಾಂತಗಳನ್ನು ಕಟ್ಟ ಹೊರಡುವುದಾಗಲೀ, ಮೆಳ್ಳೆಗಣ್ಣಿನ ರಾಜಕೀಯ ನೋಟದ ಪರಿಣಾಮ ಮಾತ್ರವೆನಿಸುತ್ತದೆ ಎಂದು ಮತ್ತೆ ವಿಷಾದದಿಂದ ಹೇಳಬೇಕಾಗಿದೆ.(ಇದನ್ನು ಇಲ್ಲಿ ರಹಮತ್ ಮಾಡಲು ಪ್ರಯತ್ನಿಸಿರುವಂತೆ, ಭೈರಪ್ಪನವರ ಕಾದಂಬರಿಗಳಲ್ಲಿನ ರಾಜಕೀಯ ನೆಲೆಗಳ ಪರಿಶೀಲನೆಯ ಪ್ರಶ್ನೆಗಳಿಗೆ ತಳುಕು ಹಾಕುವುದು ಅಸಂಬದ್ಧವೆಂದೇ ನನ್ನ ಭಾವನೆ) ಕೃಷ್ಣಪ್ಪನವರು ಈ ಪ್ರಶ್ನೆಗಳನ್ನು ಎತ್ತಿದ ಗೋಷ್ಠಿಯಲ್ಲಿ ನಾನೂ ಹಾಜರಿದ್ದು, ಅಲ್ಲೇ ಅದರ ಬಗ್ಗೆ ನನ್ನ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದ್ದೆ. ನನ್ನ ಜೊತೆ ಕಿ.ರಂ. ಮತ್ತು ಕೆ.ವಿ.ಎನ್ ಅವರೂ ಇಂತಹುದೇ ಆಕ್ಷೇಪಣೆಗಳನ್ನು, ಆದರೆ ಇನ್ನಷ್ಟು ಸ್ಪಷ್ಟವಾದ ವಿಮರ್ಶೆಯ ಪರಿಭಾಷೆಯಲ್ಲಿ ದಾಖಲಿಸಿದ್ದರು ಎಂದು ನನ್ನ ನೆನಪು.

ಅದೇನೇ ಇರಲಿ, ದಲಿತರನ್ನೇ ಆಗಲಿ, ಇನ್ನ್ಯಾರೇ ಅವಕಾಶ ವಂಚಿತ ಅಥವಾ ಅವಮಾನಿತ ಸಮುದಾಯದವರನ್ನೇ ಆಗಲಿ, ಸಮ ಸ್ನೇಹಿತರಂತೆ ನೋಡುತ್ತಾ ಬಂದವನು ನಾನು. ಅವರನ್ನು ರಿಯಾಯ್ತಿ ದೃಷ್ಟಿಯ ಕರುಣೆಯಿಂದ ನೋಡಬಾರದು; ಅದು ಅವರಿಗೆ ಮಾಡುವ ಅವಮಾನವಲ್ಲದೆ, ಅವರಲ್ಲಿ ಸ್ವಯಂಮರುಕ ಇಲ್ಲವೇ ಹುಸಿ ಅಭಿಮಾನದ ಮೂಲವೊಂದನ್ನು ಸೃಷ್ಟಿಸಿ ಸಮಸ್ಯೆಯನ್ನು ಜಟಿಲಗೊಳಿಸುವುದು ಎಂದು ನಂಬಿರುವವನು ನಾನು. ಇದು ರಹಮತ್ ಅವರಿಗೆ ನಾನು ದಲಿತ-ಮಹಿಳೆ-ಮುಸ್ಲಿಂ ಸಮುದಾಯಗಳ ಬಗ್ಗೆ ಪೂರ್ವಾಗ್ರಹ ಹೊಂದಿರುವುದಾಗಿ ಕಂಡರೆ, ಅದಕ್ಕೆ ಕಾರಣ ಅವರು ಅಳವಡಿಸಿಕೊಂಡಿರುವ ಸಾಮಾಜಿಕ-ರಾಜಕೀಯ ದೃಷ್ಟಿಕೋನದಲ್ಲಿನ ದೌರ್ಬಲ್ಯವಷ್ಟೆ. ಗಾತ್ರ ಮತ್ತು ತೀವ್ರತೆ ಎರಡರಲ್ಲೂ ಮುಸ್ಲಿಂ ಮೂಲಭೂತವಾದದ ಬಗ್ಗೆ ಬರೆದುದರ ಹತ್ತರಷ್ಟು ಹಿಂದೂ ಕೋಮುವಾದದ ಬಗ್ಗೆ ನಾನು ಬರೆದಿರುವೆನಾದರೂ, ರಹಮತ್ ಕೆಲವು ಪ್ರಗತಿಪರ ಚಿಂತಕರು ಒಂದು ಧಾರ್ಮಿಕ ಸಮಾದಾಯದ ಬಗ್ಗೆ ಜನಾಂಗೀಯ ದ್ವೇಷ ಹುಟ್ಟಿಸುತ್ತಿದ್ದಾರೆಂದು ಅಮಾಯಕವಾಗಿ ಹೇಳುವುದರ ಜೊತೆ ಜೊತೆಗೇ, ಬಹು ಜಾಣತನದಲ್ಲಿ ನನ್ನ ಈ ತಥಾಕಥಿತ ಪೂರ್ವಾಗ್ರಹದ ಬಗ್ಗೆಯೂ ಪ್ರಸ್ತಾಪ ಮಾಡಿದ್ದಾರೆ. ಹಾಗೇ ಒಂದು ಘಟ್ಟದವರೆಗಿನ ಕರ್ನಾಟಕದ ಮುಸ್ಲಿಂ ರಾಜಕಾರಣದ ಬಗ್ಗೆ ಮಾತ್ರ ನಾನು ಆಡಿರುವ ಮಾತನ್ನು ತಿರುಚಿ, ಅದರಲ್ಲಿ ವ್ಯಂಗ್ಯವನ್ನೂ, ವಿರೋಧಾಭಾಸವನ್ನು ಕಾಣಲು ಯತ್ನಿಸಿದ್ದಾರೆ. (ಇದೇ ತರಹದ ಜಾಣತನದಲ್ಲಿ ಇವರು ತಮ್ಮ ಪುಸ್ತಕವೊಂದಕ್ಕೆ ಬೆನ್ನುಡಿಯಲ್ಲಿ ಇತರರ ಮೆಚ್ಚುಗೆಯ ಮಾತುಗಳ ಮಧ್ಯೆ ನನ್ನ ಟೀಕೆಯ ಮಾತನ್ನು ಅಪೂರ್ಣವಾಗಿಹಾಕಿ, ನನ್ನ ಮಾತುಗಳಿಗೆ ಅಪಾರ್ಥ ಕಲ್ಪಿಸುವ ಪ್ರಯತ್ನವನ್ನೂ ಮಾಡಿದ್ದಾರೆ.)

ಇದೆಲ್ಲವೂ ಇವೊತ್ತಿನ ಕೋಮು ಪರಿಸ್ಥಿತಿಯನ್ನು ನೋಡುವ ರಹಮತ್ ಅವರ ದೃಷ್ಟಿಕೋನದಲ್ಲೇ ದೊಡ್ಡ ಐಬಿರುವುದರ ಸೂಚನೆಯಾಗಿದೆ ಎಂದಷ್ಟೇ ನಾನಿಲ್ಲಿ ಹೇಳಬಯಸುವೆ. ಏಕೆಂದರೆ, ಇನ್ನು ಹೆಚ್ಚಾಗಿ ಒಂದು ಮಾತು ಹೇಳಿದರೂ ರಹಮತ್ ಮುಸ್ಲಿಮರಾಗಿ ಈಗಿರುವ 'ಸ್ಥಿತಿ'ಯಲ್ಲಿ(ಈ 'ಸ್ಥಿತಿ' ಏನೆಂಬುದನ್ನು, ರಹಮತ್‌ಗೆ ಸಹಜವಾಗಿಯೇ ಸಮಸ್ಯಾತ್ಮಕವಾಗಿ ಕಂಡಿರುವ ನನ್ನ ರಾಜಕೀಯ-ಧಾರ್ಮಿಕ ವಿಷಯಗಳನ್ನು ಕುರಿತ ಲೇಖನಗಳಲ್ಲಿ ವಿವರಿಸಿದ್ದೇನೆ.) ನನ್ನ ಮೇಲೆ ನೇರವಾಗಿಯೇ ಜನಾಂಗ ದ್ವೇಷದ ಆಪಾದನೆ ಮಾಡಿಯಾರು! ಆ ಅವಸರದಲ್ಲಿ ತಮ್ಮೊಬ್ಬ ರಾಜಕೀಯ ಸಂಗಾತಿಯನ್ನು-ಅವನೆಷ್ಟೇ ದೂರದವನಾಗಿ ಮತ್ತು ಸಮಸ್ಯಾತ್ಮಕವಾಗಿ ಕಂಡರೂ-ಕಳೆದುಕೊಂಡಾರು!! ಇವರ ಪ್ರಕಾರ ಜನ ಒಮ್ಮೆಗೇ ಪ್ರಗತಿಪರ ಚಿಂತಕರೂ, ಜನಾಂಗದ್ವೇಷ ಸೃಷ್ಟಿಸುವವರೂ ಹೇಗಾಗುವರೋ ನನಗೇ ತಿಳಿಯದಾಗಿದೆ! ರಹಮತ್ ಬಹಳ ಕಡೆ ಸುಲಭವಾಗಿ ಬಳಸುವ ಪ್ರಗತಿಪರತೆ ಎಂಬ ಕಲ್ಪನೆ ಈಗ ತಗಡೆದ್ದು ಹೋಗಿರುವುದೇ, ಅದನ್ನರಿಯದೆ ಅವರು ಅದು ಸೃಷ್ಟಿಸಿರುವ ಗೊಂದಲದಲ್ಲಿ ಸಿಕ್ಕಿಬಿದ್ದಿರುವುದೇ, ಅವರ ಈ ಸ್ಥಿತಿಗೆ ಮತ್ತು ಈ ವಿರೋಧಾಭಾಸಗಳಿಗೆ ಕಾರಣವಾಗಿದೆ ಎಂದು ನನಗನ್ನಿಸುತ್ತದೆ. ರಹಮತ್ ಯೋಚಿಸಬೇಕು.

ನಾನು ನಿತೀಶ್ ಕುಮಾರ್ ಆಡಳಿತದ ಬಗ್ಗೆ ಸಾಂದರ್ಭಿಕವಾಗಿ ಒಳ್ಳೆಯ ಮಾತುಗಳನ್ನು ಬರೆದಿರುವುದನ್ನು ಗಮನಿಸಿ ಅವರು, ಇದು ನನ್ನ 'ಮರಳಿ ಬರಲಿದೆ ಸಮಾಜವಾದ' ಎಂಬ ನಂಬಿಕೆಯ ಮಾತು ಕನ್ನಡಿಗರಿಗೆ ಹಾಕಲಾಗಿರುವ ಬೆದರಿಕೆಯಂತೆ ಕೇಳಿಸುತ್ತಿದೆ ಎಂದು ವ್ಯಂಗ್ಯವಾಡಿದ್ದಾರೆ. ತಮ್ಮ ಭಯವನ್ನು ಇಡೀ ಕನ್ನಡಿಗರ ಭಯವೆಂಬಂತೆ ಚಿತ್ರಿಸುವಲ್ಲಿನ ಅವರ ಹುಸಿ ಆತ್ಮವಿಶ್ವಾಸ

ವನ್ನೂ, ರಾಜಕೀಯವಾದ ನೈಪುಣ್ಯತೆಯನ್ನೂ ಮೆಚ್ಚಬೇಕಾದದ್ದೇ. ಆದರೆ 'ಕೋಮು ಸೌಹಾರ್ದ'ವೆಂಬ ರಾಜಕೀಯ ಕೈಗಾರಿಕೆಯ ಷೇರುದಾರರಾದ ಅವರಿಗೆ ಬಿಜೆಪಿ ಬಗ್ಗೆ ಇರುವ ಆಜೀವ ಭಯ ನನಗಿಲ್ಲ ಎಂದು ಇಲ್ಲಿ ಸ್ಪಷ್ಟಪಡಿಸಬೇಕಿದೆ. ನನ್ನ ಪ್ರಕಾರ ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ವ್ಯಾಪಕ 'ವರ್ಣಸಂಕರ'ಕ್ಕೀಡಾಗಿರುವ ಅದು ಕೂಡಾ ನಮ್ಮ ಎಲ್ಲ ಪಕ್ಷಗಳಂತೆ ಜನತಾ ಶಕ್ತಿಯ ಜಾಗೃತಿ ಮತ್ತು ಸಂಘಟನೆಗಳ ಮೂಲಕ ಎದುರಿಸಬೇಕಾದ, ಪಳಗಿಸಬೇಕಾದ ಇನ್ನೊಂದು ಪಕ್ಷವಷ್ಟೆ. ಅದು ಹೆಚ್ಚು ಕೇಡಿಯಾಗಿದ್ದರೆ, ನಾವು ಹೆಚ್ಚು ಕೆಲಸ ಮಾಡಬೇಕಾಗುತ್ತದಷ್ಟೆ.

ಇದಕ್ಕಾಗಿ ಮೊದಲು, ಅದು ಪ್ರಬಲಗೊಂಡಿರುವುದೂ ನಮ್ಮದದ್ದು ಬಿದ್ದು ಹೋಗಿರುವ ಪ್ರಗತಿಶೀಲ ರಾಜಕಾರಣದ ಮೂರ್ಖ ನಿಲುವುಗಳಿಂದಲೇ ಎಂಬುದನ್ನು ಅರಿಯಬೇಕಾಗಿದೆ. ಇದನ್ನು ಒಪ್ಪಿಕೊಳ್ಳಲಾಗದ, ರಾಜಕೀಯವಾಗಿ ಸ್ಥಗಿತಗೊಂಡ ಮನಸ್ಸುಗಳು ಜನಪರ, ಜೀವಪರ, ಪ್ರಗತಿಪರ, ವರ್ಗ ಹೋರಾಟ, ಮಾಸ್ ಮೂವ್‌ಮೆಂಟ್, ಸಮುದಾಯ ಸಂಪರ್ಕ, ಬೀದಿ ಬದಿಯ ಕಲಿಕೆ ಇತ್ಯಾದಿ ಎಡಪಂಥೀಯ ಕ್ಲೀಷೆಗಳನ್ನು ಮುಂದಿಟ್ಟುಕೊಂಡು, ಅವುಗಳ ಮರೆಯಲ್ಲಿ ಬಿಜೆಪಿ ಕುರಿತ ತನ್ನ ರಾಜಕೀಯ ಪುಕ್ಕಲುತನವನ್ನು ಮರೆಮಾಚಿಕೊಳ್ಳಲೆತ್ನಿಸುತ್ತಿವೆಯಷ್ಟೆ. ನನಗೆ ಜನಸಂಪರ್ಕವಿಲ್ಲ ಎಂಬುದನ್ನು ರಹಮತ್ ಅವರು ನನ್ನ ಚಲನವಲಗಳ ಬಗ್ಗೆ ತಮ್ಮ ಏಜೆಂಟರನ್ನೇನಾದರೂ ಬಿಟ್ಟು ತನಿಖೆ ನಡೆಸಿ ಖಚಿತಪಡಿಸಿಕೊಂಡಿದ್ದಾರೋ ತಿಳಿಯದು! ಅಥವಾ ಮುಖ ನೋಡಿ ಭವಿಷ್ಯ ಹೇಳುವ ಹೋರಾಶಾಸ್ತ್ರಿಗಳ? ಹಾಗೆ ಇವರು ಸಾಹಿತ್ಯ ಓದಿ ಸಾಹಿತಿಗಳ ಚಲನವಲನಗಳನ್ನು ಹೇಳಬಲ್ಲ ವಿದ್ಯೆಯನ್ನೇನಾದರೂ ಆವಿಷ್ಕರಿಸಿಕೊಂಡಿದ್ದಾರೋ? ಅದೇನೇ ಇರಲಿ, ನನಗೂ ಸಾಕಷ್ಟು ವಿಶ್ವವಿದ್ಯಾಲಯ ಧನಸಹಾಯ ಆಯೋಗದ 'ಪ್ರೋತ್ಸಾಹ' ದೊರೆಯುವಂತಾದರೆ ನಾನೂ ಈಗ ಬೀದಿಗೆ ಬಿದ್ದು ಭಂಡತನದಿಂದಲೇ ಬೀದಿ ಬದಿಯ ಅಮೂಲ್ಯ ಮಾತುಕತೆಗಳನ್ನು ದಾಖಲಿಸಿ ಸಮಾಜ(ಮತ್ತು ಸಮಾಜವಾದದ) ಸೇವೆಮಾಡಲು 'ಪ್ರೇರಣೆ' ದೊರೆತರೂ ದೊರಯಬಹುದೇನೋ!

ಇನ್ನು ಇಲ್ಲಿ ಪ್ರಸ್ತುತಗೊಂಡಿರುವ ಬೀದಿಬದಿ ಕಲ್ಪನೆಯನ್ನು ಕುರಿತ ರಹಮತ್ ಅವರ ಆಧುನಿಕೋತ್ತರ ಪಾಂಡಿತ್ಯ ನನ್ನನ್ನು ದಂಗುಬಡಿಸಿದೆ ಎಂದೇ ಹೇಳಬೇಕು. ಮೊದಲಾಗಿ ನಾನು ಬೀದಿ ಬದಿಯ ಪ್ರಸ್ತಾಪ ಮಾಡಿರುವುದು ಅವರ ಸದರಿ ಭಾಷಣದ ವೈಖರಿ, ಅದರಲ್ಲಿ ಎದ್ದು ಕಾಣುವ ಸುಲಭ ಅಭಿಪ್ರಾಯ ಮತ್ತು ತೀರ್ಪು ನೀಡುವ ನಿರಾತಂಕ ನಿರರ್ಗಳತೆಯ ಸಂಬಂಧವಾಗಿಯೇಹೊರತು, ಇವರು ಬಿಂಬಿಸಿರುವ ಹಾಗೆ ಬೀದಿ ಬದಿಯ ಮಾತುಗಳ ಪ್ರಸ್ತುತತೆಯನ್ನು 'ತುಚ್ಛ ದನಿ'ಯಲ್ಲಿ ಅಲ್ಲಗೆಳೆಯುತ್ತ ಅಲ್ಲ (ನಾನು ಬೆಳೆದುದೇ ಸಣ್ಣ ಊರೊಂದರ ಉರ್ದು ಶಾಲೆಯ ಕನ್ನಡ ಮಾಸ್ತರರ ಮಗನಾಗಿ, ಬೀದಿ ಬದಿಯ ಮಾತುಗಳನ್ನು ಕೇಳಿಸಿಕೊಳ್ಳುತ್ತಾ!) ಎಂಬುದನ್ನು ಓದುಗರು ಗಮನಿಸಬೇಕು. ಇನ್ನು, ಬೀದಿ ಬದಿಯ ಮಾತುಗಳೆಲ್ಲ ತಾವೇ ತಾವಾಗಿ, ಇವರು ಹೇಳುವ ಹಾಗೆ ಜ್ಞಾನದ ಗಣಿಗಳಾಗಿಬಿಟ್ಟಿರುವುದಿಲ್ಲ. ಅವು ಸೃಜನಶೀಲ ಚಿಂತಕನೊಬ್ಬನಿಂದ ಸಂಸ್ಕರಿತಗೊಂಡಾಗಲಷ್ಟೇ ಜ್ಞಾನ ನಿರ್ಮಾಣದಲ್ಲಿ ಪಾತ್ರ ವಹಿಸಬಲ್ಲವು.

3

ಇಂದಿನ ರಾಜಕೀಯ ಸಂದರ್ಭ ಸೈದ್ಧಾಂತಿಕ ನಿರಪೇಕ್ಷತೆಯನ್ನು ಅಪ್ರಸ್ತುತಗೊಳೊಸಿ, ತುಲನಾತ್ಮಕ ನೆಲೆಯ ರಾಜಕೀಯ ಗ್ರಹಿಕೆಯನ್ನು ಅನಿವಾರ್ಯವಾಗಿಸಿದೆ ಎಂಬ ತೀರ್ಮಾನಕ್ಕೆ ಬಂದಿರುವವನು ನಾನು. ಈ ತಿಳುವಳಿಕೆಯ ಭಾಗವಾಗಿ ಇಂದು ಎಡಪಂಥೀಯವೆನಿಸಿಕೊಳ್ಳುವ ರಾಜಕಾರಣ ಒಂದು ಹೆಜ್ಜೆ ಹಿಂದಿಟ್ಟೇ ತನ್ನ ರಾಜಕಾರಣವನ್ನು ಪುನಾರಚಿಸಿಕೊಳ್ಳಬೇಕಿದೆ. ಇಲ್ಲದೇ ಹೋದರೆ ಈವರೆಗೆ ನಾವು ಎಂತಹ ರಾಜಕಾರಣವನ್ನು ವಿರೋಧಿಸುತ್ತಾ, ರಾಕ್ಷಸನಂತೆ ಚಿತ್ರಿಸುತ್ತಾ(ಈ ರಾಕ್ಷಸ ಒಂದೊಂದು ಕಾಲಕ್ಕೆ ಒಂದೊಂದು ರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ ಎಂಬುದು ಬೇರೆ ವಿಚಾರ.) ಬಂದಿದ್ದೇವೋ ಆ ರಾಜಕಾರಣಕ್ಕೇ ದೇಶವನ್ನು ಇಡಿಯಾಗಿ ಒಪ್ಪಿಸುವ ಐತಿಹಾಸಿಕ ತಪ್ಪನ್ನು ಮಾಡುತ್ತೇವೆ ಎಂಬ ಪ್ರಾಮಾಣಿಕ ಆತಂಕ ನನ್ನದಾಗಿದೆ.

ಏಕೆಂದರೆ ಎಡಪಂಥೀಯತೆ ಎನ್ನುವುದರ ಅರ್ಥ, ಬದಲಾದ ರಾಜಕೀಯ ಪರಿಸ್ಥಿತಿಗನುಗುಣವಾಗಿ ತುಲನಾತ್ಮಕ ವಾಗಿ ಬದಲಾಗುತ್ತಾ ಹೋದರೆ ಮಾತ್ರ ಅದು ಜನರ ಮಧ್ಯೆ ರಾಜಕೀಯವಾಗಿ ಜೀವಂತವಾಗಿರಬಲ್ಲುದು ಮತ್ತು ಆ ಮೂಲಕ ತನ್ನ ಉದ್ದೇಶವನ್ನು ಸಾಧಿಸಿಕೊಳ್ಳಬಲ್ಲುದು. ಇಲ್ಲದೇ ಹೋದರೆ ಅದು ತನ್ನ ಅಹಂಕಾರಕ್ಕೆ ತಾನೇ ಬಲಿಯಾಗುವ ಎಲ್ಲ ಸಾಧ್ಯತೆಗಳಿವೆ. ಈ ದೃಷ್ಟಿಯಿಂದ ಭಾರತದ ಇಂದಿನ ಎಡಪಂಥೀಯ ರಾಜಕಾರಣವನ್ನು ನೋಡಿದರೆ ಅದು ಬಲಪಂಥೀಯ ರಾಜಕಾರಣಕ್ಕಿಂತ ಹೆಚ್ಚು ಸಂಪ್ರದಾಯವಾದಿಯಾಗಿದೆ; ತನ್ನ ಹಳೆಯ ಮಂತ್ರಗಳ ಘನಪಾಠವನ್ನೇ ಒಪ್ಪಿಸುತ್ತಾ, ತೀರಾ ಮಡೀಯವಾಗಿ ಬಿಟ್ಟಿದೆ ಎಂದೆನಿಸುವುದಿಲ್ಲವೇ? ಹೀಗೆ ಯೋಚಿಸುವುದೇ ರಹಮತ್ ಅಂತಹವರಿಗೆ ವಿದ್ರೋಹವಾಗಿ ಕಂಡರೆ ನಾನೇನೂ ಮಾಡಲಾರೆ. ಇದು ಸೈದ್ಧಾಂತಿಕ ಕರ್ಮಠತನ.

ಭಾರತದ ಇಂದಿನ ಎಡಪಂಥೀಯ ರಾಜಕಾರಣವನ್ನು ನೋಡಿದರೆ ಅದು ಬಲಪಂಥೀಯ ರಾಜಕಾರಣಕ್ಕಿಂತ ಹೆಚ್ಚು ಸಂಪ್ರದಾಯವಾದಿಯಾಗಿದೆ; ತನ್ನ ಹಳೆಯ ಮಂತ್ರಗಳ ಘನಪಾಠವನ್ನೇ ಒಪ್ಪಿಸುತ್ತಾ, ತೀರಾ ಮಡೀಯವಾಗಿ ಬಿಟ್ಟಿದೆ ಎಂದೆನಿಸುವುದಿಲ್ಲವೇ? ಹೀಗೆ ಯೋಚಿಸುವುದೇ ರಹಮತ್ ಅಂತಹವರಿಗೆ ವಿದ್ರೋಹವಾಗಿ ಕಂಡರೆ ನಾನೇನೂ ಮಾಡಲಾರೆ. ಇದು ಸೈದ್ಧಾಂತಿಕ ಕರ್ಮಠತನ. ಬಹುಶಃ ಇಂತಹ ರಾಜಕೀಯ-ಸಾಂಸ್ಕೃತಿಕ ಕರ್ಮಠತನ ಮತ್ತು ಅದನ್ನು ಪ್ರಶ್ನಿಸಿದೊಡನೆ ನಡೆಯುವ ಮೈಗೆ ಎಣ್ಣೆ ಹಚ್ಚಿಕೊಳ್ಳುವ ಪ್ರಯತ್ನಗಳು ಹುಟ್ಟಿಸುವ ಕಿರಿಕಿರಿಗಳಿಂದಾಗಿ ಅವರು ಮತ್ತು ಅವರ ಕೆಲ ಸಮಾನ ಮನಸ್ಕರು ಕೆಲ ಸಂದರ್ಭಗಳಲ್ಲಿ ನನ್ನಿಂದ ಮುಜುಗರಗಳನ್ನು ಅನುಭವಿಸಬೇಕಾಗಿ ಬಂದಿರಬಹುದು.

ಬಹುಶಃ ಇಂತಹ ರಾಜಕೀಯ-ಸಾಂಸ್ಕೃತಿಕ ಕರ್ಮಠತನ ಮತ್ತು ಅದನ್ನು ಪ್ರಶ್ನಿಸಿದೊಡನೆ ನಡೆಯುವ ಮೈಗೆ ಎಣ್ಣೆ ಹಚ್ಚಿಕೊಳ್ಳುವ ಪ್ರಯತ್ನಗಳು ಹುಟ್ಟಿಸುವ ಕಿರಿಕಿರಿಗಳಿಂದಾಗಿ ಅವರು ಮತ್ತು ಅವರ ಕೆಲ ಸಮಾನ ಮನಸ್ಕರು ಕೆಲ ಸಂದರ್ಭಗಳಲ್ಲಿ ನನ್ನಿಂದ ಮುಜುಗರಗಳನ್ನು ಅನುಭವಿಸಬೇಕಾಗಿ ಬಂದಿರಬಹುದು. ಅದೇ ಇಲ್ಲಿ ಅವರು ನನಗೆ ಕೆಲವು ಬಿರುದು ಬಾವಲಿಗಳನ್ನು ದಯಪಾಲಿಸಲು ಕಾರಣವಾಗಿದೆಯೆಂದು ಭಾವಿಸಿದ್ದೇನೆ. ಇಲ್ಲದಿದ್ದರೇಕೆ ಪ್ರಸ್ತುತ ಚರ್ಚೆಯ ಹೊರಗಿನ ಸಂದರ್ಭಗಳಿಂದ ಕಟ್ಟಿಕೊಂಡ ಅಮಾನುಷ, ರೂಕ್ಷ, ಆಟಾಟೋಪ, ಹಠವಾದಿ, ಮನಸ್ಸು ಮುರಿಯುವ, ಇತರರ ಪ್ರಾಮಾಣಿಕತೆಯನ್ನು ಪ್ರಶ್ನಿಸುವ, ಪಂಥೀಯ, ಕುಹಕತನ ಇತ್ಯಾದಿ ಬರೀ ವೈಯಕ್ತಿಕ ವೈರತನವೇ ಹೊಗೆಯಾಡುವ ಅಪ್ರಸ್ತುತ ಆಪಾದನೆಗಳು? ಈ ಎಲ್ಲ ಆಪಾದನೆಗಳನ್ನು ಇತ್ತೀಚಿನ ದಿನಗಳಲ್ಲಿ ಹಲವು ಮೂಲಗಳಿಂದ ಎದುರಿಸಿರುವ ನಾನು ಇವುಗಳ ಏಕರೂಪದ 'ಪರಿಭಾಷೆ'ಯನ್ನು ನೋಡಿ ಕುತೂಹಲಗೊಂಡಿದ್ದೇನೆ. ಹಾಗೇ, ಇದೊಂದು ಸಮಾನ ಮನಸ್ಕರಾದ ಕಾರಣದಿಂದಾಗಿ ಸಮಾನ ದುಃಖಿಗಳೂ ಆದ ಕೆಲವರ ಸಂಘಟಿತ ಅಪಪ್ರಚಾರದ ಪ್ರಯತ್ನವಾಗಿರಬಾರದೇಕೆ ಎಂದು ಆಶ್ಚರ್ಯವನ್ನೂ ಪಟ್ಟಿದ್ದೇನೆ!

ಬಹುಶಃ ಇದರ ಮುಂದುವರಿಕೆಯಾಗಿಯೇ ರಹಮತ್, ಅಂತರ್ಜಾತಿ ವಿವಾಹಗಳ ಬಗೆಗಿನ ಡಾ.ಸಿ.ಜಿ. ಲಕ್ಷ್ಮೀಪತಿ ಅವರ ಲೇಖನದ ಬಗ್ಗೆ ಕಳೆದ ಸಂಚಿಕೆಯಲ್ಲಿ ನಾನು ಬರೆದ ಪ್ರತಿಕ್ರಿಯೆಯಲ್ಲಿ ದುರ್ಬೀನು ಹಾಕಿ ಹುಡುಕಿದರೂ ಎಲ್ಲೂ ಕಾಣಿಸದ ಪುರುಷವಾದಿ ನಿಲುವನ್ನು ಕಂಡುಹಿಡಿದಿದ್ದಾರೆ! ನನ್ನ ಆಲೋಚನಾ ಲಹರಿಯನ್ನು ವಿಸ್ತಾರವಾಗಿ ವಿವರಿಸಿ ಹೇಳಿದ್ದರೂ, ಲಕ್ಷ್ಮೀಪತಿಯವರ ಲೇಖನವನ್ನು ನಾನು ಅಪದ್ಧವೆಂದು ಒಂದೇ ಶಬ್ದದಲ್ಲಿ ತಿರಸ್ಕರಿಸಿರುವುದಾಗಿ ಹೇಳಿ ನನ್ನ ಮೇಲಿನ ತಮ್ಮ ಮೊಕದ್ದಮೆಯನ್ನು ಮತ್ತಷ್ಟು ಬಲಪಡಿಸಿಕೊಳ್ಳಲು ವೃಥಾ ಹೆಣಗಿದ್ದಾರೆ. ರಹಮತ್ ಅವರಿಗೆ ಮೀನು ಪ್ರಿಯವಾದ ಖಾದ್ಯವಾಗಿದ್ದರೆ ಅವರು ದಯವಿಟ್ಟು ಉಚ್ಚೆಯಲ್ಲಿ ಮೀನು ಹಿಡಿಯುವುದನ್ನು ಮೊದಲು ನಿಲ್ಲಿಸಬೇಕು! ಈ ಹಿನ್ನೆಲೆಯಲ್ಲಿ ಅವರು ನನ್ನ ವಿಮರ್ಶಾ ಸಾಹಿತ್ಯದ ಬಗ್ಗೆ ಇಲ್ಲಿ ದಾಖಲಿಸಿರುವ ಮೆಚ್ಚುಗೆ ಮಾತುಗಳನ್ನೂ ನಾನು ಅನುಮಾನದಿಂದ ನೋಡುವಂತಾಗಿದೆ. ಅವರ- ಈ ಇಡೀ ಪ್ರತಿಕ್ರಿಯೆಯ ವಿನ್ಯಾಸ ನೋಡಿದಾಗ, ಅವು ನನ್ನ ಮೇಲೆ ಅವರು ಹೂಡಿರುವ ಈ ಮೊಕದ್ದಮೆಯ ವಿಶ್ವಾಸಾರ್ಹತೆಯನ್ನು ಸ್ಥಾಪಿಸಿಕೊಳ್ಳಲು ಮಾತ್ರ ಆಡಲಾಗಿರುವ ಮಾತುಗಳಂತೆ ನನಗೆ ಕೇಳಿಸುತ್ತಿವೆ. ಏಕೆಂದರೆ, ನನ್ನ ಈ ಸಾಹಿತ್ಯವನ್ನು ಇಷ್ಟೊಂದು ಮೆಚ್ಚುವ ಅವರು ಆ ಬಗ್ಗೆ ಈವರೆಗೆ ಎಲ್ಲೂ ಒಂದು ಸಾಲನ್ನೂ ಬರೆದ ಸುಳಿವಿಲ್ಲ.

ಇದೇ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲೇಬೇಕು: ನಾನು ಸರ್ವಋತು ಸೌಜನ್ಯಶೀಲತೆಯ ಆದರ್ಶ ಪುರುಷನೆಂದೇನೂ ಇಲ್ಲಿ ಹೇಳಿಕೊಳ್ಳುವ ಪ್ರಯತ್ನ ಮಾಡುತ್ತಿಲ್ಲ. ರಹಮತ್ ಅವರೂ ಸೇರಿದಂತೆ ಯಾರೂ ಸಹ ಅಂತಹ ಪ್ರಯತ್ನ ಮಾಡುತ್ತಿಲ್ಲ ಎಂದು ನಾನು ಭಾವಿಸಿದ್ದೇನೆ. ಆದರೆ ಒಂದು ವಾದದಿಂದ ಇನ್ನೊಂದು ವಾದವನ್ನು, ಒಂದು ಸೆಮಿನಾರಿನಿಂದ ಇನ್ನೊಂದು ಸೆಮಿನಾರನ್ನು, ಒಂದು ಪುಸ್ತಕದಿಂದ ಇನ್ನೊಂದು ಪುಸ್ತಕವನ್ನು ಮತ್ತು ಆ ಪುಸ್ತಕದಿಂದ ಮತ್ತೆ ಇನ್ನೊಂದು ವಾದವನ್ನು ಸೃಷ್ಟಿಸುತ್ತಾ ಹೋಗುವಂತಹ

'ಅಂದರಿಕಿ ಮಂಚಿವಾಡು ಅನಂತಯ್ಯ'ನ ಬೌದ್ಧಿಕ ನಾಜೂಕುತನದ ವಿಷವೃತ್ತ ನನ್ನಲ್ಲಿ ಜಿಗುಪ್ಸೆ ತರಿಸುತ್ತದೆ. ಈ ವಿಷವೃತ್ತ ನಮ್ಮನ್ನೆಲ್ಲ ಆವರಿಸಿಕೊಂಡು ನಮ್ಮ ಸಹಜ ಅಂತಃಸ್ಫೂರ್ತಿಯ ಒರತೆಗಳನ್ನೇ ಬತ್ತಿಸಿಬಿಟ್ಟು, ನಮ್ಮ ಸಹಜ ಲೋಕದೃಷ್ಟಿಯನ್ನೇ ಮಸುಕು ಮಾಡಿಬಿಡಬಹುದೇನೋ;ನಮ್ಮ ಸಹಜ ಪ್ರತಿಕ್ರಿಯೆಗಳನ್ನೇ ಮೊಂಡುಗೊಳಿಸಿಬಿಡಬಹುದೇನೋ ಎಂಬ ಆತಂಕ ನನ್ನದು.

ಅಷ್ಟೇ ಅಲ್ಲ, ಜ್ಞಾನದ ಹೆಸರಿನಲ್ಲಿ ಬರೀ ಮಾಹಿತಿ ಸಂಗ್ರಹಿಸಿ, ಅದನ್ನು ಹಿಂಜಿ ಹಿಂಜಿ ಕೋಟ್ಯಾಂತರ ರೂಪಾಯಿಗಳ ಸಾರ್ವಜನಿಕ ಹಣದಲ್ಲಿ ಅದರ ಉದ್ಯಮ ನಡೆಸುತ್ತಿರುವ ನಮ್ಮ ಬಹುಪಾಲು ಅಕೆಡೆಮಿಕ್ ಲೋಕದ ಬಗ್ಗೆ ನನಗೆ ಸಹಜ ಸಿಟ್ಟೂ ಇದೆ. ಅದನ್ನು ಕೆಲಕಡೆ ತೀವ್ರವಾಗಿ ವ್ಯಕ್ತಪಡಿಸಿಯೂ ಇದ್ದೇನೆ. ಅದರ ಬಗ್ಗೆ ನನಗೆ ಪಶ್ಚಾತ್ತಾಪವೇನೂ ಇಲ್ಲ. ಏಕೆಂದರೆ ಅದು ಎಂದೂ ಇವರು ಭಯಂಕರ ಕ್ರೋಧದೊಂದಿಗೆ ಹೇಳಿರುವ ಹಾಗೆ ರೂಕ್ಷ, ಹಠಮಾರಿತನದ ಅಥವಾ ವೈಯುಕ್ತಿಕ ಹಲ್ಲೆ, ಹಗೆತನಗಳ ರೂಪ ತಾಳಿಲ್ಲ. ತಾಳಲು ಬಿಡುವರಾದರೂ ಯಾರು, ಸಹಿಸುವರಾದರೂ ಯಾರು? ವಿಚಾರ ಗೋಷ್ಠಿಗಳೇನು ಕೌರವ ಸಭೆಗಳೇ, ಭೀಷ್ಮ ದ್ರೋಣಾದಿಗಳೂ ತಲೆ ತಗ್ಗಿಸಿ ಕೂರಲು? ಅಥವಾ ನಾನೆಂದಾದರೂ ಇವರು ಭಾಗವಹಿಸುವ ಸಭೆಗಳಲ್ಲಿ ಆಹ್ವಾನವಿಲ್ಲದೆ ಬಂದು ಕೂತಿದ್ದೇನೆ? ಮೊದಲಾಗಿ, ಇಂತಹವುದಕ್ಕೆಲ್ಲ ಸಾಹಿತ್ಯಿಕ–ಸಾಂಸ್ಕೃತಿಕ ಚರ್ಚೆಗಳ ಅಧಿಕೃತ ವಲಯಗಳಾಚೆ ಇರುವ ನಮ್ಮಂತಹವರಿಗೆ ಇವರ ಘನತೆವೆತ್ತ ವಿದ್ವದ್ಗೋಷ್ಠಿಗಳಲ್ಲಿ ಅವಕಾಶಗಳಾದರೂ ಎಲ್ಲಿರುತ್ತವೆ, ಹೇಗಿರುತ್ತವೆ, ಸಣ್ಣಪುಟ್ಟ ಮಧ್ಯಪ್ರವೇಶಗಳ ಹೊರತಾಗಿ? ಇವೇ, ಈ ಸಣ್ಣಪುಟ್ಟ ಅವಕಾಶಗಳೇ ಇವರಂತಹವರಿಗೆ–ಇವರ ಬೌದ್ಧಿಕ ಏಕಸ್ವಾಮ್ಯಕ್ಕೆ–ಕಿರಿಕಿರಿ ಉಂಟುಮಾಡುತ್ತಿರುವುದು ಎಂದು ಕಾಣುತ್ತದೆ. ಅದೇನೇ ಇರಲಿ, ಈ ನನ್ನ ಅತಿರಂಜಿತ ಸಿಟ್ಟು ರಹಮತ್ ಮತ್ತು ಅವರ ಸಮಾನ ಮನಸ್ಕ ಗೆಳೆಯರಿಗೆ ತಟ್ಟಿದ್ದರೆ ಅದು ನನಗೆ ಸಂತೋಷ ತರುವ ಸಂಗತಿಯೇ! ಆದರೆ ಅವರು ಅದನ್ನು ವೈವಿಧ್ಯಮಯ ಆಪಾದನೆಗಳನ್ನಾಗಿ ಪರಿವರ್ತಿಸಿ ಪ್ರಸ್ತುತಪಡಿಸುತ್ತಿರುವುದು ಮಾತ್ರ ನನಗೆ ದುಃಖದ ಸಂಗತಿಯೇ ಆಗಿದೆ.

ಆದರೆ ಬಹುಶಃ ರಹಮತ್ ಅವರಿಗೆ ಗೊತ್ತಿಲ್ಲದ ಒಂದು ಸಂಗತಿ ಎಂದರೆ, ನಾನು ಕಳೆದ ಮುವ್ವತ್ತು ವರ್ಷಗಳಲ್ಲಿ ಕನ್ನಡದ ಹೆಚ್ಚೂ ಕಡಿಮೆ ಎಲ್ಲ ಅತ್ಯುತ್ತಮ ಮನಸ್ಸುಗಳೊಂದಿಗೆ ಒಂದಲ್ಲ ಒಂದು ನೆಲೆಯಲ್ಲಿ ಮತ್ತು ಮಟ್ಟದಲ್ಲಿ ಪ್ರೀತಿ ವಿಶ್ವಾಸಗಳಿಂದ ಒಡನಾಡಿದ್ದೇನೆ, ನನ್ನದೇ ಶೈಲಿಯಲ್ಲಿ ಅರ್ಥಪೂರ್ಣವಾಗಿ ಸಂವಾದಿಸಿದ್ದೇನೆ. ನನಗೆ ರಾಜ್ಯಾದ್ಯಂತ ನನ್ನದೇ ಆದ ಸ್ನೇಹಿತರ ದೊಡ್ಡ ವಲಯವಿದೆ. ಅದಕ್ಕೆ ತನ್ನದೇ ಆದ ಚಟುವಟಿಕೆಗಳೂ ಇವೆ. ಹಾಗೇ, ಇದರಲ್ಲಿ ಎಲ್ಲ ತರಹದ, ಜಾತಿಗಳ, ಧರ್ಮಗಳ ಜನರೂ ಇದ್ದಾರೆ. ಅವರ ಆ ಚಟುವಟಿಕೆಗಳಲ್ಲಿ, ಆ ಸ್ನೇಹ ಸಂತೋಷಗಳಲ್ಲಿ–ಇವುಗಳಲ್ಲಿ ಪರಸ್ಪರ ಟೀಕೆ, ಜಗಳ, ಮುನಿಸು, ಮೆಚ್ಚುಗೆಗಳೂ ಸೇರಿರುತ್ತವೆ–ಮೀಯುತ್ತಾ, ನಾನು ಖುಷಿಯಿಂದಿದ್ದೇನೆ. ಆ ಖುಷಿಯೇ ನನ್ನ ಬರವಣಿಗೆಯ ಹಿಂದಿನ ಚೈತನ್ಯ ಶಕ್ತಿ ಕೂಡ. ಆದರೆ ಇದನ್ನೆಲ್ಲ ಇಲ್ಲಿ ಸಾರ್ವಜನಿಕವಾಗಿ ಹೇಳಿಕೊಳ್ಳುವಂತಹ ಮುಜುಗರದ ಸಂದರ್ಭವನ್ನು ರಹಮತ್ ಸೃಷ್ಟಿಸಿರುವ ಬಗ್ಗೆ ನನಗೆ ವಿಷಾದವಿದೆ. ಈ ವಿಷಾದಗೀತೆಗೆ. ರಹಮತ್ ತಮ್ಮ ಪ್ರತಿಕ್ರಿಯೆಯಲ್ಲಿ ತಮ್ಮ ವಾದಕ್ಕೆ ಅನುಕೂಲವಾಗುವಂತೆ ಅಪೂರ್ಣವಾಗಿ ಉಳಿಸಿರುವ ಘಟನೆಯ ವಿವರಗಳನ್ನು ಪೂರ್ಣಗೊಳಿಸುವ ಮೂಲಕ ಮುಕ್ತಾಯ ಹಾಡಬಯಸುವೆ;

ಎರಡು ಮೂರು ವರ್ಷಗಳ ಹಿಂದೆ ಶಿವಮೊಗ್ಗದ ಒಂದು ಸಭೆಯಲ್ಲಿ ರಹಮತ್ ತೇಜಸ್ವಿಯವರ 'ಮಾಯಲೋಕ'ದ ಬಗ್ಗೆ ಮಾತನಾಡುತ್ತಾ,(ಈ ಸಭೆಗೆ ಅವರನ್ನು ಆಹ್ವಾನಿಸಬೇಕೆಂದು ಸೂಚಿಸಿದ್ದೂ ನಾನೇ.) ತಮ್ಮ ಎಂದಿನ ಮಾರ್ಕ್ಸ್‌ವಾದಿ ವಿಮರ್ಶಾ ದಂಡಗಳನ್ನು (ಬಂಡವಾಳಶಾಹಿ, ವಸಾಹತುಶಾಹಿ, ಸಾಮ್ರಾಜ್ಯಶಾಹಿಗಳ ಬಗ್ಗೆ ಕ್ರಿಟಿಕಲ್ಲಾಗಿ ಮಾತನಾಡುವುದಿಲ್ಲ, ವರ್ಗ ವೈರುಧ್ಯಗಳನ್ನು ಮುಖಾಮುಖಿ ಮಾಡಿಕೊಳ್ಳುವುದಿಲ್ಲ, ಜನ ಸಂಘಟನೆಯ ಪ್ರಯತ್ನಗಳ ಬಗೆಗೆ ಒಲವಿಲ್ಲ ಇತ್ಯಾದಿ) ಬಳಸಿ ತೇಜಸ್ವಿಯವರ ಸಾಹಿತ್ಯದ ಬಗ್ಗೆ ಕೆಲವು ಸಾರ್ವತ್ರಿಕ ಟೀಕೆಗಳನ್ನು ಮಾಡಿದರು. ಅವುಗಳಲ್ಲೊಂದು, ತೇಜಸ್ವಿ ಸಾಹಿತ್ಯದಲ್ಲಿ ಧೀಮಂತ ಮಹಿಳೆಯರ ಚಿತ್ರಣವಿಲ್ಲ ಎಂಬುದು. ಅವರ ಭಾಷಣದ ನಂತರ ನಾನು ಇಂತಹ ಪ್ರಶ್ನೆಗಳು, ನಿರ್ದಿಷ್ಟವಾಗಿ ಈ ಪ್ರಶ್ನೆ ಇಲ್ಲಿ ಮುಖ್ಯವೇ ಅಲ್ಲ ಎಂದೆ. ಏಕೆಂದರೆ ಕೃತಿಯೊಂದರ ಮೌಲಿಕತೆ ಕೃತಿಯೊಳಗಿಂದ ತೀರ್ಮಾನವಾಗಬೇಕಾದ ವಿಷಯವೇ ಹೊರತು, ಕೃತಿಯ ಹೊರಗೆ ಹುಟ್ಟುವ ನಮ್ಮ (ರಾಜಕೀಯ)ನಿರೀಕ್ಷೆಗಳ ಆಧಾರದ ಮೇಲಲ್ಲ ಎಂಬುದು ನನ್ನ ವಾದವಾಗಿತ್ತು.

ಸಮಾಜವಾದಿ ಎನಿಸಿಕೊಂಡವನ ಬಾಯಿಂದ ಇದನ್ನು ಕೇಳಿ(ಸಮಾಜವಾದಿ ಎಂದರೆ ಅವರು ಎಂತಹ 'ಮೂಲಭೂತವಾದಿ' ಕಲ್ಪನೆ ಇಟ್ಟುಕೊಂಡಿದ್ದರೋ ತಿಳಿಯದು!) ರಹಮತ್ ತಮ್ಮ ಪ್ರಗತಿಪರ ಸಾಹಿತ್ಯ ವಿಮರ್ಶೆ ಅರ್ಧ ಉರಿದು ಬೂದಿಯಾದಂತೆನಿಸಿ ಸುಸ್ತಾದರು. ತಕ್ಷಣವೇ ಸಾವರಿಸಿಕೊಂಡು, ತಮ್ಮ ಈ ಮಹಿಳಾವಾದಿ ಪ್ರಗತಿಪರ ನಿಲುವಿಗೆ ಮಹಿಳೆಯರ ಬೆಂಬಲವಾದರೂ ಸಿಕ್ಕೀತೆಂದು ನನ್ನ ಪಕ್ಕದಲ್ಲಿ ಕುಳಿತಿದ್ದ ನನ್ನ ಹೆಂಡತಿ ಸವಿತಾಳನ್ನು 'ನೀವಾದರೂ ನಿಮ್ಮ ಗಂಡನಿಗೆ ಬುದ್ಧಿ ಹೇಳಿ' ಎಂಬಂತೆ, ಈ ಬಗ್ಗೆ ಅವಳ ಅಭಿಪ್ರಾಯ ಕೇಳಿದರು. ಸವಿತಾ ತಣ್ಣಗೆ, ತೇಜಸ್ವಿ ಸಾಹಿತ್ಯ ಓದುವಾಗ ಇವೆಲ್ಲ ಪ್ರಸ್ತುತವಾದ ಪ್ರಶ್ನೆಗಳೇ ಅನಿಸುವುದಿಲ್ಲ ಎಂದಾಗ, ರಹಮತ್ ತಾವು ನಂಬಿದ್ದ ಪ್ರಗತಿಪರ ಸಾಹಿತ್ಯ ವಿಮರ್ಶೆ ಪೂರ್ತಿ ಉರಿದು ಬೂದಿಯಾದಂತೆ, ತಮ್ಮ ಮುಂದಿನ ಮಾತುಗಳಿಗಾಗಿ ಆ ಬೂದಿಯಲ್ಲೇ ಅಲ್ಪಸ್ವಲ್ಪ ಬೆಂಕಿಗಾಗಿ ಉಸಿರೆಳೆದು ಊದತೊಡಗಿದರು.

ಆ ಊದನ್ನು ಅವರು ಇನ್ನೂ ಮುಂದುವರೆಸುತ್ತಿದ್ದಾರೆನಿಸುತ್ತದೆ, ಅವರ ಸದರಿ ಪ್ರತಿಕ್ರಿಯೆಯನ್ನು ಓದಿದಾಗ...

ಕೊನೆಯ ಮಾತು: ರಹಮತ್ ತಮ್ಮ ಪ್ರತಿಕ್ರಿಯೆಯಲ್ಲಿ ಸೂಚಿಸಿರುವಂತೆ ನಿಜವಾಗಿಯೂ ಅವರಿಗೆ ನನ್ನೊಂದಿಗೆ ಚರ್ಚಿಸುವಂತಹ ವಿಷಯಗಳಿದ್ದರೆ ಮತ್ತು ಅದಕ್ಕಾಗಿ, ಅವರು ವರ್ಣಿಸಿದಂತಹ ನನ್ನ 'ಕಾಡುಪ್ರಾಣಿ'ಯಂತಹ ವರ್ತನೆಯಿಂದಾಗಿ ನನ್ನ ಬಳಿಗೆ ಬರಲು ಹಿಂಜರಿಕೆಯಿದ್ದರೆ, ನಮ್ಮ ಒಂದು ವರ್ಷದ ಹಿಂದಿನ ಭೇಟಿಯಂತೆಯೇ ಮೀನಾಕ್ಷಿ ಭವನದಲ್ಲಿ ದೋಸೆ ತಿನ್ನುತ್ತಾ ಮಾತನಾಡೋಣ ಬನ್ನಿ ಎಂದು ಈ ಮೂಲಕ ಆಹ್ವಾನಿಸುವೆ. ಮೀನಾಕ್ಷಿ ಭವನದ ದೋಸೆಯ ಮುಂದೆ ಯಾವ ಕಾಡುಪ್ರಾಣಿಯಾದರೂ ತೆಪ್ಪಗಾಗುವುದೆಂಬುದನ್ನು ಅವರೂ ಬಲ್ಲರೆಂದು ಭಾವಿಸುವೆ! □

ಸಮಾಜವಾದಿ ಅಧ್ಯಯನ ಶಿಬಿರ

ಲೋಹಿಯಾ ಜನ್ಮ ಶತಾಬ್ಧಿ ಪ್ರತಿಷ್ಠಾನವು ಕುಪ್ಪಳಿಸಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಯೋಗದೊಂದಿಗೆ ಅಕ್ಟೋಬರ್ 23 ಹಾಗೂ 24ರಂದು, ಡಿ.ಎಸ್.ನಾಗಭೂಷಣ ಅವರ ನಿರ್ದೇಶಕತ್ವದಲ್ಲಿ 'ಸಮಾಜವಾದಿ ಅಧ್ಯಯನ ಶಿಬಿರ'ವೊಂದನ್ನು ಆಯೋಜಿಸಿದೆ. ಈ ಶಿಬಿರದ ಮುಖ್ಯ ವಿಷಯ: ಆಧುನಿಕ ನಾಗರೀಕತೆ. ಈ ವಿಷಯ ಕುರಿತಂತೆ ವಿವಿಧ ಗೋಷ್ಠಿಗಳಲ್ಲಿ ರಾಜ್ಯದ ಖ್ಯಾತ ಚಿಂತಕರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ, ಗಾಂಧಿ–ಲೋಹಿಯಾ–ಅಂಬೇಡ್ಕರ್ ವಿಚಾರಗಳನ್ನು ಮಂಡಿಸಲಿದ್ದಾರೆ.

ಶಿಬಿರವು ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕು ಕುಪ್ಪಳಿಯಲ್ಲಿ 23ರ ಬೆಳಿಗ್ಗೆ 10ರಿಂದ 24ರ ಸಂಜೆ 5ರವರೆಗೆ ನಡೆಯಲಿದೆ. ಶಿಬಿರ ಶುಲ್ಕ: ಒಂದು ನೂರು ರೂಪಾಯಿಗಳು. ಶಿಬಿರಾರ್ಥಿಗಳಿಗೆ ಶಿಬಿರ ಸಂಘಟಕರು ಶಿಬಿರದ ಸಮಯದಲ್ಲಿ ಊಟ–ಉಪಹಾರ ಮತ್ತು ಪುರುಷರಿಗೆ ಹಾಗೂ ಮಹಿಳೆಯರಿಗೆ ಪ್ರತ್ಯೇಕ ಸಾಮೂಹಿಕ ವಸತಿ ಸೌಕರ್ಯವನ್ನು ಒದಗಿಸುವರು. ಆಸಕ್ತರು ಈ ಕೆಳಗಿನ ವಿಳಾಸ ಅಥವಾ ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

–ಕಾರ್ಯದರ್ಶಿ, ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ(ರಿ)
ನಂ.10. ಖಾಸಗಿ ಬಸ್ ನಿಲ್ದಾಣದ ಮಹಡಿ, ಸಾಗರ–577 401 (ಶಿವಮೊಗ್ಗ ಜಿಲ್ಲೆ)
ದೂರವಾಣಿ; 94482 38638/94492 42284/97319 29731

ಬೇಕಾದುದು- ವೈಷ್ಣವ ದೀಕ್ಷೆಯಲ್ಲ: ತ್ರಿಜ ದೀಕ್ಷೆ

ದೇವನೂರ ಮಹಾದೇವ

ಮಧ್ವ ಸಿದ್ಧಾಂತದ ಬಗ್ಗೆ ಕುವೆಂಪು ಅಸಹನೆಯನ್ನು*– ಮನುಷ್ಯರಾದರೆ ಸಾಕು– ಅರ್ಥ ಮಾಡಿಕೊಳ್ಳಬಹುದು. ಮಧ್ವ ಸಿದ್ಧಾಂತದ ನಿತ್ಯ ಮುಕ್ತ, ನಿತ್ಯ ಸಂಸಾರಿ, ನಿತ್ಯ ನಾರಕಿ– ಈ ದೃಷ್ಟಿಕೋನದಲ್ಲಿ ಈ ಜಗತ್ತು, ಮನುಷ್ಯ ಬದಲಾಗುವುದಿಲ್ಲ ಎಲ್ಲವೂ ನಿತ್ಯ ಅಂದರೆ ಶಾಶ್ವತ ಎಂದು ಸಮಾಜವನ್ನು ಜಡಗೊಳಿಸಿ ಚಲನ ರಹಿತ ಮಾಡಿ ನರಕವನ್ನೇ– ತಾರತಮ್ಯವನ್ನೇ ಸಿದ್ಧಾಂತಗೊಳಿಸಿಬಿಟ್ಟಿದೆ.

ಇಂಥ ಕಡೆ ವಿಶ್ವೇಶ್ವರ ತೀರ್ಥರು ಹುಟ್ಟಿದ್ದಾರೆ. ಈ ಸಿದ್ಧಾಂತದ ಮಠಕ್ಕೆ ಶ್ರೀಗಳಾಗಿದ್ದಾರೆ. ಆದರೆ ಚಲನೆಯನ್ನು ಬಯಸುವಂತೆ ಕಾಣುತ್ತಾರೆ. ಹಾಗಾಗಿ. ತನ್ನ ಸಿದ್ಧಾಂತದ ಚೌಕಟ್ಟನ್ನು ಮೀರಲು–ಇವರು ಒದ್ದಾಡುತ್ತಿರುವಂತೆ ಕಾಣಿಸುತ್ತಿದೆ. ಈ ಒದ್ದಾಟ ಬಲೆಗೆ ಸಿಕ್ಕಿಕೊಂಡು ಕೈಕಾಲು ಬಡಿಯುತ್ತಿರುವ ಒಂದು ಗುಬ್ಬಚ್ಚಿಯ ಒದ್ದಾಟದಂತಿದೆ. ಇದನ್ನು ನೋಡಿದಾಗ ಇವರು ಅಲ್ಲಿರಬೇಕಾದವರಲ್ಲ, ನಮ್ಮ ಜೊತೆ ಇರಬೇಕಾದವರು ಅಂತ ಒಂದೊಂದು ಸಲ ಅನ್ನಿಸುತ್ತದೆ.

ಆದರೆ ಇವರ ಒದ್ದಾಟವು ಆಳವಾದ ಧಾರ್ಮಿಕತೆಯಿಂದ ಬಂದುದೇ? ಅಂತರಂಗದ್ದೇ? ಎಂದು ಪ್ರಶ್ನಿಸಿಕೊಂಡಾಗ–ಧೈರ್ಯವಾಗಿ ಹೌದು ಎಂದು ಹೇಳಲು ಕಷ್ಟವಾಗುತ್ತದೆ."ಕೀಳಿಂಗಲ್ಲದೆ ಹಯನು ಕರೆಯದು" ಎಂದರೆ, ತಾನು ತನ್ನ ಅಹಂ ಅನ್ನು ಅಲ್ಪವಾಗಿಸದೆ ಮೋಕ್ಷವಿಲ್ಲ– ಎಂಬ ತುಡಿತದಿಂದಾಗಿ ಅಹಂ ಅಲ್ಪವಿರುವ ಮೇಲರಿಮೆ ಇಲ್ಲದ ಅಸ್ಪೃಶ್ಯ ಸಮುದಾಯವನ್ನು ಶ್ರೇಷ್ಠವೆಂದು ಭಾವಿಸಿದ ವಚನಕಾರರ ನಡೆ ಕಂಡಾಗ, ಶ್ರೀ ಪೇಜಾವರರ ಪಾದಯಾತ್ರೆ ಧಾರ್ಮಿಕವಲ್ಲವೇನೋ ಧರ್ಮ ರಾಜಕಾರಣವಿರಬೇಕು ಎಂಬ ಅನುಮಾನ ಹುಟ್ಟಿಸುತ್ತದೆ. "ತಮ್ಮ ಮಠಕ್ಕೆ ಉತ್ತರಾಧಿಕಾರಿಯಾಗಿ ಕುರುಬರನ್ನಾದರೂ ಮಾಡುತ್ತೀರಾ ಎಂದು ಕೇಳಿದರೆ, ಬ್ರಾಹ್ಮಣರನ್ನು ಮಾತ್ರ ಕೇಳುತ್ತೀರಿ? ಕ್ರಿಶ್ಚಿಯನ್ನರನ್ನು ಕೇಳುತ್ತೀರಾ? ಲಾಮಾ ಮಾಡು ಎಂದು ಬೌದ್ಧರನ್ನು ಕೇಳುತ್ತೀರಾ?' ಎಂದು ಪೇಜಾವರರು ಸಹನೆ ಕಳೆದುಕೊಳ್ಳುತ್ತಾರೆ.!.

"ನಾನು ಕ್ರಿಶ್ಚಿಯನ್, ನಾನು ಬೌದ್ಧ, ನಾನು ಯಾಕೆ ಮಠಾಧಿಪತಿಯಾಗಬಾರದು?" ಎಂದು ಆ ಧರ್ಮಗಳಲ್ಲಿರುವ ಯಾರೇ ಪ್ರಶ್ನಿಸಬಹುದು. ಇದಕ್ಕೆ ಆ ಧರ್ಮಗಳಲ್ಲಿ ಅವಕಾಶ ಇದೆ. ಕೆಲವು ಕಡೆ ಸಾಧ್ಯವೂ ಆಗಿದೆ. ಹಿಂದೂ ಎಂದುಕೊಂಡಿರುವ ಜಾತಿ ಧರ್ಮದಲ್ಲಿ ಇದು ಸಾಧ್ಯವೇ? ಉಡುಪಿ ಕೃಷ್ಣನ ಗುಡಿಯ ಹೊರಗೆ ನಿಂತಿರುವ ಕನಕದಾಸನ ಕುರುಬರು ನಿಮ್ಮ ಸಮಾಜಕ್ಕೆ ಸೇರಿಲ್ಲವೇ? ಅವರ ಧರ್ಮವೇ ಬೇರೆಯೇ? ಅಥವಾ ಪ್ರತಿ ಜಾತಿಯೂ ಒಂದೊಂದು ಧರ್ಮವೇ?

ಹಾಗಾದರೆ ಧರ್ಮ ಎಂದರೇನು? ಜಾತಿಗಳ ಮೇಲು–ಕೀಳು ನಿಷಿದ್ಧಗಳ ಕಟ್ಟಳೆಗಳೇ ಇಲ್ಲಿ ಧರ್ಮವಾಗಿದೆ. ಅದಕ್ಕೇ ಪೇಜಾವರರನ್ನು ತಿರುಪತಿಯಲ್ಲಿ ಪೂಜೆಗೆ ಬಿಡುವುದಿಲ್ಲ ಎಂದರೆ –ನಾವೆಂಥ ಕ್ಷುದ್ರಜೀವಿಗಳು ಎಂದು ನಮಗನಿಸುವುದಿಲ್ಲ. ಈ ನಮ್ಮ ಮಠ, ದೇವಸ್ಥಾನ, ಪೂಜಾ ಸ್ಥಳಗಳು ಅಂಧಃತಮಸ್ಸಿನಿಂದ ಹೊರಬರಲು ಇನ್ನೆಷ್ಟು ವರ್ಷಗಳು ಕಾಯಬೇಕು? "ನಿನ್ನನ್ನು ನನ್ನ ಮಠದ ಉತ್ತರಾಧಿಕಾರಿಯನ್ನಾಗಿ ಮಾಡುತ್ತೇನೆ, ಮತಾಂತರ ಆಗಬೇಡ" ಎನ್ನಲು ಬಾಯಿಬಾರದ ಮಠಾಧಿಪತಿ "ಮತಾಂತರ ಆಗಬಾರದು" ಎಂದು ನೈತಿಕತೆ ಕಾಡದೆ ಹೇಳಿದರೂ ಅದರೊಳಗಿನ ನಿರ್ಲಜ್ಜತೆ ನಮಗೆ ಕಾಣಿಸುವುದಿಲ್ಲ. "ನೀನು ಹೊರಗಿರುವುದೇ ನಮ್ಮ ಸಂಪ್ರದಾಯ" ಎನ್ನುವುದರ ಕ್ರೌರ್ಯವೂ ನಮಗೆ ತಟ್ಟುವುದಿಲ್ಲ.

ಈಗ ಪೇಜಾವರ ಶ್ರೀಗಳು ದಲಿತರಿಗೆ ವೈಷ್ಣವ ದೀಕ್ಷೆ ಕೊಡಲು ಹೊರಟಿದ್ದಾರೆ. ಈಗಾಗಲೇ ವೈಷ್ಣವ ದೀಕ್ಷೆ ಪಡೆದ ಅನೇಕ ದಲಿತ ದಾಸ ಒಕ್ಕಲುಗಳು ಇವೆ. ಶಂಖ–ಜಾಗಟೆಯನ್ನು ಪ್ರತ್ಯೇಕವಾಗಿ ಮಡಿಯಾಗಿ ಇಟ್ಟುಕೊಂಡು, ಆ ಇಟ್ಟಿರುವ ಜಾಗಕ್ಕೆ ಉಳಿದವರಿಗೆ ಪ್ರವೇಶ ಕೊಡದೆ, ದಾಸ ಒಕ್ಕಲುಗಳಲ್ಲೇ ಮದುವೆಗೆ ಹೆಣ್ಣು ಗಂಡು ಹುಡುಕುತ್ತಿವೆ. ಈ ದೀಕ್ಷೆ ದಲಿತರಲ್ಲಿ ಭೇದವನ್ನು ಹೆಚ್ಚಿಸಿರುವುದೇ ಹೊರತು ಐಕ್ಯತೆಯನ್ನಲ್ಲ. ಪೇಜಾವರ ಶ್ರೀಗಳ ಪಾದಯಾತ್ರೆಯಿಂದ ದಲಿತರಲ್ಲಿ ಇನ್ನಷ್ಟು ದಾಸರು ಹೆಚ್ಚಾಗಬಹುದು. ಶಂಖ ಜಾಗಟೆ ಬಾರಿಸಬಹುದು! ಎಷ್ಟೇ ಶಂಖ ಜಾಗಟೆ ಬಾರಿಸಿದರೂ ಅವರ ಅಸ್ಪೃಶ್ಯ ಸ್ಥಿತಿಯಿಂದ ಚಲನೆ ಕಾಣದು ಯಾಕೆಂದರೆ ವೈಷ್ಣವ ದೀಕ್ಷೆ ಎಂದರೆ ಸೇವಕತನದ ದಾಸ ದೀಕ್ಷೆ.

ಹೀಗಿರುವಾಗ ಶ್ರೀ ಪೇಜಾವರರು ವೈಷ್ಣವ ದೀಕ್ಷೆಯನ್ನು ಪುನರ್ ಪರಿಶೀಲಿಸುವುದು ಒಳಿತೇನೋ. ಬದಲಾಗಿ ದ್ವಿಜರಿಗೆ ತ್ರಿಜ ದೀಕ್ಷೆ ಕೊಡುವುದು ನಮ್ಮ ಸಮಾಜದ ಆರೋಗ್ಯ ಐಕ್ಯತೆ ಸಮತೋಲನಕ್ಕೆ ಅಗತ್ಯವೇನೋ

(35ನೇ ಪುಟಕ್ಕೆ)

"ನಾನು ಕ್ರಿಶ್ಚಿಯನ್, ನಾನು ಬೌದ್ಧ, ನಾನು ಯಾಕೆ ಮಠಾಧಿಪತಿಯಾಗಬಾರದು?" ಎಂದು ಆ ಧರ್ಮಗಳಲ್ಲಿರುವ ಯಾರೇ ಪ್ರಶ್ನಿಸಬಹುದು. ಇದಕ್ಕೆ ಆ ಧರ್ಮಗಳಲ್ಲಿ ಅವಕಾಶ ಇದೆ. ಕೆಲವು ಕಡೆ ಸಾಧ್ಯವೂ ಆಗಿದೆ. ಹಿಂದೂ ಎಂದುಕೊಂಡಿರುವ ಜಾತಿ ಧರ್ಮದಲ್ಲಿ ಇದು ಸಾಧ್ಯವೇ? ಉಡುಪಿ ಕೃಷ್ಣನ ಗುಡಿಯ ಹೊರಗೆ ನಿಂತಿರುವ ಕನಕದಾಸನ ಕುರುಬರು ನಿಮ್ಮ ಸಮಾಜಕ್ಕೆ ಸೇರಿಲ್ಲವೇ? ಅವರ ಧರ್ಮವೇ ಬೇರೆಯೇ? ಅಥವಾ ಪ್ರತಿ ಜಾತಿಯೂ ಒಂದೊಂದು ಧರ್ಮವೇ? ಹಾಗಾದರೆ ಧರ್ಮ ಎಂದರೇನು? ಜಾತಿಗಳ ಮೇಲು-ಕೀಳು ನಿಷಿದ್ಧಗಳ ಕಟ್ಟಳೆಗಳೇ ಇಲ್ಲಿ ಧರ್ಮವಾಗಿದೆ. ಅದಕ್ಕೇ ಪೇಜಾವರರನ್ನು ತಿರುಪತಿಯಲ್ಲಿ ಪೂಜೆಗೆ ಬಿಡುವುದಿಲ್ಲ ಎಂದರೆ - ನಾವೆಂಥ ಕ್ಷುದ್ರ ಜೀವಿಗಳು ಎಂದು ನಮಗನಿಸುವುದಿಲ್ಲ.

ಧರ್ಮ, ಮಠ ಮತ್ತು ರಾಜಕಾರಣ

ನಾ ದಿವಾಕರ

ಮಠಾಧೀಶರುಗಳ, ದೇವಮಾನವರ ಆಶೀರ್ವಾದ ಪಡೆಯಲು ಹವಣಿಸದ ಪ್ರಧಾನ ಮಂತ್ರಿಗಳು ಇಲ್ಲವೇ ಇಲ್ಲವೆಂದು ಹೇಳಬಹುದು. ನೆಹರೂ ಅವರು ವೈಯ್ಯಕ್ತಿಕವಾಗಿ ಈ ನಿಟ್ಟಿನಲ್ಲಿ ಭಿನ್ನ ಎನಿಸಿದರೂ, ಧಾರ್ಮಿಕ ಮುಖಂಡರನ್ನು ವಿರೋಧಿಸುವ ಸ್ಥೈರ್ಯವನ್ನೂ ತೋರಲಿಲ್ಲ. ಸಮರ್ಥ ನಾಯಕಿ ಎನಿಸಿದ್ದ ಇಂದಿರಾಗಾಂಧಿಯವರೂ ಸಹ ಅನೇಕ ಸಂದರ್ಭಗಳಲ್ಲಿ, ಸಂಕಷ್ಟದ ಸಮಯದಲ್ಲಿ ಮಠಮಾನ್ಯಗಳ ಮೊರೆ ಹೋಗಿದ್ದುಂಟು. ಸೆಕ್ಯುಲರ್ ಸಂವಿಧಾನವನ್ನು ಪ್ರತಿನಿಧಿಸುತ್ತಲೇ ಈ ರೀತಿ ಧಾರ್ಮಿಕ ಸಂಸ್ಥೆಗಳಿಗೆ ಶರಣಾಗುವ ಸಂಸ್ಕೃತಿಯನ್ನು ಪುರೋಗಾಮಿ ಚಿಂತನೆಯ ಹಲವರು ಪ್ರತಿಭಟಿಸಿದರೂ, ಜನಸಾಮಾನ್ಯರಲ್ಲಿ ಯಾವುದೇ ವಿರೋಧ ವ್ಯಕ್ತವಾಗದಿರುವುದಕ್ಕೆ ಕಾರಣಗಳೂ ಇಲ್ಲದಿಲ್ಲ.

ಧಾರ್ಮಿಕ ಕೇಂದ್ರಗಳು ಪ್ರಭಾವಶಾಲಿಯಾಗಿ ರಾಜಕಾರಣದಲ್ಲಿ ಸಕ್ರಿಯ ಪಾತ್ರವಹಿಸುವ ಪರಂಪರೆ ಐರೋಪ್ಯ ರಾಷ್ಟ್ರಗಳ ಬಳುವಳಿ. ಬೂರ್ಷ್ವಾ ಪ್ರಜಾತಂತ್ರ ಕ್ರಾಂತಿಗೂ ಮುನ್ನ ಪ್ರಚಲಿತವಾಗಿದ್ದ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಮತ್ತು ಅದಕ್ಕೂ ಹಿಂದಣ ಕಾಲಘಟ್ಟದಲ್ಲಿ ಚರ್ಚುಗಳು ತಮ್ಮದೇ ಆದ ಶಾಸನವನ್ನೂ ಜಾರಿ ಗೊಳಿಸುತ್ತಿದ್ದವು. ಈ ಧಾರ್ಮಿಕ ಶಕ್ತಿಗಳ ವಿರುದ್ಧ ಅಲ್ಲಿ ನಡೆದ ಜನಾಂದೋಲನಗಳಿಗೆ ಬೆನ್ನೆಲುಬಾಗಿದ್ದ ಬೂರ್ಷ್ವಾ ವರ್ಗಗಳು ರಾಜಪ್ರಭುತ್ವದ ವಿರುದ್ಧ ನಡೆಸಿದ ಹೋರಾಟಗಳೂ ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಬುನಾದಿಯಾಗಿತ್ತು. ಇದು ಇತಿಹಾಸ.

ಭಾರತದ ರಾಜಕಾರಣದಲ್ಲಿ ಧಾರ್ಮಿಕ ಕೇಂದ್ರಗಳ ಪ್ರಭಾವ, ಅಧಿಪತ್ಯ ಇಲ್ಲದಿರಲಿಲ್ಲ. ರಾಜಪ್ರಭುತ್ವಗಳ ಕಾಲದಲ್ಲಿ, ಮೊಘಲರ ಕಾಲದಲ್ಲಿ, ಬ್ರಿಟೀಷರ ಕಾಲದಲ್ಲಿ ತಮ್ಮದೇ ಆದ ಸಾಂಸ್ಕೃತಿಕ ಅಧಿಪತ್ಯವನ್ನು ಸಾಧಿಸುವಲ್ಲಿ ಎಲ್ಲಾ ಮತೀಯ ಶಕ್ತಿಗಳೂ ಕಾರ್ಯೋನ್ಮುಖವಾಗಿದ್ದವು. ಸಾಂಸ್ಥಿಕ ಸ್ವರೂಪದಲ್ಲಿ ಅಲ್ಲದಿದ್ದರೂ ಭಾರತದ ಸಾಮಾಜಿಕ ವೈಶಿಷ್ಟ್ಯವಾದ ಶ್ರೇಣೀಕೃತ ಜಾತಿ ವ್ಯವಸ್ಥೆಯಡಿಯಲ್ಲಿ ಮತೀಯ ಶಕ್ತಿಗಳು ಆಳ್ವಿಕರ ವಿಶ್ವಾಸಗಳಿಸಿ, ಅಧಿಕಾರದ ಚುಕ್ಕಾಣಿ ಹಿಡಿದಿದ್ದನ್ನು ಇತಿಹಾಸದಲ್ಲಿ ಕಾಣಬಹುದು. ಇದೇ ಪರಂಪರೆ ಮೊಘಲರ ಕಾಲದಲ್ಲೂ ಮತ್ತೊಂದು ಸ್ವರೂಪದಲ್ಲಿ ವ್ಯಕ್ತವಾಗಿತ್ತು.

ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಕೆಲವು ಮೊಘಲ್ ದೊರೆಗಳು ಅನ್ಯ ಧರ್ಮೀಯರೊಡನೆ ಹೊಂದಾಣಿಕೆ ಮಾಡಿಕೊಂಡರೆ ಇನ್ನು ಹಲವರು ಇಸ್ಲಾಂ ಧರ್ಮ ಪ್ರಚಾರಕರಾಗೇ ಅಧಿಕಾರ ನಡೆಸಿದ್ದುಂಟು. ಇದೇ ಪರಂಪರೆ ಸ್ವಾತಂತ್ರ್ಯಾನಂತರದಲ್ಲೂ ಮುಂದುವರೆದಿದ್ದು ಧಾರ್ಮಿಕ ಶಕ್ತಿ ಕೇಂದ್ರಗಳು ಪ್ರಜಾ ತಂತ್ರದ ಚೌಕಟ್ಟಿನಲ್ಲೇ ತಮ್ಮ ಪ್ರಭಾವವನ್ನು ಉಳಿಸಿ ಕೊಂಡಿವೆ.

ಮಠಾಧೀಶರುಗಳ, ದೇವಮಾನವರ ಆಶೀರ್ವಾದ ಪಡೆಯಲು ಹವಣಿಸದ ಪ್ರಧಾನ ಮಂತ್ರಿಗಳು ಇಲ್ಲವೇ ಇಲ್ಲವೆಂದು ಹೇಳಬಹುದು. ನೆಹರೂ ಅವರು ವೈಯ್ಯಕ್ತಿಕವಾಗಿ ಈ ನಿಟ್ಟಿನಲ್ಲಿ ಭಿನ್ನ ಎನಿಸಿದರೂ, ಧಾರ್ಮಿಕ ಮುಖಂಡರನ್ನು ವಿರೋಧಿ ಸುವ ಸ್ಥೈರ್ಯವನ್ನೂ ತೋರಲಿಲ್ಲ. ಸಮರ್ಥ ನಾಯಕಿ ಎನಿಸಿದ್ದ ಇಂದಿರಾ ಗಾಂಧಿಯವರೂ ಸಹ ಅನೇಕ ಸಂದರ್ಭಗಳಲ್ಲಿ, ಸಂಕಷ್ಟದ ಸಮಯದಲ್ಲಿ ಮಠಮಾನ್ಯಗಳ ಮೊರೆ ಹೋಗಿದ್ದುಂಟು. ಸೆಕ್ಯುಲರ್ ಸಂವಿಧಾನವನ್ನು ಪ್ರತಿನಿಧಿಸುತ್ತಲೇ ಈ ರೀತಿ ಧಾರ್ಮಿಕ ಸಂಸ್ಥೆಗಳಿಗೆ ಶರಣಾಗುವ ಸಂಸ್ಕೃತಿಯನ್ನು ಪುರೋಗಾಮಿ ಚಿಂತನೆಯ ಹಲವರು ಪ್ರತಿಭಟಿಸಿದರೂ, ಜನಸಾಮಾನ್ಯರಲ್ಲಿ ಯಾವುದೇ ವಿರೋಧ ವ್ಯಕ್ತವಾಗದಿರುವುದಕ್ಕೆ ಕಾರಣಗಳೂ ಇಲ್ಲದಿಲ್ಲ. ಭಾರತದ ಸೆಕ್ಯುಲರ್ ನೀತಿ ಎಂದರೆ ಪ್ರಭುತ್ವ ಧರ್ಮದಿಂದ ಬೇರ್ಪಡುವುದಲ್ಲ, ಬದಲಾಗಿ ಎಲ್ಲ ಧರ್ಮಗಳನ್ನೂ ಸಮನಾಗಿ ಪರಿಗಣಿಸುವುದು. ಹಾಗಾಗಿ ನಮ್ಮ ರಾಜಕೀಯ ನಾಯಕರು ಎಲ್ಲ ಧರ್ಮೀಯರನ್ನೂ ಸಂತೈಸುವ ನಿಟ್ಟಿನಲ್ಲಿ ತೀವ್ರ ಎಚ್ಚರಿಕೆ ವಹಿಸುತ್ತಾರೆ. ಸಾಮುದಾಯಿಕ ಅಸ್ಮಿತೆಯ ಸಮಸ್ಯೆಗಳು ಎದುರಾದಾ ಗಲೆಲ್ಲಾ ಜನಸಾಮಾನ್ಯರಿಗಿಂತಲೂ ಹೆಚ್ಚಾಗಿ ಧಾರ್ಮಿಕ ನಾಯಕರ ಬಳಿ ಸಲಹೆ ಪಡೆಯುತ್ತಿರುವುದು ನಿದರ್ಶನವಷ್ಟೆ.

ಈ ನಿಟ್ಟಿನಲ್ಲಿ ಬೆಳೆದುಬಂದ ವಿಶಿಷ್ಟ ಪರಂಪರೆಯಲ್ಲಿ, ಸಾಮುದಾಯಿಕ-ಸಾಂಸ್ಕೃತಿಕ ಚಿಂತನೆಗಳೆಲ್ಲವೂ ಧಾರ್ಮಿಕ ನೆಲೆಗಟ್ಟಿನಲ್ಲಿ ವ್ಯಕ್ತವಾಗತೊಡಗಿದೆ. ಹಿಂದೂ ಉತ್ತರಾಧಿಕಾರ ಕಾಯ್ದೆಯನ್ನು ತಿದ್ದುಪಡಿ ಮಾಡಲು ಹಿಂದೂ ಧಾರ್ಮಿಕ ಸಂಸ್ಥೆಗಳ ವಿರೋಧ ವ್ಯಕ್ತವಾಗುತ್ತದೆ ಮತ್ತು ಈ ವಿರೋಧವನ್ನು ಪ್ರಭುತ್ವ ಗಂಭೀರವಾಗಿ ಪರಿಗಣಿಸುತ್ತದೆ. ಮುಸ್ಲಿಂ ವೈಯ್ಯಕ್ತಿಕ ಕಾನೂನಿನ ವಿಷಯದಲ್ಲಿ ಇಮಾಮ್‌ಗಳ ವಿರೋಧವನ್ನೇ ಪ್ರಧಾನವಾಗಿರಿಸಿಕೊಂಡು ಈವರೆಗೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ.

ಸಿರಿಯನ್ ಕ್ಯಾಥೊಲಿಕ್ ಸಮುದಾಯದಲ್ಲಿನ ಬದಲಾವಣೆಗಳಿಗೂ ಸಹ ಸಾಮುದಾಯಿಕ ಪ್ರತಿರೋಧ ಕಾರಣವಾಯಿತೇ ಹೊರತು, ಚರ್ಚಿನ ಮುಖಂಡರ ಉದಾತ್ತತೆಯಲ್ಲ. ಹೀಗೆ ಕೇಂದ್ರ ಹಾಗು ರಾಜ್ಯ ಸರ್ಕಾರಗಳು ನಿರ್ದಿಷ್ಟ ಧಾರ್ಮಿಕ ಸಮುದಾಯದ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಧಾರ್ಮಿಕ ಮುಖಂಡರ ಮೊರೆ ಹೋಗುತ್ತಿವೆಯೇ ಹೊರತು, ಜನಾಭಿಪ್ರಾಯಕ್ಕಾ ಗಲೀ, ಸಮುದಾಯದಲ್ಲಿ ಧಾರ್ಮಿಕ ದೃಷ್ಟಿಕೋನದಿಂದ ಹೊರತಾಗಿ ಚಿಂತಿಸುವ ಬುದ್ಧಿ ಜೀವಿಗಳೊಡನೆಯಾಗಲೀ ಚರ್ಚೆ ನಡೆಸಿದ ಉದಾಹರಣೆಗಳಿಲ್ಲ. ಶಹಬಾನೊ ಪ್ರಕರಣ, ರಾಮಮಂದಿರ ವಿವಾದ, ಸಲಿಂಗ ಕಾಮಿಗಳ ಹಕ್ಕುಗಳ ಸಮಸ್ಯೆ ಈ ನಿಟ್ಟಿನಲ್ಲಿ ಉತ್ತಮ ನಿದರ್ಶನ. ತತ್ಪರಿಣಾಮವಾಗಿ ಧಾರ್ಮಿಕ ಚೌಕಟ್ಟಿನಲ್ಲೇ ಸಂಸ್ಕೃತಿಯನ್ನು ವ್ಯಾಖ್ಯಾನಿಸಿರುವ ಪರಂಪರೆಯೂ ಬೆಳೆದು ಬಂದಿದ್ದು, ಮತೀಯ ಸಂಘರ್ಷಗಳು ಸಂಸ್ಕೃತಿ ಕೇಂದ್ರಿತ ಸಂಘರ್ಷಗಳಾಗಿ ಪರಿಣಮಿ ಸುತ್ತಿವೆ. ಪಾಶ್ಚಿಮಾತ್ಯ ಪೌರ್ವಾತ್ಯ ಸಂಸ್ಕೃತಿಯ ಸಂಕಥನವನ್ನು ವಿಭಿನ್ನ ಸಾಮಾಜಿಕ-ಮತೀಯ ಸಂಘರ್ಷಗಳ ಸಂದರ್ಭದಲ್ಲಿ ಧಾರ್ಮಿಕ ಚೌಕಟ್ಟಿನೊಳಗೆ ವಿಶ್ಲೇಷಿಸುವುದೂ ಈ ಪರಂಪರೆಯ ಪರಿಣಾಮವೇ ಆಗಿದೆ.



ಆಳ್ವಿಕರ ಈ ನೀತಿಗಳು ಮತೀಯ ಸಾಂಸ್ಥಿಕ ಶಕ್ತಿಗಳಿಗೆ ಅನುಕೂಲಕರವಾಗಿರುವುದಾದರೂ ಸಮುದಾಯದ ಜನಸಾಮಾನ್ಯರಿಗೆ ಕಗ್ಗಂಟಾಗಿ ಪರಿಣಮಿಸಿದೆ. ಧಾರ್ಮಿಕ ಶಕ್ತಿಗಳನ್ನು ಓಲೈಸುವುದರಿಂದಲೇ ಇಡೀ ಸಮುದಾ

ಯದ ವಿಶ್ವಾಸ-ಬೆಂಬಲ ಗಳಿಸಬಹುದು ಎಂಬ ರಾಜಕೀಯ ಪಕ್ಷಗಳ ಭ್ರಮೆ ಜನಸಾಮಾನ್ಯರ ಜೀವನದಲ್ಲಿ ನೇತ್ಯಾತ್ಮಕ ಪರಿಣಾಮ ಬೀರಿರುವುದೇ ಹೆಚ್ಚು. ಈ ವಿದ್ಯಮಾನವನ್ನು ವಿಶೇಷವಾಗಿ ಮುಸ್ಲಿಂ ಸಮುದಾಯದಲ್ಲಿ ಗಮನಿಸಬಹುದು. ಮುಸ್ಲಿಂ ಸಮುದಾಯವನ್ನು ಓಲೈಸಲಾಗುತ್ತಿದೆ, ತುಷ್ಟೀಕರಿಸಲಾಗುತ್ತಿದೆ ಎಂಬ ಕೂಗು ಈ ಹಿನ್ನೆಲೆಯಲ್ಲೇ ವ್ಯಕ್ತವಾಗುವುದನ್ನು ಗಮನಿಸಬಹುದು. ಇಲ್ಲಿ ಮುಸ್ಲಿಮರ ಓಲೈಕೆ ಎಂದರೆ ಏನೆಂಬುದೇ ಸ್ಪಷ್ಟವಾಗಿರುವುದಿಲ್ಲ.

ಸಾಮಾನ್ಯವಾಗಿ ಓಲೈಕೆ ಎಂದರೆ, ಆಳ್ವಿಕರ ನೀತಿಗಳಿಂದ ಒಂದು ಸಮುದಾಯ ಅನೇಕ ಸವಲತ್ತುಗಳನ್ನು ಪಡೆದು, ಸಾಮಾಜಿಕವಾಗಿ ಆರ್ಥಿಕವಾಗಿ ಅಭಿವೃದ್ಧಿ ಹೊಂದುವುದು ಎಂದು ಅರ್ಥೈಸಬಹುದು. ಆದರೆ ಸಾಚಾರ್ ಸಮಿತಿಯ ವರದಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಭಾರತದಲ್ಲಿನ ಬಹುಪಾಲು ಮುಸ್ಲಿಮರು ಅನುಭವಿಸುತ್ತಿರುವ ಬವಣೆ ಸ್ಪಷ್ಟವಾಗುತ್ತದೆ. ಆದರೆ ಮುಸ್ಲಿಂ ಧಾರ್ಮಿಕ ಮುಖಂಡರಿಗಾಗಲೀ, ರಾಜಕೀಯ ಪಕ್ಷಗಳಿಗಾಗಲೀ ಇದು ಹೆಚ್ಚು ಪ್ರಸ್ತುತವೆನಿಸುವುದೇ ಇಲ್ಲ. ಇತ್ತ ಓಲೈಕೆ, ತುಷ್ಟೀಕರಣವನ್ನೇ ಪ್ರಚಾರ ಸರಕನ್ನಾಗಿ ಮಾಡಿಕೊಂಡಿರುವ ಅನ್ಯಧರ್ಮೀಯರಿಗೂ ಇದು ಪ್ರಮುಖ ಎನಿಸುವುದಿಲ್ಲ. ಹಾಗಾಗಿ ಹಜ್ ಯಾತ್ರೆಗೆ ನೀಡುವ ಸಬ್ಸಿಡಿ ಹಣವನ್ನೇ ಓಲೈಕೆಯ ಪ್ರತೀಕವಾಗಿ ಪರಿಗಣಿಸಲಾಗುತ್ತದೆ. ಹಜ್‌ಗೆ ಹೋಗುವವರಲ್ಲಿ ಮೇಲ್‌ಮಧ್ಯಮವರ್ಗ – ಶ್ರೀಮಂತರೇ ಹೆಚ್ಚಾಗಿರುವುದು ಇಲ್ಲಿ ನಗಣ್ಯವಾಗುತ್ತದೆ.

ಅದೇ ವೇಳೆ ಯಾವುದೇ ರಾಜಕೀಯ ಪಕ್ಷ-ಆಡಳಿತಾರೂಢ ಪಕ್ಷವಾದರೂ ಧಾರ್ಮಿಕ ಶಕ್ತಿಗಳ ಓಲೈಕೆಯಲ್ಲಿ ತಾರತಮ್ಯ ಮಾಡುವುದಿಲ್ಲ ಎಂಬ ಸತ್ಯಾಂಶವನ್ನೂ ನಿರ್ಲಕ್ಷಿಸುವಂತಿಲ್ಲ. ಮುಸ್ಲಿಂ ಮತೀಯ ಶಕ್ತಿಗಳನ್ನು ಓಲೈಸಲು ಶಹಬಾನೋ ಪ್ರಕರಣದಲ್ಲಿ ಜನವಿರೋಧಿ ನಿಲುವು ಕೈಗೊಂಡ ಕೂಡಲೇ ವಿವಾದಿತ ರಾಮಜನ್ಮಭೂಮಿ-ಬಾಬ್ರಿಮಸೀದಿಯ ಬೀಗತೆರೆದ ಕೇಂದ್ರ ಸರ್ಕಾರ ಹಿಂದೂ ಧಾರ್ಮಿಕ ಶಕ್ತಿಗಳನ್ನು ಓಲೈಸಲು ಯತ್ನಿಸಿದ್ದು ಈಗ ಇತಿಹಾಸ. ಹಜ್‌ಯಾತ್ರೆಗೆ ಸಬ್ಸಿಡಿ ನೀಡುವಂತೆಯೇ ಅಮರನಾಥ ಯಾತ್ರೆಗೂ ನೀಡಲಾಗುತ್ತದೆ. ವಕ್ಫ್ ಮಂಡಲಿಯಂತೆಯೇ ಮುಜರಾಯಿ ಇಲಾಖೆಯೂ ಕಾರ್ಯ ನಿರ್ವಹಿಸುತ್ತದೆ. ಇಮಾಮ್‌ಗಳ, ಬಿಷಪ್‌ಗಳ ಮಾತುಗಳಿಗೆ ನೀಡುವಷ್ಟೇ ಬೆಲೆಯನ್ನು ಹಿಂದೂ ಸ್ವಾಮಿಗಳ ಮಾತುಗಳಿಗೂ ನೀಡಲಾಗುತ್ತದೆ. ಇದು ಭಾರತದ ಸೆಕ್ಯುಲರಿಸಂನ ವೈಪರೀತ್ಯವೋ, ಅಪಭ್ರಂಶವೋ ಎನ್ನುವುದು ಚರ್ಚಾಸ್ಪದ ಅಂಶ. ಆದರೂ ಭಾರತದ ರಾಜಕಾರಣದಲ್ಲಿ ಧಾರ್ಮಿಕ ಶಕ್ತಿಗಳ ಹಸ್ತಕ್ಷೇಪ ಯಾವುದೂ ಒಂದು ರೀತಿಯಲ್ಲಿ ಹೆಚ್ಚಾಗುತ್ತಿರುವುದಕ್ಕೆ ನಿದರ್ಶನಗಳಷ್ಟೆ.

ರಾಜಕಾರಣದಲ್ಲಿ ಮಠಾಧೀಶರು

ಭಾರತದ ಸೆಕ್ಯಲರಿಸಂನ ಈ ಅಪಭ್ರಂಶಗಳ ಹಿನ್ನೆಲೆಯಲ್ಲೇ ಭಾರತೀಯ ರಾಜಕಾರಣದಲ್ಲಿ ಧರ್ಮದ ಪಾತ್ರವನ್ನೂ, ಧರ್ಮಗಳನ್ನು ಪ್ರತಿನಿಧಿಸುವ ಮಠಾಧೀಶರುಗಳ, ಧಾರ್ಮಿಕ ಮುಖಂಡರ ಪಾತ್ರವನ್ನೂ ವಿಶ್ಲೇಷಿಸಬೇಕಾಗುತ್ತದೆ. ಪ್ರಚಲಿತ ರಾಜಕೀಯ ವಿದ್ಯಮಾನಗಳ ಹಿನ್ನೆಲೆಯಲ್ಲಿ, ಭಾರತೀಯ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮಠಾಧೀಶರ ಅಥವಾ ಧಾರ್ಮಿಕ ಕೇಂದ್ರಗಳ ಪಾತ್ರವೇನು ಎಂಬ ಜಿಜ್ಞಾಸೆ ಜನಸಾಮಾನ್ಯರನ್ನೂ, ಮಾಧ್ಯಮಗಳನ್ನೂ ಕಾಡುತ್ತಿದೆ. ಕೆಲವು ಮಾಧ್ಯಮಗಳಲ್ಲಿ ಈ ಕುರಿತ ಗಂಭೀರ ಚರ್ಚೆಗಳೂ ನಡೆದಿದ್ದು, ಅನೇಕ ಧಾರ್ಮಿಕ ಮುಖಂಡರು ತಮ್ಮ ಅಭಿಪ್ರಾಯಗಳನ್ನು, ಪೂರ್ವಾಗ್ರಹಗಳನ್ನು ವ್ಯಕ್ತಪಡಿಸಿದ್ದಾರೆ. ಪೇಜಾವರರು ಇತ್ತೀಚೆಗೆ ಕೈಗೊಂಡಿರುವ ಅಸ್ಪೃಶ್ಯತಾ ನಿವಾರಣಾ(ಪಾಪ ಪ್ರಾಯಶ್ಚಿತ್ತ ನಿಮಿತ್ತಂ) ಪಾದಯಾತ್ರೆಯನ್ನೂ ಗೋಹತ್ಯಾ ನಿಷೇಧ ಮಸೂದೆಯ ಹಿಂದಿನ ರಾಜಕಾರಣವನ್ನು ಗಮನದಲ್ಲಿಟ್ಟುಕೊಂಡೇ ನೋಡಬೇಕಾಗುತ್ತದೆ.

ಪ್ರಚಲಿತ ರಾಜಕೀಯ ವಿದ್ಯಮಾನಗಳ ಹಿನ್ನೆಲೆಯಲ್ಲಿ, ಭಾರತೀಯ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮಠಾಧೀಶರ ಅಥವಾ ಧಾರ್ಮಿಕ ಕೇಂದ್ರಗಳ ಪಾತ್ರವೇನು ಎಂಬ ಜಿಜ್ಞಾಸೆ ಜನಸಾಮಾನ್ಯರನ್ನೂ, ಮಾಧ್ಯಮಗಳನ್ನೂ ಕಾಡುತ್ತಿದೆ. ಕೆಲವು ಮಾಧ್ಯಮಗಳಲ್ಲಿ ಈ ಕುರಿತ ಗಂಭೀರ ಚರ್ಚೆಗಳೂ ನಡೆದಿದ್ದು, ಅನೇಕ ಧಾರ್ಮಿಕ ಮುಖಂಡರು ತಮ್ಮ ಅಭಿಪ್ರಾಯಗಳನ್ನು, ಪೂರ್ವಾಗ್ರಹಗಳನ್ನು ವ್ಯಕ್ತಪಡಿಸಿದ್ದಾರೆ.

ಇಲ್ಲಿ ಧಾರ್ಮಿಕ ಮುಖಂಡರನ್ನು ಎರಡು ಪಂಗಡಗಳಾಗಿ ವಿಂಗಡಿಸಬಹುದು. ಒಂದು ಸೀಮಿತ ಧರ್ಮದ ದೃಷ್ಟಿಕೋನದಿಂದಲೇ ಇಡೀ ಸಮಾಜವನ್ನು ಗ್ರಹಿಸುವ ಮೂಲಕ, ಜನಸಮುದಾಯಗಳ ಮೇಲೆ ತಮ್ಮದೇ ಆದ ವ್ಯಾಖ್ಯಾನಗಳನ್ನು, ಧರ್ಮಸೂಕ್ಷ್ಮಗಳನ್ನು ಹೇರುವ ಮುಖಂಡರು ಒಂದು ಬಗೆಯಾದರೆ, ಸಮಸ್ತ ಜನಸಮುದಾಯಗಳೂ ಒಂದೇ ಎಂದು ಸಾರುವ ಆಧ್ಯಾತ್ಮಿಕ ನೆಲೆಗಟ್ಟಿನಲ್ಲಿ ಸಾಮುದಾಯಿಕ ದೃಷ್ಟಿಕೋನವನ್ನು ರೂಢಿಸಿಕೊಂಡಿರುವ ಮುಖಂಡರು ಮತ್ತೊಂದು ಬಗೆ. ಮೊದಲನೆಯ ವರ್ಗದಲ್ಲಿ ವಿವಿಧ ಆಚಾರ್ಯರು, ಮಠಾಧೀಶರು, ಇಮಾಮ್‌ಗಳು, ಪಾದ್ರಿಗಳು ಮತ್ತು ವಿಡಂಬನೆ ಎನಿಸಿದರೂ ಜಗದ್ಗುರುಗಳು ಸೇರುತ್ತಾರೆ. ಈ ಮುಖಂಡರ ಸ್ಥಾಪಿತ ಹಿತಾಸಕ್ತಿಗಳೇನೇ ಇದ್ದರೂ, ತಾವು ಎಲ್ಲರನ್ನೂ ಪ್ರತಿನಿಧಿಸುತ್ತೇವೆ ಮತ್ತು ಸರ್ವಜನ ಸುಖಕ್ಕಾಗಿ ತಮ್ಮ ಸೇವೆಯನ್ನು ಮುಡಿಪಾಗಿಟ್ಟಿದ್ದೇವೆ ಎಂಬ ಭ್ರಮೆ ಮತ್ತು ಅಹಂ ಹೊಂದಿರುತ್ತಾರೆ. ಹಾಗಾಗಿ ಸಾಮುದಾಯಿಕ ಸಮಸ್ಯೆಗಳಿಗೆ ಕೂಡಲೇ ಸ್ಪಂದಿಸುವುದೇ ಅಲ್ಲದೆ ತಮ್ಮ ಪರಿಹಾರವೇ ಸಮುದಾಯದ ಅಂತಿಮ ಪರಿಹಾರ ಎಂಬ ನಿರ್ಧಾರವನ್ನೂ ಕೈಗೊಳ್ಳುತ್ತಾರೆ. ಬಹುತೇಕ ರಾಜಕೀಯ ಪಕ್ಷಗಳು ಈ ವರ್ಗದ ಸಂಸ್ಥೆಗಳ ಹಿಂಬಾಲಕರಾಗಿರುವುದನ್ನೂ ಕಾಣಬಹುದು.

ಎರಡನೆ ವರ್ಗದ ಮುಖಂಡರು ಆಧ್ಯಾತ್ಮ, ಯೋಗ, ಸನಾತನ ಧರ್ಮ, ಸಮಾನತೆ ಮುಂತಾದ ಉದಾತ್ತ ಆದರ್ಶಗಳನ್ನು ತಮ್ಮ ಬಂಡವಾಳವನ್ನಾಗಿ ಮಾಡಿಕೊಂಡು, ಎಲ್ಲ ಸಮುದಾಯಗಳೊಡನೆ ಸ್ಪಂದಿಸಲು ಯತ್ನಿಸುತ್ತಾರೆ. ಇಂತಹ ಸಾಂಸ್ಥಿಕ ಶಕ್ತಿಗಳು ಒಂದು ನಿರ್ದಿಷ್ಟ ಧರ್ಮ ಅಥವಾ ಕೋಮಿನ ಬಗ್ಗೆ ಮಾತನಾಡದಿದ್ದರೂ, ದೇಶದ ಪ್ರಜೆಗಳ ಹಿತಾಸಕ್ತಿಯನ್ನು ಧರ್ಮದ ನೆಲೆಗಟ್ಟಿನಲ್ಲೇ ನೋಡಬಯಸುತ್ತಾರೆ. ಭಾರತೀಯ ಸಾಮಾಜಿಕ ಸಂದರ್ಭದಲ್ಲಿ ಈ ಧಾರ್ಮಿಕ ಮುಖಂಡರು ಜಾತಿಗಳ ಗೋಡೆಗಳನ್ನು ಬೇಧಿಸಿ, ಎಲ್ಲ ಸಮುದಾಯಗಳಿಗೂ ಸಮಾನತೆಯನ್ನು ನೀಡುವ ಉದಾರ ಮನೋಭಾವವನ್ನೂ ತೋರುತ್ತಾರೆ. ಹಾಗಾಗಿ ಸಾಮಾಜಿಕ ಸ್ತರದಲ್ಲಿ ಕೆಳ ಶ್ರೇಣಿಯಲ್ಲಿರುವ ಸಮುದಾಯಗಳು ಈ ಸಂಸ್ಥೆಗಳ ಬೆಂಬಲಿಗರಾಗುತ್ತಾರೆ. ಕ್ರಮೇಣ ಇಲ್ಲಿನ ಮುಖಂಡರು ದೇವಮಾನವರ ಸ್ಥಾನ ಪಡೆದು ಸಮುದಾಯದ ದೃಷ್ಟಿಯಲ್ಲಿ ಸರ್ವ ಸಂಕಷ್ಟ ನಿವಾರಕರಾಗಿ ಪರಿಣಮಿಸುತ್ತಾರೆ.

ಈ ಎರಡೂ ವರ್ಗಗಳ ನಡುವೆ ಕಂಡು ಬರುವ ಸ್ವಾಮ್ಯವೆಂದರೆ ರಾಜಕೀಯ ಹಿತಾಸಕ್ತಿ ಮತ್ತು ತಮ್ಮ ಸಾಂಸ್ಥಿಕ ಅಸ್ತಿತ್ವದ ರಕ್ಷಣೆ. ರಾಜಕೀಯ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಮೊದಲನೆ ವರ್ಗದ ಮುಖಂಡರು ವಿವಿಧ ಕೋಮುಗಳನ್ನು ಪ್ರತಿನಿಧಿಸಿದರೆ, ಎರಡನೆ ವರ್ಗದವರು ಸರ್ವಧರ್ಮ ಸಮಭಾವದ ಸೋಗಿನಲ್ಲಿ ಮೆರೆಯಲೆತ್ನಿಸುತ್ತಾರೆ.

ಹಾಗಾಗಿ ಭಾರತೀಯ ಸೆಕ್ಯುಲರಿಸಂ ಮತ್ತು ಮತೀಯತೆ ಎರಡೂ ತತ್ವಗಳು ಇಲ್ಲಿ ಶರಣಾಗುತ್ತವೆ. ನಿರ್ದಿಷ್ಟ ಕೋಮುಗಳನ್ನು ಓಲೈಸಲು ರಾಜಕೀಯ ಪಕ್ಷಗಳು ಮೊದಲನೆ ವರ್ಗವನ್ನು ಸಂತುಷ್ಟೀಕರಿಸಿದರೆ, ಇಡೀ ಸಮಾಜದ ತೃಪ್ತಿಗಾಗಿ ಎರಡನೆ ವರ್ಗವನ್ನು ಪೋಷಿಸುತ್ತದೆ. ಇನ್ನು ತಮ್ಮ ಸಾಂಸ್ಥಿಕ ಅಸ್ತಿತ್ವದ ರಕ್ಷಣೆಗೆ ಶಿಕ್ಷಣ ಸಂಸ್ಥೆಗಳು, ಸಮಾಜ ಸೇವಾ ಸಂಸ್ಥೆಗಳು, ಆಸ್ಪತ್ರೆ, ಅನಾಥಾಶ್ರಮ, ವೃದ್ಧಾಶ್ರಮ ಮುಂತಾದ ಜನಪರ ಎನಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲಾಗುತ್ತದೆ. ಜನಸೇವೆಯ ನೆಪದಲ್ಲಿ ಸರ್ಕಾರದಿಂದಲೂ ಉದಾರವಾದ ನೆರವು ಪಡೆಯಲಾಗುತ್ತದೆ. ಭಕ್ತಾದಿಗಳಿಂದ ಸಲ್ಲುವ ಕಾಣಿಕೆಗಳನ್ನೇ ಬಂಡವಾಳವನ್ನಾಗಿಸಿಕೊಂಡು ಈ ಸಂಸ್ಥೆಗಳು ಬೃಹತ್ ಉದ್ಯಮಗಳಂತೆ ಬೆಳೆಯುತ್ತವೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಪುಟ್ಟಪರ್ತಿ, ಬಾಬಾ ರಾಮ್‌ದೇವ್, ರವಿಶಂಕರ್, ದತ್ತಪೀಠ, ಚಿನ್ಮಯ ಮಿಷನ್ ಮುಂತಾದವು ಎರಡನೆ ವರ್ಗಕ್ಕೆ ಸೇರಿದರೆ, ಆದಿಚುಂಚನಗಿರಿ, ಜೆಎಸ್ಎಸ್, ಉಡುಪಿ ವಿದ್ಯಾಪೀಠ, ಕಂಚಿ ಮಠ, ಕ್ರೈಸ್ತ ಸಂಸ್ಥೆಗಳು ಇವೆಲ್ಲವೂ ಮೊದಲನೆ ವರ್ಗಕ್ಕೆ ಸೇರುತ್ತವೆ.

ಧಾರ್ಮಿಕ ಸಂಸ್ಥೆಗಳು, ಧಾರ್ಮಿಕ ಮುಖಂಡರು ರಾಷ್ಟ್ರ ರಾಜಕಾರಣದಲ್ಲಿ ವಹಿಸಬೇಕಾದ ಪಾತ್ರವೇನು ಎಂದು ಯೋಚಿಸುವಾಗ ಈ ಎರಡೂ ವರ್ಗಗಳನ್ನೂ ಗಮನದಲ್ಲಿರಿಸಿಕೊಳ್ಳುವುದು ಅಗತ್ಯವಾಗುತ್ತದೆ. ಇಲ್ಲಿ ರಾಜಕಾರಣ ಎಂದರೆ ಚುನಾವಣಾ ರಾಜಕೀಯ ಎಂಬ ಅರ್ಥದಲ್ಲೇ ನೋಡುವುದರ ಬದಲು, ಚುನಾವಣಾ ಪ್ರಕ್ರಿಯೆಗಳನ್ನು ಹೊರತುಪಡಿಸಿಯೂ ಒಂದು ರಾಜಕಾರಣದ ಸ್ಪೇಸ್ ಇದೆ ಎಂಬ ಅಂಶವನ್ನು ಪರಿಗಣಿಸಬೇಕಾಗಿದೆ. ಬಹುಸಂಸ್ಕೃತಿಯ ದೇಶವಾದ ಭಾರತದಂತಹ ಪ್ರಜಾತಾಂತ್ರಿಕ ರಾಷ್ಟ್ರದ ಸೆಕ್ಯುಲರ್ ರಾಜಕಾರಣದಲ್ಲಿ ಧಾರ್ಮಿಕ ಮುಖಂಡರು ಯಾವ ನಿಲುವು ಹೊಂದಿರಬೇಕು ಎನ್ನುವುದೂ ಮೂರ್ಖ ಪ್ರಶ್ನೆಯಾಗುತ್ತದೆ. ಸಂವಿಧಾನಾತ್ಮಕವಾಗಿ ನೋಡಿದರೆ ಭಾರತದ ರಾಜಕಾರಣ [illegible]ದಿ, ಸಮಾಜವಾದ, ಸಮಾನತೆ, ಜ್ಯಾತ್ಯಾತೀತತೆ ಮತ್ತು ಮತ ನಿರಪೇಕ್ಷತೆಗಳನ್ನು ಆಧರಿಸಿದೆ. ಜನತೆ ಮಾನ್ಯ ಮಾಡಿರುವ ಪ್ರಸಕ್ತ ಸಂಸದೀಯ ಸೆಕ್ಯುಲಾರ್ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಧಾರ್ಮಿಕ ಕೇಂದ್ರಗಳಿಗೆ ಒಂದು ಸ್ಥಾನ ಇರುವುದು ಸಾಧ್ಯವೇ ಎಂಬುದಷ್ಟೇ ಇಲ್ಲಿ ಮುಖ್ಯವಾಗುತ್ತವೆ.

ಭಾರತದ ಸಾಮಾಜಿಕ ಸನ್ನಿವೇಶದಲ್ಲಿ ಧಾರ್ಮಿಕ

ಕೇಂದ್ರಗಳೆಂದರೆ ಒಂದು ನಿರ್ದಿಷ್ಟವಾದ ಧರ್ಮವನ್ನು ಸಂಪೂರ್ಣವಾಗಿ ಪ್ರತಿನಿಧಿಸುವ ಸಾಂಸ್ಕೃತಿಕ ಅಥವಾ ಆಧ್ಯಾತ್ಮಿಕ ಕೇಂದ್ರಗಳೆಂದು ಪರಿಗಣಿಸಲಾಗುವುದಿಲ್ಲ. ಇದು ಎಲ್ಲಾ ಧಾರ್ಮಿಕ ಸಂಸ್ಥೆಗಳಿಗೂ ಸಲ್ಲುವಂತಹ ಆರೋಪ ಅಥವಾ ಸತ್ಯಾಂಶ. ಒಂದು ಧರ್ಮದ ಪರಿಧಿಯಲ್ಲಿ ಒಳ ಗೊಳ್ಳಲಾಗುವ ಉಪಜಾತಿಗಳ ಅಥವಾ ಪಂಗಡಗಳ ಹಿತಾ ಸಕ್ತಿಗಳನ್ನು ಪ್ರತಿನಿಧಿಸುವ ಮಠಗಳು ಭಾರತೀಯ ಸಮಾ ಜದ ವಾಸ್ತವ. ಈ ಧಾರ್ಮಿಕ ಕೇಂದ್ರಗಳ ಪ್ರಮುಖ ಉದ್ದೇಶ ತಾವು ಪ್ರತಿನಿಧಿಸುವ ಜಾತಿಗಳ ಅಥವಾ ಮತೀಯ ಸಮುದಾಯಗಳ ಕ್ರೋಢೀಕರಣ ಮತ್ತು ಕೆಲವು ಸಂದರ್ಭಗಳಲ್ಲಿ ಆಧ್ಯಾತ್ಮಿಕ ಉನ್ನತಿ ಮಾತ್ರವಾಗಿ ರುತ್ತದೆ. ಯಾವುದೇ ಮಠಗಳು ತಮ್ಮ ಜಾತೀಯ ಅಥವಾ ಮತೀಯ ಚೌಕಟ್ಟುಗಳನ್ನು ಮೀರಿ ತಮ್ಮ ಕಾರ್ಯವ್ಯಾಪ್ತಿ ಯನ್ನು ಗುರುತಿಸಿಕೊಂಡ ನಿದರ್ಶನ ಕಂಡುಬರುವುದಿಲ್ಲ.

ಹೆಚ್ಚೆಂದರೆ ತಮ್ಮ ಉನ್ನತ ಆದರ್ಶ ಮತ್ತು ದಾರ್ಶ ನಿಕತೆಯನ್ನು ಪ್ರದರ್ಶಿಸಿಕೊಳ್ಳಲು ಸಾರ್ವಜನಿಕವಾಗಿ ಇತರ ಸಮುದಾಯದ ವೇದಿಕೆಗಳಲ್ಲಿ ಕಾಣಿಸಿಕೊಂಡಿರಬಹುದು. ಅಥವಾ ತಾವು ನಡೆಸುವ ಶೈಕ್ಷಣಿಕ ಸಂಸ್ಥೆಗಳಲ್ಲಿ ಇತರರಿಗೆ ಅವಕಾಶ ನೀಡಿರಬಹುದು. ಆದರೂ ತಾತ್ವಿಕವಾಗಿ ಎಲ್ಲ ಮಠಮಾನ್ಯಗಳೂ ಒಂದು ವರ್ಗಕ್ಕೇ ಸೀಮಿತವಾಗಿರು ವುದು ಸತ್ಯ. ಈ ಶೈಕ್ಷಣಿಕ ಸಂಸ್ಥೆಗಳೂ ಉಳ್ಳವರ ಪರವಾ ಗಿರುವುದೇ ಹೊರತು, ಸಮುದಾಯದ ಬಡಜನತೆಯ ಪರವಾಗಿ ಅಲ್ಲ. ಕ್ಯಾಪಿಟೇಷನ್, ಡೊನೇಷನ್ ಹಾವಳಿ ಯಲ್ಲಿ ಮಠಗಳ ನಿಯಂತ್ರಣದಲ್ಲಿರುವ ಶೈಕ್ಷಣಿಕ ಸಂಸ್ಥೆ ಗಳೇ ಮುಂಚೂಣಿಯಲ್ಲಿರುವುದನ್ನು ಅಲ್ಲಗಳೆಯಲು ಆಗುವುದಿಲ್ಲ.

ಇನ್ನೊಂದೆಡೆ ಭಾರತೀಯ ಸಂಸದೀಯ ಪ್ರಜಾ ತಂತ್ರದಲ್ಲಿ ಮತೀಯವಾದಿಗಳ ಅಟ್ಟಹಾಸ ಎಷ್ಟೇ ಪ್ರಬಲ ವಾಗಿದ್ದರೂ, ಸೆಕ್ಯುಲಾರ್ ನೀತಿಗಳು ಇಂದಿಗೂ ಜೀವಂತ ವಾಗಿವೆ. ರಾಜಕೀಯ ಪಕ್ಷಗಳಿಗೆ ಕೋಮುವಾದ ಮತ್ತು ಮತೀಯವಾದಗಳು ಒಂದು ಅಸ್ತ್ರವಾಗಿರುವುದಾದರೂ, ಜನಸಾಮಾನ್ಯರು ತಮ್ಮ ಪ್ರಜಾತಾಂತ್ರಿಕ ಹಕ್ಕುಗಳನ್ನು ಚಲಾ ಯಿಸುವಾಗ ಇವುಗಳನ್ನು ಶಸ್ತ್ರವನ್ನಾಗಿ ಬಳಸುವುದಿಲ್ಲ. ಬದಲಾಗಿ ತಮ್ಮ ಸಂವಿಧಾನಾತ್ಮಕ ಹಕ್ಕುಗಳನ್ನು ಪ್ರಜಾ ತಂತ್ರದ ಚೌಕಟ್ಟಿನಲ್ಲೇ ಪ್ರಯೋಗಿಸುತ್ತಾರೆ. ಕೆಲವೊಮ್ಮೆ ಕೋಮುವಾದಿ ಪಕ್ಷ ಸಂಘಟನೆಗಳ ಪ್ರಚೋದನೆಗೆ ಬಲಿ ಯಾಗಿ ಮತೀಯ ಸಂಘರ್ಷದಲ್ಲಿ ತೊಡಗಿದರೂ, ಭಾರ ತೀಯ ಜನಸಾಮಾನ್ಯರಲ್ಲಿ ಬಹುತೇಕವಾಗಿ ಬಹುಮುಖೀ ಸಂಸ್ಕೃತಿ ಇನ್ನೂ ಮಾಸಿಲ್ಲ. ಭಾಜಪ ನೇತೃತ್ವದ ಎನ್‌ಡಿಎ ಆಳ್ವಿಕೆಯಲ್ಲಿ ಸಂವಿಧಾನವನ್ನು ಪುನಾರಚಿಸಲು ಧರ್ಮ ಸಂಸತ್ ಆಗ್ರಹಿಸಿದರೂ ಭಾರತೀಯ ಜನತೆ ತಿರಸ್ಕರಿಸಿ ದ್ದನ್ನು ಇಲ್ಲಿ ಸ್ಮರಿಸಬಹುದು.

ಇತ್ತೀಚಿನ ದಿನಗಳಲ್ಲಿ ಮತೀಯ ಸಂಘರ್ಷ ಮತ್ತು ಭಯೋತ್ಪಾದಕ ಕೃತ್ಯಗಳ ಸಂದರ್ಭಗಳಲ್ಲೂ ಸಾಮಾನ್ಯ ಜನತೆ ತಮ್ಮ ಅಸ್ಮಿತೆಗಳನ್ನು ಮೀರಿ ನಿಂತಿರುವುದು ವಾರ ಣಾಸಿ, ಮುಂಬೈಗಳಲ್ಲಿ ವ್ಯಕ್ತವಾಗಿದೆ. ಸಮಾಜದ ಉನ್ನತಿಗೆ ಈ ಮನೋಭಾವವನ್ನು ಗಟ್ಟಿಗೊಳಿಸುವುದು ಇಂದಿನ ಅಗ ತ್ಯತೆಯಾಗಿದೆ. ಆದರೆ ಈ ಕಾರ್ಯ ಚುನಾವಣಾ ರಾಜಕೀ ಯದ ಚೌಕಟ್ಟಿನಿಂದ ಹೊರತಾದುದು.

ಈ ಮಹತ್ತರ ಕಾರ್ಯವನ್ನು ನಿರ್ವಹಿಸಲು ಶ್ರಮಿ ಸುವ ಯಾವುದೇ ಸಂಸ್ಥೆಯಾದರೂ ಜಾತಿ, ಧರ್ಮ, ಭಾಷೆ ಮತ್ತು ಪ್ರಾಂತೀಯ ಭಾವನೆಗಳಿಂದ ಮುಕ್ತವಾಗಿರು ವುದು ಅತ್ಯವಶ್ಯ. ಈ ಪ್ರಕ್ರಿಯೆಯನ್ನು ರಾಜಕಾರಣದ ಪರಿಧಿಯಿಂದ ಹೊರಗಿಟ್ಟು ನೋಡುವುದಕ್ಕಿಂತಲೂ ಅದರ ಒಂದು ಅಂಶಿಕ ಭಾಗವಾಗಿಯೇ ಪರಿಗಣಿಸಿದಲ್ಲಿ ರಾಜಕೀ ಯದ ಪರಿಪೂರ್ಣತೆಯನ್ನು ಗ್ರಹಿಸಬಹುದು. ಇಂದು ದೇಶ ಎದುರಿಸುತ್ತಿರುವ ಜಾತಿ ವೈಷಮ್ಯ, ಮತೀಯ ಸಂಘರ್ಷ, ಧರ್ಮಾಂಧತೆ, ಕೋಮುವಾದಿ ಫ್ಯಾಸಿಸಂ, ಭಯೋತ್ಪಾದನೆ, ಸಾಂಸ್ಕೃತಿಕ ಆರಕ್ಷಕತೆ, ಮಹಿಳೆ–ದಲಿ ತರು–ಅಲ್ಪಸಂಖ್ಯಾತರು ಮತ್ತು ಬಲಹೀನ ಸಮುದಾಯ ಗಳ ಮೇಲಿನ ದೌರ್ಜನ್ಯ, ಪ್ರಾಂತೀಯ ಮನೋಭಾವ ಎಲ್ಲವೂ ಚುನಾವಣಾ ರಾಜಕೀಯದ ಪರಿಣಾಮವಾಗಿ ಮತ್ತು ಸಮಾಜದಲ್ಲಿ ಅಂತರ್ಗತವಾಗಿರುವ ಅಸಮಾನ ತೆಯ ಪರಿಣಾಮವಾಗಿ ಹೊರಹೊಮ್ಮಿವೆ. ಈ ಸಾಮಾಜಿಕ ಅನಿಷ್ಟಗಳನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಶ್ರಮಿಸುತ್ತಿರುವ ಅನೇಕ ಸಂಸ್ಥೆಗಳು ದೇಶಾದ್ಯಂತ ಹರಡಿವೆ. ಹಲವೆಡೆ ಯಶಸ್ಸನ್ನೂ ಕಂಡಿವೆ. ಆದರೆ ಈ ಸಂಸ್ಥೆಗಳೊಡನೆ ಗುರು ತಿಸಿಕೊಂಡಿರುವ ಧಾರ್ಮಿಕ ಸಂಸ್ಥೆಗಳು, ಆಧ್ಯಾತ್ಮಿಕ ವ್ಯಕ್ತಿ ಗಳು ಬೆರಳೆಣಿಕೆಯಷ್ಟು.

ಮಠಾಧೀಶರು, ಮಠಮಾನ್ಯಗಳು ಮತ್ತು ಧಾರ್ಮಿಕ ಕೇಂದ್ರಗಳ ರಾಜಕೀಯ ಪ್ರಜ್ಞೆ ಇಲ್ಲಿ ಹೆಚ್ಚು ಪ್ರಸ್ತುತವೆನಿಸು ತ್ತದೆ. ಜಗದ್ಗುರುಗಳೆಂದು ತಮ್ಮನ್ನು ತಾವೇ ಗುರುತಿಸಿ ಕೊಂಡಿರುವ ಅಸಂಖ್ಯಾತ ಮಠಾಧೀಶರುಗಳು ಧಾರ್ಮಿಕ –ಜಾತೀಯ ಅಸ್ಮಿತೆಗಳಿಂದಲೇ ತಮ್ಮ ಸಂಸ್ಥೆಗಳನ್ನು ಗುರು ತಿಸಿಕೊಳ್ಳುತ್ತಾರೆ. ಜಗದ್ಗುರುಗಳೆಂದು ಪರಿಗಣಿಸಲ್ಪಡುವ ವರು ಒಂದು ನಿರ್ದಿಷ್ಟ ಸಮುದಾಯವನ್ನು ಮಾತ್ರ ಪ್ರತಿ ನಿಧಿಸುವುದು ವಿಡಂಬನೆಯಲ್ಲವೇ? ಸಮಸ್ತ ಹಿಂದೂಗ ಳನ್ನು ಅಥವಾ ಭಾರತೀಯರನ್ನೂ ಪ್ರತಿನಿಧಿಸುವ ಸೋಗು ಹಾಕುವ ಸ್ವಾಮೀಜಿಗಳು ತಮ್ಮ ಮೂಲಬೇರಿನ ಅಸ್ಮಿತೆಗ ಳಿಗೆ ಜೋತು ಬೀಳುತ್ತಾರೆ. ಜಾತ್ಯಾತೀತತೆಯಲ್ಲಿ ನಂಬಿಕೆ ವ್ಯಕ್ತಪಡಿಸುತ್ತಲೇ ತಮ್ಮ ಆಚರಣೆ ಮತ್ತು ಸಂಪ್ರದಾಯಗ ಳಲ್ಲಿ ಒಂದು ನಿರ್ದಿಷ್ಟ ಕೋಮಿನ ಆಚರಣೆಗಳನ್ನು ಪಾಲಿ ಸುತ್ತಾರೆ. ಯಾವುದೇ ಒಂದು ಮಠದಲ್ಲೂ ಇತರ ಜಾತಿ– ಸಮುದಾಯಗಳ ಸಾಂಪ್ರದಾಯಿಕ ಆಚರಣೆಗಳನ್ನು ಅನು ಸರಿಸುವ ನಿದರ್ಶನಗಳಿಲ್ಲ.

> **ಭಾರತೀಯ ಸಂಸದೀಯ ಪ್ರಜಾ ತಂತ್ರದಲ್ಲಿ ಮತೀಯವಾದಿಗಳ ಅಟ್ಟಹಾಸ ಎಷ್ಟೇ ಪ್ರಬಲವಾಗಿದ್ದರೂ, ಸೆಕ್ಯುಲಾರ್ ನೀತಿಗಳು ಇಂದಿಗೂ ಜೀವಂತವಾಗಿವೆ. ರಾಜಕೀಯ ಪಕ್ಷಗಳಿಗೆ ಕೋಮುವಾದ ಮತ್ತು ಮತೀಯವಾದಗಳು ಒಂದು ಅಸ್ತ್ರವಾಗಿರುವುದಾದರೂ, ಜನಸಾಮಾನ್ಯರು ತಮ್ಮ ಪ್ರಜಾತಾಂತ್ರಿಕ ಹಕ್ಕುಗಳನ್ನು ಚಲಾಯಿಸುವಾಗ ಇವುಗಳನ್ನು ಶಸ್ತ್ರವನ್ನಾಗಿ ಬಳಸುವುದಿಲ್ಲ. ಬದಲಾಗಿ ತಮ್ಮ ಸಂವಿಧಾನಾತ್ಮಕ ಹಕ್ಕುಗಳನ್ನು ಪ್ರಜಾತಂತ್ರದ ಚೌಕಟ್ಟಿನಲ್ಲೇ ಪ್ರಯೋಗಿಸುತ್ತಾರೆ.**

ಮಠಗಳು ಮತ್ತು ಅಸ್ಪೃಶ್ಯತೆ

ಇನ್ನು ಕೆಲವು ಮಠಗಳು ಮತ್ತು ಮಠಾಧೀಶ ರುಗಳು ಭಾರತೀಯತೆ, ರಾಷ್ಟ್ರೀಯತೆ, ದೇಶಪ್ರೇಮದ ಬಗ್ಗೆ ಪುಂಖಾನುಪುಂಖವಾಗಿ ಉಪನ್ಯಾಸ ಮಾಡಿದರೂ ಭಾರತದ ಬಹುಮುಖೀ ಸಂಸ್ಕೃತಿಗೆ ವಿರುದ್ಧವಾಗಿಯೇ ನಡೆದುಕೊಳ್ಳುವುದೂ ಭಾರತೀಯ ಜನತೆ ಕಂಡಿರುವ ಸತ್ಯ. ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಸಂಕಲ್ಪ ತೊಡುವ ಸೋಗಿನಲ್ಲೇ ಗರ್ಭಗುಡಿ ಸಂಸ್ಕೃತಿಯನ್ನು ಪೋಷಿಸಿ ಬೆಳೆಸುವ ಈ ಮಠಾಧೀಶರುಗಳು, ದೈಹಿಕ ಅಪ್ಪುಗೆ ಅಸ್ಪೃಶ್ಯತೆಯನ್ನು ಹೋಗಲಾಡಿಸುವುದಿಲ್ಲ, ಮಾನ ಸಿಕ ಮತ್ತು ಸಾಂಸ್ಕೃತಿಕ ಪರಿವರ್ತನೆಯೇ ಇದಕ್ಕೆ ಸಿದ್ಧೌ ಷದ ಎಂಬ ಸತ್ಯವನ್ನೇಕೆ ಗ್ರಹಿಸುವುದಿಲ್ಲ? ಭಾರತೀಯ ರೆಲ್ಲರೂ ಒಂದೇ ಎಂದು ಬೋಧಿಸುವ ಮಠಾಧಿಪತಿಗಳು ಇಡೀ ಭಾರತೀಯರನ್ನು ಒಳಗೊಳ್ಳುವಂತಹ ಸಾಂಸ್ಕೃತಿಕ ವಾತಾವರಣವನ್ನು ನಿರ್ಮಿಸಲು ಏಕೆ ಯತ್ನಿಸುವುದಿಲ್ಲ? ಹಸಿದವರ ಹೊಟ್ಟೆಯನ್ನು ಉಪನ್ಯಾಸಗಳಿಂದಲೇ ಭರಿಸುವ ಮಠಾಧೀಶರುಗಳು, ಔದ್ಯಮಿಕ ದೃಷ್ಟಿಕೋನದ ಶಾಲಾಕಾ ಲೇಜು–ಆಸ್ಪತ್ರೆಗಳನ್ನು ತೆರೆಯುವುದರ ಬದಲು, ತಮ್ಮ ಸಂಸ್ಥೆಗಳು ಕೂಡಿಟ್ಟಿರುವ ಕೋಟ್ಯಾಂತರ ರೂಗಳ ಸ್ಥಿರಾಸ್ತಿ, ಚರಾಸ್ತಿಗಳನ್ನೇಕೆ ಬಡಜನತೆಗೆ ಉಪಯುಕ್ತಗಾ ಗುವ ರೀತಿಯಲ್ಲಿ ವಿನಿಯೋಗಿಸುವುದಿಲ್ಲ?

ಪೇಜಾವರರು ತಮ್ಮ ಚಾತುರ್ಮಾಸ್ಯ ವ್ರತ ಆಚರಿ ಸುವ ಸಂದರ್ಭದಲ್ಲಿ ದಲಿತ ಕೇರಿಗಳಿಗೆ ಪಾದಯಾತ್ರೆ ಕೈಗೊಂಡಿರುವುದೂ ಸಹ ಇದೇ ಸೋಗಲಾಡಿತನದ ಕುರುಹಾಗಿದೆ. ರಾಜ್ಯ ಸರ್ಕಾರ ಜಾರಿಗೆ ತರಲೆತ್ನಿಸಿರುವ ಗೋಹತ್ಯಾ ನಿಷೇಧ ಮಸೂದೆಗೆ ದಲಿತರ ಬೆಂಬಲ ಗಳಿ ಸಲು ಇದೊಂದು ಹುನ್ನಾರವೆಂದು ಹೇಳಬೇಕಿಲ್ಲ. ದಲಿತ ರನ್ನು, ಅಸ್ಪೃಶ್ಯರನ್ನು ಹಿಂದೂ ಧರ್ಮದಲ್ಲೇ ಉಳಿಸಿ ಕೊಂಡು, ಮತಾಂತರವನ್ನು ತಪ್ಪಿಸುವ ಸಂಘಪರಿವಾರದ ಕಾರ್ಯಸೂಚಿಯ ಅಂಗವಾಗಿ ದಲಿತ ಕೇರಿಗಳಿಗೆ ತೆರಳಿ ಅವರನ್ನು ಸಂತೈಸುವುದರ ಮೂಲಕ, ಹಿಂದೂ ಧರ್ಮ ತನ್ನ ಸನಾತನಿ ಪೊರೆಯನ್ನು ಕಳಚಿಕೊಂಡು ಆಧುನಿಕ ಸೆಕ್ಯುಲರ್ ಸ್ವರೂಪವನ್ನು ಪಡೆದುಕೊಂಡಿದೆ ಎಂದು ಸಾಬೀತುಪಡಿಸುವುದು ಈ ಕಾರ್ಯಕ್ರಮದ ಮೂಲ ಉದ್ದೇಶವಾಗಿರುತ್ತದೆ.

ಪೇಜಾವರರ ಈ ಕ್ರಮವನ್ನು ಹೃತ್ಪೂರ್ವಕವಾಗಿ ಶ್ಲಾಘಿಸಿ, ಸ್ವಾಗತಿಸಿರುವ ಕೇರಿಯ ಕೆಲವು ಮುಖಂಡರು ಸ್ವಾಮೀಜಿಯವರ ಭೇಟಿಯಿಂದ ಪುಳಕಿತರಾದಂತೆ ತೋರುತ್ತದೆ. ಪೇಜಾವರರನ್ನು ಸ್ವಾಗತಿಸಲು ರಸ್ತೆಗಳನ್ನು ಸ್ವಚ್ಛಗೊಳಿಸಿ, ತಳಿರು ತೋರಣಗಳಿಂದ ಸಿಂಗರಿಸಿ, ಅವ ರಿಗೆ ಪಾದ ಪೂಜೆ ಸಲ್ಲಿಸುವ ಮೂಲಕ ಧನ್ಯತೆಯ ಭಾವ ಮೆರೆದಿದ್ದಾರೆ. ಶ್ರೀಗಳೂ ಸಹ ಪುಟ್ಟ ಮಕ್ಕಳ ಬೆನ್ನು ತಟ್ಟಿ ಉತ್ತೇಜಿಸುವ ಮೂಲಕ ಔದಾರ್ಯತೆ (?) ಮೆರೆದಿದ್ದಾರೆ. ಕೆಲವು ದಲಿತ–ಹಿಂದುಳಿದ ವೇದಿಕೆಯ ಮುಖಂಡರೂ ಈ ಭೇಟಿಯನ್ನು ಷರತ್ತುಬದ್ಧವಾಗಿ ಶ್ಲಾಘಿಸಿದ್ದಾರೆ.

ಇಲ್ಲಿ ಹಲವು ಪ್ರಶ್ನೆಗಳು ಗಾಢವಾಗಿ ಕಾಡುತ್ತವೆ. ಪೇಜಾವರರು ತಮ್ಮ ಸ್ವಂತ ನಿರ್ಧಾರದಿಂದ ವ್ಯಕ್ತಿಗತವಾದ ನಿಲುವಿನಿಂದ ದಲಿತ ಕೇರಿಯನ್ನು ಭೇಟಿ ಮಾಡಿದ ಮಾತ್ರಕ್ಕೆ ಅಸ್ಪೃಶ್ಯತೆಯ ನಿವಾರಣೆಗೆ ಹೊಸ ಆಯಾಮ ದೊರಕುವುದು ಸಾಧ್ಯವೇ ? ಪೇಜಾವರರು ಮಾಧ್ವ ಸಂಪ್ರದಾಯಸ್ಥರು, ಬ್ರಾಹ್ಮಣರಲ್ಲೇ ಇತರ ಸಂಪ್ರದಾಯಗ

ಳನ್ನು ಒಪ್ಪಿಕೊಂಡರೂ ಅಪ್ಪಿಕೊಳ್ಳುವವರಲ್ಲ. ಅಥವಾ ಹಿಂದೂ ಧರ್ಮದ ಐಕ್ಯತೆಯ ಹೆಸರಿನಲ್ಲಿ ಸಮಾನ ಧಾರ್ಮಿಕ ಸಂಹಿತೆಯನ್ನಾಗಲೀ, ವಿಧಿ ವಿಧಾನ ಆಚರಣೆಗಳನ್ನಾಗಲೀ ಅನುಮೋದಿಸುವವರಲ್ಲ. ಹೀಗಿರುವಾಗ ಅವರು ದಲಿತ ಕೇರಿಗೆ ಭೇಟಿ ನೀಡಿದ ಮಾತ್ರಕ್ಕೆ ಹಿಂದೂ ಧರ್ಮವೇ ದಲಿತರನ್ನು ಅಪ್ಪಿಕೊಂಡಂತಾಗುವುದೇ, ಒಪ್ಪಿಕೊಂಡಂತಾಗುವುದೇ? ಬ್ರಾಹ್ಮಣಶಾಹಿಯ ಒಂದು ಆಯಾಮವನ್ನಷ್ಟೇ ಪೇಜಾವರರು ಪ್ರತಿನಿಧಿಸುತ್ತಾರೆ. ಅದೂ ಅವರ ಹೆಡ್ ಆಫೀಸ್ ಉಡುಪಿಯಲ್ಲಿ ಅಲ್ಲ. ಅಥವಾ ಉಡುಪಿಯ ಕೃಷ್ಣ ದೇವಾಲಯದಲ್ಲಲ್ಲ. ಹೀಗಿರುವಾಗ ಅವರ ಹೆಜ್ಜೆಯನ್ನೇ ಬ್ರಾಹ್ಮಣಶಾಹಿಯ ಸುಧಾರಿತ ನಡೆ ಎಂದು ಭಾವಿಸಲು ಸಾಧ್ಯವೇ ?

ಮತ್ತೊಂದೆಡೆ ಪೇಜಾವವರ ಭೇಟಿಯನ್ನು ಸುಧಾರಿತ ನಡೆ ಎಂದು ಭಾವಿಸುವ ದಲಿತ ಸಮುದಾಯಗಳು ಯೋಚಿಸಬೇಕಾದ ಸಂಗತಿ ಎಂದರೆ, ಆಯ್ಕೆ ಮಾಡಿದ ಕೇರಿಗೇ ಏಕೆ ಪ್ರವೇಶಿಸಬೇಕು. ಹಠಾತ್ತನೆ ಯಾರಿಗೂ ತಿಳಿಸದೆಯೇ ಪೇಜಾವರರು ದಲಿತ ಕೇರಿಗೆ ಪ್ರವೇಶಿಸಬಹುದಲ್ಲವೇ ? ರಸ್ತೆ ಸ್ವಚ್ಛಗೊಳಿಸಿ ತಳಿರು ತೋರಣಗಳಿಂದ ತಾಳ ಮೇಳಗಳೊಡನೆ ಸ್ವಾಗತ ಪಡೆಯಲು ಪೂರ್ವ ನಿರ್ಧರಿತ ಕೇರಿಗೆ ಭೇಟಿ ನೀಡುವುದು ರಾಜಕಾರಣದ ಲಕ್ಷಣವೇ ಹೊರತು, ಧರ್ಮನಿಷ್ಠೆಯ ಲಕ್ಷಣವಲ್ಲ ! ದಲಿತ ಕೇರಿಗೆ ಭೇಟಿ ನೀಡಿದ ನಂತರ ಪೇಜಾವರರು ಶುದ್ಧೀಕರಣ ಪ್ರಕ್ರಿಯೆ ಮಾಡಿಕೊಳ್ಳುವುದಿಲ್ಲ ಎಂಬ ಖಾತರಿ ಏನು? ಹಾಗೊಮ್ಮೆ ಶುದ್ಧೀಕರಣ ಮಾಡಿಕೊಳ್ಳುವುದಿಲ್ಲ ಎಂಬ ಆಶ್ವಾಸನೆಯನ್ನು ಪೇಜಾವರರು ನೀಡುತ್ತಾರೆಯೇ?

ಈ ಪ್ರಶ್ನೆಗಳೊಡನೆಯೇ ಪೇಜಾವರರ ಪಾದಯಾತ್ರೆಯ ಸಂದರ್ಭದಲ್ಲಿ ಅವರ ಮಾತುಗಳನ್ನೂ ಗಮನಿಸಬೇಕು. " ಸಾಮಾಜಿಕ ಸಾಮರಸ್ಯ ಮತ್ತು (ದಲಿತರನ್ನು) ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ದಲಿತರಿಗೆ ವೈಷ್ಣವ ದೀಕ್ಷೆ ನೀಡಲು ಸಿದ್ಧ, ದಲಿತ ಬಂಧುಗಳು ಮಂತ್ರ ಶ್ಲೋಕಗಳನ್ನು ಕಲಿತು ಜ್ಞಾನ ವೃದ್ಧಿಸಿಕೊಂಡು ಪೂಜೆ ಕಾರ್ಯದಲ್ಲಿ ಪಾಲ್ಗೊಳ್ಳಬೇಕು, ಸಾಮೂಹಿಕ ಭಜನೆಯಲ್ಲಿ ಪಾಲ್ಗೊಳ್ಳಬೇಕು. ಇದರಿಂದ ಹಿಂದೂ ಧರ್ಮದ ಬಗ್ಗೆ ಅಭಿಮಾನ ಮೂಡಿಸುವುದೇ ಅಲ್ಲದೆ ಕೀಳರಿಮೆ ಹೋಗುತ್ತದೆ" ಎಂದು ಪೇಜಾವರರು ಹೇಳಿದ್ದಾರೆ. ಇದರ ಅರ್ಥವೇನು? ಒಂದೆಡೆ ಮತಾಂತರವನ್ನು ವಿರೋಧಿಸಬೇಕು, ತಡೆಗಟ್ಟಬೇಕು ಎಂದು ಹೇಳುವ ಪೇಜಾವರರು ದಲಿತರಿಗೆ ವೈಷ್ಣವ ದೀಕ್ಷೆ ನೀಡುವ ಮಾತನಾಡುವುದು ಎಷ್ಟು ಸರಿ? ಇದೂ ಒಂದು ರೀತಿ ಮತಾಂತರವೇ ಅಲ್ಲವೇ? ನಮ್ಮ ಮಾರ್ಗವನ್ನು ಒಪ್ಪಿಕೊಳ್ಳಿ, ನಿಮ್ಮನ್ನು ಅಪ್ಪಿಕೊಳ್ಳುತ್ತೇವೆ ಎಂದು ಹೇಳಿರುವುದು ಸಾತ್ವಿಕರಿಗೆ ತರವೇ?

ಭಾರತೀಯ ಶ್ರೇಣೀಕೃತ ಸಮಾಜದಲ್ಲಿ ಅಸ್ಪೃಶ್ಯರಿಗೆ, ದಲಿತರಿಗೆ ಬೇಕಿರುವುದು ದೀಕ್ಷೆ, ಮಂತ್ರ ಬೋಧನೆಗಳಲ್ಲ. ಮಂತ್ರ ಶ್ಲೋಕಗಳನ್ನು ಕಲಿತು ಜ್ಞಾನ ವೃದ್ಧಿಸಿಕೊಳ್ಳಿ ಎಂದರೆ ಜ್ಞಾನ ವೃದ್ಧಿಗೆ ಅನ್ಯಮಾರ್ಗ ಇಲ್ಲವೆಂದು ಅರ್ಥವೋ ಅಥವಾ ದಲಿತರಿಗೆ ಸ್ವಾಭಾವಿಕವಾಗಿ ಒದಗಿಬಂದಿರುವ ಕಸುಬು ಆಧಾರಿತ ಜ್ಞಾನ ಮೌಲ್ಯರಹಿತ ಎಂದು ಅರ್ಥವೋ? ಸಾಮಾಜಿಕ ಸಾಮರಸ್ಯಕ್ಕಾಗಿ ಪೇಜಾವರರು ದಲಿತರಿಗೆ ವೈಷ್ಣವ ದೀಕ್ಷೆ ನೀಡಲು ಸಿದ್ಧರಾಗಿದ್ದರೆ, ಕ್ರೈಸ್ತ ಮಿಷನರಿಗಳು ಮಾಡುವುದೂ ಇದನ್ನೇ ತಾನೆ? ಹಾಗಾದರೆ ಮತಾಂತರವನ್ನು ವಿರೋಧಿಸುವುದೇಕೆ? ವೈಷ್ಣವ ದೀಕ್ಷೆ ಸ್ವೀಕರಿಸದೆ, ದಲಿತರು ತಮ್ಮ ಪಾರಂಪರಿಕ ಆಚರಣೆ ಮತ್ತು ಸಂಪ್ರದಾಯಗಳನ್ನೇ ಪಾಲಿಸಿದರೆ ಸಾಮಾಜಿಕ ಸಾಮರಸ್ಯ ಮೂಡಲಾರದೇ? ಹಾಗೆ ಮೂಡು ವುದಿಲ್ಲ ಎನ್ನುವುದಾದರೆ ಅಂತಹ ಸಮಾಜವನ್ನು ನಾಗರಿಕ, ಸ್ವಾಸ್ಥ್ಯ ಸಮಾಜವೆಂದು ಹೇಳಲಾಗುವುದೇ?

ಭಾರತದ ಜಾತಿ ವ್ಯವಸ್ಥೆಯ ಮೂಲ ತಳಹದಿಯಾಗಿ ಶತಮಾನಗಳಿಂದ ಕಾಡುತ್ತಿರುವ ಅಸ್ಪೃಶ್ಯತೆಯ ಮೂಲವನ್ನು ಪೇಜಾವರರಾಗಲೀ, ಅವರ ಅನುಯಾಯಿಗಳಾಗಲೀ ಗ್ರಹಿಸಿಯೇ ಇಲ್ಲ. ಭಾರತದಲ್ಲಿ ಅಸ್ಪೃಶ್ಯರಿಗೆ ಸ್ಪರ್ಶಿಸಲ್ಪಡುವ ಹಕ್ಕು ಲಭ್ಯವಾಗಿದೆ, ಅದೂ ಅನಿವಾರ್ಯತೆಗಳಿಂದ, ಸಾಂವಿಧಾನಿಕ ನಿಯಮಗಳಿಂದ. ಆದರೆ ಸ್ಪರ್ಶಿಸುವ ಹಕ್ಕು ಇಂದಿಗೂ ಲಭ್ಯವಾಗಿಲ್ಲ. ಹಾಗಾಗಿಯೇ ಪೇಜಾವರರು ದಲಿತ ಕೇರಿಗೆ ಭೇಟಿ ನೀಡುತ್ತಾರೆ, ಆದರೆ ಉಡುಪಿ ಕೃಷ್ಣ ಮಂದಿರದ ಗರ್ಭಗುಡಿಗೆ ದಲಿತರನ್ನು ಸೇರಿಸುವುದಿಲ್ಲ. ತಮ್ಮ ಮಠಗಳಲ್ಲಿ ಇಂದಿಗೂ ಬ್ರಾಹ್ಮಣರಿಗೆ, ಅದೂ ಪಂಚೆ ಉಟ್ಟು, ಜನಿವಾರ ತೊಟ್ಟ ಬ್ರಾಹ್ಮಣರಿಗೆ ಪ್ರತ್ಯೇಕವಾಗಿ ಊಟ ಬಡಿಸುವ ಪರಂಪರೆಯನ್ನು ಪಾಲಿಸಿಕೊಂಡು ಬಂದಿರುವ ಮಧ್ವ ಮತದ ಅನುಯಾಯಿಗಳು, ಮಠಗಳಲ್ಲಿ ದಲಿತರೊಡನೆ ಸಹಪಂಕ್ತಿ ಭೋಜನ ಸ್ವೀಕರಿಸುವರೇ? ಪೇಜಾವರರು ಇದರ ನೇತೃತ್ವ ವಹಿಸುವರೇ? ವೈಷ್ಣವ ದೀಕ್ಷೆ ಪಡೆಯದೆ ತಮ್ಮ ಸ್ವಇಚ್ಛೆಯಿಂದ ಮಂತ್ರ ಶ್ಲೋಕಗಳನ್ನು ಕಲಿತ ದಲಿತರಿಗೆ ಮಠಗಳಲ್ಲಿ, ದೇವಾಲಯಗಳಲ್ಲಿ ಪೌರೋಹಿತ್ಯದ ಹಕ್ಕು ನೀಡುತ್ತಾರೆಯೇ? ಇದು ಅಸಾಧ್ಯದ ಮಾತು.

ಭಾರತದ ಜಾತಿ ವ್ಯವಸ್ಥೆಯ ಮೂಲ ತಳಹದಿ ಯಾಗಿ ಶತಮಾನಗಳಿಂದ ಕಾಡುತ್ತಿರುವ ಅಸ್ಪೃಶ್ಯತೆಯ ಮೂಲವನ್ನು ಪೇಜಾವರರಾಗಲೀ, ಅವರ ಅನುಯಾಯಿಗ ಳಾಗಲೀ ಗ್ರಹಿಸಿಯೇ ಇಲ್ಲ. ಭಾರತದಲ್ಲಿ ಅಸ್ಪೃಶ್ಯರಿಗೆ ಸ್ಪರ್ಶಿ ಸಲ್ಪಡುವ ಹಕ್ಕು ಲಭ್ಯವಾಗಿದೆ, ಅದೂ ಅನಿವಾರ್ಯತೆ ಗಳಿಂದ, ಸಾಂವಿಧಾನಿಕ ನಿಯಮಗಳಿಂದ. ಆದರೆ ಸ್ಪರ್ಶಿ ಸುವ ಹಕ್ಕು ಇಂದಿಗೂ ಲಭ್ಯವಾಗಿಲ್ಲ. ಹಾಗಾಗಿಯೇ ಪೇಜಾವರರು ದಲಿತ ಕೇರಿಗೆ ಭೇಟಿ ನೀಡುತ್ತಾರೆ, ಆದರೆ ಉಡುಪಿ ಕೃಷ್ಣ ಮಂದಿರದ ಗರ್ಭಗುಡಿಗೆ ದಲಿತರನ್ನು ಸೇರಿಸುವುದಿಲ್ಲ.

ಹಾಗಾದಲ್ಲಿ ಈ ಸೋಗಲಾಡಿತನವೇಕೆ? ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಬೇಕಿರುವುದು ಪಾದಯಾತ್ರೆ, ಕೇರಿಗಳ ಭೇಟಿ, ಸಾಂತ್ವನಗಳಲ್ಲ. ಇದರಿಂದ ಪ್ರಚಾರ ಗಿಟ್ಟಿಸಬಹುದಷ್ಟೇ. ದಲಿತರ ಮೇಲೆ ಎಲ್ಲೇ ದೌರ್ಜನ್ಯ ನಡೆದರೂ ಉಪವಾಸ ಮಾಡುತ್ತೇವೆ ಎಂದು ಹೇಳುವ ಪೇಜಾವರರು ಈವರೆಗೂ ಎಷ್ಟು ದಿನ ಈ ಕಾರಣಕ್ಕಾಗಿ ಉಪವಾಸ ಮಾಡಿದ್ದಾರೆ? ಸವಣೂರಿಗೆ ತೆರಳಿ ಅಲ್ಲಿನ ಭಂಗಿಗಳಿಗೆ ಏಕೆ ಸಾಂತ್ವನ ಹೇಳಿಲ್ಲ. ಬೆಂಗಳೂರಿನ ಭಿಕ್ಷುಕರ ಕಾಲೋನಿಗೆ ತೆರಳಿ ಏಕೆ ಸಂತೈಸಿಲ್ಲ? ಇದು ಪೇಜಾವರರಿಗಷ್ಟೇ ಅನ್ವಯಿಸುವ ಪ್ರಶ್ನೆಗಳಲ್ಲ. ಇಡೀ ಬ್ರಾಹ್ಮಣಶಾಹಿಯ ಮಠಾಧೀಶರಿಗೆ ಅನ್ವಯಿಸುತ್ತದೆ.

ಮಠಾಧೀಶರ ಇಂತಹ ನಾಟಕೀಯ ನಡುವಳಿಕೆಯಿಂದ ಜಾತಿ ವ್ಯವಸ್ಥೆಯ ಭಂಗವಾಗುತ್ತದೆ, ಅಸ್ಪೃಶ್ಯತೆ ಅಳಿಯುತ್ತದೆ ಎಂದು ಭಾವಿಸುವುದು ಸೈದ್ಧಾಂತಿಕ ದೀವಾಳಿತನದ ಲಕ್ಷಣವಷ್ಟೆ. ದಲಿತರನ್ನು ಮತಾಂತರದಿಂದ ತಪ್ಪಿಸಿ ಹಿಂದೂ ಧರ್ಮದಲ್ಲಿ ಉಳಿಸಿಕೊಳ್ಳುವ ಸಂಘಪರಿವಾರದ ಕಾರ್ಯಸೂಚಿಯನ್ನು ಅನುಷ್ಠಾನಗೊಳಿಸುವ ಈ ತಂತ್ರಗಾರಿಕೆಯನ್ನು ಸರಿಯಾಗಿ ಗ್ರಹಿಸದೆ ಹೋದಲ್ಲಿ, ದಲಿತ ಸಮುದಾಯಗಳು ತಮ್ಮ ಅಸ್ತಿತ್ವವನ್ನಷ್ಟೇ ಅಲ್ಲದೆ ಅಸ್ಮಿತೆಯನ್ನೂ ಕಳೆದುಕೊಳ್ಳಬೇಕಾಗಬಹುದು.

ಪ್ರತಿಯೊಂದು ಐಷಾರಾಮಿ ಕಟ್ಟಡದ ಹಿಂದೆಯೂ ಒಂದು ಕೊಳೆಗೇರಿ ಇರುತ್ತದೆ ಎಂಬ ಗಾದೆ ಮಾತಿದೆ, ಹಾಗೆ ಪ್ರತಿಯೊಂದು ಧಾರ್ಮಿಕ ಕೇಂದ್ರಗಳ ಹಿಂದೆಯೂ ಒಂದು ಕೇರಿ ಇರುತ್ತದೆ. ಧರ್ಮಾಂಧರ ಮನದೊಳಗೂ ಒಂದು ಅವ್ಯಕ್ತ ಕೇರಿ ಇರುತ್ತದೆ. ತಮ್ಮ ಮನಃಶುದ್ಧಿ ಮಾಡಿಕೊಳ್ಳದ ಯಾವುದೇ ಧರ್ಮಿಷ್ಠರಾದರೂ ಈ ಅಸ್ಪೃಶ್ಯತೆಯ ಕೇರಿಯನ್ನು ಹೊತ್ತುಕೊಂಡೇ ತಿರುಗಾಡುತ್ತಿರುತ್ತಾರೆ. ಪ್ರತಿಯೊಂದು ಪ್ರತಿಷ್ಠಿತ ದೇವಾಲಯ–ಮಠದಲ್ಲೂ, ಕೋಟ್ಯಾಂತರ ರೂ ಮೌಲ್ಯದ ಚಿನ್ನದ ಆಭರಣಗಳಿವೆ. ಚಿನ್ನದ ರಥಗಳಿವೆ, ಸಾವಿರಾರು ಎಕರೆ ಭೂಮಿ ಇದೆ, ದೇವಾಲಯದ ಖಾತೆಗಳಲ್ಲಿ ಕೋಟ್ಯಾಂತರ ರೂಗಳ ಠೇವಣಿ ಇದೆ.

ಇವೆಲ್ಲವೂ ಭಕ್ತಾದಿಗಳ ಕೊಡುಗೆಯೇ ಇರಬಹುದು, ಆದರೆ ಸಾಮುದಾಯಿಕ ಒಳಿತಿಗೆ ಉಪಯೋಗಿಸಬಾರದೆಂಬ ನಿಯಮವೇನೂ ಇಲ್ಲ. ಆದರೆ ಉಪಯೋಗವಾಗುತ್ತಿಲ್ಲವಷ್ಟೆ. ಬದಲಾಗಿ ದೇವಾಲಯಗಳು, ಮಠಮಾನ್ಯಗಳು ಪಟ್ಟಭದ್ರ ಹಿತಾಸಕ್ತಿಗಳಿಗೆ ಚಿನ್ನದ ಗಣಿಗಳಾಗಿ, ವಾಣಿಜ್ಯ ಕೇಂದ್ರಗಳಾಗಿ ಪರಿಣಮಿಸಿವೆ. ಯಾವುದೇ ಆದಾಯ ತೆರಿಗೆಯನ್ನು ಪಾವತಿ ಮಾಡದ ಈ ಉದ್ದಿಮೆಗಳು ಸರ್ಕಾರದ ಸುಪರ್ದಿಗೂ ಒಳಪಡದಿರುವುದು ದುರದೃಷ್ಟಕರ.

ಯಾವುದೇ ರೀತಿಯ ಜನಪರ ಕಾಳಜಿ, ಸಾಮುದಾಯಿಕ ಚಿಂತನೆ ಮತ್ತು ಕಾಳಜಿ ಇಲ್ಲದ ಈ ಧರ್ಮಪೀಠಗಳು, ಮಠಗಳು, ಧಾರ್ಮಿಕ ಸಂಸ್ಥೆಗಳು, ಭಾರತೀಯ ಸಂದರ್ಭದಲ್ಲಿ ಯಾವ ರೀತಿಯ ರಾಜಕಾರಣ ಮಾಡಬಲ್ಲವು? ಚುನಾವಣೆಯ ಸಂದರ್ಭಧಲ್ಲಿ ವ್ಯಕ್ತವಾಗುವ ಪಕ್ಷ ರಾಜಕಾರಣಕ್ಕೆ ಸ್ಪಂದಿಸುವ ಮಠಾಧೀಶರು, ನಂತರದಲ್ಲಿ ತಮ್ಮ ಸ್ವಜಾತೀಯ ಅಥವಾ ಮತೀಯ ಭಾವನೆಗಳಿಗೇ ಜೋತುಬೀಳುತ್ತಾರೆ.

ಈ ಪ್ರಭೃತಿಗಳಿಗೆ ರಾಜಕೀಯ ಅವಶ್ಯವೇ ಅಥವಾ ಭಾರತದ ರಾಜಕಾರಣದಲ್ಲಿ ಈ ಮುಖಂಡರ ಅಗತ್ಯತೆ ಇದೆಯೇ ಎಂಬ ಪ್ರಶ್ನೆ ಸ್ವಾಭಾವಿಕವಾಗಿ ಉದ್ಭವಿಸುತ್ತದೆ. ಧಾರ್ಮಿಕ ಸಂಸ್ಥೆಗಳ ಸಾಮಾಜಿಕ, ಸಾಂಸ್ಕೃತಿಕ ಹೊಣೆಗಾರಿಕೆ ಏನಾದರೂ ಇದ್ದರೆ ಅದು ಚುನಾವಣಾ ರಾಜಕೀಯದ ಚೌಕಟ್ಟಿನಿಂದ ಹೊರಗೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಮಾತ್ರ ಇರುತ್ತದೆ. ಸಾಮುದಾಯಿಕ ಕಾಳಜಿ ಇಲ್ಲದ ಯಾವುದೇ ಸಂಸ್ಥೆ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಆಳ್ವಿಕರ ಪರವಾಗಿಯೇ ಇರುತ್ತವೆ. ಮಠಗಳು, ಧಾರ್ಮಿಕ ಕೇಂದ್ರಗಳೂ ಈ ಅಪವಾದಕ್ಕೆ ಹೊರತಲ್ಲ. ಇಂತಹ ಸಾಂಸ್ಥಿಕ ಪಟ್ಟಭದ್ರ ಹಿತಾಸಕ್ತಿಗಳಿಂದ ಏನನ್ನು ತಾನೇ ಅಪೇಕ್ಷಿಸಲು ಸಾಧ್ಯ ? □

ದೇಶಭಕ್ತಿ, ಗೋರಕ್ಷಣೆ ಮತ್ತು "ಹಿಂದೂ ರಾಷ್ಟ್ರ"

ಸುರೇಶ್ ಭಟ್

"ವೀರ" ಸಾವರ್ಕರ್‌ರ ಹೆಸರು ಕೇಳಿದಾಕ್ಷಣ ಪುಳಕಿತಗೊಳ್ಳುವ ಸಂಘ ಪರಿವಾರ ಆತನನ್ನು ಹೆಚ್ಚುಕಮ್ಮಿ ದೈವತ್ವದ ಮಟ್ಟಕ್ಕೇರಿಸಿದೆ. ಸಾವರ್ಕರ್ ಭಾವಚಿತ್ರವನ್ನು ಸಂಸದ್ಭವನದಲ್ಲಿ ತೂಗಹಾಕಿಸುವಲ್ಲಿಯೂ ಯಶಸ್ವಿಯಾಗಿದೆ. ಬ್ರಿಟಿಷರ ವಿರುದ್ಧದ ರಾಷ್ಟ್ರೀಯ ಹೋರಾಟದ ಲಾಂಛನವೆಂದು ಆತನನ್ನು ಕೊಂಡಾಡುತ್ತದೆ. ಆದರೆ ವಾಸ್ತವ ಬೇರೆಯೇ ಇದೆ.

"ಲಾಂಛನ"ದ ಅಸಲಿ ಹೂರಣ

ಸುಮಾರು 1913ರ ತನಕ ಸಾವರ್ಕರ್ ವಸಾಹತುಶಾಹಿಯ ಬದ್ಧ ವೈರಿಯಾಗಿದ್ದರೆನ್ನುವುದು ನಿಜ. ಆದರೆ ಎರಡು ವರ್ಷಗಳ ಸೆರೆವಾಸದ ನಂತರ ಸಾವರ್ಕರ್ ಒರ್ವ ಅಪ್ಪಟ ಹಿಂದುತ್ವವಾದಿಯಾಗಿ ಪರಿವರ್ತಿತರಾದರು. 1923ರಲ್ಲಿ ಜೈಲಿನೊಳಗಿಂದಲೆ "ಹಿಂದೂತ್ವ" ಎನ್ನುವ ಹೊತ್ತಗೆ ಬರೆದು ಅದನ್ನು ಹೊರಗಡೆ ಪ್ರಚುರಪಡಿಸಿದರು. ತನ್ಮೂಲಕ 'ಪ್ರಾದೇಶಿಕ ರಾಷ್ಟ್ರೀಯತೆ'ಯನ್ನು ತಿರಸ್ಕರಿಸಿ ಕೋಮುವಾದಿ 'ಸಾಂಸ್ಕೃತಿಕ ರಾಷ್ಟ್ರೀಯತೆ'ಯನ್ನು ಪ್ರತಿಪಾದಿಸುವ ದ್ವಿರಾಷ್ಟ್ರ ಸಿದ್ಧಾಂತಕ್ಕೆ ಅಡಿಗಲ್ಲು ಹಾಕಿದರು. 1911ರಿಂದ ಸುಮಾರು 13 ವರ್ಷಗಳ ಕಾಲ ಕಾರಾಗೃಹವಾಸ ಅನುಭವಿಸಿದ ಸಾವರ್ಕರ್ ಬ್ರಿಟಿಷರಲ್ಲಿ ಪದೇಪದೇ ದಯಾಭಿಕ್ಷೆ ಕೋರಿದ ನಂತರ 1924ರಲ್ಲಿ ಷರತ್ತುಬದ್ಧವಾಗಿ ಬಿಡುಗಡೆಗೊಂಡರು.

ಸರಕಾರದ ಷರತ್ತುಗಳಿಗೆ ಸಮ್ಮತಿಸಿದ ಸಾವರ್ಕರ್, ಹೇಳಿಕೆಯೊಂದನ್ನು ನೀಡಿ "ನನ್ನ ವಿಚಾರಣೆ ಪಕ್ಷಪಾತರಹಿತವಾಗಿತ್ತು ನನಗೆ ವಿಧಿಸಲಾಗಿರುವ ಶಿಕ್ಷೆ ನ್ಯಾಯಯುತವಾಗಿತ್ತೆಂದು ಈ ಮೂಲಕ ಒಪ್ಪಿಕೊಳ್ಳುತ್ತಿದ್ದೇನೆ. ಗತ ದಿನಗಳಲ್ಲಿ ಬಳಸಲಾಗಿರುವ ಹಿಂಸಾ ವಿಧಾನಗಳನ್ನು ಮನಃಪೂರ್ವಕವಾಗಿ ದ್ವೇಷಿಸುತ್ತೇನೆ. ....ಭವಿಷ್ಯದಲ್ಲಿ ನನಗೆ ಅವಕಾಶ ಒದಗಿಸಿಕೊಟ್ಟರೆ 'ಸುಧಾರಣೆ'ಯನ್ನು ಯಶಸ್ವಿಗೊಳಿಸಲು ಸಿದ್ಧನಿದ್ದೇನೆ"ಂದು ಹೇಳಿದರು. ಇಲ್ಲಿ 'ಸುಧಾರಣೆ' ಅಂದರೆ ಭಾರತದ ಸಕಲ ಜನವರ್ಗಗಳಿಂದ ತಿರಸ್ಕರಿಸಲ್ಪಟ್ಟಿದ್ದ 1919ರ ಮೊಂಟಾಗ್ಯು-ಚೆಲ್ಮ್ಸ್‌ಫೋರ್ಡ್ ಪ್ರಸ್ತಾಪಗಳು! ಸದರಿ ಪ್ರಸ್ತಾಪಗಳು ಭಾರತೀಯರ ಅಪೇಕ್ಷೆ, ನಿರೀಕ್ಷೆಗಳನ್ನೆಲ್ಲಾ ಹುಸಿಗೊಳಿಸಿದ್ದವು.

ಸರಕಾರ ಮೇ 10, 1937ರಂದು ಷರತ್ತುಗಳನ್ನೆಲ್ಲ ಹಿಂತೆಗೆದುಕೊಂಡಾಗ ಸಂಪೂರ್ಣ ಸ್ವತಂತ್ರರಾದ ಸಾವರ್ಕರ್ ಹಿಂದೂ ಮಹಾಸಭಾದ ಅಧ್ಯಕ್ಷರಾದರು. ಅಕ್ಟೋಬರ್ 9, 1939ರಂದು ಮುಂಬಯಿನಲ್ಲಿ ವೈಸರಾಯ್ ಲಾರ್ಡ್ ಲಿನ್‌ಲಿತ್‌ಗ್ಲೋರನ್ನು ಭೇಟಿಯಾಗಿ "ಈಗ ನಮ್ಮಿಬ್ಬರ ಹಿತಾಸಕ್ತಿಗಳು ಒಂದೇ ಆಗಿವೆ. ಹೀಗಾಗಿ ನಾವು ಜತೆಯಾಗಿ ಕೆಲಸ ಮಾಡಬೇಕು" ಎನ್ನುತ್ತ ಬಹಳ ಹುಮ್ಮಸ್ಸಿನಿಂದ ಬ್ರಿಟಿಷರಿಗೆ ಸಹಕಾರ ನೀಡಲೊಪ್ಪಿದರು. ಜುಲೈ 5, 1940ರಂದು ಮತ್ತೊಮ್ಮೆ ವೈಸರಾಯ್‌ರನ್ನು ಶಿಮ್ಲಾದಲ್ಲಿ ಭೇಟಿಯಾಗಿ ಗುಟ್ಟಿನ ಮಾತುಕತೆ ನಡೆಸಿದರು.

ಆಗಸ್ಟ್ 9, 1942ರಂದು ಆರಂಭವಾದ ಕ್ವಿಟ್ ಇಂಡಿಯ ಚಳುವಳಿಯಲ್ಲಿ. ಕಾಂಗ್ರೆಸ್ ಮುಖಂಡರು, ಜನಸಾಮಾನ್ಯರಾದಿ ಲಕ್ಷಾಂತರ ಭಾರತೀಯರು ಪಾಲ್ಗೊಂಡರು. ಸುಮಾರು 960 ಜನ ಸಾವಿಗೀಡಾದರು; 1630 ಮಂದಿ ಗಾಯಾಳುಗಳಾದರು. ಆ ಸಂದರ್ಭದಲ್ಲಿ ಸಾವರ್ಕರ್ ಬ್ರಿಟಿಷರ ಬೆಂಬಲಕ್ಕೆ ನಿಂತರು. ಆತ ಸೆಪ್ಟಂಬರ್ 1942ರಲ್ಲಿ ಹೊರಡಿಸಿದ ಕಟ್ಟಾಜ್ಞೆಯೊಂದು ಎಲ್ಲವನ್ನೂ ಬಯಲಿಗೆಳೆಯುತ್ತದೆ: "ಈ ಖಚಿತ ಆದೇಶವನ್ನು ನಿರ್ದಿಷ್ಟವಾಗಿ ಹಿಂದೂ ಮಹಾಸಭಾದ ಸದಸ್ಯರನ್ನು ಉದ್ದೇಶಿಸಿಯೂ ಸಾಮಾನ್ಯವಾಗಿ ಎಲ್ಲಾ ಹಿಂದೂ ಸಂಘಟನಾವಾದಿಗಳನ್ನು ಉದ್ದೇಶಿಸಿಯೂ ಹೊರಡಿಸುತ್ತಿದ್ದೇನೆ. ....ಸರಕಾರದ ಯಾವುದೇ ಮುಖ್ಯ ಸ್ಥಾನ ಅಥವಾ ಹುದ್ದೆಯಲ್ಲಿರುವವರು ಅದಕ್ಕೆ ಅಂಟಿಕೊಂಡು ತಮ್ಮ ನಿಯಮಿತ ಕರ್ತವ್ಯಗಳನ್ನು ಮಾಡುತ್ತಿರಬೇಕು."

ಜುಲೈ 22, 1947ರಂದು ಅಂಗೀಕರಿಸಲಾಗಿದ್ದ ಭಾರತ ಸರಕಾರದ ರಾಷ್ಟ್ರ ಧ್ವಜವನ್ನು ಜುಲೈ 29ರಂದು ತಿರಸ್ಕರಿಸಿದ ಸಾವರ್ಕರ್, ಭಗವಾಧ್ವಜವೇ ಹಿಂದುಸ್ತಾನದ ಅಧಿಕೃತ ಧ್ವಜವೆಂದು ಘೋಷಿಸಿದರು. "ರಾಜಕಾರಣವನ್ನು ಹಿಂದೂಕರಣಗೊಳಿಸಿ. ಹಿಂದೂ ಸಮಾಜವನ್ನು ಸೈನ್ಯೀಕರಿಸಿ"....ಇದು ಸಾವರ್ಕರ್‌ರ ಕರೆಯಾಗಿತ್ತು.



ಮಹಾತ್ಮಾ ಗಾಂಧಿ ಹತ್ಯೆಯ ಸಂಚಿನಲ್ಲಿ ಭಾಗಿಯಾಗಿದ್ದ ಸಾವರ್ಕರ್ ನೇರ ಪುರಾವೆಗಳಿಲ್ಲದ ಕಾರಣಕ್ಕೆ ಶಿಕ್ಷೆಯಿಂದ ಪಾರಾದರು. ಆದರೆ ನ್ಯಾ| ಜೀವನ್ ಲಾಲ್ ಕಪೂರ್ ಆಯೋಗ ಮತ್ತು ಸರ್ದಾರ್ ವಲ್ಲಭಭಾಯಿ ಪಟೇಲ್, ಪಿತೂರಿಯಲ್ಲಿ ಸಾವರ್ಕರ್ ಪಾಲ್ಗೊಂಡಿದ್ದರೆಂಬ ಖಚಿತ ತೀರ್ಮಾನಕ್ಕೆ ಬಂದಿದ್ದರು. ಗಾಂಧಿ ಕೊಲೆ ಪ್ರಕರಣದ ನಂತರ ಹಿಂದೂ ಮಹಾಸಭಾದಿಂದ ಭ್ರಮನಿರಸನಗೊಂಡ ಸಾವರ್ಕರ್ 1950ರಲ್ಲಿ ಆರೆಸ್ಸೆಸ್‌ಗೆ ಸಮೀಪವಾದರು. ಆರೆಸ್ಸೆಸ್ ಸಂಸ್ಥಾಪಕ ಹೆಡ್ಗೇವಾರ್‌ಗೂ ಸಾವರ್ಕರ್‌ಗೂ ಮೊದಲಿನಿಂದಲೂ ಬಹಳ ಹತಿರದ ನಂಟುಗಳಿದ್ದವು.

ಆಗಸ್ಟ್ ೯,೧೯೪೨ರಂದು ಆರಂಭವಾದ ಕ್ವಿಟ್ ಇಂಡಿಯ ಚಳುವಳಿಯಲ್ಲಿ ಕಾಂಗ್ರೆಸ್ ಮುಖಂಡರು, ಜನಸಾಮಾನ್ಯರಾದಿ ಲಕ್ಷಾಂತರ ಭಾರತೀಯರು ಪಾಲ್ಗೊಂಡರು. ಸುಮಾರು ೯೬೦ ಜನ ಸಾವಿಗೀಡಾದರು; ೧೬೩೦ ಮಂದಿ ಗಾಯಾಳುಗಳಾದರು. ಆ ಸಂದರ್ಭದಲ್ಲಿ ಸಾವರ್ಕರ್ ಬ್ರಿಟಿಷರ ಬೆಂಬಲಕ್ಕೆ ನಿಂತರು. ಆತ ಸೆಪ್ಟಂಬರ್ ೧೯೪೨ರಲ್ಲಿ ಹೊರಡಿಸಿದ ಕಟ್ಟಾಜ್ಞೆಯೊಂದು ಎಲ್ಲವನ್ನೂ ಬಯಲಿಗೆಳೆಯುತ್ತದೆ: "ಈ ಖಚಿತ ಆದೇಶವನ್ನು ನಿರ್ದಿಷ್ಟವಾಗಿ ಹಿಂದೂ ಮಹಾಸಭಾದ ಸದಸ್ಯರನ್ನು ಉದ್ದೇಶಿಸಿಯೂ ಸಾಮಾನ್ಯವಾಗಿ ಎಲ್ಲಾ ಹಿಂದೂ ಸಂಘಟನಾವಾದಿಗಳನ್ನು ಉದ್ದೇಶಿಸಿಯೂ ಹೊರಡಿ ಸುತ್ತಿದ್ದೇನೆ. ....ಸರಕಾರದ ಯಾವುದೇ ಮುಖ್ಯ ಸ್ಥಾನ ಅಥವಾ ಹುದ್ದೆಯಲ್ಲಿರುವವರು ಅದಕ್ಕೆ ಅಂಟಿಕೊಂಡು ತಮ್ಮ ನಿಯಮಿತ ಕರ್ತವ್ಯಗಳನ್ನು ಮಾಡುತ್ತಿರಬೇಕು.

ಇಂದು ಮಾಲೆಗಾಂವ್, ಹೈದರಾಬಾದ್, ಅಜ್ಮೀರ ಇತ್ಯಾದಿ ಸ್ಫೋಟ ಪ್ರಕರಣಗಳಲ್ಲಿ ಭಾಗಿಯಾಗಿರುವುದೆಂಬ ಆರೋಪದಲ್ಲಿ ಸಿಬಿಐ ತನಿಖೆಗೊಳಗಾಗಿರುವ ಸಂಘ ಪರಿವಾರದ ಅಂಗಸಂಸ್ಥೆ "ಅಭಿನವ್ ಭಾರತ್"ನ ಮೂಲ ಸಂಸ್ಥಾಪಕ ಇದೇ "ವೀರ" ಸಾವರ್ಕರ್. ಇದರರ್ಥ ಅಂದಿನಿಂದ ಇಂದಿನವರೆಗೂ ಆತನ ಹಿಂದೂತ್ವ ವಿಚಾರ ಧಾರೆ ನಿರಂತರವಾಗಿ ಹರಿಯುತ್ತಲಿದೆ. "ಅಭಿನವ್‌ಭಾರತ್" ಕೂಡ ಭಾರತದ ಸಂವಿಧಾನಕ್ಕೆ ಅಧಿಕೃತ ರಾಷ್ಟ್ರಧ್ವಜಕ್ಕೆ ಪ್ರತಿಯಾಗಿ ತನ್ನದೇ ಆದ ಸಂವಿಧಾನ ಮತ್ತು ಕೇಸರಿ ರಾಷ್ಟ್ರಧ್ವಜವನ್ನು ಹೊಂದಿದೆ ಎನ್ನಲಾಗಿದೆ.

ಕ್ವಿಟ್ ಇಂಡಿಯ ಚಳುವಳಿ ಮತ್ತು
ಶ್ಯಾಮಾ ಪ್ರಸಾದ್ ಮುಖರ್ಜಿ

1929ರಲ್ಲಿ ರಾಜಕೀಯ ವೃತ್ತಿಜೀವನಕ್ಕೆ ಪ್ರವೇಶ ಮಾಡಿದ ಎಸ್.ಪಿ.ಮುಖರ್ಜಿ ಅಂದು ವಿಶ್ವವಿದ್ಯಾನಿಲಯ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಬಂಗಾಳ ವಿಧಾನಸಭೆಗೆ ಚುನಾಯಿತರಾದರು. 1937ರಲ್ಲಿ ಎರಡನೆ ಬಾರಿಗೆ ಅದೇ ಕ್ಷೇತ್ರದಿಂದ ಸ್ಪರ್ಧಿಸಿ ಮತ್ತೊಮ್ಮೆ ವಿಜಯಿಯಾದರು. ಸಾವರ್ಕರ್ 1939ರ ಫೆಬ್ರವರಿಯಲ್ಲಿ ಬಂಗಾಳದ ಪ್ರವಾಸ ಮಾಡುತ್ತಿದ್ದ ವೇಳೆ ಆತ ಬೀಸಿದ ಬಲೆಗೆ ಅನಿರೀಕ್ಷಿತವಾಗಿ ಸಿಕ್ಕ ಒಂದು ಅಮೂಲ್ಯ ನಿಧಿಯೆಂದರೆ ಮುಖರ್ಜಿ. ಇದೇ ಮುಖರ್ಜಿ ನಂತರ ಜನಸಂಘವನ್ನು ಸ್ಥಾಪಿಸಿದರಲ್ಲದೆ ಬಿಜೆಪಿಯ ಪೋಷಕ ಸಂತನೂ ಆಗಿದ್ದರು.

1939ರಲ್ಲಿ ಮಹಮದಾಲಿ ಜಿನ್ನಾ ಪಾಕಿಸ್ತಾನದ ರಚನೆಗಾಗಿ ಒತ್ತಾಯಿಸಿದ ಸಂದರ್ಭದಲ್ಲಿ ಸಿಂಧ್ ಪ್ರಾಂತ್ಯದಲ್ಲಿದ್ದುದು ಹಿಂದೂ ಮಹಾಸಭಾ ಮತ್ತು ಮುಸ್ಲಿಂ ಲೀಗ್‌ಗಳ ಸಮ್ಮಿಶ್ರ ಸರಕಾರ! ಪಾಕಿಸ್ತಾನದ ರಚನೆಯನ್ನು ಬೆಂಬಲಿಸುವ ನಿರ್ಣಯವೊಂದನ್ನು ಸಿಂಧ್ ಅಸೆಂಬ್ಲಿ ಅನುಮೋದಿಸಿದಾಗ ಹಿಂದೂ ಮಹಾಸಭಾದ ಮಂತ್ರಿಗಳಲ್ಲಿ ಒಬ್ಬನಾದರೂ ರಾಜೀನಾಮೆ ನೀಡಲಿಲ್ಲ! ಬದಲಿಗೆ ಕೇವಲ ದಾಖಲೆಗೋಸ್ಕರ ಒಂದು ಖಂಡನೆ ವ್ಯಕ್ತಪಡಿಸಿ ಅಷ್ಟಕ್ಕೇ ಸಂತೃಪ್ತರಾದರು!

1942ರಲ್ಲಿ ಕಾಂಗ್ರೆಸ್ ಮುಸ್ಲಿಂ ಲೀಗನ್ನು ವಿರೋಧಿಸುತ್ತಿದ್ದಾಗಲೂ ಸಿಂಧ್ ಮತ್ತು ಬಂಗಾಳಗಳಲ್ಲಿ ಹಿಂದೂ ಮಹಾಸಭಾ, ಮುಸ್ಲಿಂ ಲೀಗ್‌ಗಳ ಸಮ್ಮಿಶ್ರ ಸರಕಾರಗಳಿದ್ದವು. ಇದಲ್ಲದೆ ಸಾವರ್ಕರ್ ಮತ್ತು (ಆರೆಸ್ಸೆಸ್ ಪೋಷಕ) ಡಾ। ಮೂಂಜೆ ಇದೇ ತೆರನಾದ ಸಮ್ಮಿಶ್ರ ಸರಕಾರವನ್ನು ಪಂಜಾಬಿನಲ್ಲೂ ರಚಿಸಲು ಮುಂದಾಗಿದ್ದರು. ಮುಸ್ಲಿಂ ಲೀಗ್‌ನ ಫಝ್‌ಲುಲ್ ಹಕ್ ನೇತೃತ್ವದಲ್ಲಿದ್ದ ಅಂದಿನ ಬಂಗಾಳ ಸರಕಾರದಲ್ಲಿ ಮುಖರ್ಜಿ ಹಣಕಾಸು ಸಚಿವನಾಗಿದ್ದರು. ಕ್ವಿಟ್ ಇಂಡಿಯ ಚಳುವಳಿಯನ್ನು ಹತ್ತಿಕ್ಕಿ ಬ್ರಿಟಿಷರಡಿ ಮಂತ್ರಿಯಾಗುಳಿಯುವ ಹೆಬ್ಬಯಕೆಯಿಂದ ಮುಖರ್ಜಿ ಬಂಗಾಳದ ರಾಜ್ಯಪಾಲ ಸರ್ ಜಾನ್ ಹರ್ಬರ್ಟ್‌ಗೆ ಒಂದು ಪತ್ರ ಕಳುಹಿಸಿದರು. ಜುಲೈ 26, 1942ರ ಆ ಪತ್ರದಲ್ಲಿ ಬ್ರಿಟಿಷರೊಂದಿಗೆ ಅಧಿಕಾರ ಹಂಚಿಕೆಯ ಒಪ್ಪಂದವೊಂದರ ನಿರ್ದಿಷ್ಟ ಪ್ರಸ್ತಾಪವಿತ್ತು:

ಪ್ರಶ್ನೆ ಏನೆಂದರೆ ಬಂಗಾಳದಲ್ಲಿ ಈ ಚಳುವಳಿ [ಕ್ವಿಟ್ ಇಂಡಿಯಾ]ಯನ್ನು ಎದುರಿಸುವುದು ಹೇಗೆ? ಕಾಂಗ್ರೆಸ್ ತನ್ನ ಶಕ್ತಿಮೀರಿ ಪ್ರಯತ್ನಿಸಿದರೂ ಈ ಚಳುವಳಿಯನ್ನು ಬಂಗಾಳದಲ್ಲಿ ನೆಲೆಗೊಳಿಸಲು ಸಾಧ್ಯವಾಗದ ರೀತಿಯಲ್ಲಿ ಪ್ರಾಂತ್ಯದ ಆಡಳಿತವನ್ನು ನಡೆಸಬೇಕು. ಯಾವ ಸ್ವಾತಂತ್ರ್ಯಕ್ಕೋಸ್ಕರ ಕಾಂಗ್ರೆಸ್ ಈ ಚಳುವಳಿ

1929ರಲ್ಲಿ ರಾಜಕೀಯ ವೃತ್ತಿಜೀವನಕ್ಕೆ ಪ್ರವೇಶ ಮಾಡಿದ ಎಸ್.ಪಿ.ಮುಖರ್ಜಿ ಅಂದು ವಿಶ್ವವಿದ್ಯಾನಿಲಯ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಬಂಗಾಳ ವಿಧಾನಸಭೆಗೆ ಚುನಾಯಿತರಾದರು. 1937ರಲ್ಲಿ ಎರಡನೆ ಬಾರಿಗೆ ಅದೇ ಕ್ಷೇತ್ರದಿಂದ ಸ್ಪರ್ಧಿಸಿ ಮತ್ತೊಮ್ಮೆ ವಿಜಯಿಯಾದರು. ಸಾವರ್ಕರ್ 1939ರ ಫೆಬ್ರವರಿಯಲ್ಲಿ ಬಂಗಾಳದ ಪ್ರವಾಸ ಮಾಡುತ್ತಿದ್ದ ವೇಳೆ ಆತ ಬೀಸಿದ ಬಲೆಗೆ ಅನಿರೀಕ್ಷಿತವಾಗಿ ಸಿಕ್ಕ ಒಂದು ಅಮೂಲ್ಯ ನಿಧಿಯೆಂದರೆ ಮುಖರ್ಜಿ.

ಯನ್ನು ಆರಂಭಿಸಿದೆಯೋ ಈಗಾಗಲೆ ಆ ಸ್ವಾತಂತ್ರ್ಯವನ್ನು ಜನಪ್ರತಿನಿಧಿಗಳು ಪಡೆದುಕೊಂಡಿದ್ದಾರೆಂದು ಜನತೆಗೆ ಹೇಳಲು ನಮ್ಮಿಂದ, ಅದರಲ್ಲೂ ವಿಶೇಷವಾಗಿ ಹೊಣೆಯರಿತ ಮಂತ್ರಿಗಳಿಂದ, ಸಾಧ್ಯವಾಗಬೇಕು. ತುರ್ತು ಪರಿಸ್ಥಿತಿಯ ವೇಳೆ ಕೆಲವು ರಂಗಗಳಲ್ಲಿ ಸ್ವಾತಂತ್ರ್ಯ ಸೀಮಿತವಿರಬಹುದು. ಭಾರತೀಯರು ಬ್ರಿಟಿಷರಲ್ಲಿ ವಿಶ್ವಾಸವಿಡಬೇಕು. ಅದು ಬ್ರಿಟನ್‌ನ ಸಲುವಾಗಿಯೂ ಅಲ್ಲ, ಬ್ರಿಟಿಷರು ಪಡೆದುಕೊಳ್ಳಬಹುದಾದ ಯಾವುದೇ ಮೇಲುಗೈಯ ಸಲುವಾಗಿಯೂ ಅಲ್ಲ. ಇದೇ ಪ್ರಾಂತ್ಯದ ರಕ್ಷಣಾ ವ್ಯವಸ್ಥೆ ಹಾಗೂ ಸ್ವಾತಂತ್ರ್ಯವನ್ನು ಸುಸ್ಥಿತಿಯಲ್ಲಿ ಇರಿಸುವುದಕ್ಕೋಸ್ಕರ ಭಾರತೀಯರು ಬ್ರಿಟಿಷರಲ್ಲಿ ವಿಶ್ವಾಸವಿಡಬೇಕಿದೆ. ನೀವು ರಾಜ್ಯಪಾಲರಾಗಿ ಪ್ರಾಂತ್ಯದ ಸಾಂವಿಧಾನಿಕ ಮುಖ್ಯಸ್ಥನಂತೆ ಕಾರ್ಯಾಚರಿಸಲಿರುವಿರಿ. ನಿಮ್ಮ ಸಂಪೂರ್ಣ ವ್ಯವಹಾರಗಳನ್ನು ನಿಮ್ಮ ಮಂತ್ರಿಗಳ ಸಲಹೆ ಪ್ರಕಾರ ನಿರ್ವಹಿಸಲಿರುವಿರಿ.

ಆಗಸ್ಟ್ 9, 1942ರಂದು ಕ್ವಿಟ್ ಇಂಡಿಯ ಚಳುವಳಿ ಆರಂಭವಾದಾಗ ರಾಜ್ಯಪಾಲರು ಹಕ್ ಸಚಿವ ಸಂಪುಟವನ್ನು ಕರೆಸಿ ಅವರೆಲ್ಲರೂ ಸರಕಾರದ ದಮನಕಾರಿ ನೀತಿಯನ್ನು ಬೆಂಬಲಿಸಬೇಕು ಇಲ್ಲಾ ರಾಜೀನಾಮೆ ನೀಡಬೇಕೆಂದು ತಿಳಿಸಿದರು. ಆದರೆ ಮುಖರ್ಜಿಯಾದಿಯಾಗಿ ಯಾರೂ ರಾಜೀನಾಮೆಗೆ ಮುಂದಾಗಲಿಲ್ಲ! ಅಂತಿಮವಾಗಿ ಮುಖರ್ಜಿ ರಾಜೀನಾಮೆ ಸಲ್ಲಿಸಿರುವುದು ನವಂಬರ್ 16, 1942ರಂದು. ಆತ್ಮಸಾಕ್ಷಿಯ ಪ್ರಕಾರ ರಾಜೀನಾಮೆ ನೀಡಬೇಕಿದ್ದ ಸಂದರ್ಭದಲ್ಲಿ ತಾನೇಕೆ ನೀಡಲಿಲ್ಲವೆಂಬ ಕುರಿತು ಅಪಲಾಪಗಳ ಸುದೀರ್ಘ ಪಟ್ಟಿಯನ್ನೆ ರಾಜೀನಾಮೆ ಪತ್ರದಲ್ಲಿ ನೀಡಿದರು.

"ದೇಶಭಕ್ತಿ"ಯ ಚಟುವಟಿಕೆಗಳು
ಗಾಂಧಿ ಹತ್ಯೆಯಲ್ಲಿ

ಗಾಂಧಿ ಹತ್ಯೆಯ ಬಳಿಕ ಸರಕಾರ ಆರೆಸ್ಸೆಸ್ ಮೇಲೆ ನಿಷೇಧಾಜ್ಞೆ ವಿಧಿಸಿತ್ತು. ಫೆಬ್ರವರಿ 4, 1948ರಂದು ಹೊರಡಿಸಲಾಗಿದ್ದ ಆ ಅಧಿಕೃತ ಸರಕಾರಿ ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿರುವ ಸತ್ಯಾಂಶಗಳು ಇಂದಿಗೂ ಪ್ರಸ್ತುತ ಎನ್ನುವುದು ಗಮನಾರ್ಹ:

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಕಟಿತ ಗುರಿಗಳು ಹಾಗೂ ಉದ್ದೇಶಗಳೆಂದರೆ: ಹಿಂದೂಗಳ ದೈಹಿಕ, ಬೌದ್ಧಿಕ ಮತ್ತು ನೈತಿಕ ಯೋಗಕ್ಷೇಮಕ್ಕೆ ಒತ್ತಾಸೆ ನೀಡುವುದು, ಹಿಂದೂಗಳ ನಡುವೆ ಅಧಿಕ ಭ್ರಾತೃತ್ವ, ಪ್ರೇಮ ಮತ್ತು ಸೇವಾ ಮನೋಭಾವನೆಗಳನ್ನು ಬೆಳೆಸುವುದು. ....ಆದಾಗ್ಯೂ ಸಂಘದ ಸದಸ್ಯರು ತಮ್ಮ ಪ್ರಕಟಿತ ಧ್ಯೇಯೋದ್ದೇಶಗಳಿಗೆ ಅನುಗುಣವಾಗಿ ನಡೆದುಕೊಂಡಿಲ್ಲದಿರುವುದನ್ನು ಸರಕಾರ ಗಮನಿಸಿದೆ.

ಸಂಘದ ಸದಸ್ಯರು ಅನಪೇಕ್ಷಣೀಯ ಮತ್ತು ಅಪಾಯಕಾರಿ ಕೂಡ ಆಗಿರುವ ಚಟುವಟಿಕೆಗಳನ್ನು ನಡೆಸಿದ್ದಾರೆ. ಸಂಘದ ಸದಸ್ಯರು ವೈಯುಕ್ತಿಕವಾಗಿ ದೇಶದ ವಿವಿಧೆಡೆ ದಂಗೆ, ಕಳವು, ಡಕಾಯಿತಿ ಮತ್ತು ಕೊಲೆಗಳನ್ನೊಳಗೊಂಡಂತೆ ಹಿಂಸಾಕೃತ್ಯಗಳಲ್ಲಿ ತೊಡಗಿದ್ದಾರೆ ಮತ್ತು ಕಾನೂನುಬಾಹಿರವಾಗಿ ಶಸ್ತ್ರಾಸ್ತ್ರ ಮತ್ತು ಸ್ಫೋಟಕ ಸಾಮಗ್ರಿಗಳನ್ನು ಸಂಗ್ರಹಿಸಿದ್ದಾರೆಂದು ಕಂಡುಬಂದಿದೆ. ಭಯೋತ್ಪಾದಕ ವಿಧಾನಗಳನ್ನು ಬಳಸಲು, ಬಂದೂಕುಗಳನ್ನು ಸಂಗ್ರಹಿಸಲು, ಸರಕಾರದ ವಿರುದ್ಧ ಅಸಮಾಧಾನ ಹುಟ್ಟುಹಾಕಲು ಮತ್ತು ಪೊಲೀಸ್ ಹಾಗೂ ಸೇನೆಯನ್ನು ಎತ್ತಿಕಟ್ಟಲು ಜನರನ್ನು ಪ್ರಚೋದಿಸುವ ಕರಪತ್ರಗಳನ್ನು ಅವರು ವಿತರಿಸುತ್ತಿರುವುದಾಗಿ ತಿಳಿದುಬಂದಿದೆ.

ಮೇಲಿನ ನಿಷೇಧಾಜ್ಞೆಯನ್ನು 1949ರಲ್ಲಿ ಹಿಂತೆಗೆದುಕೊಂಡು ಗೋಲ್ವಲ್ಕರ್ ಮತ್ತಿತರರನ್ನು ಬಂಧಮುಕ್ತಗೊಳಿಸಲಾಯಿತು. 1949ರ ಜುಲೈ 17ರಂದು ಸರ್ದಾರ್ ಪಟೇಲ್ ನೆಹರೂಗೆ ಬರೆದ ಒಂದು ಪತ್ರದ ಒಕ್ಕಣೆ ಹೀಗಿದೆ: "ಆರೆಸ್ಸೆಸ್‌ಗೆ ಒಂದು ತೃಪ್ತಿಕರ ಸಂವಿಧಾನವನ್ನು ರಚಿಸುವಂತೆ ಗೋಲ್ವಲ್ಕರ್‌ರನ್ನು ಒಪ್ಪಿಸಿದೆ; ಅದರ ಭವಿಷ್ಯದ ಕಾರ್ಯನೀತಿಗಳ ಬಗ್ಗೆ ಕೆಲವು ಖಾತ್ರಿಗಳನ್ನು ಹಾಗೂ ವಾಗ್ದಾನಗಳನ್ನು ಪಡೆದುಕೊಂಡೆ. ಇದರ ನಂತರವೇ ಇನ್ನು ಆತನನ್ನು ಬಿಡುಗಡೆಗೊಳಿಸುವುದರಲ್ಲಿ ಅಪಾಯವಿರದೆಂದು ನಾನು ಭಾವಿಸಿದೆ." ಆರೆಸ್ಸೆಸ್ ವಿಷಯದಲ್ಲಿ ನೆಹರೂ, ಪಟೇಲ್ ಮಧ್ಯದ ಭಿನ್ನಾಭಿಪ್ರಾಯಗಳಿಂದ ಆರೆಸ್ಸೆಸ್‌ಗೆ ಲಾಭವಾಯಿತು.

ತುರ್ತು ಪರಿಸ್ಥಿತಿಯಲ್ಲಿ

1977ರಲ್ಲಿ ಪ್ರಧಾನಿ ಇಂದಿರಾ ಗಾಂಧಿ ತುರ್ತು ಪರಿಸ್ಥಿತಿ ಘೋಷಿಸಿದಾಗ ಆರೆಸ್ಸೆಸ್ ಮುಖ್ಯಸ್ಥ ದೇವರಸ್‌ರನ್ನು ಬಂಧಿಸಲಾಯಿತು. ಸೆರೆಮನೆಯೊಳಗಿಂದ ಆತ ದಮ್ಮಯ್ಯಗುಡ್ಡೆ ಹಾಕುವ ಪತ್ರಗಳನ್ನು ಇಂದಿರಾ ಗಾಂಧಿಗೆ, ಮಹಾರಾಷ್ಟ್ರದ ಮುಖ್ಯಮಂತ್ರಿ ಎಸ್.ಬಿ.ಚವಾಣ್‌ಗೆ ಮತ್ತು ವಿನೋಬಾಭಾವೆಗೆ ಬರೆದರು. ಕೇವಲ ಆರೆಸ್ಸೆಸ್ ಕಾರ್ಯಕರ್ತರ ಬಿಡುಗಡೆಗಾಗಿ ಕೋರಿಕೊಂಡರು ಹೊರತು ತುರ್ತುಪರಿಸ್ಥಿತಿಯನ್ನು ರದ್ದುಗೊಳಿಸಬೇಕೆಂದಾಗಲಿ, ಎಲ್ಲಾ ಬಂಧಿತರನ್ನು ಬಿಡುಗಡೆಗೊಳಿಸಬೇಕೆಂದಾಗಲಿ ಯಾಚಿಸಲಿಲ್ಲ. "ರಾಷ್ಟ್ರೋನ್ನತಿಗಾಗಿ (ಸರಕಾರಿ ಹಾಗೂ ಸರಕಾರೇತರ).... ಲಕ್ಷಗಟ್ಟಲೆ ಆರೆಸ್ಸೆಸ್ ಸ್ವಯಂಸೇವಕರ ಸೇವೆ"ಯನ್ನು ಒದಗಿಸಲು ತಾನು ಸಿದ್ಧನೆಂದು ಇಂದಿರಾ ಗಾಂಧಿಗೆ ರಹಸ್ಯ ಒಪ್ಪಂದದ ಕೊಡುಗೆ ನೀಡಿದರು. ಅದನ್ನು ಇಂದಿರಾ ಗಾಂಧಿ ಉಪೇಕ್ಷಿಸಿದಾಗ ಜುಲೈ 16, 1976ರಂದು ಬರೆದ ಇನ್ನೊಂದು ಪತ್ರದಲ್ಲಿ "ಪಾಕಿಸ್ತಾನ ಮತ್ತು ಚೀನಾಗಳೊಂದಿಗಿನ ಸಂಬಂಧಗಳನ್ನು ಸುಧಾರಿಸುವುದಕ್ಕಾಗಿ ನೀವು ಮಾಡುತ್ತಿರುವ ಪ್ರಯತ್ನಗಳು ಪ್ರಶಂಸನೀಯ"ವೆಂದು ಆಕೆಯನ್ನು ಸ್ತುತಿಸಿದರು! ಸಂಜಯ ಗಾಂಧಿ ರಾಜಕೀಯಕ್ಕೆ ಪ್ರವೇಶ ಮಾಡಿದಾಗ ತರುಣ್ ಭಾರತ್ ಮತ್ತು ಪಾಂಚಜನ್ಯ (ಡಿಸೆಂಬರ್ 21, 1975) ಗಳೆರಡೂ ಆತನನ್ನು ಬಾರಿಬಾರಿಗೆ ಕೊಂಡಾಡಿದವು.

ಕೋಮು ಗಲಭೆಗಳಲ್ಲಿ

1969ರಲ್ಲಿ ಅಹಮದಾಬಾದ್ ಮತ್ತು ಗುಜರಾತ್‌ನ ಇತರೆಡೆಗಳಲ್ಲಿ ನಡೆದ ಕೋಮು ಗಲಭೆಗಳ ತನಿಖೆಗಾಗಿ ಸರ್ವೋಚ್ಚ ನ್ಯಾಯಾಲಯದ ನ್ಯಾ॥ ಪಿ.ಜಗನ್ಮೋಹನ್ ರೆಡ್ಡಿ ನೇತೃತ್ವದಲ್ಲಿ ವಿಚಾರಣಾ ಆಯೋಗವೊಂದನ್ನು ನೇಮಿಸ ಲಾಗಿತ್ತು. ಅಮ್ರೇಲಿ, ಬನಸ್ಕಾಂತ, ಮೆಹಸಾನ ಮತ್ತು ಬರೋಡ ಜಿಲ್ಲೆಗಳಲ್ಲಿನ ಗಲಭೆಗಳಲ್ಲಿ ಹಳೆಯ ಆರೆಸ್ಸೆಸ್ ಕಾರ್ಯಕರ್ತ ಹರಿಶ್ಚಂದ್ರ ಪಾಂಚಾಲ್ ಸಂಚಾಲಕತ್ವದ "ಹಿಂದೂ ಧರ್ಮ ರಕ್ಷಾ ಸಮಿತಿ", ಜನಸಂಘ ಮತ್ತು ಹಿಂದೂ ಮಹಾಸಭಾಗಳ ಕಾರ್ಯಕರ್ತರು ಪ್ರಮುಖ ಪಾತ್ರ ವಹಿಸಿರುವ ಬಗ್ಗೆ ಖಚಿತ ಪುರಾವೆಗಳು ಸಿಕ್ಕಿವೆ ಯೆಂದು ಆಯೋಗ ಹೇಳಿದೆ.

ಭೀವಂಡಿ ಮತ್ತು ಜಲಗಾಂವ್‌ನ ದಂಗೆಗಳಿಗೆ ಪ್ರಮುಖ ಕಾರಣ ಸಂಘ ಪರಿವಾರದ "ರಾಷ್ಟ್ರೀಯ ಉತ್ಸವ್ ಮಂಡಲ್", "ಶ್ರೀ ರಾಂ ತರುಣ್ ಮಂಡಲ್" ಮತ್ತು ಗೋಲ್ವಲ್ಕರ್‌ರ ಉದ್ರೇಕಕಾರಿ ಭಾಷಣಗಳೆಂದು ನ್ಯಾ। ಡಿ.ಪಿ. ಮದನ್ ಮುಂತಾದವರಿದ್ದ ವಿಚಾರಣಾ ಆಯೋಗ ಕಂಡುಕೊಂಡಿದೆ.

1971ರ ತಲಚೇರಿ ದಂಗೆಗಳ ತನಿಖೆ ನಡೆಸಿದ ನ್ಯಾ। ವಿತಾಯಿತಿಲ್ ಆಯೋಗದ ವರದಿ ಸಂಘ ಪರಿವಾರದ 'ಹಿಂದೂ ಸಮೇಕ್ಷಣಾ ಸಮಿತಿ'ಯ ಮೇಲೆ ದೋಷಾ ರೋಪಣೆ ಮಾಡಿದೆ. ವರದಿ ಹೀಗೆ ಹೇಳುತ್ತದೆ:

ತಲಚೇರಿಯ ಹಿಂದೂಗಳ ಮಧ್ಯದಲ್ಲಿ ಮುಸ್ಲಿಂ ವಿರೋಧಿ ಭಾವನೆಗಳನ್ನು ಕೆರಳಿಸುವಲ್ಲಿ ಮತ್ತು ಗಲಭೆ ಗಳಿಗೆ ಸೂಕ್ತ ಹಿನ್ನೆಲೆ ತಯಾರಿಸುವಲ್ಲಿ ಆರೆಸ್ಸೆಸ್ ಒಂದು ಸಕ್ರಿಯ ಪಾತ್ರ ವಹಿಸಿರುವ ಬಗ್ಗೆ ನನಗೆ ಅನುಮಾನವಿಲ್ಲ. ......ಆರೆಸ್ಸೆಸ್ ಜನಸಂಘದ ಸೇನಾ ವಿಭಾಗವೆಂಬುದೂ ಜನಸಂಘ ಆರೆಸ್ಸೆಸ್‌ನ ರಾಜಕೀಯ ವಿಭಾಗವೆಂಬುದೂ ಸಾಮಾನ್ಯ ತಿಳುವಳಿಕೆಯಾಗಿದೆ.

1979ರ ಜಮ್ಷೆಡ್‌ಪುರ ದಂಗೆಗಳ ತನಿಖೆ ನಡೆಸಿದ ನ್ಯಾ। ಜಿತೇಂದ್ರ ನಾರಾಯಣ್ ಆಯೋಗ, ಗಲಭೆಗಳಿಗೆ ಸೂಕ್ತ ವಾತಾವರಣ ಸೃಷ್ಟಿಸಲು ಆರೆಸ್ಸೆಸ್ ಕಾರಣವೆಂದು ಹೇಳಿದೆ. ಆಯೋಗದ ಪ್ರಕಾರ: ಜಮ್ಷೆಡ್‌ಪುರದ ದಂಗೆ 1979ರ ರಾಮ ನವಮಿ ಹಬ್ಬದ ಸಮಯದಲ್ಲಿ ಆರಂಭ ಗೊಳ್ಳಲು ನೇರವಾಗಿ ಸಹಕರಿಸಿದ ದೀನನಾಥ್ ಪಾಂಡೆ ಎಂಬಾತ ಆರೆಸ್ಸೆಸ್‌ನ ಸದಸ್ಯ. ಗಲಭೆಗೆ ಹತ್ತು ದಿನಗಳ ಹಿಂದೆ ಅಲ್ಲಿ ದೇವರಸ್ ಮಾಡಿದ ಭಾಷಣ ಕೋಮು ವಾದದ ಪ್ರಚಾರವಾಗಿತ್ತು.

1982ರ ಕನ್ಯಾಕುಮಾರಿ ದಂಗೆಗಳ ವಿಚಾರಣೆ ನಡೆ ಸಿದ ನ್ಯಾ। ವೇಣುಗೋಪಾಲ್ ಆಯೋಗ ನೀಡಿರುವ ವರ ದಿಯಲ್ಲಿ ಕ್ರೈಸ್ತರ ವಿರುದ್ಧದ ದಂಗೆಗಳನ್ನು ಹುಟ್ಟುಹಾಕು ವಲ್ಲಿ ಆರೆಸ್ಸೆಸ್ ವಹಿಸಿರುವ ಪಾತ್ರಕ್ಕಾಗಿ ಅದರ ವಿರುದ್ಧ ತೀವ್ರ ದೋಷಾರೋಪಣೆ ಮಾಡಲಾಗಿದೆ:

ಆರೆಸ್ಸೆಸ್ ಒಂದು ಉಗ್ರವಾದಿ ಹಾಗೂ ಆಕ್ರಮಣ ಶೀಲ ಪ್ರವೃತ್ತಿಯನ್ನು ಅಳವಡಿಸಿಕೊಂಡಿದೆ. ಯಾವುದು ಹಿಂದೂಗಳ ಹಕ್ಕುಗಳೆಂದು ಅದು ಭಾವಿಸಿಕೊಂಡಿ ದೆಯೋ ಅವುಗಳಿಗಾಗಿ ಅಲ್ಪಸಂಖ್ಯಾತರ ವಿರುದ್ಧ ಹೋರಾಡಲು ತನ್ನನ್ನು ತಾನೇ ನೇಮಿಸಿಕೊಂಡಿದೆ. ಅಲ್ಪ ಸಂಖ್ಯಾತರಿಗೆ ಅವರ ಸ್ಥಾನವನ್ನು 'ತೋರಿಸಿಕೊಡುವ ಕೆಲ ಸವನ್ನು ತನಗೆ ತಾನೇ ವಿಧಿಸಿಕೊಂಡಿದೆ. ಇದಕ್ಕೆ ಅಲ್ಪ ಸಂಖ್ಯಾತರು ಸಿದ್ಧರಿಲ್ಲದಿದ್ದಲ್ಲಿ ಅವರಿಗೆ ಪಾಠ ಕಲಿಸುವ ಕೆಲಸವನ್ನೂ ಅದು ವಿಧಿಸಿಕೊಂಡಿದೆ. ಕೋಮುವಾದಕ್ಕೆ, ಕೋಮು ಗಲಭೆಗಳಿಗೆ ಗೌರವ ದೊರಕಿಸಿಕೊಟ್ಟು ಆಡಳಿತದ ನೈತಿಕ ಸ್ಥೈರ್ಯವನ್ನು ಕುಂದಿಸಿದೆ. ಕೋಮು ಹಿಂಸಾಚಾರಕ್ಕೆ ಪ್ರಚೋದನೆ ನೀಡಲು ಆರೆಸ್ಸೆಸ್ ಬಳಸುವ ವಿಧಾನಗಳೆಂದರೆ:

1. ಕ್ರೈಸ್ತರು ಈ ದೇಶಕ್ಕೆ ನಿಷ್ಠೆ ಪ್ರದರ್ಶಿಸುವವರಲ್ಲವೆಂದು ಅಪಪ್ರಚಾರ ಮಾಡಿ ಬಹುಸಂಖ್ಯಾತ ಸಮುದಾಯದ ಕೋಮು ಭಾವನೆಗಳನ್ನು ಕೆರಳಿಸುವುದು;

2. ಅಲ್ಪಸಂಖ್ಯಾತರ ಜನಸಂಖ್ಯೆ ಏರುತ್ತಿದೆ, ಹಿಂದೂ ಗಳದ್ದು ಇಳಿಯುತ್ತಿದೆ ಎಂಬ ಚಾಣಾಕ್ಷ ಅಪಪ್ರಚಾರದ ಮೂಲಕ ಬಹುಸಂಖ್ಯಾತ ಸಮುದಾಯದ ಭೀತಿಯನ್ನು ಹೆಚ್ಚಿಸುವುದು;

3. ಆಡಳಿತದಲ್ಲಿ ತೂರಿಕೊಂಡು ಅದರೊಳಗೆ ಕೋಮು ವಾದಿ ನಿಲುವುಗಳನ್ನು ಅಳವಡಿಸಿ ಬೆಳೆಸುವ ಮುಖಾಂತರ ನಾಗರಿಕ ಸೇವೆಗಳ ಮತ್ತು ಪೊಲೀಸ್ ಸೇವೆಗಳ ಸದಸ್ಯ ರನ್ನು ಪ್ರೇರೇಪಿಸುವುದು;

4. ಬಹುಸಂಖ್ಯಾತ ಸಮುದಾಯದ ಯುವಜನರಿಗೆ ಚಾಕು, ತಳವಾರು, ಭರ್ಜಿ ಇತ್ಯಾದಿ ಆಯುಧಗಳ ಬಳಕೆ ಯಲ್ಲಿ ತರಬೇತು ಒದಗಿಸುವುದು;

5. ಕೋಮುಗಳ ನಡುವಿನ ಸೀಳುಗಳನ್ನು ಮತ್ತಷ್ಟು ಅಗಲ ಗೊಳಿಸುವ ಸಲುವಾಗಿ ವದಂತಿಗಳನ್ನು ಹಬ್ಬಿಸುವುದು. ಯಾವುದೇ ಕ್ಷುಲ್ಲಕ ಘಟನೆ ಇರಲಿ, ಅದಕ್ಕೆ ಬಣ್ಣ ಹಚ್ಚುವ ಮೂಲಕ ಕೋಮು ಭಾವನೆಗಳನ್ನು ತೀವ್ರಗೊಳಿಸುವುದು.

ಆರೆಸ್ಸೆಸ್ 'ಶಾಖಾ'ಗಳ ವಿವಿಧ ಕಾರ್ಯಕ್ರಮಗಳಲ್ಲಿ ......ಶಾರೀರಿಕ ಕಸರತ್ತು, ಪರೇಡ್ ಮತ್ತಿತರ ಚಟುವ ಟಿಕೆಗಳನ್ನು ......ದೈಹಿಕ ಕಸರತ್ತುಗಳ ಹೆಸರಿನಲ್ಲಿ ನಡೆಸ ಲಾಗುತ್ತದೆ. ಉಗ್ರಗಾಮಿ ನಿಲುವನ್ನು ಬೆಳೆಸುವುದು ಮತ್ತು ಯಾವುದೇ ರೀತಿಯ ನಾಗರಿಕ ಕಲಹಗಳಿಗಾಗಿ ತರಬೇತಿ ಒದಗಿಸುವುದು ಈ ಚಟುವಟಿಕೆಗಳ ಉದ್ದೇಶವೆಂದು ತೋರುತ್ತದೆ. ಇದರಿಂದಾಗಿ ಅಲ್ಪಸಂಖ್ಯಾತರಲ್ಲಿ ಹೆಚ್ಚಿನ ವೇಳೆ ಆತಂಕ, ಭಯ ಮತ್ತು ಅಭದ್ರತೆಯ ಭಾವನೆ ಉಂಟಾಗುತ್ತಿದೆ. ಇದು ಸಮಾಜದ ಸ್ವಾಸ್ಥ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

1989ರ ಭಾಗಲ್‌ಪುರ ದಂಗೆಗಳ ಬಗ್ಗೆ ಪಾಟ್ನಾ ಉಚ್ಚನ್ಯಾಯಾಲಯದ ನ್ಯಾ। ಆರ್.ಸಿ.ಸಿನ್ಹಾ ಮತ್ತು ನ್ಯಾ। ಎಸ್. ಶಂಶುಲ್ ಹಸನ್ ಸಲ್ಲಿಸಿರುವ ಜಂಟಿ ವರದಿ ಕೂಡ ಸಂಘ ಪರಿವಾರವನ್ನು ಖಂಡಿಸಿದೆ. ಮಾರ್ಚ್ 1989ರಲ್ಲಿ ದೇವರಸ್ ಅಲ್ಲೊಂದು ಪ್ರಚೋದನಾಕಾರಿ ಭಾಷಣ ಮಾಡಿದ್ದರು. ಅಕ್ಟೋಬರ್ 24, 1989ರಂದು "ಬಿಜೆಪಿ, ವಿಹಿಂಪ ಮತ್ತು ಆರೆಸ್ಸೆಸ್ ಸಂಘಟಿಸಿದ" ರಾಮ ಶಿಲಾ ಮೆರವಣಿಗೆ ಮುಸ್ಲಿಂ ಪ್ರದೇಶವೊಂದರ ಮೂಲಕ ಸಾಗುತ್ತಿದ್ದಾಗ ದಂಗೆಗಳು ಭುಗಿಲೆದ್ದವು.

"ಆಕಳು ಒಂದು ಉಪಯುಕ್ತ ಪ್ರಾಣಿ, ಮಾತೆಯಲ್ಲ, ದೇವತೆಯಂತೂ ಅಲ್ಲವೇ ಅಲ್ಲ. ......ಹಸು ಕರುವಿಗೆ ಮಾತ್ರ ತಾಯಿ, ಹಿಂದೂಗಳಿಗಲ್ಲ. ......ಹಸು ಮತ್ತು ಎತ್ತು ನಮ್ಮ ಕೃಷಿಪ್ರಧಾನ ರಾಷ್ಟ್ರಕ್ಕೆ ಉಪಯುಕ್ತ ಪ್ರಾಣಿಗಳು ಎಂದು ಅವುಗಳನ್ನು ಎಷ್ಟು ಬೇಕೊ ಅಷ್ಟು ಬಳಸಿದರೆ ಸಾಕು.

ಇಷ್ಟೆಲ್ಲ ನಿರ್ದಿಷ್ಟ, ಸ್ಪಷ್ಟ ಮತ್ತು ಆತಂಕಕಾರಿ ವರದಿಗಳಿರುವ ಹೊರತಾಗಿಯೂ 1949ರಿಂದ ಇಂದಿನ ತನಕ ಕೇಂದ್ರದಲ್ಲಿ ನಮ್ಮನ್ನಾಳಿರುವ ಸರಕಾರಗಳು ಯಾವೊಂದು ಕ್ರಮವನ್ನೂ ಕೈಗೊಳ್ಳದಿರುವುದು ನಿಗೂಢ ವಾಗಿದೆ. ಸಂಘ ಪರಿವಾರದ ಇಂದಿನ ಚಟುವಟಿಕೆಗಳ ಮಟ್ಟವಂತೂ 1948ರ ಸರಕಾರಿ ಪ್ರಕಟಣೆಯಲ್ಲಿ ಹೆಸರಿಸ ಲಾಗಿರುವ ಚಟುವಟಿಕೆಗಳಿಗಿಂತಲೂ ಹತ್ತುಹಲವು ಪಟ್ಟು ಮೇಲಕ್ಕೇರಿದೆ. ಮಾಲೆಗಾಂವ್, ಹೈದರಾಬಾದ್, ಅಜ್ಮೀರ, ಕಾನ್‌ಪುರ, ಗೋವಾ, ಥಾಣೆ, ನಾಸಿಕ್, ಪರ್ಭನಿ, ಜಾಲ್ನಾ ಇತ್ಯಾದಿ, ಇತ್ಯಾದಿ ಭಯೋತ್ಪಾದಕ ಸ್ಫೋಟಕೃತ್ಯಗಳ ಸರ ಮಾಲೆಗಳ ಹಿಂದೆ ಸಂಘ ಪರಿವಾರದ ಅಂಗಸಂಸ್ಥೆಗಳ ಕೈವಾಡವಿರುವುದನ್ನು ಸಿಬಿಐ ಮತ್ತಿತರ ತನಿಖಾ ಸಂಸ್ಥೆಗಳು ಬಯಲುಗೊಳಿಸಿವೆ/ಗೊಳಿಸುತ್ತಿವೆ.

"ಅಭಿನವ್ ಭಾರತ್"ನ ದಯಾನಂದ್ ಪಾಂಡೆಗೆ ಆರೆಸ್ಸೆಸ್‌ನ ಮತ್ತೊಬ್ಬ ನಾಯಕ ಶಾಮ್ ಆಪ್ಟೆ ಹೇಳಿರು ವಂತೆ ಆರೆಸ್ಸೆಸ್‌ನ (ಇಂದ್ರೇಶ್) ಕುಮಾರ್ ಮತ್ತು (ಮೋಹನ್) ಭಾಗ್ವತ್ ಐಎಸ್‌ಐನಿಂದ ಹಣ ಪಡೆಯುತ್ತಿದ್ದ ರಂತೆ. ಎತ್ತಣಿಂದೆತ್ತಣ ಸಂಬಂಧ! ಆರೆಸ್ಸೆಸ್ ಮಂದಿಗೂ ಪಾಕಿಸ್ತಾನದ ಐಎಸ್‌ಐಗೂ ಸಂಬಂಧವಿರುವ ವಿಷಯ ಕಲ್ಪನೆಗೂ ಮೀರಿದ್ದು. ಈ ಐಎಸ್‌ಐನಿಂದ ಹೊರಟಿರುವ ಕೊಂಡಿಗಳು ಲಷ್ಕರ್-ಎ-ತಯ್ಯಬ, ಅಫಘಾನಿಸ್ತಾನದ ತಾಲಿಬಾನ್, ಮಾತ್ರವಲ್ಲ ಅಮೆರಿಕಾದ ಸಿಐಎ ವರೆಗೂ ಚಾಚಿಕೊಂಡಿವೆ ಎನ್ನಲಾಗುತ್ತಿದೆ. ಈ ಪರಸ್ಪರ ಸಂಪರ್ಕ ಗಳ ಜಾಲದ ಬಗ್ಗೆ ಊಹಿಸಿಕೊಂಡಾಗಲೆ ತಲೆ ಗಿರ್ರೆನ್ನು ತ್ತದೆ. ಇಲ್ಲಿ ಉದ್ಭವಿಸುವ ನಿರ್ಣಾಯಕ ಪ್ರಶ್ನೆ ಏನೆಂದರೆ ಸಂಘ ಪರಿವಾರದ ಈ ಭಯಾನಕ ಚಟುವಟಿಕೆಗಳ ಕೂದ ಲೆಳೆ ಯಷ್ಟಾದರೂ ಸುಳಿವು ಗುಪ್ತಚರ ಸಂಸ್ಥೆಗಳಿಗೆ ಸಿಕ್ಕಿ ರಲಿಲ್ಲವೇ? ಇದು ಬಹಳ ವಿಲಕ್ಷಣವಾಗಿದೆಯಷ್ಟೆ ಅಲ್ಲ, ಅತ್ಯಂತ ಕಳವಳಕಾರಿಯೂ ಆಗಿದೆ.

ಗೋಪ್ರೇಮ ಮತ್ತು ಗೋರಕ್ಷಣೆಯ ಅಪಾಯಕಾರಿ 0 ರಾಜಕೀಯ

ಗೋಪ್ರೇಮ ಮತ್ತು ಗೋರಕ್ಷಣೆ ಬಗ್ಗೆ ಹಿಂದುತ್ವ ವಾದಿ ಸಾವರ್ಕರ್‌ರ ನಿಲುವು ಏನಾಗಿತ್ತು?

"ಆಕಳು ಒಂದು ಉಪಯುಕ್ತ ಪ್ರಾಣಿ, ಮಾತೆ ಯಲ್ಲ, ದೇವತೆಯಂತೂ ಅಲ್ಲವೇ ಅಲ್ಲ. ......ಹಸು ಕರು ವಿಗೆ ಮಾತ್ರ ತಾಯಿ, ಹಿಂದೂಗಳಿಗಲ್ಲ. ......ಹಸು ಮತ್ತು ಎತ್ತು ನಮ್ಮ ಕೃಷಿಪ್ರಧಾನ ರಾಷ್ಟ್ರಕ್ಕೆ ಉಪಯುಕ್ತ ಪ್ರಾಣಿಗಳು ಎಂದು ಅವುಗಳನ್ನು ಎಷ್ಟು ಬೇಕೊ ಅಷ್ಟು ಬಳಸಿದರೆ ಸಾಕು. ಅದರ ಬದಲು ಅದು ದೇವತೆ, ಪುರಾಣದಲ್ಲಿ ಅದನ್ನು ಪೂಜಿಸುವುದನ್ನು ಧರ್ಮ ಎಂದು ಹೇಳಿದೆ ಎಂದು ಬೊಗಳೆ ಬಿಟ್ಟರೆ ರಾಷ್ಟ್ರಕ್ಕೆ ನೂರು ಪಟ್ಟು ಹಾನಿ ಯಾಗುತ್ತದೆ."

ನಮ್ಮ ಕರ್ನಾಟಕದ ಘನ ಬಿಜೆಪಿ ಸರಕಾರವನ್ನು ಯಾರೋ ತಪ್ಪುಹಾದಿಗೆಳೆದಿರುವಂತೆ ತೋರುತ್ತಿದೆ. ಇಲ್ಲ ವಾದರೆ ಗುಜರಾತ್ ಸೇರಿದಂತೆ ಹಲವಾರು ರಾಜ್ಯಗಳಲ್ಲಿ ಗೋಹತ್ಯೆ ನಿಷೇಧ ಕಾನೂನು ಜಾರಿಯಲ್ಲಿದೆಯೆಂದು ಸರ ಕಾರದ ಘನತೆವೆತ್ತ ಮಂತ್ರಿಗಳು ಬೊಗಳೆ ಬಿಡುತ್ತಿರಲಿಲ್ಲ. ಗುಜರಾತ್ ರಾಜ್ಯಕ್ಕೆ ಸಂಬಂಧಿಸಿದಂತೆ 2005ರಲ್ಲಿ ಸರ್ವೋಚ್ಚನ್ಯಾಯಾಲಯದ ಏಳು ಸದಸ್ಯರ ಪೀಠ ನೀಡಿ ರುವ 50 ಪುಟಗಳ ತೀರ್ಪಿನ ಪ್ರಕಾರ ಗುಜರಾತ್‌ನಲ್ಲಿ ಕೇವಲ ಹಸು, ಕರು, ಹೋರಿ ಮತ್ತು ಎತ್ತುಗಳ ಹತ್ಯೆ ಯನ್ನು ನಿಷೇಧಿಸಲು ಅನುಮತಿಸಲಾಗಿದೆ. ಎಮ್ಮೆ, ಕೋಣ

ಮತ್ತಿತರ ಜಾನುವಾರುಗಳ ಹತ್ಯೆಯನ್ನು ನಿಷೇಧಿಸಲಾಗಿಲ್ಲ. ಇಲ್ಲವಾದರೆ ಅಮುಲ್ ಡೈರಿಯನ್ನೂ, ಜಾನುವಾರು ಉತ್ಪನ್ನ ಉದ್ದಿಮೆಗಳನ್ನೂ ಎಂದೋ ಮುಚ್ಚಬೇಕಾಗುತ್ತಿತ್ತು. ಮಾನ್ಯ ನ್ಯಾಯಾಲಯ ಗೋವುಗಳ ಪಾವಿತ್ರ್ಯ ಅಥವಾ ಧಾರ್ಮಿಕತೆಯ ಪ್ರಶ್ನೆಯನ್ನೇ ಪ್ರಸ್ತಾಪಿಸಿಲ್ಲ. ಅದು ಪರಿಗಣಿಸಿರುವುದು ಕೇವಲ ಸಾಂವಿಧಾನಿಕ ಅಂಶಗಳನ್ನು ಮತ್ತು ಬೇಸಾಯದ ಆರ್ಥಿಕತೆ ಹಾಗೂ ಜಾನುವಾರುಗಳ ನಡುವಿನ ಸಂಬಂಧಗಳನ್ನು. ಆದರೆ ನ್ಯಾ ಎ.ಕೆ. ಮಾಥುರ್ ಮಾತ್ರ ಮಿಕ್ಕ ನ್ಯಾಯಮೂರ್ತಿಗಳ ವಾದವನ್ನು ಒಪ್ಪಿರಲಿಲ್ಲ. 15 ವರ್ಷಗಳಿಗಿಂತ ಜಾಸ್ತಿ ಪ್ರಾಯದ ಮುದಿ, ಗೊಡ್ಡು ಜಾನುವಾರುಗಳು ಹೆಚ್ಚುಕಮ್ಮಿ ನಿಷ್ಪ್ರಯೋಜಕವಾಗಿರುವುದರಿಂದ ಅವುಗಳನ್ನು ಸಾಕುವುದರಿಂದ ರೈತನಿಗೆ ನಷ್ಟವೆಂದು ಅವರು ಬರೆದಿದ್ದಾರೆ. ಇದು ವಾಸ್ತವ.

ತಥಾಕಥಿತ ಗೋಪ್ರೇಮಿಗಳು ಯಾವ ಹಿಂದೂ ಮಠಾಧೀಶರ ಚರಣಗಳಿಗೆ ಸಾಷ್ಟಾಂಗವೆರಗಿ ಗೋರಕ್ಷಣೆಗಾಗಿ ಘನಘೋರ ಪ್ರತಿಜ್ಞೆ ತೊಟ್ಟಿದ್ದಾರೋ ಆ ಬ್ರಾಹ್ಮಣರ ಪೂರ್ವಜರಾದ ಆರ್ಯಭಾಷಿಕರು ಏನು ತಿನ್ನುತ್ತಿದ್ದರೆನ್ನುವುದನ್ನು ಅವರೇ ದಾಖಲಿಸಿದ್ದಾರೆ.

ಋಗ್ವೇದದ 5ನೆ ಮಂಡಲದ 29ನೆ ಸೂಕ್ತದ 7ನೆ ಮಂತ್ರ ಹೇಳುತ್ತದೆ:

* ಸಖಾ ಸಖ್ಯೇ ಅಪಚತ್ತೂಯಮಗ್ನಿರಸ್ಯ ಕೃತ್ವಾ ತ್ರಿಶತಾನಿ ಮಹಿಷಾನಿ

"ತನ್ನ ಮಿತ್ರನಾದ ಇಂದ್ರನಿಗೋಸ್ಕರ ಅಗ್ನಿಯು 300 ಕೋಣಗಳನ್ನು ಬೇಯಿಸಿ ಕೊಟ್ಟನು."

ಗೋವನ್ನು ವಧಾಸ್ಥಂಭಕ್ಕೆ ಕಟ್ಟಿ ವಧಿಸಲು ಸಿದ್ಧತೆ ಮಾಡುತ್ತಿರುವಾಗ ಪಠಿಸುತ್ತಿದ್ದ ಮಂತ್ರ ಹೀಗಿದೆ:

* ಸ್ವಿಧ್ಮಾ ಯದ್ವನಧಿತಿಃ ಅಪಸ್ಯಾತ್ ಸೂರೋ ಅಧ್ವರೇ ಪರಿರೋಧನಾ ಗೋಃ (ಋಗ್ವೇದ 1-121-7).

"ಹೊಳೆಯುವ ಅಲಗಿನಿಂದ ಕೂಡಿದ ಕತ್ತಿಯನ್ನು ಹಿಡಿದ ಋತ್ವಿಜನು ಪಶುವನ್ನು ತುಂಡರಿಸಲು ಸಿದ್ಧನಾದಾಗ ಯಜ್ಞದ ಮುಖ್ಯ ಅಧ್ವರ್ಯುವು ಗೋವನ್ನು ಯೂಪಕ್ಕೆ ಬಿಗಿಯುತ್ತಾನೆ."

* "ಅಥಯ ಇಚ್ಛೇತ್ ಪುತ್ರೋಮೇ ಪಂಡಿತೋ ವಿಗೀತಃ ಸಮಿತಿಂಗಮಃ
* ಶೂಶ್ರೂಷಿತಾಂ ವಾಚಂ ಭಾಷಿತಾ ಜಾಯೇತ, ಸರ್ವಾನ್ ವೇದಾನ್ ಅನುಬ್ರುವೀತ,
* ಸರ್ವಂ ಆಯುರಿಯಾದಿತಿ, ಮಾಂಸೋದನಂ ಪಾಚಯಿತ್ವಾ ಸರ್ಪಿಷ್ಮಂತಂ
* ಆಶ್ನಿಯಾತಾಮಿಶ್ವರೌ ಜನಯಿತಾ ವೈ ಔಕ್ಷೇನ ವಾ ಅರ್ಷಭೇನ ವಾ"-

ಬೃಹದಾರಣ್ಯಕೋಪನಿಷತ್ತು (6-4-28)

"ಒಳ್ಳೆಯ ಪಂಡಿತನೂ, ವಾಗ್ಮಿಯೂ, ಎಲ್ಲ ವೇದಗಳನ್ನು ಅರಿಯಬಲ್ಲವನೂ, ದೀರ್ಘಾಯುಷಿಯೂ ಆದ ಮಗನನ್ನು ಪಡೆಯಬೇಕೆಂಬ ಇಚ್ಛೆಯುಳ್ಳವರು ಬಲಿತ ಎತ್ತಿನ ಅಥವಾ ಯುವ ಹೋರಿಯ ಮಾಂಸವನ್ನು ಅನ್ನದೊಂದಿಗೆ ಬೇಯಿಸಿ, ಬೆಣ್ಣೆಯಲ್ಲಿ ಕಲಸಿ ತಿನ್ನಬೇಕು"

* ಯಜ್ಞದ ಬಲಿಪಶುವಿನ ಅಂಗಾಂಗಗಳನ್ನು ಸ್ವಚ್ಛಗೊಳಿಸುವ ವೇಳೆ ಹೇಳುತ್ತಿದ್ದ ಮಂತ್ರವೊಂದನ್ನು ಶತಪಥ ಬ್ರಾಹ್ಮಣ, ಕಾಂಡ-4, ಕುಂಡಕ 1-2-3ರಲ್ಲಿ ಕಾಣಬಹುದು. ಅದರ ಅರ್ಥ ಹೀಗಿದೆ:

"ನಾನು ನಿನ್ನ ವಾಗೇಂದ್ರಿಯವನ್ನು ಸ್ವಚ್ಛಗೊಳಿಸುತ್ತೇನೆ. ಶ್ವಾಸಮಾರ್ಗವನ್ನು ಸ್ವಚ್ಛಗೊಳಿಸುತ್ತೇನೆ. ನಿನ್ನ ಕಣ್ಣು, ಕಿವಿ, ಜನನೇಂದ್ರಿಯ, ಮಲಸ್ಥಾನ ಮತ್ತು ಕಾಲುಗಳನ್ನು ತೊಳೆಯುತ್ತೇನೆ."

ಗಾಂಧೀಜಿ ವೈಯುಕ್ತಿಕವಾಗಿ ಗೋಹತ್ಯೆಯ ವಿರುದ್ಧವಿದ್ದರು. ಆದರೆ ಅವರು ತನ್ನ ಜೀವಿತದ ಯಾವುದೇ ಕಾಲ ಘಟ್ಟದಲ್ಲೂ ಗೋಹತ್ಯೆ ವಿರುದ್ಧದ ಆಂದೋಳನಗಳೊಂದಿಗೆ ಕೈಜೋಡಿಸಿರಲಿಲ್ಲ. ಗಾಂಧೀಜಿ ಪ್ರಕಾರ "ದುರ್ದೈವವಶಾತ್ ಇಂದು ಗೋರಕ್ಷಣಾ ಸಮಸ್ಯೆಯು ಹಿಂದೂಗಳಲ್ಲದ ಅನ್ಯಧರ್ಮೀಯರನ್ನು ಅದರಲ್ಲೂ ಮುಸಲ್ಮಾನರನ್ನು ಗೋಹತ್ಯೆ ಮತ್ತು ಗೋಮಾಂಸ ಸೇವನೆಯಿಂದ ತಡೆಯುವುದೇ ಆಗಿದೆ.

* ನಾತ್ತಾ ದುಷ್ಯತ್ಯದನ್ನಾದ್ಯಾನ್ಪ್ರಾಣಿನೋ ಹನ್ಯಹನ್ಯಪಿ।
* ಧಾತ್ರೈವ ಸೃಷ್ಟಾ ಹ್ಯಾದ್ಯಾಶ್ಚ ಪ್ರಾಣಿನೋತ್ತಾರ ಏವ ಚ॥

- ಮನುಸ್ಮೃತಿ, ಅಧ್ಯಾಯ 5, ಶ್ಲೋಕ 30.

"ಪ್ರತಿದಿನವೂ ತಿನ್ನಲಿಕ್ಕೆ ಯೋಗ್ಯವಾದ ಪ್ರಾಣಿಗಳನ್ನು ಕೊಂದು ತಿಂದರೆ ಅದು ಅಪರಾಧವಲ್ಲ. ಏಕೆಂದರೆ ತಿನ್ನುವವರನ್ನೂ ತಿನ್ನಲಾಗುವ ಪ್ರಾಣಿಗಳನ್ನೂ ಭಗವಂತನೇ ಸೃಷ್ಟಿ ಮಾಡಿದ್ದಾನೆ."

* ಏಷ್ವರ್ಥೇಶು ಪಶೂನ್ ಹಿಂಸನ್ ವೇದತತ್ವಾರ್ಥವಿದ್ವಿಜಃ।
* ಆತ್ಮಾನಾಂ ಚ ಪಶುಂ ಚೈವ ಗಮಯತ್ಯುತ್ತಮಾಂ ಗತಿಂ॥ - (ಮನುಸ್ಮೃತಿ, 5-42).

"ಹೀಗೆ ಯಜ್ಞ, ಶ್ರಾದ್ಧ ಮತ್ತು ಮಧುಪರ್ಕ ಮುಂತಾದ ಕಾರ್ಯಗಳಿಗಾಗಿ ಮಾತ್ರ ವೇದಜ್ಞನಾದ ಬ್ರಾಹ್ಮಣನು ಪಶುವನ್ನು ಕೊಂದರೆ ತನ್ನೊಂದಿಗೆ ಆ ಪಶುವಿಗೂ ಉತ್ತಮ ಗತಿ ಉಂಟುಮಾಡುತ್ತಾನೆ."

ಇಂತಹ ಎಷ್ಟೋ ಉದಾಹರಣೆಗಳನ್ನು ಪಟ್ಟಿಮಾಡಬಹುದು.

ಗಾಂಧೀಜಿ ಮತ್ತು ಗೋಹತ್ಯೆ

ಗಾಂಧೀಜಿ ವೈಯುಕ್ತಿಕವಾಗಿ ಗೋಹತ್ಯೆಯ ವಿರುದ್ಧವಿದ್ದರು. ಆದರೆ ಅವರು ತನ್ನ ಜೀವಿತದ ಯಾವುದೇ ಕಾಲ ಘಟ್ಟದಲ್ಲೂ ಗೋಹತ್ಯೆ ವಿರುದ್ಧದ ಆಂದೋಳನಗಳೊಂದಿಗೆ ಕೈಜೋಡಿಸಿರಲಿಲ್ಲ. ಗಾಂಧೀಜಿ ಪ್ರಕಾರ "ದುರ್ದೈ ವವಶಾತ್ ಇಂದು ಗೋರಕ್ಷಣಾ ಸಮಸ್ಯೆಯು ಹಿಂದೂಗಳಲ್ಲದ ಅನ್ಯಧರ್ಮೀಯರನ್ನು ಅದರಲ್ಲೂ ಮುಸಲ್ಮಾನರನ್ನು ಗೋಹತ್ಯೆ ಮತ್ತು ಗೋಮಾಂಸ ಸೇವನೆಯಿಂದ ತಡೆ ಯುವುದೇ ಆಗಿದೆ. ಇದು ನನಗೆ ಅಸಂಬದ್ಧವಾಗಿ ಕಾಣುತ್ತಿದೆ. ....ನನ್ನ ಅಭಿಪ್ರಾಯದಲ್ಲಿ ಮುಸ್ಲಿಮರ ಮೇಲೆ ಒತ್ತಾಯ ಹೇರಿ ಅವರನ್ನು ಗೋಹತ್ಯೆಯಿಂದ ದೂರವಿರಿ ಸುವುದು ಅವರನ್ನು ಬಲವಂತವಾಗಿ ಹಿಂದೂ ಧರ್ಮಕ್ಕೆ ಮತಾಂತರಗೊಳಿಸಿದಂತೆ ಆಗುತ್ತದೆ. ಭಾರತದಲ್ಲಿ ಸ್ವರಾಜ್ಯದ ಹಿನ್ನೆಲೆಯಲ್ಲಿ ಬಹುಸಂಖ್ಯಾತ ಹಿಂದೂಗಳು ಗೋಹತ್ಯೆ ನಿಷೇಧವನ್ನು ಮುಸ್ಲಿಮರ ಮೇಲೆ ಕಾಯಿದೆಗಳ ಮೂಲಕ ಕಡ್ಡಾಯವಾಗಿ ಹೇರುವುದು ಅವಿವೇಕದ ಹಾಗೂ ಅನುಚಿತ ಕಾರ್ಯ." ('The Collected Works of Mahatma Gandhi', Vol:30, pp 19-25)

ಗಾಂಧಿ ತನ್ನ ಹರಿಜನ್ ಪತ್ರಿಕೆಯಲ್ಲಿ "ಮುಸ್ಲಿಮರಿಗೆ ಗೋಹತ್ಯೆಯ ಸಂಪೂರ್ಣ ಸ್ವಾತಂತ್ರ್ಯ ನೀಡುವುದನ್ನು ನಾವು ಅಂಗೀಕರಿಸುವುದು ಸೌಹಾರ್ದತೆಯನ್ನು ಬಲಪಡಿಸುವ ಮತ್ತು ಗೋವುಗಳನ್ನು ರಕ್ಷಿಸುವ ಏಕೈಕ ಮಾರ್ಗ" ಎಂದು ಬರೆದಿದ್ದಾರೆ.

ಕೆಲವು ಸ್ವಾರಸ್ಯಕರ ಮಾಹಿತಿಗಳು

ಎನ್‌ಡಿಎ ಆಡಳಿತದ ಕಾಲದಲ್ಲಿ ಹಿಂದೂ ರಾಷ್ಟ್ರ ನೇಪಾಳದ ಹಿಂದೂ ದೊರೆ ಮತ್ತು ಮಹಾರಾಣಿ 2002ರಲ್ಲಿ ಭಾರತಕ್ಕೆ ಭೇಟಿ ನೀಡಿದ್ದಾಗ ಅವರ ಪ್ರೀತ್ಯರ್ಥವಾಗಿ ಅಸ್ಸಾಂನ ಕಾಮಖ್ಯಾ ಮಂದಿರದಲ್ಲಿ ಎರಡು ದಿನಗಳ ಕಾಲ ಪ್ರಾಣಿ ಬಲಿ ನೀಡುವ ಏರ್ಪಾಟು ಮಾಡಲಾಗಿತ್ತು.

1999ರಲ್ಲಿ ಭಾರತ ಸರಕಾರದ ಆಕಳ ಕರುವಿನ ಚರ್ಮಕ್ಕಾಗಿರುವ ಟೆಂಡರ್ ಸೂಚನೆಯೊಂದು ಆರೆಸ್ಸೆಸ್‌ನ ಪಾಂಚಜನ್ಯ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ವಾಜಪೇಯಿ ಸರಕಾರದ ಅವಧಿಯಲ್ಲಿ 13,05,000 ಟನ್ ಗೋಮಾಂಸ ರಫ್ತಾಗಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ. ವಾಜಪೇಯಿ ಸ್ವಿಜರ್‌ಲ್ಯಾಂಡ್‌ಗೆ ಹೋಗಿದ್ದಾಗ ಅಲ್ಲಿ ಗೋಮಾಂಸ ಭಕ್ಷಿಸಿದ್ದರು. ಈ ಕುರಿತು ಡಾ। ಸುಬ್ರಹ್ಮಣ್ಯ ಸ್ವಾಮಿ ಅವರನ್ನು ಪ್ರಶ್ನಿಸಿದಾಗ ವಾಜಪೇಯಿಯವರ ಉತ್ತರ: "ಈ ಹಸು ಭಾರತದ್ದಲ್ಲ."

ಗೋರಕ್ಷಾ ಸಭಾದ ಸದಸ್ಯನೊಬ್ಬ ಗೋವುಗಳ ಸಂರಕ್ಷಣೆ ವಿಷಯಕ್ಕೆ ಸಂಬಂಧಿಸಿದಂತೆ ಸ್ವಾಮಿ ವಿವೇಕಾನಂದರನ್ನು ಭೇಟಿಯಾಗಿದ್ದರು. ಸ್ವಾಮೀಜಿ ಆತನಲ್ಲಿ "ದೇಶದಲ್ಲಿ ಬರಗಾಲದಿಂದ ಒಂದು ಲಕ್ಷ ಜನ ಸತ್ತಿದ್ದಾರೆ, ಅವರಿಗಾಗಿ ನಿಮ್ಮಲ್ಲೇನೂ ಕಾರ್ಯಕ್ರಮ ಇಟ್ಟುಕೊಳ್ಳಲು ಬಯಸುವುದಿಲ್ಲ"ವೆಂದಿದ್ದರು.

ಭಾರತೀಯ ಚರ್ಮನಿರ್ಯಾತ ಸಮಿತಿಯ ಅಧ್ಯಕ್ಷರು 2003ರಲ್ಲಿ ಹೇಳಿರುವಂತೆ "ಗೋಹತ್ಯೆ ನಿಷೇಧದಿಂದ ಚರ್ಮನಿರ್ಯಾತದ ಉದ್ದಿಮೆಗೆ ಸುಮಾರು 700 ಮಿಲಿಯ ಡಾಲರ್ ನಷ್ಟ ಆಗಲಿದೆ. ಮಾತ್ರವಲ್ಲ 15 ಲಕ್ಷ ಉದ್ಯೋಗಿಗಳ ಜೀವನವನ್ನೂ ಪ್ರಭಾವಿಸಲಿದೆ. ಶೇಕಡಾ 60ರಷ್ಟು ಚರ್ಮ ದೇಶದಲ್ಲಿ ಲಭ್ಯವಿರುವುದರಿಂದ ರಫ್ತು ಲಾಭದಾಯಕವಾಗಿದೆ. ಆದರೆ ವಿದೇಶಗಳಿಂದ ಆಮದು ಮಾಡುವುದು ದುಬಾರಿಯಾಗಲಿದೆ."

ಹಿಂದೊಮ್ಮೆ ನೀಲ್‌ಗಾಯಿ ಎಂಬ ಹೆಸರಿನ ಕಾಡು ಆಕಳಿನ ಹತ್ಯೆಯ ಮೇಲೆ ನಿಷೇಧ ಹೇರಲಾಗಿತ್ತು. ಪರಿಣಾಮವಾಗಿ ಅವುಗಳ ಸಂಖ್ಯೆ ವಿಪರೀತ ಬೆಳೆದು ಹೊಲಗದ್ದೆಗಳಲ್ಲಿರುವ ಪೈರು ನಾಶಮಾಡತೊಡಗಿದಾಗ ನಿಷೇಧವನ್ನು ಹಿಂದೆಗೆದುಕೊಳ್ಳಲಾಯಿತು.

ಕರ್ನಾಟಕದ ಮೃಗಾಲಯ ಪ್ರಾಧಿಕಾರ ಮಾಡಿರುವ ಪ್ರಾಥಮಿಕ ಅಂದಾಜಿನ ಪ್ರಕಾರ ಪ್ರಾಣಿಗಳಿಗೆ ಬೀಫ್ ಬದಲಿಗೆ ಇತರ ಮಾಂಸ ನೀಡುವುದರಿಂದ ನಿರ್ವಹಣೆಯ ವೆಚ್ಚದಲ್ಲಿ ಗಣನೀಯ ಏರಿಕೆಯಾಗಲಿದೆ. ಬೀಫ್‌ನಲ್ಲಾದರೆ ಕೊಬ್ಬಿನಂಶ ಅತ್ಯಂತ ಕಮ್ಮಿ (2.5%). ಅಧಿಕ ಕೊಬ್ಬಿನಂಶವಿರುವ ಬೇರೆ ಮಾಂಸಗಳಿಂದ ಪ್ರಾಣಿಗಳ ಆರೋಗ್ಯದ ಮೇಲೂ ದುಷ್ಪರಿಣಾಮ ಆಗಬಹುದೆಂಬ ಆತಂಕವನ್ನೂ ಪ್ರಾಧಿಕಾರ ವ್ಯಕ್ತಪಡಿಸಿದೆ.

ಕರ್ನಾಟಕ ಜಾನುವಾರು ಹತ್ಯಾ ನಿಷೇಧ ಕಾಯಿದೆ

(41ನೇ ಪುಟಕ್ಕೆ)

ಪಶ್ಚಿಮ ಬಂಗಾಳ: ರಕ್ತಸಿಕ್ತ ಚುನಾವಣೆ ಕಾದಿದೆಯೇ?

ತುಷಾ ಮಿತ್ತಲ್

ಪಶ್ಚಿಮ ಬಂಗಾಳದ ಪಶ್ಚಿಮ ಮಿಡ್ನಾಪುರ ಜಿಲ್ಲೆಯ ದೇಲ್ಗುಂಡ ಗ್ರಾಮದ ಚಾದಂಗಡಿಗಳು, ಶಾಲೆಗಳು ಮತ್ತು ಬೀದಿ ಬದಿಯ ಮರಗಳೆಲ್ಲವೂ ಕೆಂಬಾವುಟಗಳಿಂದ ರಾರಾಜಿಸುತ್ತಿವೆ. ಈ ಹಳ್ಳಿ ಸಿಪಿಐ(ಎಂ)ನ ಒಂದು ಸುಭದ್ರ ನೆಲೆಯೆಂಬ ಭಾವನೆಯನ್ನು ನೋಡುಗರ ಮನಸ್ಸಿನಲ್ಲಿ ಮೂಡಿಸುವಲ್ಲಿ ಹೆಚ್ಚುಕಮ್ಮಿ ಯಶಸ್ವಿಯೂ ಆಗುತ್ತವೆ. ಗ್ರಾಮಸ್ಥರನ್ನು ಕೇಳಿದಾಗ ಅವರಲ್ಲಿ ಬಹುತೇಕ ಮಂದಿ, ತಮ್ಮನ್ನು ಇಂದು ಮಾವೊವಾದಿಗಳಿಂದ ರಕ್ಷಿಸುತ್ತಿರುವುದೆ ಸಿಪಿಐ(ಎಂ) ಎನ್ನುತ್ತಾರೆ. ಮಾವೊವಾದಿಗಳು ಹೇಗೆ ಹಳ್ಳಿಯನ್ನು ವಶಕ್ಕೆ ತೆಗೆದುಕೊಂಡಿದ್ದರು, ಹೇಗೆ ಜನರೆಲ್ಲರೂ ಊರು ಬಿಟ್ಟು ಓಡಿಹೋಗಿದ್ದರು, ನಂತರ ಹೇಗೆ ಸಿಪಿಐ(ಎಂ) ನೆರವಿನಿಂದ ಮರಳಿದರು ಎನ್ನುವುದನ್ನೆಲ್ಲ ವಿವರಿಸುತ್ತಾರೆ.

ಆದರೆ ನಿಜಸ್ಥಿತಿಗೆ ಹೋಲುವಂಥಾದ್ದನ್ನು ಸ್ವಲ್ಪಾದರೂ ಅರಿಯಬೇಕೆಂದರೆ ದೇಲ್ಗುಂಡ ಗ್ರಾಮದ ಕಟ್ಟಕಡೆಯ ದಟ್ಟದರಿದ್ರ ಕುಟುಂಬವೊಂದನ್ನು ಮಾತನಾಡಿಸಬೇಕು. ಆ ಗುಡಿಸಲೊಳಗಿರುವ ಭಯಭೀತ ಆದಿವಾಸಿ ಮಹಿಳೆಯೊಬ್ಬಳ ಮೆಲುದನಿಯ ಮಾತುಗಳು ವಾಸ್ತವಾಂಶಗಳನ್ನು ಬಿಚ್ಚಿಡುತ್ತವೆ. ಅದೊಂದು ಆಕ್ರಮಿತ ಗ್ರಾಮವಾಗಿ ಪರಿಣಮಿಸಿದೆ, ಅವರದೇ ರಾಜ್ಯ ಸರಕಾರ ಅವರನ್ನೆಲ್ಲ ಒತ್ತೆಯಾಳಾಗಿರಿಸಿದೆ, ಹಳ್ಳಿಯವರೆಲ್ಲರೂ ಸಿಪಿಐ(ಎಂ)ಗೆ ಶರಣಾಗತರಾಗಿದ್ದಾರೆನ್ನುವ ವಿಷಯ ಆಗಷ್ಟೆ ಗೊತ್ತಾಗುತ್ತದೆ.

ಸಿಪಿಐ(ಎಂ)ನ ಸಶಸ್ತ್ರ ಕಾರ್ಯಕರ್ತರ ನೂತನ ಅರೆಸೈನಿಕ ಪಡೆಗಳು ಹಳ್ಳಿಹಳ್ಳಿಗಳಲ್ಲಿ ಭೀತಿಯ ವಾತಾವರಣವನ್ನು ಸೃಷ್ಟಿಸುತ್ತಿವೆ. ಇವುಗಳನ್ನು ಹರ್ಮದ್ ವಾಹಿನಿ ಎಂದು ಕರೆಯಲಾಗುತ್ತದೆ. "ಈ ವರ್ಷದ ಆರಂಭದಲ್ಲಿ ನಮ್ಮ ಹಳ್ಳಿಗೆ ಬಂದ ಹರ್ಮದ್ ವಾಹಿನಿ ಸದಸ್ಯರು ಇಲ್ಲಿನ ಜನರಿಗೆ ಬೆದರಿಕೆಯೊಡ್ಡಿ ಮೆರವಣಿಗೆಗಳಲ್ಲಿ ಭಾಗವಹಿಸುವಂತೆ ಬಲವಂತ ಮಾಡತೊಡಗಿದರು. ಹಳ್ಳಿಯಲ್ಲಿ ಉಳಿಯಬೇಕೆಂದಾದರೆ ಅವರನ್ನು ಬೆಂಬಲಿಸಬೇಕೆಂದು ಎಚ್ಚರಿಕೆ ನೀಡಿದರು. ನಾವು ಹೆದರಿ ಪಲಾಯನ ಮಾಡಿದೆವು. ನಿರಾಶ್ರಿತರಂತೆ ಸಿಕ್ಕ ಸಿಕ್ಕ ಸಂಬಂಧಿಕರ ಮನೆಗಳಿಗೆ ಅಲೆದಾಡಿದೆವು. ಆದರೆ ಕೊನೆಗೆ ನಮ್ಮ ಭೂಮಿಗೇ ಮರಳದೆ ವಿಧಿಯಿರಲಿಲ್ಲ. ನಮಗಿರುವುದು ಅದೊಂದೆ. ಈಗ ಅವರು ಹೇಳಿದಂತೆ ಕೇಳುತ್ತಿದ್ದೇವೆ"ಂದು ದೇಲ್ಗುಂಡದ ಆ ಆದಿವಾಸಿ ಮಹಿಳೆ ತನ್ನ ಕಥೆಯನ್ನು ಹೇಳಿದರು. ಜಿಲ್ಲೆಯಾದ್ಯಂತದ ಇತರ ಹಳ್ಳಿಗಳಲ್ಲಿರುವ ಇಂತಹ ನೂರಾರು ಕುಟುಂಬಗಳ ಕಥೆಯೂ ದೇಲ್ಗುಂಡದ ಕಥೆಯೇ ಆಗಿದೆ.

"ಶರಣಾಗತರಾಗಿ ಇಲ್ಲಾ ಅದರ ಪರಿಣಾಮಗಳನ್ನು ಎದುರಿಸಲು ಸಿದ್ಧರಾಗಿ." 2011ರ ಅಸೆಂಬ್ಲಿ ಚುನಾವಣೆಗಳು ಸಮೀಪಿಸುತ್ತಿರುವ ಸಂದರ್ಭದಲ್ಲಿ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲೆಲ್ಲ ಕೇಳಿ ಬರುತ್ತಿರುವ ಸಂದೇಶವಿದು. ಅಲ್ಲಿ ನಡೆಯುತ್ತಿರುವುದು ಕ್ಷೇತ್ರದ ಮೇಲಿನ ನಿಯಂತ್ರಣಕ್ಕಾಗಿರುವ ಒಂದು ಮೇಲಾಟ. ಅದು ಸಿಪಿಐ(ಎಂ)ನ ಭದ್ರಕೋಟೆಗಳಿಗೆ ಲಗ್ಗೆಯಿಡುತ್ತಿರುವ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮೇಲಿನ ಅಸೂಯೆಯಿಂದ ಪ್ರೇರಿತವಾಗಿದೆ. ಹೀಗಾಗಿ ಚುನಾವಣೆಗಳು ಮುಗಿಯುವಷ್ಟರಲ್ಲಿ ರಕ್ತದೋಕುಳಿ ಚೆಲ್ಲುವ ಸಾಧ್ಯತೆಗಳು ದಟ್ಟವಾಗಿವೆ. ವಿಪರ್ಯಾಸವೆಂದರೆ ಅದನ್ನೀಗ ಪ್ರಸಕ್ತ ಮಾವೊವಾದಿಗಳ ವಿರುದ್ಧದ ಕಾರ್ಯಾಚರಣೆಯ ಸನ್ನಿವೇಶದಲ್ಲಿ ನೋಡಬೇಕಾಗಿದೆ. ಸಿಪಿಐ(ಎಂ) ಮಾವೊವಾದಿಗಳೊಂದಿಗೆ ನೇರ ಮುಖಾಮುಖಿಯ ಕಾರ್ಯವ್ಯೂಹವೊಂದನ್ನು ಅಳವಡಿಸಿಕೊಳ್ಳಲು ನಿರ್ಧರಿಸಿದೆಯೆಂದು ಮೂಲಗಳು ತಿಳಿಸುತ್ತವೆ. ನಕ್ಸಲ್ ಪೀಡಿತ ಪಶ್ಚಿಮ ಮಿಡ್ನಾಪುರ ಜಿಲ್ಲೆಯಲ್ಲಿ ಹರ್ಮದ್ ವಾಹಿನಿಗಳನ್ನು ಆರಂಭಿಸಿರುವುದು ಇದೇ ಕಾರ್ಯವ್ಯೂಹದ ಭಾಗವಾಗಿ.

ಅಲಿಮುದ್ದೀನ್ ರಸ್ತೆಯಲ್ಲಿರುವ ಪಕ್ಷದ ಕೇಂದ್ರಕಚೇರಿಯ ಮೂಲವೊಂದು ತೆಹೆಲ್ಕಾ ಗೆ ತಿಳಿಸಿರುವಂತೆ "ಮಾವೊವಾದಿಗಳ ಕಾಟದಿಂದ ಜನ ಬೇಸತ್ತಿದ್ದಾರೆ. ಅವರು ನಮ್ಮೊಂದಿಗಿದ್ದಾರೆ. ಇದನ್ನು ಎರಡು ವಿಧಗಳಲ್ಲಿ ಎದುರಿಸಬೇಕೆಂದು ನಿರ್ಧರಿಸಿದೆವು. ಸೈದ್ಧಾಂತಿಕವಾಗಿ ಮತ್ತು ಜನಸಮೂಹಗಳನ್ನು ಒಗ್ಗೂಡಿಸುವ ಮೂಲಕ.....ಜನರ ಬಳಿ ಹೋಗಿ ಮಾವೊವಾದಿಗಳ ವಿರುದ್ಧ

ಸಿಪಿಐ(ಎಂ)ನ ಸಶಸ್ತ್ರ ಕಾರ್ಯಕರ್ತರ ನೂತನ ಅರೆಸೈನಿಕ ಪಡೆಗಳು ಹಳ್ಳಿಹಳ್ಳಿಗಳಲ್ಲಿ ಭೀತಿಯ ವಾತಾವರಣವನ್ನು ಸೃಷ್ಟಿಸುತ್ತಿವೆ. ಇವುಗಳನ್ನು ಹರ್ಮದ್ ವಾಹಿನಿ ಎಂದು ಕರೆಯಲಾಗುತ್ತದೆ. "ಈ ವರ್ಷದ ಆರಂಭದಲ್ಲಿ ನಮ್ಮ ಹಳ್ಳಿಗೆ ಬಂದ ಹರ್ಮದ್ ವಾಹಿನಿ ಸದಸ್ಯರು ಇಲ್ಲಿನ ಜನರಿಗೆ ಬೆದರಿಕೆಯೊಡ್ಡಿ ಮೆರವಣಿಗೆಗಳಲ್ಲಿ ಭಾಗವಹಿಸುವಂತೆ ಬಲವಂತ ಮಾಡತೊಡಗಿದರು. ಹಳ್ಳಿಯಲ್ಲಿ ಉಳಿಯಬೇಕೆಂದಾದರೆ ಅವರನ್ನು ಬೆಂಬಲಿಸಬೇಕೆಂದು ಎಚ್ಚರಿಕೆ ನೀಡಿದರು. ನಾವು ಹೆದರಿ ಪಲಾಯನ ಮಾಡಿದೆವು. ನಿರಾಶ್ರಿತರಂತೆ ಸಿಕ್ಕ ಸಿಕ್ಕ ಸಂಬಂಧಿಕರ ಮನೆಗಳಿಗೆ ಅಲೆದಾಡಿದೆವು. ಆದರೆ ಕೊನೆಗೆ ನಮ್ಮ ಭೂಮಿಗೇ ಮರಳದೆ ವಿಧಿಯಿರಲಿಲ್ಲ. ನಮಗಿರುವುದು ಅದೊಂದೆ. ಈಗ ಅವರು ಹೇಳಿದಂತೆ ಕೇಳುತ್ತಿದ್ದೇವೆ"ಂದು ದೇಲ್ಗುಂಡದ ಆ ಆದಿವಾಸಿ ಮಹಿಳೆ ತನ್ನ ಕಥೆಯನ್ನು ಹೇಳಿದರು.



ಪ್ರಚಾರಾಂದೋಲನ ನಡೆಸಿದರೆ ಜನಧ್ವನಿ ಮೊಳಗುತ್ತದೆ. ನಾವು ಹಳ್ಳಿಹಳ್ಳಿಗಳಲ್ಲೆಲ್ಲಾ ದಿನಾ ರ್‍ಯಾಲಿಗಳನ್ನು ನಡೆಸುವ ಮೂಲಕ ಜನರನ್ನು ಸಜ್ಜುಗೊಳಿಸುತ್ತಿದ್ದೇವೆ."

ಆದರೆ ವಾಸ್ತವದಲ್ಲಿ ಪ್ರಸಕ್ತ ಕಾರ್ಯಾಚರಣೆ ಸಿಪಿಐ(ಎಂ)ನ್ನು ವಿರೋಧಿಸುತ್ತಿರುವವರನ್ನು ಗುರಿಯಾಗಿಸಿದೆ, ಅದೂ ಬಂದೂಕಿನ ನಳಿಗೆಯ ಮುಖಾಂತರ. ಸಿಪಿಐ(ಎಂ) ಮತ್ತು ಟಿಎಂಸಿ ನಡುವಿನ ಪರಸ್ಪರ ರಾಜಕೀಯ ವೈರತ್ವ ಈಗಾಗಲೆ ಹಲವಾರು ಜೀವಗಳನ್ನು ಬಲಿ ತೆಗೆದುಕೊಂಡಿದೆ. ಸಿಪಿಐ(ಎಂ), ಟಿಎಂಸಿಗಳೆರಡೂ ಶಸ್ತ್ರಸಜ್ಜಿತವಾಗಿದ್ದು, ಘೋರ ಹಿಂಸಾಚಾರವೆಸಗುವ ಸಾಮರ್ಥ್ಯವನ್ನು ಪಡೆದುಕೊಂಡಿರುವುದಕ್ಕೆ ನಂದಿಗ್ರಾಮದ ಘಟನೆಗಳೆ ಸಾಕ್ಷಿ. ಆದರೆ ಇಂದಿನ ಈ ಹರ್ಮದ್ ವಾಹಿನಿ ಶಿಬಿರಗಳನ್ನು ಹರಡಿಸಲಾಗುತ್ತಿರುವುದು ಮಾವೋವಾದವನ್ನು ಮಟ್ಟಹಾಕುವ ನೆಪದಲ್ಲಿ. ಹೀಗಾಗಿ ಈ ವಿದ್ಯಮಾನವನ್ನು ಬೇರೊಂದು ಬೆಳಕಿನಲ್ಲಿ ನೋಡಬೇಕಾಗುತ್ತದೆ.

ಛತ್ತೀಸ್‌ಗಢದಲ್ಲಿ ಅಲ್ಲಿನ ರಾಜ್ಯ ಸರಕಾರವೇ ಪ್ರಾಯೋಜಿಸಿ, ಬೆಂಬಲಿಸುತ್ತಿರುವ ಸಲ್ವಾ ಜುಡುಂ ಎನ್ನುವ ಅರೆಸೇನಾ ಪಡೆಗಳನ್ನು ಇದೇ ಸಿಪಿಐ(ಎಂ) ಸಂಸತ್ತಿನಲ್ಲಿ ವಿರೋಧಿಸುತ್ತದೆ. ಹರ್ಮದ್ ವಾಹಿನಿ ಹೆಸರಿನಲ್ಲಿ ಪಶ್ಚಿಮ ಬಂಗಾಳದಲ್ಲಿ ನಡೆಸಲಾಗುತ್ತಿರುವ ಕಾರ್ಯಾಚರಣೆಗೂ ಸಲ್ವಾ ಜುಡುಂಗೂ ಅನೇಕ ಸಾಮ್ಯಗಳಿರುವಂತೆ ತೋರುತ್ತಿದೆ. ಹರ್ಮದ್ ವಾಹಿನಿಯ ಚಟುವಟಿಕೆಗಳು ಏಪ್ರಿಲ್ 2010ರಿಂದಲೇ ಕೇಂದ್ರ ಸರಕಾರದ ಗಮನಕ್ಕೆ ಬಂದಿದ್ದು ಅದರ ಮೇಲೆ ಕಠಿಣ ನಿಗಾ ಇರಿಸಲಾಗಿದೆ ಎನ್ನುತ್ತವೆ ಗುಪ್ತದಳ (ಇಂಟೆಲಿಜೆನ್ಸ್ ಬ್ಯೂರೊ)ದಿಂದ ತೆಹೆಲ್ಕಾ ಗೆ ದೊರೆತಿರುವ ದಾಖಲೆಪತ್ರಗಳು.

ಶಿಬಿರಗಳ ಸಂಖ್ಯೆ, ಪ್ರತಿಯೊಂದು ಶಿಬಿರದಲ್ಲಿರುವ ಕಾರ್ಯಕರ್ತರ ಸಂಖ್ಯೆ, ಮುಖಂಡರುಗಳ ವಿವರ ಮತ್ತು ಅವರ ಬಳಿಯಿರುವ ಶಸ್ತ್ರಾಸ್ತ್ರಗಳ ವಿವರಗಳೆಲ್ಲವನ್ನೂ ಕಲೆಹಾಕಲಾಗುತ್ತಿದೆ. ನಾನಾ ರೀತಿಯ ಆಯುಧಗಳನ್ನು ಹಾಗೂ ಮದ್ದುಗುಂಡುಗಳನ್ನು ಸರಕಾರಿ ಕಟ್ಟಡಗಳಲ್ಲಿ, ಪಂಚಾಯತ್ ಕಚೇರಿಗಳಲ್ಲಿ, ಪ್ರಾಥಮಿಕ ಶಾಲೆಗಳಲ್ಲಿ ಮತ್ತು ಪಕ್ಷದ ಕಚೇರಿಗಳಲ್ಲಿಯೂ ದಾಸ್ತಾನು ಮಾಡಲಾಗಿದ್ದು ಅವೆಲ್ಲವೂ ಶಸ್ತ್ರಾಗಾರಗಳಾಗಿ ಪರಿವರ್ತಿತವಾಗಿರುವುದನ್ನು ಗುಪ್ತದಳದ ಈ ವರದಿಗಳು ಬಯಲುಗೊಳಿಸುತ್ತವೆ.

ಛತ್ತೀಸ್‌ಗಢದಲ್ಲಿ ಅಲ್ಲಿನ ರಾಜ್ಯ ಸರಕಾರವೇ ಪ್ರಾಯೋಜಿಸಿ, ಬೆಂಬಲಿಸುತ್ತಿರುವ ಸಲ್ವಾ ಜುಡುಂ ಎನ್ನುವ ಅರೆಸೇನಾ ಪಡೆಗಳನ್ನು ಇದೇ ಸಿಪಿಐ(ಎಂ) ಸಂಸತ್ತಿನಲ್ಲಿ ವಿರೋಧಿಸುತ್ತದೆ. ಹರ್ಮದ್ ವಾಹಿನಿ ಹೆಸರಿನಲ್ಲಿ ಪಶ್ಚಿಮ ಬಂಗಾಳದಲ್ಲಿ ನಡೆಸಲಾಗುತ್ತಿರುವ ಕಾರ್ಯಾಚರಣೆಗೂ ಸಲ್ವಾ ಜುಡುಂಗೂ ಅನೇಕ ಸಾಮ್ಯಗಳಿರುವಂತೆ ತೋರುತ್ತಿದೆ.

ಸತ್ಪತಿ ಎನ್ನುವ ಒಂದು ಗ್ರಾಮದಲ್ಲಿರುವ ಭದ್ರತಾ ಪಡೆಗಳು ಜುಲೈ 25ರ ಮುಂಜಾನೆ 6ರಿಂದ 10ರ ತನಕ ಗಸ್ತು ನಡೆಸಿದ್ದವು. 11 ಗಂಟೆಗೆ ಏಕಾಏಕಿಯಾಗಿ ಸುಮಾರು 400 ಜನರ ಮೆರವಣಿಗೆಯೊಂದು ಆರಂಭವಾಯಿತು. ಸಿಪಿಐ(ಎಂ) ಬಾವುಟಗಳನ್ನು ಹಿಡಿದುಕೊಂಡಿದ್ದ ಅವರಲ್ಲಿ ಕೆಲವರು ಕಾಲ್ನಡಿಗೆಯಾಗಿ ಬಂದಿದ್ದರೆ ಇನ್ನಿತರರು ಬೈಕ್‌ಗಳಲ್ಲಿ ಬಂದಿದ್ದರು. ಕೆಲವರು ಕಪ್ಪು ಮುಖವಾಡಗಳನ್ನು ಹಾಕಿಕೊಂಡಿದ್ದರು. ಅವರು ಬಂದೂಕುಗಳನ್ನು ತೋರಿಸಿ ಗಾಳಿಯಲ್ಲಿ ಗುಂಡು ಹಾರಿಸಿದಾಗ ಬೆಚ್ಚಿಬಿದ್ದ ಗ್ರಾಮಸ್ಥರು ಹೆದರಿ ಅಲ್ಲಿಂದ ಕಾಲ್ಕಿತ್ತರು. ಓಡಲಾರದೆ ಊರಲ್ಲೇ ಉಳಿದ ಹಳ್ಳಿಗರನ್ನೆಲ್ಲ ನಿರ್ದಯವಾಗಿ ಥಳಿಸಲಾಯಿತು.

ಛತ್ತೀಸ್‌ಗಢ ಮುಂತಾದೆಡೆಗಳಲ್ಲಿ ವಿಶೇಷ ಪೊಲೀಸ್ ಅಧಿಕಾರಿಗಳು (ಎಸ್‌ಪಿಒ) ಮಾಡುತ್ತಿರುವಂತೆ ಇಲ್ಲಿಯೂ ಹರ್ಮದ್ ವಾಹಿನಿ ಸದಸ್ಯರು ಅರೆಸೇನಾ ಪಡೆಗಳೊಂದಿಗೆ ಸಹಕರಿಸುತ್ತಾರೆಂಬುದು ಸ್ಥಳೀಯರ ಆರೋಪ. ಪೊಲೀಸರು ಇದನ್ನು ನಿರಾಕರಿಸುತ್ತಾರೆ. ಆದರೆ ಪೊಲೀಸರ ಮತ್ತು ಅರೆಸೇನಾಪಡೆಗಳ ವಾಡಿಕೆಯ ತಪಾಸಣೆಗಳು ಮುಗಿದಾಕ್ಷಣ ಹರ್ಮದ್ ವಾಹಿನಿಯ ಮೆರವಣಿಗೆಗಳು ಆರಂಭವಾಗುತ್ತಿರುವುದು ಗಮನಾರ್ಹವಾಗಿದೆ.

ಸತ್ಪತಿ ಗ್ರಾಮದಲ್ಲಿ ಗಸ್ತು ಮುಗಿಸಿದ ನಂತರ ತಮ್ಮ ಶಿಬಿರಗಳಿಗೆ ವಾಪಸ್ಸಾಗಿದ್ದ ಅರೆಸೇನಾಪಡೆಗಳು ನಂತರದ ಘಟನೆಗಳಿಗೆ ಮೂಕಪ್ರೇಕ್ಷಕರಾಗಿದ್ದರೆಂದು ಸ್ಥಳೀಯ ರೈತನೊಬ್ಬ ತಿಳಿಸಿದ್ದಾನೆ. ಸಿಆರ್‌ಪಿಎಫ್ ಶಿಬಿರ ಹಳ್ಳಿಯಿಂದ 1 ಕಿಮೀ ದೂರದಲ್ಲಿದ್ದರೆ ಹರ್ಮದ್ ವಾಹಿನಿ ಶಿಬಿರಗಳು 2 ಕಿಮೀ ದೂರದಲ್ಲಿವೆ. "ನಮ್ಮನ್ನು ಬೆಂಬಲಿಸಿ. ಟಿಎಂಸಿ ತ್ಯಜಿಸಿ. ಇಲ್ಲವಾದರೆ ನಾಳೆ ನೀವೆಲ್ಲ ಶರಣಾಗತರಾಗುವಂತೆ ನೋಡಿಕೊಳ್ಳುತ್ತೇವೆ"ಎಂದು ಹರ್ಮದ್ ವಾಹಿನಿಯವರು ತಮ್ಮ ಮೊದಲ ರ್‍ಯಾಲಿಯ ವೇಳೆ ಎಚ್ಚರಿಕೆ ನೀಡಿದ ಬಳಿಕ ಸತ್ಪತಿಯ ಪಂಚಾಯತ್ ಪ್ರಧಾನ ಸೇರಿದಂತೆ ಟಿಎಂಸಿ ಬೆಂಬಲಿಗರೆಲ್ಲರೂ ಊರುಬಿಟ್ಟು ಪಲಾಯನ ಮಾಡಿದ್ದಾರೆ.

ಹೀಗೆ ಸತ್ಪತಿ ಮತ್ತು ಅಕ್ಕಪಕ್ಕದ ಹಳ್ಳಿಗಳಿಂದ ಓಡಿಬಂದ ಸುಮಾರು 400 ಜನರು ಕಳೆದ ಮೂರು ತಿಂಗಳುಗಳಿಂದ ಸತ್ಪತಿಯ ಪ್ರಾಥಮಿಕ ಶಾಲೆಯಲ್ಲಿ ಆಶ್ರಯ ಪಡೆದಿದ್ದರು. ಕೊನೆಗೆ ಜುಲೈ ಅಂತ್ಯಕ್ಕಾಗುವಾಗ ಸಿಪಿಐ(ಎಂ) ಗೆ ಶರಣಾದ ಹಳ್ಳಿಗರು ಒಬ್ಬೊಬ್ಬರಾಗಿ ಮನೆಗಳಿಗೆ ಮರಳಿದರು. ಭುರ್ಸಾ ಗ್ರಾಮಕ್ಕೆ ಭೇಟಿ ನೀಡಲು ಬಯಸಿದ ತೆಹೆಲ್ಕಾ ಪ್ರತಿನಿಧಿಯನ್ನು ತಡೆಯಲಾಯಿತು. "ಅಲ್ಲಿ ಸಾವಿರಾರು ಮಾವೋವಾದಿಗಳಿದ್ದಾರೆ. ಅಲ್ಲಿಗೆ ಹೋಗುವುದು ಅಪಾಯಕಾರಿ. ನಮ್ಮ ನಾಯಕ ಅಮೂಲ್ಯ ಸಿಂಗರಿಗೆ ಕರೆಮಾಡಿ ಆತನ ಪರವಾನಗಿ ಪಡೆದುಕೊಳ್ಳಬೇಕಾಗುತ್ತದೆ" ಎಂದ ಹರ್ಮದ್ ವಾಹಿನಿಯ ಕಾರ್ಯಕರ್ತನೊಬ್ಬ ದಾರಿ ತೋರಲು ಮುಂದಾಗಿದ್ದ ಹಳ್ಳಿಗನ ಮೇಲೆ ಹಲ್ಲೆ ಮಾಡಿದ. ಸಿಪಿಐ(ಎಂ) ಸದಸ್ಯನಾಗಿರುವ ಅಮೂಲ್ಯ ಸಿಂಗ್ 56 ಗ್ರಾಮಗಳ ಉಸ್ತುವಾರಿ ನೋಡಿಕೊಳ್ಳುತ್ತಿರುವ ಕಸಿಜೋರಾ ಗ್ರಾಮ ಪಂಚಾಯತಿನ ಪ್ರಧಾನ.

ಸಿಪಿಐ(ಎಂ) ಹೀಗೆ ಸಾವಕಾಶವಾಗಿ, ಘುತ್ತಿಗೆ ಹಾಕುತ್ತ ಸ್ವತಂತ್ರ ಭಾರತದ ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಕೊಡಲಿಯೇಟು ಹಾಕುತ್ತಿರುವ ಸತ್ಯಾಂಶವನ್ನು ಗುಪ್ತದಳದ

(41ನೇ ಪುಟಕ್ಕೆ)

ಕಥೆ

ಉರಿ ಬೆಂಕಿಯ ಒಂದು ಎಳೆ

ಕೆ.ಎಲ್. ಚಂದ್ರಶೇಖರ್ ಐಜೂರ್

-೧-

ತಿಂಗಳುಗಳಿಂದೇ ಹುಟ್ಟುವ ದಿನಗಳನ್ನು ಕಾಲವು ಬೇಟೆಯಾಡಿ ದಣಿದು ಏನೊಂದೂ ಘಟಿಸದೆ ಕುಂತೂರು ದೊಡ್ಡಿ ಎಂಬ ಆ ಊರು ದಣಿವನ್ನೇ ಮೈತುಂಬ ಹೊದ್ದುಕೊಂಡು ಬಿದ್ದಂತಿರುವಾಗಲೇ, ಹನುಮೇಶನ ಲಗ್ನಪತ್ರಿಕೆ ಬಂದದ್ದು. ಆ ಲಗ್ನ ಪತ್ರಿಕೆ ಬರುವವರೆಗೂ ಹೆಚ್ಚೂಕಮ್ಮಿ ಹನುಮೇಶ ಸತ್ತೇ ಹೋಗಿರಬಹುದು ಎಂದು ಭಾವಿಸಿಕೊಂಡು ಹನುಮೇಶನೊಂದಿಗೆ ಆತನ ನೆನಪುಗಳನ್ನೂ ಮಣ್ಣುಮಾಡಿ ಬದುಕುತ್ತಿದ್ದ ಕುಂತೂರು ದೊಡ್ಡಿಯ ನನ್ನ ತಾತನ ಮನೆಮಂದಿಗೆಲ್ಲ ಈಗ ಹೇಳಿಕೊಳ್ಳಲಾಗದ ಗೊಂದಲ ಒಮ್ಮೆಗೇ ಉಂಟಾಗಿತ್ತು. ಆ ಮನೆಯ ಎಲ್ಲರೂ ಕಳೆದುಹೋದ ಜೀವವೊಂದು ಮತ್ತೆ ಸಿಕ್ಕ ಖುಷಿಯ ಜೊತೆಗೆ ಹನುಮೇಶ ಮನೆಬಿಟ್ಟು ಹೋಗಲು ಕಾರಣನಾದ ನನ್ನ ತಾತನ ಬಗ್ಗೆ ಹೊಸದಾಗಿ ಸಿಡಿಮಿಡಿಗುಟ್ಟುತ್ತಿದ್ದರು.

ಓದು ತಲೆಗೆ ಹತ್ತದೆ. ಆ ಸಣ್ಣ ಹಳ್ಳಿಯಲ್ಲಿ ದಿಕ್ಕೆಟ್ಟು ಹೇಗೇಗೋ ಅಲೆಯುತ್ತಿದ್ದ ಹನುಮೇಶ ನಾಲ್ಕಾರು ಬಾರಿ ಫೀಸು ಕಟ್ಟುತ್ತ, ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಕೂತುಕೊಂಡನಾದರೂ ಓದುವ, ಓದಿ ಪರೀಕ್ಷೆ ಪಾಸು ಮಾಡುವ ಆತ್ಮವಿಶ್ವಾಸವೇ ಅವನಲ್ಲಿ ಸೋರಿಹೋಗಿತ್ತು. ಹೀಗೆ ಎಸ್ಸೆಸ್ಸೆಲ್ಸಿಯಲ್ಲಿ ಮತ್ತೆ ಮತ್ತೆ ಫೇಲಾದವರ ದೊಡ್ಡ ಗುಂಪೇ ಕುಂತೂರು ದೊಡ್ಡಿ ಯಲ್ಲಿದ್ದು, ಫೇಲಾದವರು ಒಂದೋ ಕುಂತೂರುದೊಡ್ಡಿಯಲ್ಲಿ ಇರುವ, ದಿನಕ್ಕೆ ಇಪ್ಪತ್ತು ರೂಪಾಯಿ ಕೂಲಿ ಸಿಗುವ, ತೆಂಗಿನ ನಾರು ತೆಗೆದು ಹಗ್ಗ ಮಾಡುವ ಕಾರ್ಖಾನೆಗೋ ಅಥವಾ ಚೆನ್ನಪಟ್ಟಣದ ಪೇಟೆ ಬೀದಿಯ ದಿನಸಿ ಅಂಗಡಿಗಳಲ್ಲಿಯೋ ಕೆಲಸಕ್ಕೆ ಸೇರಿಕೊಳ್ಳುತ್ತಿದ್ದರು. ಈ ಎರಡೂ ಇಷ್ಟಪಡದ ಹನುಮೇಶ ಸಣ್ಣ ಚೀಲದಲ್ಲಿ ತನ್ನವೆರಡು ಜೊತೆ ಬಟ್ಟೆಗಳನ್ನು ತುರುಕಿಕೊಂಡು ರಾತ್ರೋರಾತ್ರಿ ಮನೆ ಬಿಟ್ಟುಹೋಗಿದ್ದ. ಬೆಳಕು ಹರಿಯುವ ಹೊತ್ತಿಗೆ ಹನುಮೇಶ ಸತ್ತೇ ಹೋದ ಅನ್ನುವಷ್ಟು ಅಳು, ರೋದನೆ ತಾತನ ಮನೆಯಿಂದ ಹೊರ ಬಿದ್ದು, ಊರ ಜನ ಮನೆಮುಂದೆ ಬಂದು ಸೇರಿ ತಲೆಗೊಂದು ಮಾತನಾಡಿ ಹೋಗಿದ್ದರು. ಕೆಲವರು ಹನುಮೇಶನನ್ನು ಯಾರೋ ಮರೆ ಮೋಸದಿಂದ ಮಾಯ ಮಂತ್ರಗಳಿಂದ ಪಳಗಿಸಿ ಕರೆದೊಯ್ದಿದ್ದಾರೆಂದೂ, ಇದೆಲ್ಲ ಹುಚ್ಚಮ್ಮನ ಗುಡಿ ಜಗುಲಿ ಗೆದುರಾಗಿ ಹೊಸ ಪಡಸಾಲೆ ಕಟ್ಟಿಸುತ್ತೇನೆಂದು ಹೇಳಿ ಕೊಂಡು ಕಟ್ಟಿಸಲಾರದೇ ಸುಮ್ಮನಿರುವ ನನ್ನ ತಾತನ ಉದಾ ಸೀನಕ್ಕೆ ಆ ದೇವಿ ಹುಚ್ಚಮ್ಮ ಕೊಟ್ಟಿರುವ ಶಾಪ ಅಂತಲೂ ಮಾತನಾಡಿಕೊಳ್ಳುತ್ತಿದ್ದರು.

ಬೇಸಿಗೆ ರಜೆಯಲ್ಲೋ, ಹಬ್ಬದ ರಜೆಯಲ್ಲೋ ಕುಂತೂರು ದೊಡ್ಡಿಯನ್ನು ನೋಡುತ್ತಿದ್ದ ನನಗೆ ಆರಾಮ ಅನ್ನುವುದು ಅಲ್ಲಿ ಕಾಲು ಮುರಿದುಕೊಂಡು ಬಿದ್ದಿದೆ ಯೇನೋ ಅನಿಸುತ್ತಿತ್ತು. ನಮಗೆ ನೆಂಟರು, ಇಷ್ಟರು, ನಮ್ಮ ವರು ಅಂಥ ಇದ್ದದ್ದು ಇದೊಂದು ಊರಿನಲ್ಲಿ ಮಾತ್ರ. ಈ ಊರಿನ ಪಕ್ಕ ಇನ್ನೊಂದು ಊರು ಇದೆ ಅನ್ನುವ ಕಲ್ಪನೆಯೇ ಆಗ ನನಗೆ ಇರಲಿಲ್ಲ. ನನ್ನಂಥ ನಾಲ್ಕಾರು ಹುಡುಗರನ್ನು ಸೇರಿಸಿ ನಮ್ಮ ತಾತ ಗೋವಿನ ಹಾಡು ಪದ್ಯವನ್ನು ಪದೇ ಪದೇ ಓದಿಸಿ ಕಣ್ಣೀರಾಗುತ್ತಿದ್ದರು. ಅವರು ಅಳುವುದನ್ನು ನೋಡಿ ನಾವು ಕಕ್ಕಾಬಿಕ್ಕಿಯಾಗುತ್ತಿದ್ದೆವು.

ನನ್ನ ತಾಯಿಯ ತಮ್ಮನಾಗಿದ್ದ ಹನುಮೇಶ ಮನೆ ಬಿಟ್ಟು ಹೋದ ಸುದ್ದಿ ಕಿವಿಗೆ ಬಿದ್ದ ಕೂಡಲೇ ನನ್ನ ತಾಯಿ ತಾನು ನಿತ್ಯ ಪೂಜಿಸುತ್ತಿದ್ದ ದೇವರುಗಳಿಗೆ ಬಾಯಿಗೆ ಬಂದಂತೆ ಬೈದು ತನ್ನ ನೋವು ತೋಡಿಕೊಂಡಿದ್ದಳು. ಪ್ರತಿ ವರ್ಷ ಕುಂತೂರುದೊಡ್ಡಿಗೆ ಹೋದಾಗ ನಾವು ಹುಡುಗರೆಲ್ಲ ನಮ್ಮ ಅಜ್ಜಿಯ ಕಡ್ಡಿಪುಡಿ ಚೀಲದಲ್ಲಿ ಅಪರೂಪಕ್ಕೆ ಸಿಗುತ್ತಿದ್ದ ಎಂಟಾಣೆಯ ದಮಡಿಯಲ್ಲಿ ಬಣ್ಣ ಬಣ್ಣದ ಕಾಗದಗಳನ್ನು ಕೊಂಡು ಗಾಳಿಪಟಮಾಡಿ ರಾಮಮ್ಮನ ಕೆರೆ ಏರಿಯ ದಿಬ್ಬದ ತಗ್ಗಿನಲ್ಲಿ ನಿಂತು ಹಾರಿಬಿಡುತ್ತಿದ್ದೆವು. ಹನುಮೇಶ ನಿಲ್ಲದ ಮನೆಯಲ್ಲಿ ಈಗ ಅಂತಹ ಸಂಭ್ರಮಕ್ಕೆ ಅವಕಾಶವಿರಲಿಲ್ಲ.

ಹನುಮೇಶ ಮನೆ ಬಿಟ್ಟು ಹೋದಮೇಲೆ ನನ್ನ ಮಾವಂದಿರು ಪರಸ್ಪರ ಕಿಡಿಕಾರುತ್ತ ಒಬ್ಬರ ಮೇಲೊಬ್ಬರು ಬೈದಾಡುತ್ತ ಬದುಕುವುದು ಆ ಮನೆಯಲ್ಲಿ ರೂಢಿಯಾಗಿ ಬಿಟ್ಟಿತ್ತು. ಹನುಮೇಶ ಎಲ್ಲಿ ಮರೆಯಾಗಿರುವನು ಎಂಬ ವಿವರಗಳನ್ನು ಜ್ಯೋತಿಷಿಗಳ ಬಳಿ ಕಾಸು ಕೊಟ್ಟು ತಿಳಿದು ಕೊಳ್ಳಲು ಹೋದವರು ನಿರಾಸೆಯಿಂದ ಮನೆ ಸೇರುತ್ತಿದ್ದರು. ಅವನು ಎಲ್ಲಾದರೂ ಇದ್ದು ಹೇಗಾದರೂ ಬದುಕಿಕೊಳ್ಳಲಿ ಒಟ್ಟಿನಲ್ಲಿ ಸಾಯದೇ ಜೀವಂತವಾಗಿರುವ ಸುದ್ದಿ ಕಿವಿಗೆ ಯಾವತ್ತಾದರೂ ಒಂದು ದಿನ ಬಂದುಬಿದ್ದರೆ ಸಾಕು ಎನ್ನುವಂತೆ ಆ ಮನೆಯ ಹಿರಿಯರು ದಿನ ತಳ್ಳುತ್ತಿದ್ದರು.

ಚುಂಚನಗಿರಿಯ ಕಾಲಭೈರವೇಶ್ವರ ಸ್ವಾಮಿಗೋ, ಬೊಬ್ಬೆಗೌಡನಪುರದ ಮಂಟೇಸ್ವಾಮಿಗೋ ಹರಕೆ ಹೊತ್ತುಕೊಂಡರೆ ಹನುಮೇಶ ಮರಳಿ ಬರಬಹುದು ಎಂಬ ಆಸೆಗಳನ್ನು ನನ್ನ ತಾತನ ಬಳಿ ಆ ಹಳ್ಳಿಯ ಕೆಲವು ಹಿರೀಕರು ಹುಟ್ಟಿಸುತ್ತಿದ್ದರು. ತಾತ ಮಾತ್ರ ಎಲ್ಲವನ್ನು ಕೇಳಿಸಿಕೊಂಡು ಕಲ್ಲುಬಂಡೆಯಂತೆ ಏನೂ ಮಾತನಾಡದೇ ಮನೆಯ ಮುಂದಿನ ಜಗುಲಿಯ ಮೇಲೆ ಕೂತಿರುತ್ತಿದ್ದ.

ಹನುಮೇಶ ಕಾಣೆಯಾಗಿ ಹತ್ತು ವರ್ಷಗಳ ನಂತರ ಅವನು ಸತ್ತೇ ಹೋಗಿರಬಹುದೆಂದುಕೊಂಡಿದ್ದ ಮನೆಗೆ ಅವನು ಸತ್ತಿಲ್ಲ ಎಂಬ ಸುದ್ದಿ ಮುಟ್ಟಿಸಲೆಂದು ಹನುಮೇಶನೇ ಕಳಿಸಿರುವ ಅವನ ಮದುವೆಯ ಆ ಲಗ್ನಪತ್ರಿಕೆ ನನ್ನ ತಾತನ ಮನೆಗೆ ಬಂದಿತ್ತು.

ದೇವರು ನಮ್ಮನ್ನು ಮರ್ರೆತಿಲ್ಲ ಎಂದು ಹುಚ್ಚಮ್ಮನ ಗುಡಿಯ ಮುಂದೆ ವಿಶೇಷ ಪೂಜೆ ಮಾಡಿಸಿ ತಾತ ಹಳ್ಳಿಜನಕ್ಕೆಲ್ಲ ಊಟಹಾಕಿಸಿದ್ದ. ಹನುಮೇಶ ಬದುಕಿದ್ದಾನೆಂಬ ಒಂದೇ ಒಂದು ಸಂತೋಷದ ಸುದ್ದಿಯ ಮುಂದೆ ಆತ ಕಳಿಸಿರುವ ಲಗ್ನಪತ್ರಿಕೆಯ ಬಗ್ಗೆ ಯಾರೂ ಅಷ್ಟಾಗಿ ಗಮನಕೊಟ್ಟಿರಲಿಲ್ಲ. ಮರುದಿನ ಲಗ್ನಪತ್ರಿಕೆ ಸೂಕ್ಷ್ಮವಾಗಿ ಗಮನಿಸಿದವರಿಗೆ ಆಘಾತಕಾದಿತ್ತು. ಆ ಲಗ್ನಪತ್ರಿಕೆ ಮದುವೆ ಮುಗಿದ ಮೂರುದಿನಗಳ ನಂತರ ನನ್ನ ತಾತನ ಕೈಸೇರುವಂತೆ ಹನುಮೇಶ ಜಾಣತನದಿಂದ ಲಗ್ನಪತ್ರಿಕೆಯನ್ನು ಅಂಚೆ ಡಬ್ಬಿಗೆ ಹಾಕಿದ್ದ.

ಹನುಮೇಶನ ವಾಸಸ್ಥಳ, ಇರುವಿಕೆಯ ಬಗ್ಗೆ ಲಗ್ನಪತ್ರಿಕೆ ಯಲ್ಲಿದ್ದ ಕಲ್ಯಾಣ ಮಂಟಪದಲ್ಲಿ ಯಾರನ್ನಾದರೂ ಕಂಡು ಮಾಹಿತಿ ಪಡೆದುಕೊಳ್ಳಬೇಕೆಂದು ನನ್ನ ತಾತ ಬೆಂಗಳೂರಿಗೆ ಹೋಗುವುದೆಂದು ನಿರ್ಧರಿಸಿಕೊಂಡ. ಆ ಲಗ್ನಪತ್ರಿಕೆ ಹಿಡಿದುಕೊಂಡು ಬೆಂಗಳೂರು ನೋಡಿಬಂದಿದ್ದ ಊರಿನ ಒಂದಿಬ್ಬರನ್ನು ಕಟ್ಟಿಕೊಂಡು ಹನುಮೇಶನನ್ನು ಕಾಣಲೆಂದೇ ಬೆಂಗಳೂರಿಗೆ ಹೋದ. ಈ ಹಿಂದೆ ಒಂದಿಪ್ಪತ್ತು ವರ್ಷಗಳ ಹಿಂದೆ ರೈತರ ಸಮಾವೇಶದಲ್ಲಿ ಪಾಲ್ಗೊಳ್ಳಲು ರೈತರೊಂದಿಗೆ ರೈಲನ್ನೇರಿ ಉಚಿತವಾಗಿ ಬೆಂಗಳೂರನ್ನು ನೋಡಿ ಬಂದಿದ್ದ ನನ್ನ ತಾತನಿಗೆ ಈಗ ಬೆಂಗಳೂರು ಭಯ ಹುಟ್ಟಿಸುವಷ್ಟು ಬೆಳೆದಿದೆ ಅನ್ನುವ ಯಾವ ಅಂದಾಜೂ ಇರಲಿಲ್ಲ. ಇಂಥ ದೊಡ್ಡ ಊರು ಸೇರಿ ಮಗ ಹೇಗೋ ಬದುಕಿಕೊಂಡನಲ್ಲ ಎಂಬ ಸಂತೋಷದ ಜೊತೆಗೆ ಮದುವೆಯಾದ ಮೂರು ದಿನಗಳ ಮೇಲೆ ಲಗ್ನ ಪತ್ರಿಕೆ ತಮ್ಮ ಕೈಸೇರಿದ್ದಕ್ಕೆ ಹನುಮೇಶನ ಮೇಲೂ, ಬೇಕೆಂದೇ ಲಗ್ನಪತ್ರಿಕೆಯನ್ನು ತಡವಾಗಿ ತಂದುಕೊಟ್ಟಿರಬಹುದೆಂದು ಅಂಚೆಪೇದೆಯ ಮೇಲೂ ನನ್ನ ತಾತ ಸಿಟ್ಟಾಗಿದ್ದ. ಆ ಸಿಟ್ಟನ್ನೆಲ್ಲ ನುಂಗಿ ಕೊಂಡು ಬೆಂಗಳೂರಿನ ದೊಡ್ಡ ಬಡಾವಣೆಯೊಂದರಲ್ಲಿ ಕಲ್ಯಾಣ ಮಂಟಪ ಹುಡುಕುವ ಸಲುವಾಗಿ ಬಿಸಿಲ ಝಳದಲ್ಲಿ ಸುತ್ತಿ ಹೈರಾಣಾಗಿ, ಅಂತೂ ಕೊನೆಗೆ ಕಣ್ಣಿಗೆ ಬಿದ್ದ ಕಲ್ಯಾಣ ಮಂಟಪದೊಳಗೆ ಹೋಗಲು ಊರವರೊಂದಿಗೆ ಯತ್ನಿಸುತ್ತಿದ್ದ ನನ್ನ ತಾತನನ್ನು ಅಲ್ಲಿನ ಸೆಕ್ಯುರಿಟಿ ಗಾರ್ಡುಗಳು ಗದರಿ ಬೈದು ಗೇಟಿನ ಹೊರಗೆ ಕಳಿಸಿದ್ದರು.

ತಾತ ತರುವ ಸಂತೋಷದ ಸುದ್ದಿಗಾಗಿ ಕಾದಿದ್ದ ಮನೆಮಂದಿ ಅವನ ಸಂಕಟದ ಮುಖ ನೋಡಿ ಬೆಂಗಳೂರಿನಲ್ಲಿ ಏನು ನಡೆದಿರಬಹುದೆಂದು ಸುಲಭವಾಗಿ ಊಹಿಸಿಕೊಂಡು ತಾತನ ಬಳಿ ಏನನ್ನೂ ಕೇಳದೇ ಸುಮ್ಮನಾದರು. ಹನುಮೇಶ ಮದುವೆಯಾದ ಹೆಣ್ಣಿನ ಮನೆ ಕಡೆಯ ಯಾವ ವಿವರಗಳೂ ಸ್ಪಷ್ಟವಾಗಿ ಆ ಲಗ್ನಪತ್ರಿಕೆಯಲ್ಲಿ ಇರಲಿಲ್ಲ. ತಾತನ ಬೇಸರಕ್ಕೆ ಇದು ಕೂಡ ಕಾರಣವಾಗಿತ್ತು. ಆತನನ್ನು ಮರೆತು ಹೇಗೋ ನೆಮ್ಮದಿಯಾಗಿ ಬದುಕುತ್ತಿದ್ದ ನಮ್ಮನ್ನು ಹಿಂಸಿಸಲೆಂದೇ ಹನುಮೇಶ ಲಗ್ನಪತ್ರಿಕೆ ಕಳಿಸಿರಬಹುದೆಂದು ನನ್ನ ಮಾವಂದಿರು ಮಾತನಾಡಿಕೊಂಡರು. ಒಬ್ಬ ಮಾವ 'ನನ್ನ ಕೈಗೆ ಅವನು ಸಿಗಲಿ, ಸಿಗಿದು ಹುಚ್ಚಮ್ಮನ ಗುಡಿ ಹೆಬ್ಬಾಗಿಲಿಗೆ ತೋರಣ ಕಟ್ಟುತ್ತೇನೆ, ನಮ್ಹತ್ರನೆ ಆಟ ಆಡ್ತಿದ್ದಾನೋ ಆ ಬೋಳಿಮಗ' ಎಂದೆಲ್ಲ ಬೈದಾಡಿಕೊಂಡು ಹೋಗಿದ್ದ, ನಾವು ಹೀಗೆ ನರಳುವುದನ್ನು ಹನುಮೇಶ ಎಲ್ಲೋ ಕೂತು ಊಹಿಸಿಕೊಂಡು ನಗಾಡುತ್ತಿರಬಹುದೆಂದು ನಮ್ಮ ಸಂಬಂಧಿಯೊಬ್ಬ ಸಂಕಟದ ದನಿಯಲ್ಲಿ ಹೇಳತೊಡಗಿದ್ದ.

ತಾತ ಮಾತ್ರ ಸುಮ್ಮನಿದ್ದ. ಹನುಮೇಶ ಹೀಗೇಕೆ ಮಾಡಿದ ಎನ್ನುವ ಪ್ರಶ್ನೆಯನ್ನು ತನಗೆ ತಾನೇ ಮತ್ತೆ ಮತ್ತೆ ಕೇಳಿಕೊಂಡು ಬೇಸರಪಡುತಿರಲು, ಗೋಡೆಗೆ ನೇತುಹಾಕಿದ್ದ ಹನುಮೇಶನ ಚಿಕ್ಕಂದಿನ ಫೋಟೋ ನೋಡುತ್ತ ಅವನ ಕಣ್ಣು ತುಂಬಿಬಂತು. ಹನುಮೇಶ ಓದಲೇಬೇಕು, ಓದಿ ಎಸ್ಸೆಸ್ಸೆಲ್ಸಿ ಪಾಸು ಮಾಡಲೇಬೇಕು ಎಂದು ತಾನು ಹಠ ಮಾಡಬಾರದಿತ್ತು ಅಂತ ಆ ಕ್ಷಣ ತಾತನಿಗೆ ಅನ್ನಿಸಿ ಚಡಪಡಿಸಿದ.

ಅವನಿಗೆ ಈ ಮನೆಗೆ ಬರುವುದು ಇಷ್ಟವಿಲ್ಲವೆಂದಾದರೆ ಬರುವುದು ಬೇಡ, ಅವನು ಬದುಕಿದ್ದಾನೆಂಬ ಒಂದೇ ಒಂದು ಸುದ್ದಿಯನ್ನು ಯಾರಾದರೂ ನನ್ನ ಕಿವಿಗೆ ಹಾಕಿದರೆ ಸಾಕು, ಮರುಕ್ಷಣವೇ ನನಗೆ ಸಾವು ಬಂದರೂ ಚಿಂತೆಯಿಲ್ಲ ಎಂಬೆಲ್ಲ ಲೆಕ್ಕಾಚಾರಗಳಿಗೆ ತಾತ ಈ ಹಿಂದೆ ಇಳಿದಿರುತ್ತಿದ್ದ. ಹನುಮೇಶ ಬದುಕಿದ್ದಾನೆಂಬ ಸಣ್ಣ ನಿರೀಕ್ಷೆಯೇ ಅವನು ಇವತ್ತಲ್ಲ ನಾಳೆ ಕುಂತೂರುದೊಡ್ಡಿಗೆ ಬರಬಲ್ಲ ಎಂಬ ಎಂಥದೋ ವಿಶ್ವಾಸವನ್ನು ಹುಟ್ಟಿಸಿದ್ದಂತಿತ್ತು.

–೨–

ಚಿಕ್ಕ ಹುಡುಗರಾಗಿದ್ದ ನಾವು ಒಮ್ಮೆ ನಾಲ್ಕೈದು ಜನ ಸೇರಿಕೊಂಡು 'ತಾತ ನೀನು ಗಾಂಧೀಜಿನ ನೋಡಿದ್ದಿಯಾ? ಗಾಂಧಿ ತಾತ ನಮ್ಮೂರ್ಗೂ ಯಾವತ್ತಾದ್ರೂ ಬಂದಿದ್ರಾ?' ಅಂತ ಪ್ರಶ್ನೆ ಕೇಳಿದ್ದೆವು. ಅದಕ್ಕೆ ತಾತ 'ನಾನು ಗಾಂಧಿತಾತುನ್ನ ನೋಡಿಲ್ಲ, ಅಂಬೇಡ್ಕರ್ನ ನೋಡಿದ್ದೀನಿ. ಅವರ್ನ ನೋಡಕ್ಕಂತನೇ ನಾವು ಊರಜನ ಒಂದ್ಸಲ ಗಾಡಿ ಮಾಡ್ಕಂಡು ಚನ್ನಪಟ್ಣಕ್ಕೆ ಹೋಗಿದ್ವೊ. ಅಂಬೇಡ್ಕರ್ ಮಳವಳ್ಳಿ, ಮದ್ದೂರು, ಚನ್ನಪಟ್ಟಣ, ರಾಮನಗರ ದಾಟ್ಕಂಡು ಕೋಲಾರಕ್ಕೆ ಹೋಯ್ತಾವ್ರೆ ಅನ್ನೋ ಸುದ್ದಿ ಸಿಕ್ಕಿತ್ತು. ಆ ರಾಮಮ್ಮನ ಕೆರೆಏರಿ ಮೇಲೆ ನಿಂತು ಅಂಬೇಡ್ಕರ್ನ ದೂರದಿಂದ ನೋಡಿದ್ದೆ. ಚನ್ನಪಟ್ಟಣದಲ್ಲಿ ಅಂಬೇಡ್ಕರ್ ಬಸ್‌ಹತ್ತಕೂ ಮುಂಚೆ ಒಂದ್ಹತ್ತು ನಿಮಿಷ ಹಿಂದಿಲಿ ಏನೇನೋ ಮಾತಾಡಿದ್ರು, ಅವ್ರೇನ್ ಮಾತಾಡಿದ್ರು ಅನ್ನದು ಆಗ ಸರಿಯಾಗ್ ಅರ್ಥ ಆಗ್ಲಿಲ್ಲ' ಎಂದು ಹೇಳಿದ್ದ.

ನಮ್ಮ ತಾತ ಸ್ವಾತಂತ್ರ್ಯ ಹೋರಾಟಗಾರನಾಗಿರಲಿಲ್ಲ. ಒಂದು ದಿನಕ್ಕೂ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದೆ ಎಂದು ಯಾರ ಬಳಿಯೂ ಹೇಳಿಕೊಂಡು ಬಂದವನಲ್ಲ. ಎಂಟನೇ ತರಗತಿ ಓದುವಾಗಲೇ ತಾತನಿಗೆ ಚನ್ನಪಟ್ಟಣದ ಕೆಎಸ್‌ಐಸಿಯಲ್ಲಿ ದಿನಗೂಲಿ ನೌಕರನ ಕೆಲಸ ಸಿಕ್ಕಿ ನಂತರ ಅದು ಖಾಯಂ ಆಗಿ ಕುಂತೂರುದೊಡ್ಡಿಯ ಮೊದಲ ಸರ್ಕಾರಿ ನೌಕರ ಎನ್ನಿಸಿಕೊಂಡಿದ್ದ. ಅಂಬೇಡ್ಕರ್ ತನ್ನ ಜನರ ಒಳಿತಿಗಾಗಿ ನಡೆಸುತ್ತಿದ್ದ ಸಂಘರ್ಷದ ಪಾಠಗಳು ಅಪರೂಪಕ್ಕೊಮ್ಮೆ ಅಲ್ಲಿ ನಮ್ಮ ತಾತನ ಕಿವಿಮೇಲೆ ಬೀಳುತ್ತಿದ್ದವು.

ಕೆಎಸ್‌ಐಸಿಯಲ್ಲಿ ರಿಟೈರಾಗಿ ಕೈಗೆ ಬಂದ ದುಡ್ಡಿನಲ್ಲಿ ಸ್ವಲ್ಪ ಉಳಿಸಿ ಎತ್ತಿಟ್ಟು ಮನೆಯ ಮೇಲ್ಛಾವಣಿಯ ಮುರಿದ ಹೆಂಚುಗಳನ್ನು ತೆಗೆಸಿ ಹೊಸದನ್ನು ಖರೀದಿಸಲೆಂದು ಒಮ್ಮೆ ತಾತ ಚೆನ್ನಪಟ್ಟಣಕ್ಕೆ ಹೋಗಿದ್ದಾಗ, ರಾಮಮ್ಮನ ಕೆರೆ ಏರಿ ಮೇಲೆ ಕಂಡಿದ್ದ ಅಂಬೇಡ್ಕರರ ಮುಖ ಹಠಾತ್ ಕಣ್ಣಮುಂದೆ ಬಂದು ಮನೆಗೊಂದು ಅಂಬೇಡ್ಕರ್ ಫೋಟೋ ಕೊಂಡೋಯ್ದರೆ ಹೇಗೆ ಅಂದುಕೊಂಡಿದ್ದ. ಚೆನ್ನಪಟ್ಟಣದ ಮಹಾತ್ಮಾ ಗಾಂಧಿ ರಸ್ತೆಯ ಪೇಟೆಬೀದಿಯ ಎಲ್ಲ ತಿರುವುಗಳನ್ನು ಅಂಬೇಡ್ಕರ್ ಫೋಟೋದ ಸಲುವಾಗಿ ಸುತ್ತಿ ಬಂದಿದ್ದ. ಅವತ್ತು ಅವನ ಮೇಲೆ ಅನಾದಿ ಕಾಲದ ಸಿಟ್ಟಿರುವವನಂತೆ ಉರಿವ ಸೂರ್ಯ ಮುರುಕೊಂಡು ಬಿದ್ದಿದ್ದ. ಕಡೆಗೆ ಬಿಸಿಲಿನ ಝಳ ಕಮ್ಮಿಯಾಗಿ ಅಲ್ಲೆಲ್ಲೂ ಅಂಬೇಡ್ಕರ್ ಫೋಟೋ ಸಿಗದೆ ನಿರಾಶನಾಗಿ ತಾತ ಹಿಂತಿರುಗಿ ಬರುವಾಗ ದಾರಿ ಮಧ್ಯೆ ಸಿಕ್ಕ ಮಿನರ್ವ ಸ್ಟುಡಿಯೋ ಕಂಡವನೇ, ಏನೋ ಹೊಳೆದವನಂತೆ ಅದರತ್ತ ನಡೆದಿದ್ದ. ಆ ಸ್ಟುಡಿಯೋ ಮಾಲಿಕನಲ್ಲಿ ತನಗೆ ಹೇಗಾದರೂ ಮಾಡಿ ಅಂಬೇಡ್ಕರರ ದೊಡ್ಡ ಸೈಜಿನ ಫೋಟೋಬೇಕೆಂದು ಒತ್ತಾಯ ಮಾಡಿ ಕೈಲಿದ್ದ ಒಂದಿಷ್ಟು ದುಡ್ಡನ್ನು ಆತನಿಗೆ ಮುಂಗಡವಾಗಿ ಕೊಟ್ಟು ಮುಂದಿನವಾರ ಬರುವುದಾಗಿ ಹೇಳಿ ಮನೆಗೆ ಹಿಂದಿರುಗಿದ್ದ.

ವಾರಬಿಟ್ಟು ಸ್ಟುಡಿಯೋದ ಬಳಿ ಹೋದ ತಾತನಿಗೆ ಅದರ ಮಾಲೀಕ ಎಲ್ಲೆಲ್ಲೋ ತಡಕಾಡಿ ಕೊನೆಗೆ ಬೆಂಗಳೂರಿನ ಯಾವುದೋ ಸ್ಟುಡಿಯೋ ಒಂದರಲ್ಲಿ ಈ ಫೋಟೋ ಸಿಕ್ಕಿತೆಂದು ಹೇಳಿ ಅಂಬೇಡ್ಕರರ ದೊಡ್ಡ ಸೈಜಿನ ಫೋಟೋ ಕೊಟ್ಟಿದ್ದ. ಸೈಕಲಿನಲ್ಲಿ ಈ ಫೋಟೋವನ್ನು ತೆಗೆದುಕೊಂಡು ಹೋದರೆ ಹಾದಿ ಮಧ್ಯೆ ಎಲ್ಲಾದರೂ ಬಿದ್ದು ಹಾಳಾಗಿಬಿಡಬಹುದೆಂದು ಯೋಚಿಸಿ, ಚೆನ್ನ ಪಟ್ಟಣದ ಪೇಟೆಬೀದಿಯಲ್ಲಿ ತಮಗೆ ಗೊತ್ತಿರುವ ಅಂಗಡಿಯೊಂದರ ಮುಂದೆ ಸೈಕಲ್ ನಿಲ್ಲಿಸಿ, ಅವತ್ತು ಬಸ್ಸಿಗಾಗಿ ಒಂದೂ ಮುಕ್ಕಾಲು ಗಂಟೆ ಕಾದು ಮನೆಗೆ ಅಂಬೇಡ್ಕರ್ ಫೋಟೋದೊಂದಿಗೆ ತಾತ ಹಿಂದಿರುಗಿದ್ದ.

ಮನೆಯ ಗೋಡೆ ತುಂಬ ದೇವರ ಫೋಟೋಗಳೇ ತುಂಬಿಕೊಂಡು ಅಂಬೇಡ್ಕರ್ ಫೋಟೋವನ್ನು ನೇತು ಹಾಕುವಷ್ಟು ಜಾಗ ಅಲ್ಲೆಲ್ಲೂ ಯಾವ ಮೂಲೆಯಲ್ಲೂ ಕಾಣದೇ ನಮ್ಮ ತಾತ ನಾಲ್ಕೈದು ವಿವಿಧ ಭಂಗಿಗಳಲ್ಲಿ ನಿಂತಿದ್ದ ಚುಂಚನಗಿರಿಯ

> **ನನ್ನ ತಾಯಿಯ ತಮ್ಮನಾಗಿದ್ದ ಹನುಮೇಶ ಮನೆ ಬಿಟ್ಟುಹೋದ ಸುದ್ದಿ ಕಿವಿಗೆ ಬಿದ್ದ ಕೂಡಲೇ ನನ್ನ ತಾಯಿ ತಾನು ನಿತ್ಯ ಪೂಜಿಸುತ್ತಿದ್ದ ದೇವರುಗಳಿಗೆ ಬಾಯಿಗೆ ಬಂದಂತೆ ಬೈದು ತನ್ನ ನೋವು ತೋಡಿಕೊಂಡಿದ್ದಳು. ಪ್ರತಿವರ್ಷ ಕುಂತೂರುದೊಡ್ಡಿಗೆ ಹೋದಾಗ ನಾವು ಹುಡುಗರೆಲ್ಲ ನಮ್ಮ ಅಜ್ಜಿಯ ಕಡ್ಡಿಪುಡಿ ಚೀಲದಲ್ಲಿ ಅಪರೂಪಕ್ಕೆ ಸಿಗುತ್ತಿದ್ದ ಎಂಟಾಣೆಯ ದಮಡಿಯಲ್ಲಿ ಬಣ್ಣ ಬಣ್ಣದ ಕಾಗದಗಳನ್ನು ಕೊಂಡು ಗಾಳಿಪಟ ಮಾಡಿ ರಾಮಮ್ಮನ ಕೆರೆ ಏರಿಯ ದಿಬ್ಬದ ತಗ್ಗಿನಲ್ಲಿ ನಿಂತು ಹಾರಿಬಿಡುತ್ತಿದ್ದೆವು. ಹನುಮೇಶ ನಿಲ್ಲದ ಮನೆಯಲ್ಲಿ ಈಗ ಅಂತಹ ಸಂಭ್ರಮಕ್ಕೆ ಅವಕಾಶವಿರಲಿಲ್ಲ. ಹನುಮೇಶ ಮನೆ ಬಿಟ್ಟು ಹೋದಮೇಲೆ ನನ್ನ ಮಾವಂದಿರು ಪರಸ್ಪರ ಕಿಡಿಕಾರುತ್ತ ಒಬ್ಬರ ಮೇಲೊಬ್ಬರು ಬೈದಾಡುತ್ತ ಬದುಕುವುದು ಆ ಮನೆಯಲ್ಲಿ ರೂಢಿಯಾಗಿಬಿಟ್ಟಿತ್ತು.**

ಕಾಲಭೈರವೇಶ್ವರ ಸ್ವಾಮಿಯ ಎರಡು ಫೋಟೋಗಳನ್ನು ತೆಗೆದು ಆ ಜಾಗದಲ್ಲಿ ಅಂಬೇಡ್ಕರ್ ಫೋಟೋ ಹಾಕಿದ್ದ. ಕೆಳಗಿಳಿಸಿದ ಕಾಲಭೈರವೇಶ್ವರ ಸ್ವಾಮಿಯ ಫೋಟೋಗಳನ್ನು ಪೇಪರಿನಲ್ಲಿ ಸುತ್ತಿ, ದಾರದಲ್ಲಿ ಗಂಟುಹಾಕಿ, ಅಲ್ಮೆರಾದ ಮೇಲೆ ಇಡುವಾಗ ನಮ್ಮ ಅಜ್ಜಿ ಮಾವಂದಿರು ತಾತನಿಗೆ ಬಾಯಿಗೆ ಬಂದಂತೆ ಬೈದಿದ್ದರು. ಸಾಕ್ಷಾತ್ ದೇವರ ಪಕ್ಕ ದಿವಿನಾಗಿ ಕೋಟು ತೊಟ್ಟ ಅಂಬೇಡ್ಕರ್ ಫೋಟೋ ಆ ಮನೆಯ ಕೆಲವರಿಗೆ ಮುಜುಗರ ಕೇಡುಮಾಡಿತ್ತು. ಮನೆಗೆ ಯಾರಾದರೂ ನೆಂಟರು ಇಷ್ಟರು ಬಂದು ದೇವರ ಪಕ್ಕವೇ ಇರುವ ಈ ಫೋಟೋವನ್ನು ನೋಡಿದರೆ ನಗುವುದಿಲ್ಲವೇ ಎಂದು ತಾತನ ಮೇಲೆ ನನ್ನ ಮಾವನ ಹೆಂಡತಿಯೊಬ್ಬಳು ರೇಗಾಡಿದ್ದಳು. ಅಂಬೇಡ್ಕರ್ ಫೋಟೋವನ್ನು ದೇವರ ಮನೆಯಿಂದ ತೆಗೆಯದಿದ್ದರೆ ನಾನೇ ಅದನ್ನು ಅಲ್ಲಿಂದ ತೆಗೆದು ತಿಪ್ಪೆಗೆಸೆಯುವೆ ಎಂದು ನನ್ನ ಮಾವ ತಾತನೆದುರು ರೋಪು ಹಾಕಿ ಹೆದರಿಸಿದ್ದ. ಕಡೆಗೆ ಬೇರೆ ದಾರಿ ಕಾಣದೆ ತಾತ ಆ ಚೆಂದನೆಯ ಅಂಬೇಡ್ಕರ್ ಫೋಟೋವನ್ನು ಕೆಳಗಿಳಿಸಿ ಅಡುಗೆ ಮನೆಯ ಮೂಲೆಯೊಂದರಲ್ಲಿ ನೇತುಹಾಕಿದ್ದ.

ದಿನ ಕಳೆದಂತೆ ಅಂಬೇಡ್ಕರ್ ಫೋಟೋ ಅಲ್ಲಿ ಅಡುಗೆ ಮನೆಯಲ್ಲಿ ಇದೆ ಎಂಬ ಅರಿವು ತಾತನೊಬ್ಬನಿಗೆ ಬಿಟ್ಟರೆ ಆ ಮನೆಯ ಯಾರಿಗೂ ಇದ್ದಂತಿರಲಿಲ್ಲ. ಅಡುಗೆ ಮನೆಯ ಕಪ್ಪು ಹೊಗೆ, ಘಾಟಿನಿಂದ ಅಂಬೇಡ್ಕರ್ ಫೋಟೋ ಯಾರ ಕಣ್ಣಿಗೂ ಸ್ಪಷ್ಟವಾಗಿ ಕಾಣದೇ ಮಸಿ ಮೆತ್ತಿಕೊಂಡು ಮಾಸಿಹೋಗಿತ್ತು. ತಾತ ತನಗೆ ನಿವೃತ್ತಿ ಯಾದಾಗ ಬಂದ ಹಣದಿಂದ ಒಂದು ಹೊಸ ಸೈಕಲ್ ಖರೀದಿಸಿ ಪೆಡಲ್ ತುಳಿಯುವ ಜಾಗದಲ್ಲಿ 'ಸ್ವಾಭಿಮಾನದ ದುಡಿಮೆ, ಜೀವನದುದ್ದಕ್ಕೂ ಅದರ ಹಿರಿಮೆ–ಡಾ.ಬಿ. ಆರ್.ಅಂಬೇಡ್ಕರ್' ಎಂದು ಬರೆಸಿ ಖುಷಿಪಟ್ಟುಕೊಂಡಿದ್ದ. ಕುಂತೂರುದೊಡ್ಡಿಯ ಕೆಲವು ಮುದಿಜೀವಗಳು ತಾವು ಇಂಡಿಯಾದ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದೆವೆಂದು ಹೇಳಿ ಸರ್ಕಾರದಿಂದ ಸಿಗಬಹುದಾಗಿದ್ದ ಎಲ್ಲ ಸವಲತ್ತುಗಳಿಗಾಗಿ ಅರ್ಜಿ ಹಾಕಿ, ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಕಚೇರಿಗಳನ್ನು ಸುತ್ತು ಹಾಕುವುದೇ ದೊಡ್ಡ ಘನತೆ ಎಂಬಂತೆ ಬದುಕುತ್ತಿದ್ದವು. ವಯಸ್ಸಿನ ಸುಳ್ಳು ದಾಖಲೆಗಳನ್ನು ನೀಡಿ ಇಂಡಿಯಾದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದಕ್ಕೆ ಸಿಗುತ್ತಿದ್ದ ಪುಡಿಗಾಸಿನ ಪಿಂಚಣಿಗಾಗಿ ತಮ್ಮ ಮುಪ್ಪಿನ ಇಳಿವಯಸ್ಸಿನಲ್ಲಿ ಅದೇ ಆಗಷ್ಟೇ ಹಳ್ಳಿಗೆ ಎಡತಾಕುತ್ತಿದ್ದ ಆಧುನಿಕ ರಾಜಕಾರಣದ ಪುಢಾರಿಗಳ ಸಖ್ಯವನ್ನು ಬೆಳೆಸಿಕೊಂಡಿದ್ದವು. ಅವು ನಮ್ಮ ತಾತನಿಗೂ ಈ ಪಿಂಚಣಿ ಪಡೆಯಲು ಅರ್ಜಿ ಹಾಕುವಂತೆ ಸಲಹೆ ನೀಡಿದ್ದವು. ತಾತ ಅದ್ಯಾವುದಕ್ಕೂ ಕಿವಿಗೊಡದೆ ಅದರೆಡೆಗೆ ದಿವ್ಯ ನಿರ್ಲಕ್ಷ್ಯವನ್ನು ಬೆಳೆಸಿಕೊಂಡಿದ್ದ.

–೩–

ಹನುಮೇಶನ ಪತ್ರ ಬಂದು ನಂತರ ಅದು ಉಂಟು ಮಾಡಿದ ನೋವಿನಿಂದ ಚೇತರಿಸಿಕೊಂಡು ಆ ಮನೆಯ ಜನ ಸಹಜ ಸ್ಥಿತಿಗೆ ಮರಳುತ್ತಿರುವಾಗಲೇ ಹನುಮೇಶನಿಂದ ಮತ್ತೊಂದು ಪತ್ರ ಬಂತು. ಪತ್ರ ಬಿಚ್ಚಿದವರಿಗೆ ಕಂಡದ್ದು:

'ನಾನು ಬಾಲ್ಯದಲ್ಲಿ ಕಂಡ ಮನೆಗೆ ಮತ್ತು ಆ ಮನೆಯೊಳಗೆ ಇನ್ನೂ ಬದುಕುತ್ತಿರುವ ಎಲ್ಲ ಜೀವಗಳಿಗೆ ನನ್ನ ನಮಸ್ಕಾರಗಳು. ಕುಂತೂರುದೊಡ್ಡಿಯೆಂಬ ಆ ಊರಿನ, ಆ ನರಕದಿಂದ, ಆ ಮನೆಯಿಂದ ನಾನು ತಪ್ಪಿಸಿಕೊಂಡು ಬೆಂಗಳೂರಿಗೆ ಬರದಿದ್ದರೆ ಇಷ್ಟೊತ್ತಿಗೆ ಆ ಊರಿನಲ್ಲಿಯೇ ಯಾವತ್ತೋ ತೀರಿಹೋಗಿರುತ್ತಿದ್ದೆ. ಇರಲಿ, ಈಗ ಇದು ಮುಖ್ಯವಲ್ಲ. ನಾನು ಮನೆ ಬಿಟ್ಟು ಬೆಂಗಳೂರಿಗೆ ಬಂದು ಇಲ್ಲಿ ಹೋಟೆಲೊಂದರಲ್ಲಿ ಸುಳ್ಳು ಜಾತಿ ಹೇಳಿ ಕೆಲಸಕ್ಕೆ ಸೇರಿಕೊಂಡೆ. ಆ ಹೋಟೆಲಿನ ಮಾಲೀಕ ಲಿಂಗಾಯತನಾದ್ದರಿಂದ ನಾನು ಲಿಂಗಾಯತನಾದೆ. ಹತ್ತು ವರ್ಷಗಳಿಂದ ಆ ಹೋಟೆಲಿನಲ್ಲಿ ನಾನು ತೋರಿದ ನಿಷ್ಠೆ, ಪ್ರಾಮಾಣಿಕತೆಯನ್ನು ಮೆಚ್ಚಿ ಅದರ ಮಾಲೀಕರು ಅವರ ಸ್ವಂತ ಮಗಳನ್ನು ನನಗೆ ಕೊಟ್ಟು ಮದುವೆ ಮಾಡಿದ್ದಾರೆ. ಆ ಮದುವೆಯ ಲಗ್ನ ಪತ್ರಿಕೆಯನ್ನು ನಿಮಗೆ ಕಳಿಸಿದೆ. ಆದರೆ ನೀವ್ಯಾರೂ ಮದುವೆಗೆ ಬರಲಿಲ್ಲ, ಇರಲಿ.

ನಾನು ಈ ಹೋಟೆಲಿನಲ್ಲಿ ಕೆಲಸಕ್ಕೆ ಸೇರುವಾಗ ದಿಕ್ಕಿಲ್ಲದ ತಬ್ಬಲಿಯೆಂದು ಹೇಳಿ ಕೆಲಸ ಗಿಟ್ಟಿಸಿಕೊಳ್ಳಬೇಕಿತ್ತು. ಆದರೆ ಹಾಗೆ ಮಾಡದೇ ತಪ್ಪು ಮಾಡಿಬಿಟ್ಟೆ. ಇದು ನನ್ನ ಬದುಕಿನಲ್ಲಿ ಮುಂದೊಂದು ದಿನ ಈ ರೀತಿ ಇಕ್ಕಟ್ಟಿಗೆ ಸಿಲುಕಿಸುತ್ತದೆ ಎಂದುಕೊಂಡಿರಲಿಲ್ಲ. ಈಗ ಮದುವೆಯ ನಂತರದ ಸಂಭ್ರಮದಲ್ಲಿರುವ ನನ್ನ ಮಾವ ನಿಮ್ಮನ್ನೆಲ್ಲ ಕಂಡು ಮಾತನಾಡಬೇಕಂತೆ. ಹೀಗಾಗಿ ಕುಂತೂರು ದೊಡ್ಡಿಯೆಂಬ ಆ ನರಕಕ್ಕೆ ನನ್ನ ಮಾವನ ಮನೆ ಮಂದಿಯೊಂದಿಗೆ ಅನಿವಾರ್ಯವಾಗಿ ಬರಬೇಕಾಗಿದೆ.

ಈಗ ನನಗೋಸ್ಕರ ನೀವು ಮಾಡಬೇಕಾದುದಿಷ್ಟೇ. ನಾವು ಅಲ್ಲಿಗೆ ಸಂಕ್ರಾಂತಿ ಹಬ್ಬದ ದಿನ ಬರುವುದೆಂದು ತೀರ್ಮಾನಿಸಿಕೊಂಡಿದ್ದೇವೆ. ನಾವು ಹೊಲೆಯರು ಎಂಬ ಯಾವ ಗುರುತುಗಳೂ ಅಲ್ಲಿ ನಮ್ಮ ಕಣ್ಣಿಗೆ ಬೀಳದಂತೆ ಒರೆಸಿಹಾಕಿ. ಚೆನ್ನಪಟ್ಟಣದ ಪೇಟೆ ಬೀದಿಯಿಂದ ಬಸವಣ್ಣನವರ ದೊಡ್ಡ ಫೋಟೋ ತಂದು ನೇತುಹಾಕಿ. ನಾನು ಇಲ್ಲಿ ಹನುಮೇಶ ಎಂಬ ಹೆಸರಿನ ಜೊತೆಗೆ ಶಿವಮೂರ್ತಿ ಎಂಬ ಹೆಸರನ್ನೂ ಇಟ್ಟುಕೊಂಡಿರುವೆ. ಸಾಧ್ಯವಾದರೆ ನೀವೆಲ್ಲ ನನ್ನನ್ನು ಶಿವಮೂರ್ತಿಯೆಂದೇ ಕರೆಯಿರಿ. ನಾವು ಬಂದ ಖುಷಿಗೆ ಅಲ್ಲಿ ಮಾಂಸ ಹೆಂಡ ಎಂದು ಹಬ್ಬ ಮಾಡಿಬಿಟ್ಟೀರಿ ಹುಷಾರ್. ಉಳಿದಂತೆ ಎಲ್ಲವೂ ಕ್ಷೇಮ. ನಿಮ್ಮನ್ನೆಲ್ಲ ಭೇಟಿಯಾಗುವ ದಿನಗಳನ್ನು ಎದುರು ನೋಡುತ್ತಾ...

ಇಂತಿ ನಿಮ್ಮವನು

ಹನುಮೇಶ ಉರುಫ್ ಶಿವಮೂರ್ತಿ.'

ಪತ್ರ ಓದಿ ಮುಗಿಸಿದ ತಾತನ ಕಣ್ಣಲ್ಲಿ ನೀರಿತ್ತು. ನನ್ನ ಸೋದರ ಮಾವನೊಬ್ಬ, ಸಂಬಂಧದಲ್ಲಿ ಹನುಮೇಶನಿಗೆ ಅಣ್ಣನಾಗಬೇಕಿದ್ದವನು ಆ ಸಂದರ್ಭದಲ್ಲಿ, 'ಆ ಬಡ್ಡಿ ಮಗ ನಮ್ಮ ಬಾಳಾಟ ಎಂಗದೆ ಅನ್ನದ ನೋಡಕೆ ಬತ್ತಿದನೆ. ಬರ್ಲಿ ಅವನ ಚರ್ಮ ಸುಲಿತಿನಿ' ಎಂದು ಕೂಗಾಡಿದ. ಸುಳ್ಳು ಜಾತಿ ಹೇಳಿ ಹೀಗೆ ಮೋಸಮಾಡಿ ಮದುವೆ ಯಾಗಿದ್ದಾನಲ್ಲ, ನಾಳೆ ಹೆಣ್ಣಿನ ಕಡೆಯವರಿಗೆ ಗೊತ್ತಾದರೆ ಏನಾಗಬಹುದು ಎಂಬ ಚಿಂತೆ ಯಲ್ಲಿ ಮನೆಯ ಎಲ್ಲರೂ ಆತಂಕಪಡತೊಡಗಿದರು.

ಆದರೆ ಕ್ರಮೇಣ ಆತಂಕ, ಹನುಮೇಶ ಮೇಲ್ಜಾತಿ ಹೆಣ್ಣನ್ನು ಮದುವೆಯಾಗಿದ್ದರಿಂದ ರೋಮಾಂಚನವಾಗಿ ಪರಿವರ್ತನೆಯಾಯ್ತು. 'ಸತ್ತೇ ಹೋಗಿರಬಹುದು ಎಂದುಕೊಂಡವನು ಮತ್ತೆ ಜೀವ ಪಡೆದು ಬದುಕಿ ಬಂದಂತೆ ಬರುತ್ತಿದ್ದಾನೆ. ಅವನು ಈ ಮನೆ ಬಿಟ್ಟು ಹೋಗುವಾಗ ಈ ಊರು ಮನೆಯೆಲ್ಲ ನರಕದಂತೆ ಕಂಡಿರಬೇಕು. ಮತ್ತೆ ಈಗ ಇದು ನರಕದಂತೆ ಕಾಣುವುದು ಬೇಡ. ಅವನ ಪತ್ರ ನೋಡಿದರೆ ಒಂದು ದಿನಕ್ಕಿಂತ ಇಲ್ಲಿ ಹೆಚ್ಚು ಸಮಯ ಕಳೆಯಲಾರ ಅನ್ನಿಸುತ್ತೆ. ಹೀಗೆ ಬಂದು ತಕ್ಷಣವೇ ಹೊರಟು ನಿಲ್ಲುವ ಹನುಮೇಶನಿಗೆ ನೋವಾಗುವಂತೆ ಯಾರೂ ನಡೆದುಕೊಳ್ಳಬೇಡಿ' ಎಂದು ತಾತ ಮನೆ ಮಂದಿಗೆ ಕೇಳಿಕೊಂಡ.

ಸಂಕ್ರಾಂತಿ ಹಬ್ಬದ ಜೊತೆಗೆ ಹನುಮೇಶ ಕುಂತೂರುದೊಡ್ಡಿಗೆ ಬರುವ ದಿನವೂ ಹತ್ತಿರ ಬಂತು. ಮನೆಗೆ ಸುಣ್ಣಬಣ್ಣ ಹೊಡೆಸುತ್ತಿದ್ದ ತಾತನಿಗೆ ತಕ್ಷಣ ಬಸವಣ್ಣನ ಫೋಟೋ ತರಬೇಕೆಂದು ನೆನಪಾಗಿ ಚೆನ್ನಪಟ್ಟಣದ ಪೇಟೆ ಬೀದಿಗೆ ಹೊರಟು ನಿಂತ. ಈ ಹಿಂದೆ ಅಂಬೇಡ್ಕರ್ ಫೋಟೋಗಾಗಿ ಸುತ್ತಾಡಿದಂತೆ ತಾತ ಬಸವಣ್ಣನ ಫೋಟೋಗಾಗಿಯೂ ಸುತ್ತಾಡಿದ. ಆದರೆ ಎಲ್ಲೂ ಫೋಟೋ ಸಿಗಲಿಲ್ಲ. ಬಸವಣ್ಣನ ಫೋಟೋ ಸಿಗದಿದ್ದರೆ ಏನು ಮಾಡುವುದು ಎಂಬ ಚಿಂತೆಯಲ್ಲಿದ್ದ ಅವನಿಗೆ ಪಕ್ಕದ ತಿಟ್ಟಮಾರನಹಳ್ಳಿಯ

ಹನುಮೇಶನ ಪತ್ರ ಬಂದು ನಂತರ ಅದು ಉಂಟು ಮಾಡಿದ ನೋವಿನಿಂದ ಚೇತರಿಸಿಕೊಂಡು ಆ ಮನೆಯ ಜನ ಸಹಜ ಸ್ಥಿತಿಗೆ ಮರಳುತ್ತಿರುವಾಗಲೇ ಹನುಮೇಶನಿಂದ ಮತ್ತೊಂದು ಪತ್ರ ಬಂತು. ಪತ್ರ ಬಿಚ್ಚಿದವರಿಗೆ ಕಂಡದ್ದು:

'ನಾನು ಬಾಲ್ಯದಲ್ಲಿ ಕಂಡ ಮನೆಗೆ ಮತ್ತು ಆ ಮನೆಯೊಳಗೆ ಇನ್ನೂ ಬದುಕುತ್ತಿರುವ ಎಲ್ಲ ಜೀವಗಳಿಗೆ ನನ್ನ ನಮಸ್ಕಾರಗಳು. ಕುಂತೂರುದೊಡ್ಡಿಯೆಂಬ ಆ ಊರಿನ, ಆ ನರಕದಿಂದ, ಆ ಮನೆಯಿಂದ ನಾನು ತಪ್ಪಿಸಿಕೊಂಡು ಬೆಂಗಳೂರಿಗೆ ಬರದಿದ್ದರೆ ಇಷ್ಟೊತ್ತಿಗೆ ಆ ಊರಿನಲ್ಲಿಯೇ ಯಾವತ್ತೋ ತೀರಿಹೋಗಿರುತ್ತಿದ್ದೆ. ಇರಲಿ, ಈಗ ಇದು ಮುಖ್ಯವಲ್ಲ. ನಾನು ಮನೆ ಬಿಟ್ಟು ಬೆಂಗಳೂರಿಗೆ ಬಂದು ಇಲ್ಲಿ ಹೋಟೆಲೊಂದರಲ್ಲಿ ಸುಳ್ಳು ಜಾತಿ ಹೇಳಿ ಕೆಲಸಕ್ಕೆ ಸೇರಿಕೊಂಡೆ. ಆ ಹೋಟೆಲಿನ ಮಾಲೀಕ ಲಿಂಗಾಯತನಾದ್ದರಿಂದ ನಾನು ಲಿಂಗಾಯತನಾದೆ. ಹತ್ತು ವರ್ಷಗಳಿಂದ ಆ ಹೋಟೆಲಿನಲ್ಲಿ ನಾನು ತೋರಿದ ನಿಷ್ಠೆ, ಪ್ರಾಮಾಣಿಕತೆಯನ್ನು ಮೆಚ್ಚಿ ಅದರ ಮಾಲೀಕರು ಅವರ ಸ್ವಂತ ಮಗಳನ್ನು ನನಗೆ ಕೊಟ್ಟು ಮದುವೆ ಮಾಡಿದ್ದಾರೆ. ಆ ಮದುವೆಯ ಲಗ್ನ ಪತ್ರಿಕೆಯನ್ನು ನಿಮಗೆ ಕಳಿಸಿದೆ. ಆದರೆ ನೀವ್ಯಾರೂ ಮದುವೆಗೆ ಬರಲಿಲ್ಲ,

ಸಂಕ್ರಾಂತಿ ಹಬ್ಬಕ್ಕೂ ಮುನ್ನ ಹನುಮೇಶ ಬರುವಸನೆಂದು ಸಂಭ್ರಮದಲ್ಲಿ ಮನೆಯ ಪಾತ್ರೆ ಹಳೆಯ ಸಾಮಾನು ಫೋಟೋಗಳನ್ನು ತೊಳೆದು ಒರೆಸಿ ಇಡುತ್ತಿದ್ದ ನಮ್ಮ ತಾತನ ಮನೆಯ ಹೆಂಗಸರು ಹೊಗೆ ಮಸಿ ಮೆತ್ತಿ ಕೊಂಡು ಕರ್ರಗಿದ್ದ ಅಂಬೇಡ್ಕರ್ ಫೋಟೋವನ್ನು ಒದ್ದೆ ಬಟ್ಟೆ ಮಾಡಿಕೊಂಡು ನೀಟಾಗಿ ಒರೆಸಿದ್ದರು. ವಿಷಯ ತಿಳಿದು ಗಾಬರಿಯಾದ ಹನುಮೇಶ ತನ್ನನ್ನು ಹೀಗೆ ಸಿಕ್ಕಿಸಲೆಂದು ನಮ್ಮಪ್ಪ ಈ ತರಹದ ಕುತಂತ್ರ ರೂಪಿಸಿದ್ದಾನೆಂದು ವಿನಾಕಾರಣ ತಾತನ ಮೇಲೆ ಸಿಟ್ಟಾದ. ಹನುಮೇಶನ ಅತ್ತೆಮಾವನೊಂದಿಗೆ, ನಮ್ಮ ಮನೆಯ ಹೆಂಗಸರು ಗಂಡಸರೆಲ್ಲ ಸೇರಿ ತಾತನಿಗೆ ಬಾಯಿಗೆ ಬಂದದ್ದನ್ನೆಲ್ಲ ಬೈದು ಕೆಲವರು ಹೊಡೆಯಲೂ ಮುಂದಾಗಿದ್ದರು. ತಾತ ಮತ್ತೆ ಅದೇ ಮೌನದಲ್ಲಿ ತನ್ನಿಂದ ತಪ್ಪಾಗಿದ್ದರೆ ಕ್ಷಮಿಸಿ ಎನ್ನುವಂತೆ ಎಲ್ಲರೆದುರು ತಲೆ ತಗ್ಗಿಸಿಕೊಂಡು ನಿಂತಿದ್ದ. ವಿಷಯ ಕಿವಿಯಿಂದ ಕಿವಿಗೆ, ಮನೆಯಿಂದ ಮನೆಗೆ ದಾಟಿ ಕೇರಿಯೆಲ್ಲ ವ್ಯಾಪಿಸಿ ಕಡೆಗೆ ಹನುಮೇಶನ ಅತ್ತೆ ಮಾವ ಊರ ಹಿರಿಯರ ಮುಂದೆ ನ್ಯಾಯ ಪಂಚಾಯ್ತಿ ನಡೆಸಲೇಬೇಕೆಂದು ಪಟ್ಟು ಹಿಡಿದರು.

ಲಿಂಗಾಯತರೊಬ್ಬರ ಮನೆಯಲ್ಲಿ ಬಸವಣ್ಣನ ಫೋಟೋ ನೋಡಿದ್ದು ನೆನಪಿಗೆ ಬಂತು. ಸ್ವಲ್ಪ ಗೆಲುವಾದ ತಾತ ಎಲ್ಲೂ ಬಸವಣ್ಣನ ಫೋಟೋ ಸಿಗದಿದ್ದರೆ ತಿಟ್ಟಮಾರನಹಳ್ಳಿಯ ಆ ಲಿಂಗಾಯತರ ಮನೆಯಲ್ಲಿಯೇ ಬಸವಣ್ಣನ ಫೋಟೋ ಕೇಳುವುದೆಂದು ಗಟ್ಟಿಯಾಗಿ ನಿರ್ಧರಿಸಿಕೊಂಡ. ಇಡೀ ಚೆನ್ನಪಟ್ಟಣದ ಹಾದಿಬೀದಿಗಳನ್ನೆಲ್ಲ ಸುತ್ತಾಡಿದರೂ ಬಸವಣ್ಣನ ಫೋಟೋ ಸಿಗಲಿಲ್ಲ. ಬೇರೆ ದಾರಿ ಕಾಣದೆ ತಿಟ್ಟಮಾರನಹಳ್ಳಿಯ ಕಡೆಗೆ ಹೊರಟ.

ಆ ಲಿಂಗಾಯತರ ಮನೆ ಯಜಮಾನರ ಹೆಸರನ್ನು ಷಡಕ್ಷರಪ್ಪ ಎಂದು ನೆನಪಿಗೆ ತಂದುಕೊಂಡ ತಾತ ಅವರ ಬಳಿ ಯಾವ ಸಬೂಬು ಹೇಳಿ ಬಸವಣ್ಣನ ಫೋಟೋ ಕೇಳುವುದು ಎಂದು ಯೋಚಿಸತೊಡಗಿದ. ಷಡಕ್ಷರಪ್ಪನವರ ಮನೆ ತೀರಾ ಹತ್ತಿರ ಬರುತ್ತಿದ್ದಂತೆ ತಾತನ ತೊಡೆಗಳಲ್ಲಿ ನಡುಕ ಪ್ರಾರಂಭವಾಯಿತು. ಷಡಕ್ಷರಪ್ಪನವರ ಮನೆ ಬಾಗಿಲಿಗೆ 'ಶರಣು ಒಳಗೆ ಬನ್ನಿ' ಎಂಬ ಸ್ಟಿಕರ್ ಅಂಟಿಸಲಾಗಿತ್ತು. ಆ ಮನೆಯ ಕದ ತಟ್ಟಿದ ತಾತನ ಎದೆಬಡಿತಕ್ಕೆ ಸಮುದ್ರದ ಅಲೆಗೆ ಸಿಕ್ಕಿ ಕೊಚ್ಚಿ ಹೋಗುತ್ತಿರುವ ಗಾಳಿಪಟದ ಗತಿ ಇದ್ದಿರಬಹುದು. ಮನೆ ಬಾಗಿಲು ತೆರೆದು ಹೆಂಗಸೊಬ್ಬಳು ಷಡಕ್ಷರಪ್ಪನವರು ಮನೆಯಲ್ಲಿಲ್ಲ ಎಂದು ತಿಳಿಸಿದಳು. ತಾತ ಸ್ವಲ್ಪ ನಿಟ್ಟುಸಿರು ಬಿಟ್ಟು 'ಅಲ್ಲಿ ನೇತು ಹಾಕಿದೀರಲ್ಲ, ಬಸವಣ್ಣನ ಫೋಟೋ. ಅದೇ ಗಾತ್ರದ ಬಸವಣ್ಣನ ಫೋಟೋವನ್ನು ನಾನು ಕೊಳ್ಳಬೇಕಿತ್ತು. ಈ ಹಿಂದೆ ನಿಮ್ಮ ಮನೆಗೆ ಬಂದಾಗ ಈ ಫೋಟೋ ನೋಡಿದ್ದೆ. ಮತ್ತೆ ನೋಡಿ ಹೋಗಲೆಂದುಬಂದೆ' ಎಂದುಬಿಟ್ಟ. ಆ ಮನೆಯ ಹೆಂಗಸು ಫೋಟೋ ನೋಡಿಯಾಂಯ್ತಲ್ಲ, ಇನ್ನು ನಡೆಯಿರಿ ಎಂಬಂತೆ ಮನೆಯ ಬಾಗಿಲಕಡೆ ಕಣ್ಣು ನೆಟ್ಟಳು. ತಕ್ಷಣವೇ ಅಲ್ಲಿಂದ ಹೊರನಡೆದ ತಾತ 'ಅಪ್ಪಿತಪ್ಪಿ ಹೊಲೆಯರು ಸುಳ್ಳು ಹೇಳಿಯಾದರೂ ಲಿಂಗಾಯತರ ಮನೆಯ ಬಸವಣ್ಣನ ಫೋಟೋ ಮುಟ್ಟಲು ಸಾಧ್ಯವೆ? ಇಂಥವೆಲ್ಲ ಯಾವತ್ತಾದರೂ ಈ ಹಳ್ಳಿಯಲ್ಲಿ ಘಟಿಸೀತೆ' ಎಂದುಕೊಂಡ. ಮನೆಯಲ್ಲಿ ಬಸವಣ್ಣನ ಫೋಟೋ ಇಲ್ಲದ್ದನ್ನು ಕಂಡು ಹನುಮೇಶ ಬೇಸರ ಪಟ್ಟುಕೊಳ್ಳಬಹುದೆಂದು ದುಃಖಿತನಾದ.

–೪–

ಲಿಂಗದೊಳಗೆ ಶಿವ ತಪಸ್ಸಿಗೆ ಕೂತಿರುವ ಹಳೆಯ ಫೋಟೋವೊಂದನ್ನು ತೊಳೆದು ಹಜಾರದಲ್ಲಿ ಎಲ್ಲರಿಗೂ ಕಾಣುವಂತೆ ನೇತುಹಾಕಿ ಇಡೀ ಮನೆಯನ್ನು ಸಿಂಗರಿಸ ಲಾಗಿತ್ತು. ಹನುಮೇಶ ತನ್ನ ಮಾವನ ಮನೆಯವರೊಂದಿಗೆ ಬರುವ ಸುದ್ದಿ ಅಕ್ಕಪಕ್ಕದ ಮನೆಯವರ ಕಿವಿಗಳಿಗೂ ಬಿದ್ದಿತ್ತು. ಆ ಮನೆಗೆ ಸಂಕ್ರಾಂತಿ ಹಬ್ಬದ ಸಂಭ್ರಮಕ್ಕಿಂತ ಹನುಮೇಶ ಹತ್ತು ವರ್ಷಗಳ ನಂತರ ಮರಳಿ ಮನೆಗೆ ಬರುತ್ತಿರುವುದೇ ದೊಡ್ಡ ವಿಶೇಷವಾಗಿತ್ತು. ಅವನು ಹೇಗೆಲ್ಲ ಬದಲಾಗಿರಬಹುದು, ಎಷ್ಟೆಲ್ಲ ಬೆಳೆದಿರಬಹುದು, ನಮ್ಮನ್ನು ಗುರುತು ಹಿಡಿಯುವನೇ, ಮನೆ ಹೆಂಗಸರಿಗೆಲ್ಲ ರೇಷ್ಮೆ ಸೀರೆ ತರಬಹುದೇ.. ಬರೀ ಇವೇ ಮಾತುಗಳು. ತಾತ ಮಾತ್ರ ಬಸವಣ್ಣನ ಫೋಟೋ ಸಿಗದ ಚಿಂತೆಯಲ್ಲಿ ಕೊರಗುತ್ತಿದ್ದ.

ತಾತನ ಮನೆಯ ಮುಂದೆ ಹಳದಿಬಣ್ಣದ ಕಾರೊಂದು ಬಂದುನಿಂತಾಗ ಕುಂತೂರುದೊಡ್ಡಿಯ ಸಣ್ಣ ಹುಡುಗರಿಂದ ದೊಡ್ಡ ಹುಡುಗರವರೆಗೆ ಎಲ್ಲರೂ ಗುಂಪುಗುಂಪಾಗಿ ಬಂದು ಜಮಾಯಿಸಿದ್ದರು. ಕಾರಿನಿಂದಿಳಿದ ಹನುಮೇಶ ತನ್ನಂತೆಯೇ ಊರು ಕೂಡ ಬದಲಾಗಿರುವುದನ್ನು ಸುತ್ತ ನೋಡಿ ಗ್ರಹಿಸಿದ. ಮನೆ ಬಿಟ್ಟು ಹೋಗುವಾಗ ತೆಳ್ಳಗೆ ಪ್ಯಾದೆಯಂತಿದ್ದವನು ಈಗ ಕಟ್ಟುಮಸ್ತಾಗಿ ಬೆಳೆದು ನಿಂತಿದ್ದ. ಹನುಮೇಶನೊಂದಿಗೆ ಓದಿದವರು, ಅವನ ಸರೀಕರು ಗುರುತು ಹಿಡಿದು ನಗಾಡುತ್ತಾ ಅದು ಇದು ಮಾತನಾಡತೊಡಗಿದರು. ನಂತರ ಮನೆಯೊಳಗೆ ಹೋದ ಹನುಮೇಶ ಗೋಡೆಗೆ ನೇತು ಹಾಕಿದ್ದ ತನ್ನ ಬಾಲ್ಯದ ಫೋಟೋವನ್ನು ತಾನೇ ನೋಡುತ್ತಾ ನಿಂತ. ಮನೆಯ ಹೆಂಗಸರು ಈಗ ಇನ್ನೇನು ಹನುಮೇಶ ತಮ್ಮನ್ನು ಗುರುತು ಹಿಡಿದು ಮಾತನಾಡಿಸಬಹುದೆಂದು ಅವನ ಕಣ್ಣಿಗೆ ಬೀಳುವಂತೆ ಅವನ ಮುಂದೆಯೇ ಓಡಾಡುತ್ತಿದ್ದರು.

ಹನುಮೇಶನ ಎದುರು ಬಂದು ನಿಂತ ತಾತನ ಕಣ್ಣುಗಳು ಅವನೊಂದಿಗೆ ಆಡದೆ ಉಳಿದಿರುವ ಮತ್ತು ಆಡಬೇಕಾದ ಮಾತುಗಳು ಅವನು ನೆಲೆಯಾದ ಊರಿನಷ್ಟು ವಿಸ್ತಾರವಾಗಿ ಹಬ್ಬಿ ನಿಂತಿವೆ ಎನ್ನುವಂತೆ ನೋಡುತ್ತಿದ್ದವು. ತಾನು ಮನೆ ಬಿಟ್ಟು ಹೋಗದಿದ್ದರೆ ಇಲ್ಲೇ ಈ ನರಕದಲ್ಲೇ ನರಳಿ, ನರಳಿ, ಸಾಯಬೇಕಿತ್ತು. ಹೇಗೋ ಪಾರಾಗಿ ಬದುಕಿಕೊಂಡೆ ಎನ್ನುವಂತೆ ತಾತನೆದುರು ನಿಂತುಕೊಂಡ ಹನುಮೇಶ ಒಳ ಮನೆಯತ್ತ ಕಣ್ಣು ಹಾಯಿಸುತ್ತಿದ್ದ.

ಮಧ್ಯಾಹ್ನ ಊಟದ ನಂತರ ದಣಿವಾರಿಸಿಕೊಳ್ಳಲು ಸಿದ್ಧವಾಗುತ್ತಿದ್ದ ಹನುಮೇಶನ ಅತ್ತೆ ನೀರು ಕುಡಿಯಲೆಂದು ಅಡುಗೆ ಕೋಣೆಗೆ ಹೋದವಳು ಅಲ್ಲಿ ಮೂಲೆಯಲ್ಲಿ ನೇತು ಹಾಕಿದ್ದ ಅಂಬೇಡ್ಕರ್ ಫೋಟೋ ಕಂಡು ದಿಗಿಲುಗೊಂಡು ತಕ್ಷಣವೇ ತನ್ನ ಗಂಡನನ್ನು ಅಡುಗೆ ಕೋಣೆಗೆ ಕರೆದು ಆ ಫೋಟೋವನ್ನು ತೋರಿಸಿದಳು. 'ಎಲ್ಲಾದರೂ ಉಂಟೆ? ಸಾಚಾ ಲಿಂಗಾಯಿತರ್‍ಯಾರೂ ಇಂಥಾ ಬೆರಕೆ ಕೆಲಸಕ್ಕೆ ಕೈ ಹಾಕಲಾರರು. ನನಗೆ ಮೊದಲಿನಿಂದಲೂ ಇವನ ಮೇಲೆ ಅನುಮಾನವಿತ್ತು. ನಾವು ಮೋಸ ಹೋದೆವು. ಸುಳ್ಳು ಜಾತಿ

ಹೇಳಿ ಈ ನೀಚ ನಮಗೆಲ್ಲ ಮೋಸ ಮಾಡಿದ. ನಮ್ಮ ಮಗಳ ಬಾಳನ್ನು ನಾವೇ ನಮ್ಮ ಕೈಯಾರ ನಾಶ ಮಾಡಿದೆವು. ಈ ಪಾಪಿಗಳು ಇನ್ನಷ್ಟು ದ್ರೋಹ ಎಸಗುವ ಮುನ್ನ ಇವರನ್ನು ಪೊಲೀಸರಿಗೆ ಹಿಡಿದುಕೊಡಬೇಕು' ಎಂದು ಅಡುಗೆ ಮನೆಯಿಂದಲೇ ಕೂಗಿಕೊಂಡು ಹನುಮೇಶನ ಮಾವ ಮನೆಯ ಮುಂಭಾಗದ ರಸ್ತೆಯ ಬಳಿ ನಿಂತು ಅಲ್ಲಿ ಬೀದಿಯಲ್ಲಿ ಹೋಗುವ ಜನರನ್ನೆಲ್ಲ ಕರೆದು ನಾವು ಈ ಘಟಿಂಗರಿಂದ ಮೋಸ ಹೋದೆವು ಎಂದು ದೊಡ್ಡ ಗಂಟಲು ತೆಗೆದು ಕೂಗುತ್ತಿದ್ದ.

ಸಂಕ್ರಾಂತಿ ಹಬ್ಬಕ್ಕೂ ಮುನ್ನ ಹನುಮೇಶ ಬರುವನೆಂದು ಸಂಭ್ರಮದಲ್ಲಿ ಮನೆಯ ಪಾತ್ರೆ ಹಳೆಯ ಸಾಮಾನು ಫೋಟೋಗಳನ್ನು ತೊಳೆದು ಒರೆಸಿ ಇಡುತ್ತಿದ್ದ ನಮ್ಮ ತಾತನ ಮನೆಯ ಹೆಂಗಸರು ಹೊಗೆ ಮಸಿ ಮೆತ್ತಿಕೊಂಡು ಕಪ್ಪಗಿದ್ದ ಅಂಬೇಡ್ಕರ್ ಫೋಟೋವನ್ನು ಒದ್ದೆ ಬಟ್ಟೆ ಮಾಡಿಕೊಂಡು ನೀಟಾಗಿ ಒರೆಸಿದ್ದರು. ವಿಷಯ ತಿಳಿದು ಗಾಬರಿಯಾದ ಹನುಮೇಶ ತನ್ನನ್ನು ಹೀಗೆ ಸಿಕ್ಕಿಸಲೆಂದು ನಮ್ಮಪ್ಪ ಈ ತರಹದ ಕುತಂತ್ರ ರೂಪಿಸಿದ್ದಾನೆಂದು ವಿನಾಕಾರಣ ತಾತನ ಮೇಲೆ ಸಿಟ್ಟಾದ. ಹನುಮೇಶನ ಅತ್ತೆ ಮಾವನೊಂದಿಗೆ, ನಮ್ಮ ಮನೆಯ ಹೆಂಗಸರು ಗಂಡಸರೆಲ್ಲ ಸೇರಿ ತಾತನಿಗೆ ಬಾಯಿಗೆ ಬಂದದ್ದನ್ನೆಲ್ಲ ಬೈದು ಕೆಲವರು ಹೊಡೆಯಲೂ ಮುಂದಾಗಿದ್ದರು. ತಾತ ಮತ್ತೆ ಅದೇ ಮೌನದಲ್ಲಿ ತನ್ನಿಂದ ತಪ್ಪಾಗಿದ್ದರೆ ಕ್ಷಮಿಸಿ ಎನ್ನುವಂತೆ ಎಲ್ಲರೆದುರು ತಲೆ ತಗ್ಗಿಸಿಕೊಂಡು ನಿಂತಿದ್ದ.

ವಿಷಯ ಕಿವಿಯಿಂದ ಕಿವಿಗೆ, ಮನೆಯಿಂದ ಮನೆಗೆ ದಾಟಿ ಕೇರಿಯೆಲ್ಲ ವ್ಯಾಪಿಸಿ ಕಡೆಗೆ ಹನುಮೇಶನ ಅತ್ತೆ ಮಾವ ಊರ ಹಿರಿಯರ ಮುಂದೆ ನ್ಯಾಯ ಪಂಚಾಯ್ತಿ ನಡೆಸಲೇಬೇಕೆಂದು ಪಟ್ಟು ಹಿಡಿದರು.

— ೫ —

ಒಂದು ಅಂಬೇಡ್ಕರ್ ಫೋಟೋ ಎರಡು ಕುಟುಂಬಗಳ ನಡುವಿನ ಖಾಸಗಿ



ಸಂಗತಿಯೊಂದನ್ನು ಊರ ಎಲ್ಲರೆದುರು ಬೆತ್ತಲೆಮಾಡಿ ನಿಲ್ಲಿಸಿತ್ತು. ಈ ದ್ರೋಹಿಗಳಿಂದಾಗಿ ದೊಡ್ಡ ತಪ್ಪು ನಡೆದುಹೋಗಿದೆ. ಇಂಥ ಘನಘೋರ ಅಪರಾಧ ಭೂಮಿಯ ಮೇಲೆ ಎಲ್ಲಾದರೂ ನಡೆಯಲು ಸಾಧ್ಯವೇ? ಯಾಕೆ ನಮ್ಮ ಕುಲದೇವರು ಇವರ ಎದೆಗೆ ತ್ರಿಶೂಲ ನೆಟ್ಟಿಲ್ಲ? ಈ ಪಾಪಿಗಳನ್ನು ಜೀವಂತ ದಹಿಸಿಹಾಕಬೇಕು. ಈ ಬಗೆಯ ತೀರ್ಪನ್ನೇ ನೀವು ಕೊಡಬೇಕು ಎಂದು ಹನುಮೇಶನ ಮಾವ ನ್ಯಾಯ ಪಂಚಾಯ್ತಿ ನಡೆಸಲು ಬಂದ ಊರ ಮುಖಂಡರಲ್ಲಿ ಕೇಳಿಕೊಂಡ.

ಹಾಗೆಲ್ಲ ತೀರ್ಪು ನೀಡಲು ಸಾಧ್ಯವಿಲ್ಲ. ಹನುಮೇಶನ ಹೆಂಡತಿಗೆ ಈತನೊಂದಿಗೆ ಬದುಕಲು ಆಸೆ ಇದ್ದರೆ ಇವರನ್ನು ಸುಮ್ಮನೆ ಬದುಕಲು ಬಿಡಿ. ಆತನಿಗೆ ಸಿಗಬೇಕಾದ ಹೊಲಗದ್ದೆ ತೋಟದ ಆಸ್ತಿಯ ಪಾಲನ್ನು ನ್ಯಾಯ ಬದ್ಧವಾಗಿ ಕೊಡಿಸಲಾಗುವುದು ಎಂದು ನ್ಯಾಯ ಪಂಚಾಯ್ತಿಯ ಊರ ಹಿರಿಯ ಮುಖಂಡನೊಬ್ಬ ಹೇಳಿದ.

ಈ ಮಾತುಗಳಿಂದ ರೊಚ್ಚಿಗೆದ್ದ ಹನುಮೇಶನ ಮಾವ 'ಈ ಪಾಪಿಗಳನ್ನು ಶಿಕ್ಷಿಸಿ ಎಂದರೆ ಸಮಾಧಾನದ ಮಾತುಗಳನ್ನು ಹೇಳಲು ಬರುವಿರಾ? ಇವರ ಮೈಗೆ ಪೊಲೀಸರ ಲಾಠಿ ರುಚಿ ತೋರಿಸಲೇಬೇಕು. ನಿಮ್ಮ ಕೈಲಿ ಇವರನ್ನು ಶಿಕ್ಷಿಸಲು ಸಾಧ್ಯವಿಲ್ಲದಿದ್ದರೆ ನಮ್ಮ ವಶಕ್ಕೆ ಬಿಡಿ. ನರಕ ಅನ್ನುವುದು ಹೇಗಿರುತ್ತದೆ ಎಂದು ತೋರಿಸಿಕೊಡುತ್ತೇವೆ' ಎಂದೆಲ್ಲ ಎಗರಾಡಿದ. ಪಂಚಾಯ್ತಿಯ ಮುಖಂಡರು ಮಾತ್ರ ಸುಮ್ಮನಿದ್ದರು. ಅದರಲ್ಲೊಬ್ಬ ಮುಂದೆ ಬಂದು 'ಈ ಪಂಚಾಯ್ತಿ ಕೊಡುವ ತೀರ್ಪಿನಲ್ಲಿ ನಿಮಗೆ ನಂಬಿಕೆ ಇಲ್ಲದಿದ್ದರೆ ಪೊಲೀಸ್ ಠಾಣೆಗೆ ಹೋಗಬಹುದು. ಇಂಥ ಘಟನೆ ಈ ಹಿಂದೆ ನಮ್ಮ ಹಳ್ಳಿಯಲ್ಲಿ ನಡೆದಿರಲಿಲ್ಲ. ಜಾತಿ ಗುರುತುಗಳ ಕಿತ್ತೆಸೆದು ಜಾತಿ ಮೀರಿ ಬದುಕಬೇಕು ಎಂದ ಬಸವಣ್ಣನವರ ಜಾತಿಯಿಂದ ಬಂದ ನೀವು ಹೀಗೆ ಜಾತಿಯ ಕೆಸರಿನಲ್ಲಿ ಬಿದ್ದು ಹೊರಳಾಡುತ್ತಿರುವುದು ಸರಿಯಲ್ಲ. ಮನುಷ್ಯರನ್ನು ಮನುಷ್ಯರಂತೆ ಮಾತ್ರ ಕಾಣಿ. ಚೆನ್ನಾಗಿ ಬಾಳಿ ಬದುಕಬೇಕಾದ ಜೀವಗಳ ಎದೆಗಳಿಗೆ ಕೊಳ್ಳಿ ಇಡಬೇಡಿ' ಎಂದು ಸಂತನಂತೆ ಹೇಳತೊಡಗಿದ.

ಸಂಜೆ ಸರಿದು ರಾತ್ರಿಯಾಗುವುದರಲ್ಲಿತ್ತು. ಊರಿಗೆ ಕತ್ತಲು ತುಂಬಿಕೊಳ್ಳುತ್ತಿದ್ದಂತೆಯೇ ಜನ ಸದ್ದುಮಾಡುತ್ತ ಪಂಚಾಯ್ತಿ ಕಟ್ಟೆಯಿಂದ ಚೆದುರಲು ಸಿದ್ಧವಾಗುತ್ತಿದ್ದರು. ಪಂಚಾಯ್ತಿ ಮುಖಂಡರು ಅದೇ ಕಟ್ಟೆಯಲ್ಲಿ ಅಸಹಾಯಕರಾಗಿ ತಮ್ಮಿಂದ ಏನೂ ಮಾಡಲಿಕ್ಕಾಗಲಿಲ್ಲವೆಂಬ ಸ್ಥಿತಿಯಲ್ಲಿ ಕೂತಿದ್ದರು. ಹನುಮೇಶನ ಅತ್ತೆಮಾವ ಪಂಚಾಯ್ತಿ ಮುಖಂಡರ ಮಾತಿನಿಂದ ಮತ್ತಷ್ಟು ಕುಪಿತರಾಗಿ ಈ ಊರಿಗೆ ಪೊಲೀಸರ ದರ್ಶನ ಮಾಡಿಸಬೇಕೆಂದು ಚೆನ್ನಪಟ್ಟಣದ ಪೊಲೀಸ್ ಠಾಣೆಗೆ ದೂರು ಕೊಡಲೆಂದು ಹೊರಟು ನಿಂತರು. ಅವರನ್ನು ಸಮಾಧಾನಿಸಲು ಊರಿನ ನಾಲ್ಕೈದು ಮಂದಿ ಪ್ರಯತ್ನಿಸಿದರಾದರೂ ಅದಕ್ಕೆ ಸೊಪ್ಪು ಹಾಕದೆ ಅವರು ಸೇಡು ತೀರಿಸಿಕೊಳ್ಳುವ ಆವೇಶದಲ್ಲಿ ಅಲ್ಲಿಂದ ಹೊರಟು ಕತ್ತಲಲ್ಲಿ ಮರೆಯಾದರು.

ತಾತ ತನ್ನ ಸೋತ ಮುಖವನ್ನು ಹೊತ್ತುಕೊಂಡು ಮನೆಯತ್ತ ಹೆಜ್ಜೆ ಹಾಕಿದ. ಊರಿಗೆ ಪೊಲೀಸರು ಬಂದರೆ ಅವರನ್ನು ಹೇಗೆ ಎದುರಿಸುವುದೆಂದು ಕೆಲವರು ಆ ಕತ್ತಲಲ್ಲೂ ಮಾತಾಡಿಕೊಳ್ಳುತ್ತಿದ್ದರು. 'ಇದಕ್ಕೆಲ್ಲ ಕಾರಣನಾದ ಹನುಮೇಶನನ್ನು ಕಂಬಕ್ಕೆ ಕಟ್ಟಿ ನಾಲ್ಕು ಬಾರಿಸಬೇಕಿತ್ತು. ಆ ಪಾಪಿ ಊರುಬಿಟ್ಟು ಹೋಗಿ ಇಷ್ಟೆಲ್ಲ ಅವಾಂತರಗಳಿಗೆ ಕಾರಣನಾದ. ಅಂಥವನನ್ನು ಮತ್ತಿನ್ನೆಂದೂ ಈ ಊರಿಗೆ ಸೇರಿಸಬಾರದು. ಬೇಕಿದ್ದರೆ ಪೊಲೀಸರು ಅವನೊಬ್ಬನನ್ನೇ ಹಿಡಿದುಕೊಂಡು ಹೋಗಿ ಚರ್ಮ ಸುಲಿಯಲಿ. ಅವನು ಮಾಡಿದ ಜಾತಿಗೆಟ್ಟ ಕೆಲಸದಿಂದಾಗಿ ಪಾಪ ಏನೂ ಮಾಡದ ಅಮಾಯಕರು ಶಿಕ್ಷೆ ತಿನ್ನಬೇಕಾಗಿದೆ. ಆ ಬಡ್ಡಿ ಮಗ ಇಡೀ ಕುಂತೂರುದೊಡ್ಡಿಗೆ ಕೆಟ್ಟ ಹೆಸರು ತಂದ' ಎಂದು ನಾಲ್ಕೈದು ಜನ ಸೇರಿ ತಮಗೆ ತೋಚಿದ್ದನ್ನು ಒಬ್ಬರ ಮಾತು ಮುಗಿಯುವಷ್ಟರಲ್ಲಿ ಮತ್ತೊಬ್ಬರು ಮಾತಾಡಿಕೊಳ್ಳುತ್ತಿದ್ದರು.

— ೬ —

ನಡುರಾತ್ರಿಯಲ್ಲಿ ಕದ ತಟ್ಟಿದ ಪೊಲೀಸರು ನಮ್ಮ ತಾತನನ್ನು ಮತ್ತು ಮಾವಂದಿರನ್ನು ವಿಚಾರಣೆಗೆಂದು ಮನೆಯ ಹೊರಗೆ ಕರೆದೊಯ್ದು ಜೀಪಿನಲ್ಲಿ ಕೂರಿಸಿಕೊಂಡರು. ಹನುಮೇಶನ ಹೆಂಡತಿ ಎಲ್ಲೂ ಕಾಣುತ್ತಿಲ್ಲ ಎಂದು ಆತನ ಅತ್ತೆ ಬೊಬ್ಬೆಹಾಕುತ್ತಿದ್ದಳು. ಮನೆಯೊಳಗೆ ಬಂದು ನೋಡಿದರೆ ಹನುಮೇಶನೂ ಇರಲಿಲ್ಲ.

ಒಂದು ಅಂಬೇಡ್ಕರ್ ಫೋಟೋ ಇಷ್ಟೆಲ್ಲ ಅಧ್ವಾನಗಳಿಗೆ ಕಾರಣವಾಯಿತೆ? ಬಾಲ್ಯದ ಶಾಲೆಯಲ್ಲಿ ಅಂಬೇಡ್ಕರರನ್ನು ಸಂಘರ್ಷದ ಕಿಡಿ, ಅವಮಾನದ ಗಾಯಗಳಿಗೆ ಮದ್ದು ಹಚ್ಚಿದವರು ಎಂದೆಲ್ಲ ಏನೇನೋ ಹೇಳಿಕೊಟ್ಟ ಮೇಷ್ಟರುಗಳ ಮೇಲೆ ನನ್ನ ಅನುಮಾನ ಹೆಚ್ಚಾಯಿತು. ಊರಿನ ನನ್ನ ತಾತನ ಮನೆಯಲ್ಲಿ ಈಗ ಮನೆಮಂದಿಯೆಲ್ಲ ಖಳನೊಬ್ಬನನ್ನು ಗಲ್ಲಿಗೇರಿಸುವಂತೆ ಅಂಬೇಡ್ಕರ್ ಫೋಟೋ ಎದುರಿಗಿಟ್ಟುಕೊಂಡು ಛೀ ಥೂ ಎಂದು ಬೈದಾಡುತ್ತಿದ್ದರು. ನಿಜಕ್ಕೂ ಆ ಫೋಟೋದಲ್ಲಿರುವ ಮನುಷ್ಯ ಅಷ್ಟೊಂದು ಕೆಟ್ಟವನೆ? ನನ್ನಲ್ಲಿ ಪ್ರಶ್ನೆಗಳು ಮಾತ್ರ ಇದ್ದವು. ಉತ್ತರಿಸುವ ಸ್ಥಿತಿಯಲ್ಲಿ ಆಗ ಅಲ್ಲಿ ಯಾರೂ ಇರಲಿಲ್ಲ. ಬಹುಶಃ ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಕೊಡ ಬಲ್ಲವನಾಗಿದ್ದ ನನ್ನ ತಾತನಲ್ಲಿ ಆ ರಾತ್ರಿ ಮಾತು ಸತ್ತು ಹೋಗಿತ್ತು. □

ನಮ್ಮ ಪುಟ್ಟಸ್ವಾಮಿಗೆ 'ಸ್ವರ್ಣಕಮಲ'

ನಮ್ಮ ಪುಟ್ಟಸ್ವಾಮಿಗೆ ರಾಷ್ಟ್ರೀಯ ಸ್ವರ್ಣ ಕಮಲ ಪ್ರಶಸ್ತಿ ಗರಿ! 'ಸಂವಾದ' ಸಂಪಾದಕೀಯ ಬಳಗದ ಸದಸ್ಯರಲ್ಲೊಬ್ಬರಾದ ಡಾ. ಕೆ. ಪುಟ್ಟಸ್ವಾಮಿ ಅವರಿಗೆ ಬಂದ ಈ ಪ್ರಶಸ್ತಿ 'ಸಂವಾದ'ಕ್ಕೇ ಬಂದಷ್ಟು ಖುಷಿಯಾಗಿದೆ ನಮಗೆ.

ಅಪ್ಪಟ ಸಿನಿಮಾ ಪ್ರೇಮಿಯಾದ ಪುಟ್ಟಸ್ವಾಮಿಯವರು ಕನ್ನಡ ಚಿತ್ರೋದ್ಯಮ ಕುರಿತು ಬರೆದ 'ಸಿನಿಮಾ ಯಾನ' ಪುಸ್ತಕಕ್ಕೆ 2009ನೇ ಸಾಲಿನ 57ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯಾದ 'ಸ್ವರ್ಣಕಮಲ' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಅತ್ಯಂತ ಪ್ರತಿಷ್ಠಿತ ರಾಷ್ಟ್ರ ಮಟ್ಟದ ಪ್ರಶಸ್ತಿಯೊಂದನ್ನು ಕನ್ನಡ ಪುಸ್ತಕ ಲೋಕಕ್ಕೆ ಮೊಟ್ಟ ಮೊದಲ ಬಾರಿಗೆ ತಂದು ಕೊಟ್ಟ ಹೆಗ್ಗಳಿಕೆ ಇವರದು. ಭಾರತದ ಇತರೆ ಭಾಷೆಗಳವರ ಲಾಬಿ ಪೈಪೋಟಿಗಳನ್ನು ಮೀರಿ ಈ ಪುರಸ್ಕಾರಗಳನ್ನು ಪಡೆಯುವುದು ಸುಲಭದ ಮಾತಲ್ಲ. ವಿಸ್ತಾರವಾದ ಅನುಭವ ಹಾಗೂ ಸತ್ವಯುತ ನೋಟ ಈ ಕೃತಿಯಲ್ಲಿ ದಾಖಲಾಗಿರುವುದರಿಂದ ಪ್ರಶಸ್ತಿ ದಕ್ಕಿದೆ.

ಪುಟ್ಟಸ್ವಾಮಿಯವರ ಹುಟ್ಟೂರು ಕನಕಪುರ ತಾಲ್ಲೂಕಿನ ವರಗೇರಹಳ್ಳಿ. ಸಿನಿಮಾ ಗೀಳು ಅವರಿಗೆ ಹುಟ್ಟಿನಿಂದಲೇ ಶುರುವಾಗಿತ್ತು. ಶಾಲೆಯ ರಜಾದಿನಗಳಲ್ಲಿ ದನಗಳನ್ನು ಮೇಯಿಸುವಾಗ ಕನಕಪುರದ ಕಡೆಯಿಂದ ಬೆಂಗಳೂರಿಗೆ ಹೋಗುವ ಬಸ್ಸು ಲಾರಿಗಳ ಕಡೆಗೇ ಇವರ ಗಮನ. ಯಾವಾಗ ಬೆಂಗಳೂರಿಗೆ ಹೋದೇನೋ ಸಿನಿಮಾಗಳನ್ನು ನೋಡಿಯೇನೂ ಎಂಬ ತವಕ. ಪೇಟೆಯಿಂದ ಸಿನಿಮಾ ನೋಡಿ ಬಂದವರ ಬಳಿ ಸಿನಿಮಾ ಹಾಡುಗಳು, ಕಥೆ, ನಟರ ಬಗ್ಗೆ ತಿಳಿದುಕೊಳ್ಳುವ ಖಯಾಲಿ. ತನ್ನೂರಿನಲ್ಲಿ ಅಂಟಿಸಿರುತ್ತಿದ್ದ ಸಿನಿಮಾ ಪೋಸ್ಟರ್‌ಗಳನ್ನು ನೋಡಿ ಮೈಮರೆಯುತ್ತಿದ್ದ ಇವರಿಗೆ ಮನೆಯವರಿಂದ ನೀನು ಹಾಳಾಗಿ ಹೋಗ್ತಿಯಾ ಎಂಬ ಬಯ್ಗಳ. ಅಷ್ಟೊಂದು ಸಿನಿಮಾ ಹುಚ್ಚು ಪುಟ್ಟಸ್ವಾಮಿಯವರದು.

ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಗ್ರಾಮಾಂತರ ಶಾಲೆಗಳಲ್ಲಿ ಮುಂದುವರೆಸಿದ್ದರಿಂದ ಆಗೊಂದು ಈಗೊಂದು ಬಿಟ್ಟರೆ ಸಿನಿಮಾಗಳನ್ನು ನೋಡುವ ಅವಕಾಶ ಒದಗಿ ಬಂದಿರಲಿಲ್ಲ. ಪ್ರೌಢಶಾಲೆ ಕಲಿಯಲು ಕೆಜಿಎಫ್ ಸೇರಿದ ನಂತರ ಕದ್ದು ಸಿನಿಮಾ ನೋಡಲು ಅವಕಾಶ ವಾಯಿತು. ಅದೂ ಕನ್ನಡ ಚಿತ್ರಗಳನ್ನು ತಾನು ಉಚಿತವಾಗಿ ತೋರಿಸುವ ಬೇರೆ ಭಾಷೆಯ ಚಿತ್ರಗಳನ್ನು ತನ್ನ ಸಹಪಾಠಿಯೊಬ್ಬ ತೋರಿಸಬೇಕೆಂಬ ಒಡಂಬಡಿಕೆಯೊಂದಿಗೆ. ಹೆಚ್ಚು ಲಾಭವಾಗಿದ್ದು ಪುಟ್ಟಸ್ವಾಮಿಯವರಿಗೇ.

ಕೃಷಿ ಪದವೀಧರನಾಗುವ ಹಂಬಲ. ಬೆಂಗಳೂರು ಕೃಷಿ ವಿವಿಯಿಂದ 1980ರಲ್ಲಿ ಕೃಷಿ ಪದವಿ ಪಡೆದರು. ಮೈಸೂರು ವಿವಿಯಿಂದ ಪತ್ರಿಕೋದ್ಯಮದಲ್ಲಿ ಡಿಪ್ಲೊಮೊ ಪದವಿ ಪಡೆದ ಇವರು ಪ್ರಜಾವಾಣಿ ಪತ್ರಿಕೆಯ ಮೂಲಕ ಪತ್ರಕರ್ತರಾಗಿ 1981ರಲ್ಲಿ ವೃತ್ತಿ ಜೀವನ ಆರಂಭಿಸಿದರು. ನಂತರ 'ಮುಂಗಾರು' ಪತ್ರಿಕೆಯಲ್ಲಿ ವೃತ್ತಿ ಮುಂದುವರೆಸಿದ ಅವರು 1985ರಲ್ಲಿ ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆಗೆ ಸೇರಿದರು.

ಅನಂತರ ಅರಣ್ಯ, ಜೀವ ಪರಿಸರ, ಹಿಂದುಳಿದ ವರ್ಗಗಳ ಇಲಾಖೆ, ಯುವಜನ ಸೇವೆ ಮತ್ತು ಕ್ರೀಡೆ ಮುಂತಾದ ಸರ್ಕಾರಿ ಇಲಾಖೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಡಿ.ಲಿಟ್ ಪದವಿ ಪಡೆದಿದ್ದ ಇವರು 2002ರಲ್ಲಿ ಅದೇ ವಿವಿಯಲ್ಲಿ ವಿಜ್ಞಾನಗಳ ಇತಿಹಾಸ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ ಹೆಗ್ಗಳಿಕೆ ಅವರದು. ನಂತರ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ, ಪ್ರಸ್ತುತ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಪಿಆರ್‌ಓ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸಾಹಿತ್ಯ ಕ್ಷೇತ್ರದಲ್ಲೂ ತಮ್ಮ ಹೆಜ್ಜೆ ಗುರುತುಗಳನ್ನು ಮೂಡಿಸಿರುವ ಇವರು ಚಾರ್ಲ್ಸ್ ಡಾರ್ವಿನ್ನರ 'ದಿ ಆರಿಜಿನ್ ಆಫ್ ಸ್ಪೀಷಿಸ್' ಕೃತಿ ಸೇರಿದಂತೆ ಜಗತ್ತಿನ ಹಲವು ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. 'ಕಿರಿಯರಿಗಾಗಿ ಸಚಿತ್ರ ವಿಜ್ಞಾನ ವಿಶ್ವಕೋಶ', ಕನ್ನಡ ಸಾಹಿತ್ಯ ಲೋಕಕ್ಕೆ ವಿಶಿಷ್ಟವೆನಿಸಿದ ಕ್ರೀಡಾ ಜಗತ್ತಿನ ವಿಸ್ಮಯವೆನಿಸಿದ 'ಭುವನದ ಬೆಡಗು' ಕೃತಿಯನ್ನು ರಚಿಸಿದ್ದಾರೆ. ಚಾರ್ಲ್ಸ್ ಡಾರ್ವಿನ್, ಅಲೆಕ್ಸಾಂಡರ್ ಫ್ಲೆಮಿಂಗ್, ಮಾರ್ಗರೇಟ್ ಮೀಡ್, ಫ್ಲಾರೆನ್ಸ್ ನೈಟಿಂಗೇಲ್, ಮಾರ್ಕೋನಿ ಮುಂತಾದ ಅನೇಕ ಸಾಧಕರ ಜೀವನ ಚರಿತ್ರೆಗಳನ್ನು ಬರೆದಿರುವ ಇವರು ಖ್ಯಾತ ಛಾಯಾಚಿತ್ರಗ್ರಾಹಕರಾದ ಕೃಪಾಕರ-ಸೇನಾನಿಯವರ ಜೊತೆಗೂಡಿ ರಚಿಸಿದ 'ಜೀವ ಜಾಲ' ಕೃತಿ ಜೀವ ಜಗತ್ತಿನ ವಿಸ್ಮಯಗಳನ್ನು ತೋರುವ ಅಪರೂಪದ ಕೃತಿಯೆಂದು ಅಪಾರ ಮೆಚ್ಚುಗೆಗೆ ಪಾತ್ರವಾಗಿದೆ. 1999ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಪ್ರಶಸ್ತಿ ಹಾಗೂ ರಾಜ್ಯ ಪರಿಸರ ಪ್ರಶಸ್ತಿಗಳನ್ನು ಗಳಿಸಿದ್ದಾರೆ.

ಇಷ್ಟೆಲ್ಲಾ ಕಾರ್ಯ ಚಟುವಟಿಕೆಗಳ ಒತ್ತಡದ ನಡುವೆಯೂ ಇವರ ಸಿನಿಮಾ ಪ್ರೀತಿ ಕಡಿಮೆಯಾಗಿರಲಿಲ್ಲ. ತಾವು ಕೇಳಿದ, ಓದಿದ, ನೋಡಿದ ಅನುಭವಗಳನ್ನು ಟಿಪ್ಪಣಿ ಮಾಡಿಟ್ಟುಕೊಳ್ಳುತ್ತಿದ್ದ ಪುಟ್ಟಸ್ವಾಮಿಯವರು ಅವನ್ನೆಲ್ಲಾ ಒಟ್ಟುಗೂಡಿಸಿ ತಮ್ಮ ಗಾಢವಾದ ಅಧ್ಯಯನದ ಮೂಲಕ ಓದುಗರಿಗೆ ಉಣಬಡಿಸಿದ ರಸಪಾಕವೇ 'ಸಿನಿಮಾ ಯಾನ' ಕೃತಿ. ಸತತ ಧ್ಯಾನ, ಅನುರುಕ್ತಿ ಪ್ರೌಢಿಮೆಗಳು ಎರಕ ಹೊಯ್ದ ಈ ಕೃತಿಯಲ್ಲಿ 75ವರ್ಷಗಳ ಕನ್ನಡ ಚಿತ್ರರಂಗದ ಹಿನ್ನೋಟವನ್ನು ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ. ಇವರಿಂದ ಮತ್ತಷ್ಟು ಉತ್ತಮ ಕೃತಿಗಳು ಮೂಡಿಬರಲಿ ಎಂಬ ಆಶಯ 'ಸಂವಾದ' ಬಳಗದ್ದು.

ತಾರತಮ್ಯದ ಲೂಟಿಕೋರ ಶಿಕ್ಷಣ ದಂಧೆ ಮತ್ತು ಸಾಮಾಜಿಕ ನ್ಯಾಯ

ವೈ. ಮರಿಸ್ವಾಮಿ

ವೈದಿಕ ವಿದ್ಯೆ ಮತ್ತು ಪೌರೋಹಿತ್ಯದ ಅಧಿಪತಿಯಾಗಿರಬೇಕು. ಕ್ಷತ್ರಿಯ ರಾಜ್ಯಭಾರ ಮಾಡಬೇಕು. ವೈಶ್ಯ ವ್ಯಾಪಾರ ಮಾಡಬೇಕು. ಶೂದ್ರ ವ್ಯವಸಾಯ ಮಾಡಿಕೊಂಡು ಮೇಲಿನ ಈ ಮೂರೂ ವರ್ಣಗಳ ಸೇವೆ ಮಾಡಬೇಕು. ಇದು ಕ್ರಿಸ್ತ ಪೂರ್ವ 185ರಲ್ಲಿ ಜಾರಿಗೆ ಬಂದು, ಇಂದಿಗೂ ಅಘೋಷಿತ ಸಂವಿಧಾನವಾಗಿ ಭಾರತದ ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಮತ್ತು ಸಾಂಸ್ಕೃತಿಕ ವ್ಯವಸ್ಥೆಯನ್ನು ನಿಯಂತ್ರಿಸುತ್ತಿರುವ ಮನುಸ್ಮೃತಿಯ ಕಟ್ಟಳೆಯಾಗಿದೆ.

ಶಿಕ್ಷಣ ಮತ್ತು ಪೌರೋಹಿತ್ಯವನ್ನು ತನ್ನ ಗುತ್ತಿಗೆಯನ್ನಾಗಿರಿಸಿ ಕೊಂಡಿರುವ ವೈದಿಕ ಸಂತತಿ, ಈ ಎರಡು ಅಂಶಗಳನ್ನೇ ಶೋಷಣೆಯ ಆಯುಧವನ್ನಾಗಿ ಬಳಸಿಕೊಳ್ಳುತ್ತಾ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಸಮುದಾಯಗಳ ಮೇಲೆ ಸವಾರಿಮಾಡುತ್ತಾ ಬಂದಿದೆ.

ರಾಮಯಣ ಮತ್ತು ಮಹಾಭಾರತಗಳ ಕಾಲದಿಂದಲೂ ಮನುವಾದಿಗಳು ಈ ದೇಶದ ಶೇ.90ರಷ್ಟಿರುವ ಬಹುಜನ ಸಮುದಾಯಗಳಿಗೆ ಶಿಕ್ಷಣದ ಹಕ್ಕನ್ನು ನಿರಾಕರಿಸುತ್ತಲೇ ಬಂದಿದ್ದಾರೆ. ಗುರುದಕ್ಷಣೆಯ ಹೆಸರಿನಲ್ಲಿ ದ್ರೋಣಾಚಾರ್ಯ ಏಕಲವ್ಯನ ಹೆಬ್ಬೆರಳನ್ನು ಬಲಿ ತೆಗೆದುಕೊಂಡ ಪ್ರಕರಣವನ್ನು ಹಾಗೂ ಬ್ರಾಹ್ಮಣರನ್ನು ಸಂತೃಪ್ತಿಗೋಳಿಸಲು ರಾಮ ಶಂಭೂಕನ ಶಿರಚ್ಛೇದನ ಮಾಡಿದ ನಡವಳಿಕೆಯನ್ನು, ಈ ಹಿನ್ನಲೆಯಲ್ಲಿ ನೋಡಬೇಕಾಗಿದೆ. ಒಂದು ವೇಳೆ ಬ್ರಿಟೀಷರು ಈ ನೆಲದಲ್ಲಿ ಕಾಲಿಡದಿದ್ದರೆ, ಭಾರತದ ಒಹುಸಂಖ್ಯಾತ ಸಮುದಾಯಗಳಿಗೆ ಇಂದಿಗೂ ಕೂಡ ಶಿಕ್ಷಣದ ಬಾಗಿಲು ತೆರೆಯುತ್ತಿರಲಿಲ್ಲ ಹಾಗೂ ಸ್ವಾತಂತ್ರ್ಯ ಹೋರಾಟವೇ ನಡೆಯುತ್ತಿರಲಿಲ್ಲ ಎಂಬುದು ನನ್ನ ಭಾವನೆ!

ಕ್ರಿ.ಶ. 1835ರಲ್ಲಿ ಬ್ರಿಟೀಷರು ಸಾರ್ವತ್ರಿಕ ಶಿಕ್ಷಣ ನೀತಿಯನ್ನು ಜಾರಿಗೆತರುವುದರ ಮೂಲಕ ಅದುವರೆಗೆ ಶಿಕ್ಷಣದ ಮೇಲೆ ವೈದಿಕರಿಗಿದ್ದ ಏಕಸ್ವಾಮ್ಯಕ್ಕೆ ಬಲವಾದ ಹೊಡೆತ ಕೊಟ್ಟರು. ಅದರಲ್ಲೂ ಬಹಳ ಮುಖ್ಯವಾಗಿ 1935ರಲ್ಲಿ ಲಾರ್ಡ್ ವಿಲಿಯಂ ಬೆಂಟಿಕ್, ಇನ್ನು ಮುಂದೆ ಭಾರತೀಯ ಶಿಕ್ಷಣ ಮಾಧ್ಯಮ ಮತ್ತು ಆಡಳಿತ ಭಾಷೆ ಇಂಗ್ಲೀಷ್ ಎಂದು ಘೋಷಿಸಿದ. ಈ ನಿರ್ಣಯದಿಂದ ಕನಲಿದ ಗಾಂಧಿಯವರು-Say no to english and say yes to hindi ಎಂದು ಕರೆ ಕೊಡುವ ಮುಖಾಂತರ ಸ್ವಾತಂತ್ರ್ಯ ಹೋರಾಟದ ಹೂರಣ ಮತ್ತು ರಾಷ್ಟ್ರೀಯತೆಯ ಹುಸಿ ಕಲ್ಪನೆಯನ್ನು ಅನಾವರಣ ಗೊಳಿಸಿದರು. ಮತ್ತೊಂದಡೆ ಈ ದೇಶದ ಶೋಷಿತ ಸಮುದಾಯಗಳ ವಿಮೋಚನೆ ಮತ್ತು ಸ್ವಾಭಿಮಾನಕ್ಕಾಗಿ ಹೋರಾಡುತ್ತಿದ್ದ ಡಾ.ಬಾಬಾ ಸಾಹೇಬ್ ಅಂಬೇಡ್ಕರರನ್ನು ಬ್ರಿಟೀಷರ ಏಜೆಂಟ್ ಎಂದು ಪ್ರತಿ ಬಿಂಬಿಸಿ, ಇಂಗ್ಲೀಷ್ ಕಲಿಯುವುದನ್ನು ಗುಲಾಮಗಿರಿಯ ಸಂಕೇತವೆಂದು ಹುಯಿಲೆಬ್ಬಿಸಲಾಯಿತು.

ಶೋಷಿತ ಸಮುದಾಯಗಳ ಸಾಮಾಜಿಕ ಸಮಾನತೆ, ಆರ್ಥಿಕ ಸಬಲೀಕರಣ, ಧಾರ್ಮಿಕ ಸ್ವಾತಂತ್ರ್ಯ, ರಾಜಕೀಯ ಪ್ರಾತಿನಿಧ್ಯ ಹಾಗೂ ಶೈಕ್ಷಣಿಕ ಮತ್ತು ಔದ್ಯೋಗಿಕ ಪ್ರಾತಿನಿಧ್ಯಕ್ಕಾಗಿ-ತಮ್ಮದೇ ಆದ ಸ್ಪಷ್ಟ ನಿಲುವನ್ನು ಹೊಂದಿದ್ದ ಅಂಬೇಡ್ಕರರು, ತಮ್ಮ ಉನ್ನತ ಶಿಕ್ಷಣ ಮತ್ತು ಸ್ವ ಸಾಮರ್ಥ್ಯದಿಂದ ಭಾರತದ ಸಂವಿಧಾನ ಕರಡು ರಚನಾ ಸಮಿತಿಗೆ ಅಧ್ಯಕ್ಷರಾಗಿ ಇತಿಹಾಸ ನಿರ್ಮಿಸಿದರು. ತುಳಿತಕ್ಕೊಳಗಾಗಿರುವ ಜನ ಸಮುದಾಯಗಳ ಸಬಲೀಕರಣ-ವಿಮೋಚನೆಯಲ್ಲಿ ಪ್ರಪಂಚದ ವಿವಿಧ ರಾಷ್ಟ್ರಗಳಲ್ಲಿ ಶಿಕ್ಷಣ ವಹಿಸಿದ್ದ ಮಹತ್ತರ ಪಾತ್ರದ ಬಗ್ಗೆ ಸ್ಪಷ್ಟವಾದ ಅರಿವಿದ್ದ ಅವರು, ಶಿಕ್ಷಣವನ್ನು ಒಂದು ಮೂಲಭೂತ ಹಕ್ಕನ್ನಾಗಿ ಭಾರತದ ಸಂವಿಧಾನದಲ್ಲಿ ಅಳವಡಿಸುವ ಚಿಂತನೆಯನ್ನು ಹೊಂದಿದ್ದರು. ಅವರ ಚಿಂತನೆಗೆ ಸಂವಿಧಾನ ಕರಡು ರಚನಾ ಸಮಿತಿಯಲ್ಲಿದ್ದ ಮನುವಾದಿ ಮನೋಭಾವದ ಸದಸ್ಯರಿಂದ ಸೂಕ್ತಸ್ಪಂದನೆ ದೊರೆಯಲಿಲ್ಲ. ಆದುದರಿಂದ ಶಿಕ್ಷಣವನ್ನು ಸಂವಿಧಾನದ ರಾಜ್ಯ ನಿರ್ದೇಶಕ ತತ್ವಗಳ ಅನುಚ್ಛೇದ 45ರಲ್ಲಿ ಸೇರಿಸಿ, ಪ್ರಭುತ್ವ ಪ್ರತಿ ಮಗುವಿಗೆ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣ ಒದಗಿಸಬೇಕೆಂದು ಸೂಚಿಸಲಾಯಿತು.

ಶಿಕ್ಷಣ ಮತ್ತು ಪೌರೋಹಿತ್ಯವನ್ನು ತನ್ನ ಗುತ್ತಿಗೆಯನ್ನಾಗಿರಿಸಿ ಕೊಂಡಿರುವ ವೈದಿಕ ಸಂತತಿ, ಈ ಎರಡು ಅಂಶಗಳನ್ನೇ ಶೋಷಣೆಯ ಆಯುಧವನ್ನಾಗಿ ಬಳಸಿಕೊಳ್ಳುತ್ತಾ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಸಮುದಾಯಗಳ ಮೇಲೆ ಸವಾರಿ ಮಾಡುತ್ತಾ ಬಂದಿದೆ. ರಾಮಯಣ ಮತ್ತು ಮಹಾಭಾರತಗಳ ಕಾಲದಿಂದಲೂ ಮನುವಾದಿಗಳು ಈ ದೇಶದ ಶೇ.೯೦ರಷ್ಟಿರುವ ಬಹುಜನ ಸಮುದಾಯಗಳಿಗೆ ಶಿಕ್ಷಣದ ಹಕ್ಕನ್ನು ನಿರಾಕರಿಸುತ್ತಲೇ ಬಂದಿದ್ದಾರೆ. ಗುರುದಕ್ಷಣೆಯ ಹೆಸರಿನಲ್ಲಿ ದ್ರೋಣಾಚಾರ್ಯ ಏಕಲವ್ಯನ ಹೆಬ್ಬೆರಳನ್ನು ಬಲಿತೆಗೆದುಕೊಂಡ ಪ್ರಕರಣವನ್ನು ಹಾಗೂ ಬ್ರಾಹ್ಮಣರನ್ನು ಸಂತೃಪ್ತಿಗೋಳಿಸಲು ರಾಮ ಶಂಭೂಕನ ಶಿರಚ್ಛೇದನ ಮಾಡಿದ ನಡವಳಿಕೆಯನ್ನು, ಈ ಹಿನ್ನಲೆಯಲ್ಲಿ ನೋಡಬೇಕಾಗಿದೆ.

ಮಹಾರಾಷ್ಟ್ರದಲ್ಲಿ ಮಹಾತ್ಮ ಜ್ಯೋತಿಬಾಯಿ ಫುಲೆ ಮತ್ತು ಮಾತೆ ಸಾವಿತ್ರಿಬಾಯಿ ಫುಲೆ, ಕೊಲ್ಹಾಪುರದ ಶಾಹುಮಹರಾಜ್, ತಮಿಳುನಾಡಿನಲ್ಲಿ ತಂದೆ ಪೆರಿಯಾರ್ ರಾಮಸ್ವಾಮಿ, ಕೇರಳದಲ್ಲಿ ನಾರಾಯಣಗುರು ಹಾಗೂ ಕರ್ನಾಟಕದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮುಂತಾದ ಸಾಮಾಜಿಕ ಪರಿವರ್ತನಾಕಾರರ ಪ್ರಯತ್ನಗಳಿಂದ ಶೂದ್ರಾತಿಶೂದ್ರರಿಗೆ ಶಿಕ್ಷಣದ ಅವಕಾಶಗಳು ದೊರೆಯುವಂತಾಯಿತು. 1947ರಲ್ಲಿ ಬ್ರಿಟೀಷರಿಂದ ಅಧಿಕಾರವನ್ನು ಪಡೆದುಕೊಂಡ ಮನುವಾದಿಗಳು, ಸಂವಿಧಾನಕ್ಕೆ ವಿರುದ್ಧವಾಗಿ ಶೋಷಿತ ಸಮುದಾಯಗಳಿಗೆ ಶಿಕ್ಷಣವನ್ನು ನಿರಾಕರಿಸಲು ಸಾಧ್ಯವಾಗದ ಕಾರಣ, ವಿಭಿನ್ನ ಷಡ್ಯಂತ್ರಗಳನ್ನು ರೂಪಿಸುವುದರ ಜೊತೆಗೆ ಶಿಕ್ಷಣದಲ್ಲಿ ಬ್ರಾಹ್ಮಣ್ಯದ ಮೌಲ್ಯಗಳನ್ನು ಹಾಗೂ ಸಾಂಸ್ಕೃತಿಕ ಯಜಮಾನಿಕೆಯನ್ನು ನಿರಂತರವಾಗಿ ಬಿತ್ತುತ್ತಲೇ ಬಂದಿದ್ದಾರೆ.

ಇದೇ ಆಗಸ್ಟ್ 15ರಂದು 64ನೇ ಸ್ವಾತಂತ್ರ್ಯೋತ್ಸವವನ್ನು ಪ್ರಭುತ್ವ ಸಂಭ್ರಮದಿಂದ ಆಚರಿಸಿದರೂ ಕೂಡ ಸ್ವತಂತ್ರ ಭಾರತದಲ್ಲಿ ಇನ್ನೂ 45ಕೋಟಿ ಜನ ಅನಕ್ಷರಸ್ಥರಾಗಿಯೇ ಉಳಿದಿದ್ದಾರೆ ಎನ್ನುವುದು ಸಂಭ್ರಮ ಪಡುವ ವಿಷಯವಲ್ಲ. ಈ ಅನಕ್ಷರಸ್ಥರಲ್ಲಿ ಶೇ.62–69 ಜನ ದಲಿತರು ಮತ್ತು ಅವರಲ್ಲಿ ಶೇ.76–25ರಷ್ಟು ದಲಿತ ಮಹಿಳೆಯರು ಎನ್ನುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಧಾರ್ಮಿಕ ಅಲ್ಪಸಂಖ್ಯಾತರ ಮತ್ತು ಅದರಲ್ಲೂ ಪ್ರಮುಖವಾಗಿ ಮುಸ್ಲಿಮ್ ಸಮುದಾಯದ ಶೈಕ್ಷಣಿಕ ಸ್ಥಿತಿ ದಲಿತರಿಗಿಂತಲೂ ಅಧ್ವಾನವಾಗಿದೆ ಎಂದು ಸಾಚಾರ್ ಆಯೋಗ ಹಾಗೂ ರಂಗನಾಥ್ ಮಿಶ್ರಾ ಆಯೋಗ ಧೃಡಪಡಿಸಿವೆ. ರಾಜ್ಯದ ಹೈದ್ರಾಬಾದ್ ಕರ್ನಾಟಕ ಪ್ರಾಂತ್ಯದ ಬೀದರ್, ಗುಲ್ಬರ್ಗಾ, ರಾಯಚೂರು, ಯಾದಗಿರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಕಳೆದ ಸಾಲಿನಲ್ಲಿ 1ಲಕ್ಷ ಎಂಟು ಸಾವಿರ ಮಕ್ಕಳು ಶಾಲೆಯಿಂದ ಹೊರಗೆ ಉಳಿದಿದ್ದರು ಎನ್ನುವ ಮಾಹಿತಿ ಗಾಬರಿ ಹುಟ್ಟಿಸುವಂಥಹದ್ದಾಗಿದೆ.

ಇದಕ್ಕೆ ಕಾರಣವೇನು? ಅಸಮರ್ಪಕ ಶಿಕ್ಷಣ ನೀತಿ ಮತ್ತು ತಾರತಮ್ಯದ ಶಿಕ್ಷಣ ಪದ್ಧತಿಯೇ ಇದಕ್ಕೆ ಕಾರಣ. ಸಮರ್ಪಕವಾದ ಶಿಕ್ಷಣ ನೀತಿಯನ್ನು ರೂಪಿಸುವಲ್ಲಿ ವಿಫಲವಾಗಿರುವ ಪ್ರಭುತ್ವ ಶಿಕ್ಷಣದ ಖಾಸಗೀಕರಣ ಮತ್ತು ವ್ಯಾಪಾರೀಕರಣಕ್ಕೆ ಮುಕ್ತ ಪರವಾನಗಿ ನೀಡುವುದರಲ್ಲೇ ಮಗ್ನವಾಗಿದೆ. ಬಹಳಷ್ಟು ರಾಜಕಾರಣಿಗಳು ಮತ್ತವರ ಸಂಬಂಧಿಕರು, ಕೈಗಾರಿಕೋದ್ಯಮಿಗಳು, ಮಠಾಧೀಶರು, ಕ್ರೈಸ್ತ, ಮುಸ್ಲಿಮ್, ಜೈನ ಇತ್ಯಾದಿ ಭಾಷಾ ಹಾಗೂ ಧಾರ್ಮಿಕ ಅಲ್ಪಸಂಖ್ಯಾತ ಸಂಸ್ಥೆಗಳು ಶಿಕ್ಷಣವನ್ನು ದಂಧೆಯ ಸರಕನ್ನಾಗಿಸಿ ಕೊಂಡಿವೆ. ದಂಧೆಕೋರರಿಗೆ ಸದಾ ಲಾಭಾಂಶದ ಮೇಲೆಯೇ ಕಣ್ಣಿರುವುದರಿಂದ, ಸಾಮಾಜಿಕ ನ್ಯಾಯದ ಬಗ್ಗೆ ಕಿಂಚಿತ್ ಕಕ್ಕುಲಾತಿಯಿರುವುದಿಲ್ಲ.

ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ಇನ್ನಷ್ಟು ಬಿಗಿಗೊಳಿಸಲು ಹಾಗೂ ಜನರನ್ನು ಸುಲಿಯಲು ವಿವಿಧ ಸ್ತರದ ಶಿಕ್ಷಣ ವ್ಯವಸ್ಥೆ ಚಾಲ್ತಿಯಲ್ಲಿದೆ; ಅಂತರಾಷ್ಟ್ರೀಯ ಮಂಡಳಿ (ಇಂಟರ್‌ನ್ಯಾಷನಲ್ ಬೋರ್ಡ್) ಮಾನ್ಯತೆ ಪಡೆದ ಸಮಾಜದತ್ಯಂತ ಉನ್ನತ ವರ್ಗದ ಶಾಲೆಗಳು ಮಕ್ಕಳಿಗೆ ಶಿಕ್ಷಣ ಒದಗಿಸುತ್ತಿವೆ. ಇಂಡಿಯನ್ ಕೌನ್ಸಿಲ್ ಫಾರ್ ಸೆಕಂಡರಿ ಎಜ್ಯುಕೇಷನ್‌ನ ಮಾನ್ಯತೆ ಪಡೆದ (ICSE) ಶಾಲೆಗಳು ರಾಜಕಾರಣಿಗಳ ಮತ್ತು ಕೈಗಾರಿಕೋದ್ಯಮಿಗಳ ಶ್ರೀಮಂತ ಮಕ್ಕಳಿಗೆ ಮಣೆ ಹಾಕುತ್ತಿವೆ. ಸೆಂಟ್ರಲ್ ಬೋರ್ಡ್ ಆಫ್ ಎಜುಕೇಶನ್ ಮಾನ್ಯತೆ ಪಡೆದ

ಆಗಸ್ಟ್ 15ರಂದು 64ನೇ ಸ್ವಾತಂತ್ರ್ಯೋತ್ಸವವನ್ನು ಪ್ರಭುತ್ವ ಸಂಭ್ರಮದಿಂದ ಆಚರಿಸಿದರೂ ಕೂಡ ಸ್ವತಂತ್ರ ಭಾರತದಲ್ಲಿ ಇನ್ನೂ 45ಕೋಟಿ ಜನ ಅನಕ್ಷರಸ್ಥರಾಗಿಯೇ ಉಳಿದಿದ್ದಾರೆ ಎನ್ನುವುದು ಸಂಭ್ರಮ ಪಡುವ ವಿಷಯವಲ್ಲ. ಈ ಅನಕ್ಷರಸ್ಥರಲ್ಲಿ ಶೇ.62–69 ಜನ ದಲಿತರು ಮತ್ತು ಅವರಲ್ಲಿ ಶೇ.76–25ರಷ್ಟು ದಲಿತ ಮಹಿಳೆಯರು ಎನ್ನುವುದು ನಾಚಿಕೆಗೇಡಿನ ಸಂಗತಿಯಾಗಿದೆ.

(CBSE) ಶಾಲೆಗಳು ಅಧಿಕಾರ ಶಾಹಿಗಳ ಮತ್ತು ಮಧ್ಯಮ ಮೇಲ್ವರ್ಗದ ಮಕ್ಕಳಿಗೆ ಆದ್ಯತೆ ನೀಡುತ್ತಿವೆ. ಸ್ಟೇಟ್ ಬೋರ್ಡ್‌ನ ಮಾನ್ಯತೆ ಪಡೆದ ಖಾಸಗಿ ಇಂಗ್ಲೀಷ್ ಮಾಧ್ಯಮದ ಶಾಲೆಗಳು ಮಧ್ಯಮ ವರ್ಗಕ್ಕೆ ಸೇರಿದ ಮಕ್ಕಳಿಗೆ ಶಿಕ್ಷಣ ನೀಡುತ್ತಿವೆ. ಈ ರೀತಿಯಲ್ಲಿ ನಮ್ಮ ದೇಶದ ಶಿಕ್ಷಣ ವ್ಯವಸ್ಥೆ ಪ್ರಾಥಮಿಕ ಹಂತದಿಂದಲೇ ವರ್ಗ ಮತ್ತು ಜಾತಿ ಆಧಾರದ ಮೇಲೆ ವಿಭಜನೆಗೊಂಡಿದ್ದು, ಉನ್ನತ ಶಿಕ್ಷಣದ ಹಂತದಲ್ಲಿ ಈ ವಿಭಜನೆಯ ಕಂದಕ ನಮ್ಮ ಊಹೆಗೂ ಮೀರಿ ವಿಸ್ತೃತಗೊಂಡಿದೆ.

ಇಂದಿನ ಶಿಕ್ಷಣ ಅಂಕ ಆಧಾರಿತ ಶಿಕ್ಷಣವಾಗಿದೆ. ಬ್ರಾಹ್ಮಣೀಕರಣ ರೂಪವಾಗಿದೆ. ವಿದ್ಯಾರ್ಥಿಯ ಬುದ್ಧಿ ಶಕ್ತಿಗಿಂತ ಇಲ್ಲಿ ವ್ಯಕ್ತಿಯ ಜ್ಞಾಪಕ ಶಕ್ತಿಗೆ ಹೆಚ್ಚಿನ ಆದ್ಯತೆ ನೈತಿಕಮೌಲ್ಯ, ಧಾರ್ಮಿಕ ಶಿಕ್ಷಣ ಮತ್ತು ಯೋಗದ ಹೆಸರಿನಲ್ಲಿ ಪುರಾತನ ಪ್ರತಿಗಾಮಿ ಸಂಪ್ರದಾಯಗಳನ್ನು ಶಿಕ್ಷಣದಲ್ಲಿ ಪ್ರತಿಷ್ಠಾಪಿಸುವ ಪ್ರಯತ್ನಗಳು ನಡೆಯುತ್ತಿವೆ. ಜಾಗತೀಕರಣ ಮತ್ತು ಬ್ರಾಹ್ಮಣೀಕರಣದ ಹುಸಿ ಮೌಲ್ಯಗಳನ್ನು ವೈಭವೀಕರಿಸಲಾಗುತ್ತಿದೆ. ಭಾರತದಲ್ಲಿ ಮಾನವ ಸಂಪನ್ಮೂಲ ಅತ್ಯಧಿಕವಾಗಿರುವುದರಿಂದ, ಸಂವಿಧಾನ ಹಾಗೂ ಪ್ರಜಾಪ್ರಭುತ್ವದ ಆಶಯಗಳ ಬುನಾದಿಯ ಮೇಲೆ, ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸಿ, ಸಮೃದ್ಧ ಹಾಗೂ ಸುಭದ್ರ ಭಾರತವನ್ನು ಕಟ್ಟುವ ಸಮಾನ ಶಿಕ್ಷಣ ವ್ಯವಸ್ಥೆಯ ಅಗತ್ಯವಿದೆ. ಸಮಾಜದಲ್ಲಿ ಆಳವಾಗಿ ಬೇರೂರಿರುವ ಜಾತಿ ತಾರತಮ್ಯ ಮತ್ತು ಅಸಮಾನತೆಯನ್ನು ಬುಡಸಮೇತ ಕಿತ್ತು ಹಾಕಲು ಸಮಾನ ಶಾಲಾ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು 1964ರಲ್ಲಿ ಜಸ್ಟೀಸ್ ಕೊಠಾರಿ ಆಯೋಗ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಶಿಕ್ಷಣ ಸೇವೆಯ ಹೆಸರಿನಲ್ಲೇ ಹಣ ಗುಂಜುವ–ವ್ಯವಹಾರ ನಡೆಸುವ ಮಾರ್ವಾಡಿ ಬುದ್ಧಿಯ ರಾಜಕೀಯ ಮತ್ತು ಧಾರ್ಮಿಕ ಮುಖಂಡರ ಹೊಂದಾಣಿಕೆಯಿಂದ ಕೊಠಾರಿ ಆಯೋಗದ ಶಿಫಾರಸ್ಸು ತುಕ್ಕು ಹಿಡಿದು ಕೂತಿದೆ.

ಋಗ್ವೇದ ಕಾಲದಿಂದ ಇಂದಿನವರೆಗೆ ಮನುಪ್ರಣೀತ ಶಿಕ್ಷಣ ವ್ಯವಸ್ಥೆಯು ಅಬಾಧಿತವಾಗಿ ಮುಂದುವರಿದಿದ್ದು, ಪ್ರಭುತ್ವ ಸಮಾನ ಶಿಕ್ಷಣ ವ್ಯವಸ್ಥೆಯ ಬದಲು 'ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕಿನ ಕಾಯಿದೆ –2009'ರಂತಹ ಅವೈಜ್ಞಾನಿಕ ಮತ್ತು ಅರೆ ಮನಸ್ಸಿನ ಕಾಯಿದೆಯನ್ನು ಮೂರ್ಖರ ದಿನವಾದ ಎಪ್ರಿಲ್ 1, 2010ರಿಂದ ಅನುಷ್ಠಾನಕ್ಕೆ ತಂದಿರುವುದಾಗಿ ಘೋಷಿಸಿದೆ. ರಾಜ್ಯ ಸರ್ಕಾರ ಕೂಡ ಈ ಕಾಯಿದೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ತನ್ನದೇ ಆದ ನೀತಿ ನಿಯಮಾವಳಿಗಳನ್ನು ರೂಪಿಸುವ ಪ್ರಕ್ರಿಯೆಯಲ್ಲಿದೆ.

ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕಿನ ಕಾಯಿದೆ–2009 ಅಥವಾ ಶಿಕ್ಷಣ ಹಕ್ಕಿನ ಕಾಯಿದೆಯು ಸಾಮಾಜಿಕವಾಗಿ–ಆರ್ಥಿಕವಾಗಿ ಹಿಂದುಳಿದಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ, ವಿಕಲಚೇತನ ಮುಂತಾದ ದುರ್ಬಲ ಸಮುದಾಯಗಳ ಮಕ್ಕಳಿಗೆ ಖಾಸಗಿ ಶಾಲೆಗಳು ಶೇ. 25ರ ಮೀಸಲಾತಿಯಡಿಯಲ್ಲಿ ಪ್ರವೇಶ ಒದಗಿಸಬೇಕೆಂದು ಪ್ರತಿಪಾದಿಸಿದೆ. (ಈ ಕಾಯಿದೆಯ ಮೂಲ ಕರಡು ರೂಪಿಸುವ ಸಂದರ್ಭದಲ್ಲಿ ಈ ಮೀಸಲಾತಿಯ ಪ್ರಮಾಣ ಶೇ.50ರಷ್ಟಿತ್ತು). ಈ ಕಾಯಿದೆಯ ಪ್ರಕಾರ ಯಾವುದೇ ಖಾಸಗಿ ಶಾಲೆ 1ರಿಂದ8ನೇ ತರಗತಿಯವರೆಗೆ, ಶೇ.25ರ ಮೀಸಲಾತಿಯಡಿಯಲ್ಲಿ ತನ್ನ ನೆರೆಹೊರೆಯ ದುರ್ಬಲ ಸಮುದಾಯದ ಮಕ್ಕಳಿಗೆ ಪ್ರವೇಶ ನಿರಾಕರಿಸುವಂತಿಲ್ಲ.

ಇದರಿಂದ ತಮ್ಮ ದಂಧೆಯ ಲಾಭದ ಪ್ರಮಾಣಕ್ಕೆ ಕತ್ತರಿ ಬೀಳುತ್ತದೆ ಎಂದು ಕಸಿವಿಸಿಗೊಂಡಿರುವ ಮನುವಾದಿ ಮನೋಭಾವದ ಖಾಸಗಿ ಶಾಲೆಗಳು, ಶೇ.25ರ ಮೀಸಲಾತಿಯಿಂದ ತಮ್ಮ So called-prestigious ಶಾಲೆಗಳ ಶಿಕ್ಷಣದ ಗುಣಮಟ್ಟ ಕುಸಿಯುತ್ತದೆಂದೂ, ಅವುಗಳಲ್ಲಿನ ಶೈಕ್ಷಣಿಕ ವಾತಾವರಣ ಹದಗೆಡುವುದರ ಜೊತೆಗೆ ಇತರೆ ಮಕ್ಕಳು ಹಾಳಾಗುತ್ತಾರೆಂದೂ, ಇದರಿಂದ ದೇಶದ ಅಭಿವೃದ್ಧಿಗೆ ಮಾರಕವಾಗುತ್ತದೆಂದೂ ಗುಲ್ಲೆಬ್ಬಿಸುತ್ತಿವೆ. ತಮ್ಮ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳ ಪೋಷಕರ ಮೂಲಕ, ಮಾಧ್ಯಮಗಳ ಮುಖೇನ ಮತ್ತು ಸುಪ್ರೀಂ ಕೋರ್ಟ್ ಮೊರೆಹೋಗುವುದರಿಂದ ಹಿಡಿದು ಎಲ್ಲಾ ರೀತಿಯ ಕಸರತ್ತಿಗಿಳಿದು, ಶೇ,25ರ ಮೀಸಲಾತಿ ವಿರುದ್ಧ ಜನಾಭಿಪ್ರಾಯ ರೂಪಿಸಲು ಹೆಣಗುತ್ತಿವೆ.

ಖಾಸಗಿ ಶಾಲೆಗಳು ಕಳೆದ ಶೈಕ್ಷಣಿಕ ಸಾಲಿನಲ್ಲಿ 48 ಲಕ್ಷ ಕೋಟಿರೂಪಾಯಿ ವಹಿವಾಟು ನಡೆಸಿರುವುದನ್ನು ನೋಡಿದರೆ, ಇವುಗಳ ಸುಲಿಗೆಯ ಪ್ರಮಾಣದ ತಾಕತ್ತಿನ ವಿಕೃತಿಯ ಗೋಚರವಾಗುತ್ತದೆ. ಇಂದು ಖಾಸಗಿ ಶಿಕ್ಷಣ ಸಂಸ್ಥೆಗಳು ಸೇವೆಯ ಹೆಸರಿನಲ್ಲಿ ಸರ್ಕಾರದಿಂದ ಭೂಮಿ, ಧನಸಹಾಯ ಇನ್ನಿತರ ಸೌಲಭ್ಯ ಹಾಗೂ ರಿಯಾಯಿತಿಗಳನ್ನು ಪಡೆದುಕೊಂಡು ಹಣಪೀಕುವ ನ್ಯಾಕ್ಷಿಯಾ ಕೇಂದ್ರಗಳಾಗಿ ದೇಶದುದ್ದಗಲಕ್ಕೂ ತಲೆಯೆತ್ತಿವೆ. ತಲೆ ಎತ್ತುತ್ತಲಿವೆ. ಇವು ಯಾವುದೇ ಕಾರಣಕ್ಕೂ ತಮ್ಮ ಸಾಮಾಜಿಕ ಬದ್ಧತೆಯಿಂದ ವಿಮುಖವಾಗದಂತೆ, ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಧಿಕ್ಕರಿಸದಂತೆ ಮೂಗುದಾರ ಹಾಕಬೇಕಾದ ನೇರ ಜವಾಬ್ದಾರಿಯನ್ನು ಪ್ರಭುತ್ವವೇ ವಹಿಸಿಕೊಳ್ಳಬೇಕು. ಇಲ್ಲವಾದಲ್ಲಿ–ದಲಿತ, ರೈತ, ಅಹಿಂದದಂಥ ಪ್ರಗತಿಪರ ಮತ್ತು ಜನಪರ ಸಂಘಟನೆಗಳು, ಈ ದೇಶದ ಪ್ರತಿಯೊಂದು ಮಗುವಿಗೂ ಪ್ರಭುತ್ವ ಉಚಿತ ಮತ್ತು ಕಡ್ಡಾಯ ಹಾಗೂ ಗುಣಮಟ್ಟದ ಶಿಕ್ಷಣವನ್ನು ಒದಗಿಸುವಂತೆ ಆಗ್ರಹಿಸಬೇಕು. ಈ ನಿಟ್ಟಿನಲ್ಲಿ ರಾಜ್ಯದಲ್ಲಿ ಸಾಮಾಜಿಕ ಪರಿವರ್ತನಾ ಜನಾಂದೋಲನ ಎನ್ನುವ ಜನಪರ ಸಂಟನೆಗಳ ಒಕ್ಕೂಟವು ಕಾರ್ಯೋನ್ಮುಖವಾಗಿದ್ದು, ಪ್ರಬಲವಾದ ಜನಾಂದೋಲನ ರೂಪಿಸುವುದರತ್ತ ದಾಪುಗಾಲು ಹಾಕುತ್ತಿರುವುದು ಸ್ವಾಗತಾರ್ಹ ಮತ್ತು ಶ್ಲಾಘನೀಯ ವಿಚಾರವಾಗಿದೆ. □

ಒಳಮೀಸಲಾತಿ ಪ್ರಜಾತಾಂತ್ರಿಕ ಅಗತ್ಯ

ಮಾರುತಿ. ಹೆಚ್

ದಿನಾಂಕ-25-08-2010ರಿಂದ ನಿವೃತ್ತ ನ್ಯಾಯ ಮೂರ್ತಿ ಎ.ಜೆ. ಸದಾಶಿವ ಆಯೋಗವು ಜಾತಿವಾರು ಜನಗಣತಿ ಕಾರ್ಯ ಆರಂಭಿಸಲಿದೆ. ಈ ಆಯೋಗವು ನೀಡುವ ಪ್ರತಿ ಸಮುದಾಯಗಳ ಅಂಕಿ-ಅಂಶಗಳನ್ನು ವಿಶ್ಲೇಷಣೆ ಮಾಡುವುದರಿಂದ, ಬಲಾಢ್ಯ ಸಮುದಾಯಗಳು ಮೀಸಲಾತಿಯ ಉಪಯೋಗಗಳನ್ನು ಯಾವ ಪ್ರಮಾಣದಲ್ಲಿ ಪಡೆದುಕೊಳ್ಳುತ್ತಿವೆ ನಿಜವಾಗಿಯೂ ಅವಕಾಶ ವಂಚಿತ ಜಾತಿಗಳಾವುವು? ಎಂಬ ಸತ್ಯ ಬೆಳಕಿಗೆ ಬರಲಿದೆ. ಇದರಿಂದ ಮೀಸಲಾತಿ-ಒಳಮೀಸಲಾತಿ ಕೂಗು ಜೀವ ಪಡೆದುಕೊಳ್ಳಲಿದೆ. ಈ ನಿಟ್ಟಿನಲ್ಲಿ ಮೀಸಲಾತಿಯ ತಾರತಮ್ಯಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಜನಸಂಖ್ಯಾಧಾರಿತ ವರ್ಗೀಕರಣ ಅಗತ್ಯ.

ಭಾರತದ ಜನಸಂಖ್ಯೆಯ ಕಾಲುಭಾಗ ಜನರನ್ನು "ಜಾತಿ" ಹೆಸರಿನಲ್ಲಿ ಸಹಜ ಮನುಷ್ಯ ಗೌರವಗಳಿಂದ ನಿರಾಕರಿಸಲಾಗಿದೆ. ಇಂದಿಗೂ ದೇವಸ್ಥಾನದ ಪ್ರವೇಶ ನಿಷಿದ್ಧ, ಕುಡಿಯುವ ನೀರಿಗೆ ನಿರ್ಬಂಧ, ಆಸ್ತಿ ಒಡೆತನಕ್ಕೆ ಅಡ್ಡಿ, ಅಂತರ್‌ಜಾತಿ ವಿವಾಹಕ್ಕೆ ವಿರೋಧದಂಥ ವ್ಯವಸ್ಥೆ ಜಗತ್ತಿನಲ್ಲೆಲ್ಲೂ ಇಲ್ಲದ ಒಂದು ಕ್ರೌರ್ಯತನಕ್ಕೆ ಕಾರಣವಾಗಿದೆ.

ಸ್ವಾತಂತ್ರ್ಯಪೂರ್ವ ಹೋರಾಟದ ಅವಧಿಯಲ್ಲಿ ಜಾರಿಗೆ ಬಂದ 1930ರ ಸೈಮನ್ ಆಯೋಗವು ನೀಡಿದ ಅಸ್ಪೃಶ್ಯರ ಜನಸಂಖ್ಯೆ ಆಧಾರದ ವರದಿ ಮೇಲೆ, ಸಮಾನತೆಯ ಪ್ರತಿಪಾದಕ ಡಾ.ಅಂಬೇಡ್ಕರ್ ಅಸ್ಪೃಶ್ಯರಿಗೆ ಸೂಕ್ತ ಪ್ರಾತಿನಿಧ್ಯದ ಬಗ್ಗೆ ಮನವಿ ಸಲ್ಲಿಸಿದ್ದರು. ದುಂಡು ಮೇಜಿನ ಸಭೆಯಲ್ಲಿ ಪ್ರತ್ಯೇಕ ಮತದಾನ ಪದ್ಧತಿಗೆ ಒತ್ತಾಯಿಸಿದ್ದರು. ಅಂಬೇಡ್ಕರ್-ಗಾಂಧಿಜೀಯವರ ನಡುವಿನ "ಪೂನಾ ಒಪ್ಪಂದ"ವು ಅಸ್ಪೃಶ್ಯರಿಗೆ ಜಂಟಿ ಚುನಾವಣಾ ವ್ಯವಸ್ಥೆ ಜಾರಿಮಾಡಿತ್ತು. ಮುಂದೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಜಾರಿಯಾಗಿ, 1935ರ ಭಾರತ ಸರಕಾರ ಕಾಯ್ದೆಯಿಂದ ಶಾಸನವಾದದ್ದು ಈಗ ಇತಿಹಾಸ.

ಸ್ವಾತಂತ್ರ್ಯಪೂರ್ವ ಹೋರಾಟದ ಅವಧಿಯಲ್ಲಿ ಜಾರಿಗೆ ಬಂದ ೧೯೩೦ರ ಸೈಮನ್ ಆಯೋಗವು ನೀಡಿದ ಅಸ್ಪೃಶ್ಯರ ಜನಸಂಖ್ಯೆ ಆಧಾರದ ವರದಿ ಮೇಲೆ, ಸಮಾನತೆಯ ಪ್ರತಿಪಾದಕ ಡಾ.ಅಂಬೇಡ್ಕರ್ ಅಸ್ಪೃಶ್ಯರಿಗೆ ಸೂಕ್ತ ಪ್ರಾತಿನಿಧ್ಯದ ಬಗ್ಗೆ ಮನವಿ ಸಲ್ಲಿಸಿದ್ದರು. ದುಂಡು ಮೇಜಿನ ಸಭೆಯಲ್ಲಿ ಪ್ರತ್ಯೇಕ ಮತದಾನ ಪದ್ಧತಿಗೆ ಒತ್ತಾಯಿಸಿದ್ದರು. ಅಂಬೇಡ್ಕರ್-ಗಾಂಧಿಜೀಯವರ ನಡುವಿನ "ಪೂನಾ ಒಪ್ಪಂದ"ವು ಅಸ್ಪೃಶ್ಯರಿಗೆ ಜಂಟಿ ಚುನಾವಣಾ ವ್ಯವಸ್ಥೆ ಜಾರಿಮಾಡಿತ್ತು ಮುಂದೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಜಾರಿಯಾಗಿ, ೧೯೩೫ರ ಭಾರತ ಸರಕಾರ ಕಾಯ್ದೆಯಿಂದ ಶಾಸನವಾದದ್ದು ಈಗ ಇತಿಹಾಸ. ಇಂದು ಮೀಸಲಾತಿಯ ಅಗತ್ಯ-ವಿರೋಧದ ಚರ್ಚೆ-ಚಿಂತನೆಯ ಸಂದಿಗ್ಧ ಕಾಲಘಟ್ಟದಲ್ಲಿ ನಾವಿದ್ದೇವೆ.

ಇಂದು ಮೀಸಲಾತಿಯ ಅಗತ್ಯ-ವಿರೋಧದ ಚರ್ಚೆ-ಚಿಂತನೆಯ ಸಂದಿಗ್ಧ ಕಾಲಘಟ್ಟದಲ್ಲಿ ನಾವಿದ್ದೇವೆ. ಮೀಸಲಾತಿಗೆ ವಿರೋಧ ವ್ಯಕ್ತಮಾಡುವ ಬಹುತೇಕರು, ಭಾರತದ ಪ್ರತಿ ಹಳ್ಳಿಗಳಲ್ಲಿನ ಕರಾಳ ಅಸ್ಪೃಶ್ಯತೆ, ಬಿಟ್ಟಿ ಚಾಕರಿ, ಸಾಮಾಜಿಕ ಬಹಿಷ್ಕಾರ, ಕ್ರೂರ ಪಾಳೇಗಾರಿಕೆ ವ್ಯವಸ್ಥೆಯನ್ನು ತಿಳಿಯದಿರುವುದು ವಾಸ್ತವ.

ಇತ್ತೀಚಿಗೆ ಕಾಂಗ್ರೆಸ್‌ನ ರಾಹುಲ್ ಗಾಂಧಿಯವರು ಬೆಂಗಳೂರಿನ ನ್ಯಾಷನಲ್ ಕಾಲೇಜ್‌ನಲ್ಲಿ ಆಯೋಜಿಸಿದ ವಿದ್ಯಾರ್ಥಿಗಳೊಂದಿಗಿನ ಚರ್ಚೆಯಲ್ಲಿ ಮೀಸಲಾತಿ ವಿರೋಧದ ಅಭಿಪ್ರಾಯಗಳಿಗೆ ಹಳ್ಳಿಗಳಿಗೆ ಹೋಗಿ ದಲಿತರ ಜೀವನ ನೋಡಿ ಎಂಬ ನೇರ ಉತ್ತರ ನೀಡಿದ್ದಾರೆ.

ಮೀಸಲಾತಿ ವಿರೋಧಿಸುವವರು ಇರಲಿ, ಮೀಸಲಾತಿ ಬಗ್ಗೆ ಸಹಾನುಭೂತಿ ಹೊಂದಿದವರೂ ಕೂಡ ಒಳಮೀಸಲಾತಿ ಬಗ್ಗೆ ಸಾಕಷ್ಟು ಗಮನ ಹರಿಸಿದಂತಿಲ್ಲ.

ಇಂದು ಸುಶಿಕ್ಷಿತ ಮಧ್ಯಮವರ್ಗ, ತನಗಾದ ಅನುಭವ ಹಾಗೂ ಚರಿತ್ರೆ ಗ್ರಹಿಸುವಲ್ಲಿನ ಕೊರತೆಯಿಂದಾಗಿ ಮೀಸಲಾತಿ ವ್ಯವಸ್ಥೆಯನ್ನೇ ವಿರೋಧಿಸುತ್ತಿದೆ.

ಜಾಗತೀಕರಣ-ಖಾಸಗೀಕರಣ ನೀತಿಗಳನ್ನು ಚಾಚುತಪ್ಪದೇ ಪಾಲಿಸುತ್ತಿರುವ ಸರಕಾರಗಳು ಉದ್ಯೋಗ ಸೃಷ್ಟಿಸುವ ಜವಾಬ್ದಾರಿ ತನ್ನದಲ್ಲ ಎಂದೂ ಹಿಂದೆ ಸರಿದಿರುವುದು ಹಾಗೂ ಹೆಚ್ಚು ಹೆಚ್ಚು ಖಾಸಗೀ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಆದ್ಯತೆ ನೀಡುತ್ತಿರುವ ಹಿನ್ನಲೆಯಲ್ಲಿ ಮೀಸಲಾತಿ ಪದಕ್ಕೆ ಅರ್ಥ ಹುಡುಕಬೇಕಿದೆ.

ದೇಶದಲ್ಲಿರುವ 23ಕೋಟಿ ದಲಿತರ ಪೈಕಿ ಈವರೆಗೆ ಕೇವಲ 11ಲಕ್ಷ ಕುಟುಂಬಗಳು ಮಾತ್ರ ಸರಕಾರಿ ನೌಕರರಾಗಿದ್ದಾರೆ ಇದರ ಪ್ರಮಾಣ ಶೇ0.3% [ಪ್ರ.ವಾ.07-08-06] ಅಲ್ಲದೆ ಮೀಸಲಾತಿ ಪ್ರಮಾಣ ಹಲವು ವರ್ಷಗಳಿಂದ ಪರಿಷ್ಕರಣೆ ಆಗುತ್ತಿಲ್ಲ. ಕೇಂದ್ರ ಸರಕಾರ ಪರಿಶಿಷ್ಟ ಜಾತಿ/ ವರ್ಗದವರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇ22.75%ರಷ್ಟು ಮೀಸಲಾತಿ ನೀಡಿದೆ. ಆದರೆ ರಾಜ್ಯ ಸರಕಾರ ಶೇ 18% ರಷ್ಟು ಮೀಸಲಾತಿ ನೀಡಿ ಅನುಸರಿಸುತ್ತಿದೆ.

ಕರ್ನಾಟಕದಲ್ಲಿ ಶಿಕ್ಷಣ ಮತ್ತು ಔದ್ಯೋಗಿಕವಾಗಿ ಇರುವ ಮೀಸಲಾತಿ ಪ್ರಮಾಣ ಶೇ50%ರಷ್ಟು, ಅದು- ಪರಿಶಿಷ್ಟ ಜಾತಿ-15% ಪರಿಶಿಷ್ಟ ಪಂಗಡ-3%, ಪ್ರವರ್ಗ(1)-4% ಪ್ರವರ್ಗ2(A)-15% ಪ್ರವರ್ಗ2(B)-4%, ಪ್ರವರ್ಗ3(A)-4% ಮತ್ತು ಪ್ರವರ್ಗ3(B)-5%ರಷ್ಟು ಇದೆ.

ಜಾತಿ-ಉಪಜಾತಿಗಳು:-

* ಪರಿಶಿಷ್ಟ ಜಾತಿ(SC)-101 ಜಾತಿಗಳು - 79 ಉಪಜಾತಿ ಗಳಿವೆ.
* ಪರಿಶಿಷ್ಟ ಪಂಗಡ(ST)-49 ಜಾತಿಗಳು - 51 ಉಪಜಾತಿ ಗಳಿವೆ.
* ಪ್ರವರ್ಗ(1)-65 ಜಾತಿಗಳು ಮತ್ತು 299 ಉಪಜಾತಿಗಳಿವೆ.
* ಪ್ರವರ್ಗ2(A)-102 ಜಾತಿಗಳು - 302 ಉಪಜಾತಿಗಳು
* ಪ್ರವರ್ಗ2(B)-ಮುಸ್ಲಿಂ ಜಾತಿಗಳು ಉದಾ-ಸೂಫಿ, ದೋಬಿ, ದರ್ವೆಸಿ, ಫಕೀರ
* ಪ್ರವರ್ಗ3(A)-3 ಜಾತಿಗಳು - 42 ಉಪಜಾತಿಗಳಿವೆ.

* ಪ್ರವರ್ಗ3(B)–6 ಜಾತಿಗಳು – 41 ಉಪಜಾತಿಗಳಿವೆ.

ಕರ್ನಾಟಕದಲ್ಲಿ ಶಿಕ್ಷಣ ಮತ್ತು ಉದ್ಯೋಗದ ಸ್ಥಾನ ಭರ್ತಿಗಾಗಿ ಶೇ50%ರಷ್ಟು ಸಾಮಾನ್ಯ ಅರ್ಹತೆ (ಜನರಲ್ ಮೆರಿಟ್) ಹಾಗೂ ಶೇ50%ರಷ್ಟು ಮೀಸಲಾತಿ ವಿಧಾನದಿಂದ ಭರ್ತಿ ಮಾಡಲಾಗುತ್ತದೆ. ಶೇ50%ರಷ್ಟು ಮೀಸಲಾತಿಗೆ 357 ಜಾತಿಗಳು ಮತ್ತು 819 ಉಪಜಾತಿಗಳು ಪರಸ್ಪರ ಪೈಪೋಟಿ ನಡೆಸುತ್ತಿವೆ ಇಲ್ಲಿ ಕೇವಲ ಪರಿಶಿಷ್ಟ ಜಾತಿ/ವರ್ಗಗಳಷ್ಟೆ ಮೀಸಲಾತಿ ಪಡೆಯುತ್ತಿಲ್ಲ ಎಂಬುದು ಬಹು ಮುಖ್ಯವಾದ ವಿಚಾರ.

ಮೀಸಲಾತಿಯ ಅನುಕೂಲವನ್ನು 60ವರ್ಷಕ್ಕೂ ಹೆಚ್ಚು ವಿಸ್ತರಿಸುತ್ತಾ ಬಂದಿದ್ದರೂ ಕೆಲವು ಜಾತಿಗಳೇಕೆ ಇಂದಿಗೂ ಕಡು ಬಡತನದಲ್ಲಿ ಉಳಿದಿವೆ? ಕೆಲವೇ ಪ್ರದೇಶದ ಜನರೇ ಏಕೆ ಎಲ್ಲಾ ಸವಲತ್ತು ಹೊಂದಿದ್ದಾರೆ, ಕೆಲವೇ ಜಾತಿಗಳೇಕೆ ಆರ್ಥಿಕ–ಸಾಮಾಜಿಕ ರಾಜಕೀಯವಾಗಿ ಬಲಾಢ್ಯವಾಗಿವೆ? ಇತ್ಯಾದಿ ವಿಚಾರಗಳು ಸಹ ಚರ್ಚೆಗೆ ಬರಬೇಕಾದ ಅಗತ್ಯತೆ ಇದೆ. ಇಂತಹ ಗಂಭೀರ ಪ್ರಶ್ನೆಗಳಿಗೆ "ಜಾತಿಯೊಳಗಿನ ಜಾತಿ" ಅಂದರೆ ತಮ್ಮ ಜಾತಿಯ ಪ್ರಾಬಲ್ಯವೇ ಮುಂದುವರೆಯ ಬೇಕೆನ್ನುವ ಸ್ವಾರ್ಥಶಕ್ತಿಗಳು, ನಿಜವಾಗಿಯೂ ಸವಲತ್ತು ದಕ್ಕ ಬೇಕಾದ ವರ್ಗಗಳಿಗೆ ಅಡ್ಡಗೋಡೆಯಾಗಿವೆ.

ಜಾತಿವಾರುಗಣತಿ ಮತ್ತು ಒಳಮೀಸಲಾತಿಗೆ ವಿರೋಧದ ವಾದ:–

ಇತ್ತೀಚಿನ ವರ್ಷಗಳಲ್ಲಿ ಒಳಮೀಸಲಾತಿ ಕೂಗು–ಹೋರಾಟಗಳು ನಿರಂತರವಾಗಿ ನಡೆಯುತ್ತಿವೆ ಆದರೂ ಸರಕಾರಗಳು, ಬಲಾಢ್ಯ ಶಕ್ತಿಗಳು ಇದನ್ನು ನಿರ್ಲಕ್ಷಿಸುತ್ತಾ ಬಂದಿವೆ. ನಿವೃತ್ತ ನ್ಯಾಯಮೂರ್ತಿ ರಾಮಾಜೋಯಿಸ್ ಮತ್ತು ಕೆಲವು ಚಿಂತಕರು, ಒಳಮೀಸಲಾತಿ ಜನರ ಏಕತೆ ಮತ್ತು ಅಖಂಡತೆ ಮೇಲೆ ದುಷ್ಟ ಪರಿಣಾಮ ಬೀರುತ್ತದೆ, ಭಾರತ ವಿಭಜನೆ ಮಾಡಿದಂತೆ, ಜಾತಿ–ಜಾತಿ– ನಡುವಿನ ದ್ವೇಷಕ್ಕೆ ದಾರಿ ಎಂದು ಬೊಬ್ಬೆ ಹಾಕುತ್ತಿದ್ದಾರೆ ಅಲ್ಲದೆ ಪರಿಶಿಷ್ಟ ಜಾತಿ/ಪಂಗಡದವರನ್ನು ಎಂದೂ ಸಮಾನತೆಯಿಂದ ನೋಡದ ಲಿಂಗಾಯಿತ ಹಾಗೂ ಒಕ್ಕಲಿಗರು ಹಿಂದುಳಿದ ವರ್ಗದ ಪಟ್ಟಿಯಲ್ಲಿ ಸೌಲಭ್ಯ ಪಡೆಯುತ್ತಿರುವುದರಿಂದ ಸಹಜವಾಗಿಯೇ ಜಾತಿ ಜನಗಣತಿ ಮತ್ತು ಒಳಮೀಸಲಾತಿಗೆ ವಿರೋಧವಾಗಿದ್ದಾರೆ. ಆದರೆ ಇಂಥವರು ವಾಸ್ತವದಲ್ಲಿ ಆರ್ಥಿಕ–ಸಾಮಾಜಿಕ ಅಸಮಾನತೆಯ ವ್ಯವಸ್ಥೆಯನ್ನು ಅನುಚೂನವಾಗಿ ಮುಂದುವರೆಸಲು ಪಣತೊಟ್ಟಿರುವುದು ಕಂಡುಬರುತ್ತದೆ. "ಮಿಲ್ಲರ್ ಸಮಿತಿ" ವರದಿಯೂ ಸಹ ಲಿಂಗಾಯಿತರು–ಒಕ್ಕಲಿಗರನ್ನು ಹಿಂದುಳಿದ ವರ್ಗದ ಪಟ್ಟಿಗೆ ಸೇರಿಸಲು ಸಲಹೆ ನೀಡಿಲ್ಲ.

ಪರಿಶಿಷ್ಟಜಾತಿಗಳಲ್ಲಿನ ಜಾತಿ ಕ್ರೌರ್ಯತನ ಯಾರಿಗಾದರೂ ಅರ್ಥವಾಗಬೇಕಾದಲ್ಲಿ. ಮೊದಲು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದರೆ ಸಾಕು ಬಹುತೇಕ ಪ್ರಾಧ್ಯಾಪಕರು ಹೊಲೆಯ ಜಾತಿಗೆ ಸೇರಿದವರಾಗಿದ್ದಾರೆ. ತಮ್ಮ ಜಾತಿಯ ಅಮಲಿಗೆ ಎಷ್ಟು ಕುರುಡರಾಗಿದ್ದಾರೆ ಎಂದರೆ, ಬೇರೆ ಇನ್ನಿತರ ಜಾತಿಯರಿಗೆ ಗೈಡ್ ಆಗುವುದು ಬಹಳ ಕಷ್ಟ ಹಾಗೆ ಆದಲ್ಲಿ ಅವು ಬಹಳ ಒತ್ತಡ ಇಲ್ಲವೆ ವಿರಳ ಪ್ರಕರಣಗಳು, ಬೆಂ.ವಿ.ವಿ. ಹಾಸ್ಟೆಲ್‌ಗಳಲ್ಲಿದರೆ ಸಾಕು ಈ ಒಳಜಾತಿ ವ್ಯಾದಿಯೂ ಬೇಗ ಅರ್ಥವಾಗುತ್ತದೆ.

ಅಧಿಕಾರಿವರ್ಗ(IAS/KAS)ವು ಪ್ರತ್ಯೇಕ ಉಪಜಾತಿಗಳಿಂದ ಗುರುತಿಸಿಕೊಂಡಿರುವ ಉದಾಹರಣೆಗಳು ದಿನ ಪ್ರತಿಕೆಗಳಲ್ಲಿ ಸುದ್ದಿಯಾಗಿವೆ. "ಎಡಗೈ–ಬಲಗೈ" ಒಂದಾಗಿ ಎಂದು ಹೇಳುವ ಛಲವಾದಿ ಸಮ್ಮೇಳನಗಳು ವೈವಾಹಿಕ 9 ಅಂತರ್‌ಜಾತಿ ವಿವಾಹ) ಸಂಬಂಧ ಬೆಳೆಸುವ ಅಥವಾ ಎಲ್ಲರನ್ನೂ ಸಮಾನವಾಗಿ ನೋಡುವ ಉದಾಹರಣೆಗಳು ತೀರ ಕಡಿಮೆ.

> **ನಿವೃತ್ತ ನ್ಯಾಯಮೂರ್ತಿ ರಾಮಾಜೋಯಿಸ್ ಮತ್ತು ಕೆಲವು ಚಿಂತಕರು, ಒಳಮೀಸಲಾತಿ ಜನರ ಏಕತೆ ಮತ್ತು ಅಖಂಡತೆ ಮೇಲೆ ದುಷ್ಟ ಪರಿಣಾಮ ಬೀರುತ್ತದೆ, ಭಾರತ ವಿಭಜನೆ ಮಾಡಿದಂತೆ, ಜಾತಿ–ಜಾತಿ– ನಡುವಿನ ದ್ವೇಷಕ್ಕೆ ದಾರಿ ಎಂದು ಬೊಬ್ಬೆ ಹಾಕುತ್ತಿದ್ದಾರೆ. ಅಲ್ಲದೆ ಪರಿಶಿಷ್ಟ ಜಾತಿ/ಪಂಗಡದವರನ್ನು ಎಂದೂ ಸಮಾನತೆಯಿಂದ ನೋಡದ ಲಿಂಗಾಯಿತ ಹಾಗೂ ಒಕ್ಕಲಿಗರು ಹಿಂದುಳಿದ ವರ್ಗದ ಪಟ್ಟಿಯಲ್ಲಿ ಸೌಲಭ್ಯ ಪಡೆಯುತ್ತಿರುವುದರಿಂದ ಸಹಜವಾಗಿಯೇ ಜಾತಿ ಜನಗಣತಿ ಮತ್ತು ಒಳಮೀಸಲಾತಿಗೆ ವಿರೋಧವಾಗಿದ್ದಾರೆ.**

ಇನ್ನೂ ಒಳಮೀಸಲಾತಿ ಪ್ರಸ್ತಾಪಮಾಡುವ ಶ್ರೀ ದೇವೇಗೌಡರು ಮತ್ತು ಯಡಿಯೂರಪ್ಪನವರುಗಳು ಒಳಮೀಸಲಾತಿ ಜಾರಿಗೆ ಪಣ ತೊಡುವರೇ? ಏಕೆಂದರೆ ಜಾತಿವಾರು ಗಣತಿಯಿಂದ ಒಳಮೀಸಲಾತಿ ಜಾರಿಯಾದಲ್ಲಿ, ತಾವು ಪ್ರತಿನಿಧಿಸುವ ಜಾತಿಗಳು ಖಂಡಿತಾ ಸವಲತ್ತು ಕಳೆದುಕೋಳ್ಳುವ ಭೀತಿ ಅವರನ್ನು ಕಾಡದೇ.?

ಇತ್ತೀಚಿಗೆ ಸಚಿವ ಗೋವಿಂದ ಕಾರಜೋಳರವರು, ಸುಳ್ಳುಜಾತಿ ಪ್ರಮಾಣಪತ್ರ ನೀಡಿ 20ಸಾವಿರಕ್ಕೂ ಹೆಚ್ಚು ನೌಕರಿ ಪಡೆದ ವ್ಯಕ್ತಿಗಳ ಪ್ರಕರಣಗಳು ನಾಗರಿಕ ಹಕ್ಕುಜಾರಿ ಘಟಕದಲ್ಲಿ ಇನ್ನೂ ಇತ್ಯರ್ಥವಾಗದಿರುವ ಬಗ್ಗೆ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ, ಅಲ್ಲದೇ ದಲಿತರ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣಗಳ ದುರುಪಯೋಗ ಪ್ರಕರಣಗಳಿಗೆ, ಯಾವುದೇ ಬಗೆಯ ಶಿಕ್ಷೆಗಳು, ನ್ಯಾಯಾತೀರ್ಮಾನಗಳಿಲ್ಲ.

ಜನಸಂಖ್ಯೆ ಆಧಾರಿತ ಜನಗಣತಿಯಿಂದ ಒಳಮೀಸಲಾತಿ ಜಾರಿಯಾದಲ್ಲಿ, ನಿಜವಾಗಿಯೂ ಅದಕ್ಕೆ ಬೇಕಾದ ಸೌಲಭ್ಯಗಳನ್ನು ಅವಕಾಶವಂಚಿತ ಸಮುದಾಯಗಳು ಪಡೆಯಲಿವೆ. ಆಂಧ್ರ ಪ್ರದೇಶ ಇದಕ್ಕೆ ಉತ್ತಮ ನಿದರ್ಶನ.

ಬೆಳೆದ ಜಾತಿಗಳನ್ನು ಮೀಸಲಾತಿ ಸೌಲಭ್ಯದಿಂದ ಕೈಬಿಡುವುದು, ಕೆನೆಪದರ ಮಾನದಂಡ, ಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯ ಹೆಚ್ಚಳವಾಗದಿದ್ದಲ್ಲಿ, ಬಹಳಷ್ಟು ಜಾತಿಗಳು ಅವಕಾಶವಂಚಿತವಾಗೀಯೇ ಉಳಿಯಲಿವೆ.

ಒಳಮೀಸಲಾತಿ ಜಾರಿ ಅಂಬೇಡ್ಕರ್‌ರ ಆಶಯಕ್ಕೆ ನೀಡುವ ಬಹುದೊಡ್ಡ ಗೌರವ ಅಲ್ಲದೆ ಒಳಮೀಸಲಾತಿ "ಪ್ರಜಾತಾಂತ್ರಿಕ ಬೇಡಿಕೆ" ಕೂಡ. ಶೋಷಣೆಯ ಮುಕ್ತ ನೈಜ ಪ್ರಜಾಪ್ರಭುತ್ವ ಸ್ಥಾಪನೆವರೆವಿಗೂ, ಮೀಸಲಾತಿ ಹಾಗೂ ಒಳಮೀಸಲಾತಿ ಅಗತ್ಯ ಮತ್ತು ಅನಿವಾರ್ಯ. □

ಬೇಕಾದುದು- ವೈಷ್ಣವ ದೀಕ್ಷೆಯಲ್ಲ: ತ್ರಿಜ ದೀಕ್ಷೆ

(15ನೇ ಪುಟದಿಂದ)

ಅನ್ನಿಸುತ್ತದೆ. ಹಾಲಿ ದ್ವಿಜ ದೀಕ್ಷೆಯ ಗಾಯತ್ರೀ ಮಂತ್ರದಲ್ಲಿ, ಮುಖ್ಯವಾಗಿ ಬುದ್ಧಿ ಪ್ರಚೋದನೆಯಾಗಲಿ ಎಂಬ ಆಶಯವಿದೆ. ಬುದ್ಧಿಯಿಂದ ಒಡಕು ವಂಚನೆ ಮೇಲರಿಮೆ ಕೀಳರಿಮೆ ಇತ್ಯಾದಿಗಳು ಹೆಚ್ಚಲೂ ಬಹುದು. ಭಾರತದ ಸಮಾಜಕ್ಕೆ ಇಂದು ತುರ್ತಾಗಿ ಬೇಕಾಗಿರುವುದು–ಕರುಳು ಅಂದರೆ ಅಂತಃಕರಣ ಅಂದರೆ ಬಂಧುತ್ವ- ಇದರ ಪ್ರಚೋದನೆಗಾಗಿ, ಅಂದರೆ ಕಾರುಣ್ಯದ ಪ್ರಚೋದನೆಯಾಗಲಿ ಎಂಬ ಆಶಯದ ನವ ದೀಕ್ಷೆ ಯನ್ನು ನೀಡಿ ಎಂದು ಅವರಲ್ಲಿ ಪ್ರಾರ್ಥಿಸುವೆ. ನನ್ನ ಈ ಪ್ರಾರ್ಥನೆಯನ್ನು ಉದ್ಧಟತನವೆಂದು ಅವರು ಭಾವಿಸದಿರಲಿ. (ಈ ತ್ರಿಜ ದೀಕ್ಷೆಯ ಪರಿಕಲ್ಪನೆಯನ್ನು ಯು.ಆರ್. ಅನಂತಮೂರ್ತಿಯವರು ಏನಾರೂ ಕೇಳಿಸಿಕೊಂಡರೆ ಈ ತ್ರಿಜತ್ವ ದೀಕ್ಷೆಯನ್ನು ನೀನೇ ನನಗೆ ಕೊಡಯ್ಯಾ ಎಂದು ಕೇಳೇ ಕೇಳುತ್ತಾರೆಂಬ ಗ್ಯಾರಂಟಿ ನನಗಿದೆ!)

ಭಾರತವು ಏನೇನೋ ಹುಟ್ಟುಹಾಕಿದೆ. ಹುಟ್ಟಿಸುವುದರಲ್ಲಿ ನಾವು ನಿಸ್ಸೀಮರು. ಚಾತುವರ್ಣ್ಯ ಜಾತಿಭೇದದ ತಾರತಮ್ಯದ ಕಾನೂನು ಕಟ್ಟಳೆಗಳನ್ನು ಧರ್ಮವಾಗಿಸಲು – ದೇವರುಗಳನ್ನೇ ರೌಡಿಗಳನ್ನಾಗಿಸಿದ ದೇಶ ಇದು. ಇತ್ತೀಚೆಗೆ ಆಕ್ಸಿಡೆಂಟ್ ಗಣೇಶನನ್ನೂ ಹುಟ್ಟುಹಾಕಿದೆ. ಈಗ ಒಂದು ಹೊಸ ಹುಟ್ಟಿಗಾಗಿ ಪೇಜಾವರ ಶ್ರೀಗಳ ಮುಂದೆ ಸಲಹೆ ಯೊಂದನ್ನಿಡುವೆ. . ನಮ್ಮದು ಜನ್ಮಾಂತರಗಳನ್ನು ನಂಬುವ ದೇಶ. ಈ ಜನ್ಮದ ತರ್ಕಕ್ಕೆ- ಕಳೆದ ಜನ್ಮದಲ್ಲಿ ಅಸ್ಪೃಶ್ಯತೆ ಆಚರಿಸಿದವರೇ ಈ ಜನ್ಮದಲ್ಲಿ ಅದನ್ನು ಅನುಭವಿಸಲು ಅಸ್ಪೃಶ್ಯರಾಗಿ ಹುಟ್ಟಿದ್ದಾರೆ. ಈ ಜನ್ಮದಲ್ಲಿ ಅಸ್ಪೃಶ್ಯತೆ ಆಚರಿಸುವವರು ಮುಂದಿನ ಜನ್ಮದಲ್ಲಿ ಅಸ್ಪೃಶ್ಯರಾಗಿ ಹುಟ್ಟುವರು.– ಎಂದು ಜನಜನಿತ ಮಾಡಿದರೆ ನಮ್ಮ ಜಡ ಸಮಾಜವು ಸ್ವಲ್ಪವಾದರೂ ಚಲಿಸಬಹುದಲ್ಲವೇ? ಜನ್ಮ ನಿಜವಿದ್ದರೆ ಆ ಜನ್ಮಾಂತರದ ಕರ್ಮಫಲವನ್ನು ಉಣ್ಣಬೇಕಾದ್ದೂ ನಿಜವಿರಬಹುದಲ್ಲವೇ.

ಏನೇನೋ ಹುಟ್ಟು ಹಾಕುವವರು ಇದನ್ನು ಯಾಕೆ ಹುಟ್ಟು ಹಾಕಬಾರದು?! ಯಾಕೆ ಮಠಾಧೀಶರುಗಳು ಇದನ್ನು ಪ್ರಚಾರ ಮಾಡಬಾರದು? ತಾರತಮ್ಯಕ್ಕಾಗಿ ತರ್ಕಿಸಿ ಸಾಯುವ ಭಾರತದ ಮನಸ್ಸು ಐಕ್ಯತೆಗಾಗಿ ಯಾಕೆ ತರ್ಕಿಸಬಾರದು? ಇದನ್ನೇ ಅಸ್ಪೃಶ್ಯರೊಳಗಿನ ತಾರತಮ್ಯಕ್ಕೂ- ಈ ಜನ್ಮದಲ್ಲಿ ಯಾರನ್ನಾದರು ಕೀಳಾಗಿ ಕಂಡಿದ್ದರೆ ಮುಂದಿನ ಜನ್ಮದಲ್ಲಿ ಕೀಳಾಗಿ ಹುಟ್ಟಿಯೇ ಕರ್ಮಫಲವನ್ನು ಕಳೆದು ಕೊಳ್ಳಬೇಕಾಗುತ್ತದೆ- ಎಂಬುವವರೆಗೂ ವ್ಯಾಪಿಸಬಹುದು.

ಸುಸ್ತಾಗುತ್ತಿದೆ. ಯಾಕೋ ಮುಗಿಯುತ್ತಿಲ್ಲ. ಪ್ರೀತಿ–ಸಮಾನತೆಯ ಆಸೆ ಇಟ್ಟುಕೊಂಡು ಇತಿಹಾಸಕಾಲದಿಂದಲೂ ಜೀವಿಸುತ್ತಿದ್ದೇವೆ. ಪೇಜಾವರ ಶ್ರೀಗಳ ಪಾದಯಾತ್ರೆಯಿಂದಾಗಿ ಕೆಲವರಾದರೂ ಎಳೆಯ ದ್ವಿಜರು ತ್ರಿಜರಾಗಿ ತ್ರಿಜತ್ವ ಪಡೆದು ತಮ್ಮದಲ್ಲದ ಜಾತಿಯಲ್ಲಿ ಮದುವೆಯಾಗಿ ಹೊಸ ಮನುಷ್ಯ ಸಂತಾನ ಹುಟ್ಟಲು ಶ್ರೀ ಪೇಜಾವರರ ಈ ಪಾದಯಾತ್ರೆ ಪ್ರಚೋದನೆಯನ್ನು ಉಂಟು ಮಾಡಲಿ ಎಂದು ಕನಸು ಕಾಣುವೆ. ನನ್ನ ಕನಸು ನನಸಾಗಲಿ.

** ಕುವೆಂಪು ಅವರ ಸಂದರ್ಶನವೊಂದರಲ್ಲಿ. ಶ್ರೀಕೃಷ್ಣ ಆಲನಹಳ್ಳಿ ಕುವೆಂಪು ಅವರಿಗೆ ಒಂದು ಪ್ರಶ್ನೆ ಕೇಳಿದರು–ಮಧ್ವ ಸಿದ್ಧಾಂತ ನೀಚ ಸಿದ್ಧಾಂತವೇ ಸರ್?" ಅಂತ. ಅದಕ್ಕೆ ಕುವೆಂಪು "ನೀಚ? ಪರಮ ನೀಚ" ಅಂದರು. ಆಲನಹಳ್ಳಿ ನಕ್ಕೂ ನಕ್ಕೂ ಆ ನಗುವಿನ ಅಲೆ ನನ್ನ ಕಿವಿಯಲ್ಲಿ ಇನ್ನೂ ಇದೆ.* □

ಧರ್ಮವೋ? ರಾಜಕೀಯ ತಂತ್ರವೋ?

-೪-

ಜ್ಯೋತಿ ಗುರುಪ್ರಸಾದ್

'ಧರ್ಮ' ಎಂದರೆ ಧಾರಣ ಮಾಡಿದುದು, ನಿಯಮ, ಆಚಾರ, ಪುಣ್ಯ, ಚತುರ್ವಿಧ ಪುರುಷಾರ್ಥಗಳಲ್ಲಿ ಒಂದು ಕರ್ತವ್ಯ, ಗುಣ, ಸ್ವಭಾವ, ಬಿಲ್ಲು, ನ್ಯಾಯ, ದತ್ತಿ ಹೀಗೆ ನಿಘಂಟಿನ ಅನೇಕ ಅರ್ಥಗ ಳಿವೆ. ಈ ಅರ್ಥಗಳೆಲ್ಲಾ ನಿಜವಾಗಿ ಸಂಭವಿಸಿದಾಗಲಷ್ಟೇ ಆ ಅರ್ಥ ತಾತ್ಪರ್ಯಗಳು ಕೈಗೂಡುತ್ತವೆ.

ಮಹಾಭಾರತದಲ್ಲಿ ಧರ್ಮರಾಜನಿಗೂ ಕೂಡ ಧರ್ಮದಲ್ಲಿ ನಡೆಯುವವನೆಂಬ ಅರ್ಥದಲ್ಲಿಯೇ ಸಜ್ಜನರ ಪಂಗಡವಾದ ಪಾಂಡವ ಸಹೋದರರ ಹಿರಿಯನೆಂಬ ಅಗ್ಗಳಿಕೆ. ಇವನು ಯಾರು? ಯಮ ಧರ್ಮ ರಾಜನ ದಯೆಯಿಂದ ಕುಂತಿಗೆ ಜನಿಸಿದ ಪುತ್ರ 'ಯಮ' ಎಂದರೆ ಧರ್ಮದೇವತೆ, ಮೃತ್ಯದೇವತೆ, ನಿತ್ಯವೂ ಮಾಡಬೇಕಾದ ಧಾರ್ಮಿಕ ಕ್ರಿಯೆ, ನಿತ್ಯಕರ್ಮ ಎಂಬ ಅರ್ಥಗಳಿವೆ. ಜೀವನವನ್ನು ಧರ್ಮವಾಗಿ ಸ್ವೀಕರಿಸುವುದರಲ್ಲಿಯೇ ಸಾವನ್ನು ಕೂಡ ಧರ್ಮವಾಗಿ ಸ್ವೀಕರಿಸಬಲ್ಲ ಅಂತರಾರ್ಥ ಇಲ್ಲಿ ಒಳಗೊಂಡಿದೆಯೆನಿಸುತ್ತದೆ. ಹುಟ್ಟಿ ನೊಡನೆಯೇ 'ಸಾವು' ಕೂಡ ಜೊತೆಯಲ್ಲಿಯೇ ಅಂಟಿಕೊಂಡು ಬಂದಿರುತ್ತದೆ. ನಿತ್ಯ ಕರ್ಮಗಳ ಸರಿಯಾದ ಅನುಷ್ಠಾನವಾಗುತ್ತಿದ್ದರೆ ಆ ದಾರಿಯ ಧರ್ಮದಲ್ಲಿ ಸಾವಿಗೂ ಕೂಡ ವಿಶಿಷ್ಟ ಅರ್ಥವಿರುತ್ತದೆ. ಶರಣರ ಗುಣವನ್ನು ಮರಣದಲ್ಲಿ ನೋಡು' ಎಂಬ ಗಾದೆಮಾತಿದೆ.

ಮಹಾಭಾರತದಲ್ಲಿ ಧರ್ಮರಾಜನಿಗೂ ಕೂಡ ಧರ್ಮದಲ್ಲಿ ನಡೆಯುವನೆಂಬ ಅರ್ಥದಲ್ಲಿಯೇ ಸಜ್ಜನರ ಪಂಗಡವಾದ ಪಾಂಡವ ಸಹೋದರರ ಹಿರಿಯ ನೆಂಬ ಅಗ್ಗಳಿಕೆ. ಇವನು ಯಾರು? ಯಮ ಧರ್ಮ ರಾಜನ ದಯೆಯಿಂದ ಕುಂತಿಗೆ ಜನಿಸಿದ ಪುತ್ರ 'ಯಮ' ಎಂದರೆ ಧರ್ಮದೇವತೆ, ಮೃತ್ಯದೇವತೆ, ನಿತ್ಯವೂ ಮಾಡಬೇಕಾದ ಧಾರ್ಮಿಕ ಕ್ರಿಯೆ, ನಿತ್ಯ ಕರ್ಮ ಎಂಬ ಅರ್ಥಗ ಳಿವೆ. ಜೀವನವನ್ನು ಧರ್ಮವಾಗಿ ಸ್ವೀಕರಿಸುವುದರಲ್ಲಿಯೇ ಸಾವನ್ನು ಕೂಡ ಧರ್ಮವಾಗಿ ಸ್ವೀಕರಿಸಬಲ್ಲ ಅಂತರಾರ್ಥ ಇಲ್ಲಿ ಒಳಗೊಂಡಿದೆಯೆನಿಸುತ್ತದೆ. ಹುಟ್ಟಿ ನೊಡನೆಯೇ 'ಸಾವು' ಕೂಡ ಜೊತೆಯಲ್ಲಿಯೇ ಅಂಟಿಕೊಂಡು ಬಂದಿರುತ್ತದೆ. ನಿತ್ಯ ಕರ್ಮಗಳ ಸರಿಯಾದ ಅನುಷ್ಠಾನವಾಗುತ್ತಿದ್ದರೆ ಆ ದಾರಿಯ ಧರ್ಮದಲ್ಲಿ ಸಾವಿಗೂ ಕೂಡ ವಿಶಿಷ್ಟ ಅರ್ಥವಿರುತ್ತದೆ.

ಹಾಗೆಯೇ 'ಮರಣವೇ ಮಹಾನವಮಿ' ಎಂಬ ಮಾತು ಇಷ್ಟೆಲ್ಲಾ ಮಾತುಗಳು 'ಯಮಧರ್ಮ' ನನ್ನು ಅಂದರೆ ಧರ್ಮರಾಜನ ತಂದೆಯನ್ನು ನೆನಪಿಸಿಕೊಳ್ಳುತ್ತಾ ಬಂದಂತಹವು. ಅಂದರೆ ಧರ್ಮವೆಂಬುದು ಯಾವುದೇ ಒಂದು ನಿರ್ದಿಷ್ಟ ಹೆಸರಿಗೆ ಹಣೆಪಟ್ಟಿಯೊಡ್ಡಿಕೊಂಡು 'ಇದುವೇ ಧರ್ಮ' ಎಂದ 'ಆ ಹೆಸರಿಗೆ' ಸೀಮಿತವಾಗುವ ಸಿದ್ಧಾಂತವಲ್ಲ. ಸಾಮಾನ್ಯ ಜೀವನ ಗತಿಗೆ-ದಿನ ನಿತ್ಯದ ಪಯಣದ ಸಂಸ್ಕೃತಿಗೆ ಸರಾಗವಾಗಿ-ಸುಲಲಿತವಾಗಿ ನಮ್ಮನ್ನು ಒಡ್ಡಿಕೊಳ್ಳುವ ಒಂದು ಅನಾವರಣ ಎಂದು ವೈಚಾರಿಕ ನೆಲೆಯಲ್ಲಿ ನಿಂತು ನೋಡಿದಾಗ ಅನ್ನಿಸುವುದಲ್ಲವೇ? ಅದಕ್ಕೆ ಈ ಸಣ್ಣ ವಿಶ್ಲೇಷಣೆ. ಈ ವಿಶ್ಲೇಷಣೆ ಆಗಲೇ ಮಹಾಭಾರತ ರಚಿಸುವಾಗಲೆ ವ್ಯಾಸ ಮಹರ್ಷಿಗಳಿಗೆ ಹೊಳೆದಿರುವಂತಿದೆ. ಅದಕ್ಕೆ ಪಾಂಡವ ಸಂಜಾತನಿಗೆ 'ಧರ್ಮ'ದ ಆರಂಭದಿಂದ ಮೊದಲಾಗುವ ಹೆಸರಿಗೆ-ತನ್ನ ತಾಯಿಯ ನೀತಿಗೆ ಚ್ಯುತಿ ಬಾರದಂತೆ ತನ್ನ ರಾಜನೀತಿಯ ಸೂತ್ರವನ್ನು ಅನುಸರಿಸಿಕೊಂಡು ಹೋಗುತ್ತಾನಾದರೂ ಎಲ್ಲೋ ಮಧ್ಯದಲ್ಲಿ ಆತನ ಸಹನೆ-ತಾಳ್ಮೆ ಎಲ್ಲವೂ ಅತಿಯಾಯಿತೆನಿಸಿಬಿಡುತ್ತದೆ.

ದ್ಯೂತದ ಆಟವನ್ನು ಆಡುವ ಅಭ್ಯಾಸವುಳ್ಳ ಅಥವಾ ಹವ್ಯಾಸವುಳ್ಳ ಧರ್ಮರಾಜನಿಗೆ ಕ್ರಮೇಣ ಆ ಅಭ್ಯಾಸ ಒಂದು ಚಟವಾಗುತ್ತದೆ. ಆ ಚಟ ಅವನನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತದೆಯೆಂದರೆ ಪಗಡೆಯಾಟದ ಪಂದ್ಯಕ್ಕೆ ತನ್ನ ಎಲ್ಲವನ್ನೂ ಪಣಕ್ಕಿಡುವ ಒಂದು ತೃಷೆ ಯಾಗಿ-Crageಆಗಿ ಉಲ್ಬಣಿಸಿದ ಒಂದು ರೋಗದ ಚಿಹ್ನೆಯಾಗಿ ಕಾಣಿಸಿಕೊಳ್ಳುತ್ತದೆ. ಅಲರ್ಜಿಯಾದಾಗ ಚರ್ಮದ ಮೇಲೆ ಮೂಡಿಬರುವ ಗಂದೆ-ಗಾಯಗಳಂತೆ! ಯಾಕೆಂದರೆ ಪಂದ್ಯದಲ್ಲಿ ರಾಜ್ಯವನ್ನು ಸೋತು-ತನ್ನೊಡನೆ ತನ್ನ ತಮ್ಮಂದಿರನ್ನೂ ಸೋತು ತನ್ನ ಮಡದಿಯನ್ನೂ ಪಂದ್ಯಕ್ಕೆ-ಪಣಕ್ಕೆ ಒಡ್ಡುವ ವಸ್ತುವಾಗಿ ಮಾತ್ರ ನೋಡಿ ಕೌರವರ ಉಸ್ತುವಾರಿಗೆ ಒಪ್ಪಿಸಿಬಿಡುತ್ತಾನೆ.

ಈ ಉಸ್ತುವಾರಿಯಾದರೂ ಎಂಥಹುದು? ಸತ್ಯ ಹರಿಶ್ಚಂದ್ರನ ಮಡದಿ ಚಂದ್ರಮತಿಗೆ ಸತ್ಯ ಹರಿಶ್ಚಂದ್ರನ 'ಸತ್ಯ'ವನ್ನು ಉಳಿಸಲು ಒದಗಿಬಂದಂಥ ಗುಲಾಮಗಿರಿಯಲ್ಲಿ ಇನ್ನೊಬ್ಬರ ಮನೆಯ ಜೀತದಾಳಾಗಿ ದುಡಿಯಬೇಕಾಗಿ ಬಂದಂಥ ಒಂದು ಮೀತಿಯ ದಾಸ್ಯವಲ್ಲ. ಚಂದ್ರಮತಿಯ ದಾಸ್ಯವಾದರೋ ತನ್ನನ್ನು ಮಾರಲ್ಪಟ್ಟ ಮನೆಯ ಒಡೆಯರು ಹೇಳುವ ಮನೆಕೆಲಸಗಳನ್ನು ಮಾಡುವ ಕೆಲಸಗಳಿಗಷ್ಟೇ ಸೀಮಿತವಾಗಿತ್ತು. ಅದಕ್ಕಾಗಿ ಅವಳಿಗೆ ಸೀಗಬೇಕಾದ ಹೊನ್ನಿನ ವರಹಗಳೂ ಸಂದಾಯ ಮಾಡಬೇಕಾಗಿದ್ದ ಸಾಲದ ಹೊರೆಯ ಪಟ್ಟಿಗೆ ಸೇರ್ಪಡೆಯಾಗಿ ಧರ್ಮವಾಯಿತು. ಇಲ್ಲಿಯೂ ಸತ್ಯ ಹರಿಶ್ಚಂದ್ರ ಮಹಾರಾಜನದು ಸ್ವಲ್ಪ ಅತಿಯಾಯಿತೇ ಎಂದೆನ್ನಿಸಿದರೂ ಕೂಡ ವಿಶ್ವಮಿತ್ರ ಮಹರ್ಷಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಸತ್ಯವ್ರತಕ್ಕಾಗಿಯೇ ಇಂಥ ಬದ್ಧತೆಯ ದಾರಿ ತುಳಿದನೆಂದು ಸ್ವಲ್ಪ ಸಮಾಧಾನವಾದರೂ ಆಗುತ್ತದೆ. ಹಾಗೂ ಬದ್ಧತೆ ಅಥವಾ 'ಇಂಟಿಗ್ರಿಟಿ'ಯ ದಾರಿ ಎಷ್ಟು ಕಠಿಣವಾದದ್ದೆಂಬ ಸತ್ಯಕ್ಕೆ ರೂಪಕವಾಗಿದೆ ಪುರಾಣದ ರಾಜಾ ಸತ್ಯ ಹರಿಶ್ಚಂದ್ರ ಕಥೆ. ಇಲ್ಲಿ ಚಂದ್ರಮತಿಯ ಮೇಲೆ ಅತ್ಯಾಚಾರದಂಥ ಅಧರ್ಮದ ಅಟ್ಟಹಾಸ ಉಂಟಾಗಲಿಲ್ಲ ಎಂಬ ಸಂಗತಿಯನ್ನು ಹೇಳಲು ಮುಖ್ಯವಾಗಿ ನಾನು ಹೊರಟಿದ್ದು. ಆದರೆ ಪಾಂಡವರ ಪತ್ನಿ ದ್ರೌಪತಿಗೆ ಇಡೀ ರಜಸಭೆಯ ಮಡುವೆ ಸಾಕ್ಷತ್ ತನ್ನ ಒಬ್ಬರಲ್ಲ-ಇಬ್ಬರಲ್ಲ ಪಂಚ ಮಹಾಪತಿಗಳ ಮುಂದೆಯೇ ಅವಳ ಆತ್ಮ ಗೌರವಕ್ಕೆ ಧಕ್ಕೆಯುಂಟಾಗುವಂಥ ಅನೈತಿಕ ಘಟನೆ ಸಂಭವಿಸುತ್ತದೆ.

ಅವಳ ಮೈದುನನಿಗೆ ಸಮಾನನಾದ ಕೌರವ ಪಕ್ಷದ ದುಶ್ಯಾಸನ ಧರ್ಮರಾಜ ಸೋತ ಈ ಅವಕಾಶಕ್ಕೇ ಹೊಂಚು ಹಾಕುತ್ತಿದ್ದಂತೆ ಅಥವಾ ಈ ಹೊಂಚನ್ನು ಅಧಿಕೃತ ಸಮ್ಮತಿಗಾಗಿ ಒಳಪಡಿಸುವುದಕ್ಕೇ ಶಕುನಿಯ ತಂತ್ರದ ಸಹಕಾರ ಪಡೆದು ತೆರೆದ ಆ ಮಹಾ ಸಭೆಯಲ್ಲಿ ದ್ರೌಪದಿಯ ಮಾನಹರಣ ಮಾಡಲು ಹವಣಿಸುತ್ತಾನೆ. "ನಾನು ಋತುಮತಿಯಾಗಿದ್ದೇನೆ. ಈ ಸಂದರ್ಭದಲ್ಲಿ ನನ್ನನ್ನು ಎಳೆದೊಯ್ಯುವುದು ಸಮ್ಮತವಲ್ಲ. ಜೊತೆಗೆ ನಾನು ನಿನ್ನ ಅತ್ತಿಗೆಯ ಅಮಾನ, ಎಂದರೆ ತಾಯಿ ಸಮಾನ ತಾಯಿಯನ್ನು ಹೀಗೆ ದಬ್ಬಾಳಿಕೆ ಮಾಡುತ್ತಾರೆಯೇ?" ಎಂಬಂಥ ದ್ರೌಪದಿಯ ಮಾತುಗಳೂ ದುಶ್ಯಾಸನನ್ನು ಕರಗಿಸುವುದಿಲ್ಲ. ತುಂಬಿದ ಸಭೆಗೆ ಅವಳ ಕೂದಲನ್ನು ಹಿಡಿದೆಳೆಯುತ್ತ ಅವಳ ವಸ್ತ್ರವನ್ನು ಅಪಹರಿಸಲು ಪ್ರಯತ್ನಿಸುತ್ತ 'ದುಷ್ಟ'ನೆಂಬ ಅರ್ಥಕ್ಕೆ-ಅಧರ್ಮ'ಕ್ಕೆ ಸಾಕ್ಷಿಯಾಗಿ ಗಟ್ಟಿಯಾಗಿ ನಿಲ್ಲುತ್ತದೆ. ಆದರೂ ದ್ರೌಪ ದಿಯ ಹಿರಿಯ ಪತಿ 'ಧರ್ಮರಾಜ'ನ ಮನಸ್ಸು ಕರಗುವುದಿಲ್ಲ

ಇಲ್ಲಿ ನಾನು 'ಕರಗುವುದಿಲ್ಲ' ಎಂಬ ಪದವನ್ನು ಪ್ರಜ್ಞಾಪೂರ್ವಕವಾಗಿಯೇ ಉಪಯೋಗಿಸುತ್ತಿದ್ದೇನೆ. ಯಾಕೆಂದರೆ ಸುಮ್ಮನೆ ದುಃಖವಾಗುವುದು, ಕನಿಕರವಾಗುವುದು, ಅಯ್ಯೋ ಎನ್ನುವುದೆಲ್ಲಾ ಕ್ರಿಯೆಯಾಗಿ ಪರಿವರ್ತನೆಯಾಗದೇ ಇದ್ದರೆ 'ಕರಗುವುದು'. ಎಂದೆನಿಸುವುದು.ಎಲ್ಲ

ಅಲ್ಲವೇ?! 'ಕಲ್ಲು ಕರಗುವ ಸಮಯ ಎಂದು ಲಂಕೇಶರು ಬರೆದಿದ್ದೂ ಕೂಡ ಆ ತಮ್ಮ ಕಥೆ ಯಲ್ಲಿ ಬರುವ ಮೇಲ್ಜಾತಿಯ ಹೆಣ್ಣಿನ ತಂದೆ ತನ್ನ ಕಠೋರ ಮನಸ್ಥಿತಿಯನ್ನು ಬದಲಿಸಿಕೊಂಡು ಅವಳಿಷ್ಟಪಟ್ಟ ದಲಿತ ಯುವಕಲ್ಲಿರುವ ಮನುಷ್ಯತ್ವದ ಮರ್ಮವನ್ನು ಅರಿತು ಕರಗಿ ಜಾತಿಯ ಗಡಿಯನ್ನು ಮೀರಿ 'ಧರ್ಮ' ವನ್ನು ಪಾಲಿಸುವ ಕರಗುವಗುಣದಿಂದ. ಕರಗಿದ ಕೂಡಲೇ ಅಲ್ಲಿ ಪರಿಣಾಮವಿರುತ್ತದೆ. ಇಲ್ಲದಿದ್ದರೆ 'ಗಾಣಗಿತ್ತಿಅಯ್ಯೋ! ಎಂದತೆ' ಎಂಬ ಗಾದೆಯಷ್ಟೇ ಊರ್ಜಿತವಾಗುತ್ತದೆ.

ಗಾಣದಲ್ಲಿ ಎತ್ತನ್ನು ಕಟ್ಟಿ ಎಣ್ಣೆಯನ್ನು ತೆಗೆಯುತ್ತಲೇ ಅಯ್ಯೋ ಪಾಪ ಎತ್ತು ಎಂದು ಕನಿಕರ ತೋರಿಸಿದಂತೆ! ಇದರಿಂದ ಎತ್ತಿನ ಮೇಲಿನ ಹೊರೆಯಂತೂ ಕಡಿಮೆಯಾಗದು. ಹಾಗೆಯೇ ಧರ್ಮರಾಜ ತನ್ನ ಮಡದಿಯನ್ನು ಪಂದ್ಯದಲ್ಲಿ ಸೋತು ದುಶ್ಯಾಸನ ಅವಳನ್ನು ಎಳೆದು ತರುವಾಗಲೂ ಪ್ರತಿಭಟಿಸದೆ 'ರಾಜನೀತಿ'ಯ ಧರ್ಮವೆಂದು ಸುಮ್ಮನೆ ಕೂರುವುದು ರಾಮಾಯಣದ ರಾಮನನ್ನೂ ಒಂದುಕ್ಷಣ ನೆನಪಿಗೆ ತರುತ್ತದೆ. ಅಂದರೆ 'ಸೀತೆ ಕಲುಷಿತೆಯಲ್ಲ' ಎಂಬ ಸತ್ಯ ರಾಮನಿಗೆ ಚೆನ್ನಾಗಿಯೇ ಗೊತ್ತಿದ್ದರೂ ಸಹ ಅಥವಾ ಅಪನಂಬಿಕೆಯಿಂದ ಎಂದುಕೊಳ್ಳಬೇಕಾಗುತ್ತದೆ, ಅಗಸನ ಮಾತನ್ನು ಕೇಳಿ ಸೀತೆಯನ್ನು 'ಅಗ್ನಿ ಪರೀಕ್ಷೆ'ಗೆ ಗುರಿಪಡಿಸುತ್ತಾನೆ. ಇದನ್ನು 'ಧರ್ಮ'ವೆನ್ನುತ್ತಾನೆ! ಎಂದರೆ ಜನ ಸಾಮಾನ್ಯನಾದ ಅಗಸನ ಮಾತಿಗೆ ಬೆಲೆಯಿತ್ತು ನಾನು ಸೀತೆಯನ್ನು ಈ ಪರೀಕ್ಷೆಗೆ ಗುರಿಪಡಿಸುತ್ತಿದ್ದೇನೆಯೇ ವಿನಃ ನನ್ನ ಸ್ವಂತವಿಚಾರದಿಂದಲ್ಲ ಎಂಬಂಥ ಅರ್ಥ.

ಆದರೆ 'ದಾಂಪತ್ಯ'ವ ಧರ್ಮವೆಂಬುದು ಅತ್ಯಂತ ಖಾಸಗೀ ವಿಚಾರ. ಇದರಲ್ಲಿ ಪರಸ್ಪರರನ್ನು ಅರಿತು ಗೌರವಿಸುವುದೇ ಮೊದಲ ಧರ್ಮವಾಗುತ್ತದೆಯೇ ವಿನಃ ಮೂರನೆಯವರು ತೀರ್ಮಾನ ಮಾಡಿ ನೀಡುವ ಸಾಕ್ಷಿ ಅಲ್ಪವೆನಿಸುತ್ತದೆ. ರಾಜನಾದರೇನು? ಸಾಮಾನ್ಯನಾದರೇನು? ಸಂಗಾ ತಿಯ ದೋಷ-ನಿರ್ದೋಷಗಳನ್ನು ಬೀದಿಗೆತಂದು ಬಯಲುಮಾಡಿ ತೀರ್ಮಾನಿಸುತ್ತಾರೆಯೇ? ಒಲ್ಲೆನೆಂದೆನ್ನಿಸಿದರೆ ಬಿಟ್ಟು ಬಿಡುತ್ತಾರೆ. ಅದು ಬಿಟ್ಟು 'ಪದವಿ'ಗಾಗಿ 'ಸ್ತ್ರೀಸ್ಥಾನಮಾನ'ದ ಅಗತ್ಯವನ್ನು ಮಧ್ಯೆ ಎಳೆದು ತರುವುದನ್ನು 'ಅನುಕೂಲ ಸಿಂಧು' ರಾಜಕಾರಣ ಎಂದು ಕರೆಯಬಹುದೇ ವಿನಃ ಧರ್ಮವೆಂದು ಹೇಗೆ ಕರೆಯುವುದು? ಒಂದು ಭಾರಿಯಾದರೂ ಧರ್ಮರಾಜ ಸಭೆಯ ನಡುವೆ ಎದ್ದು ಗುಡುಗಿದ್ದರೂ 'ಹಾಗೆ ಮಾಡಬೇಡ ದುಶ್ಯಾಸನ. ಇದು ಧರ್ಮವಲ್ಲ' ಎಂದು ಪ್ರತಿಭಟಿಸಿದ್ದರೂ ಧರ್ಮರಾಜನನ್ನು ಅವನ ಹೆಸರಿಗೆತಕ್ಕಂತೆ ಸ್ವಲ್ಪ ಒಪ್ಪಿಕೊಳ್ಳಬಹುದಿತ್ತು.

ಊಹುಂ. ಧರ್ಮರಾಜ ಅಳ್ಳಾಡುವುದಿಲ್ಲ. ಅವನು ಸತ್ಯದ ಪರ! ದ್ಯೂತದಲ್ಲಿ ಅವನು ದ್ರೌಪದಿಯನ್ನು ಸೋತಿದ್ದಾನೆ. ಇನ್ನು ಅವಳು ಕೌರವರ ವಸ್ತು, ಈಗ ಅವರು ಅವಳನ್ನು ಏನು ಬೇಕಾದರೂ ಮಾಡಬಹುದು! ಇಷ್ಟೇ ಧರ್ಮರಾಜನ ರಾಜನೀತಿ! ಇದನ್ನು 'ಧರ್ಮ'ವೆಂದು ಒಪ್ಪಲು ಸಾಧ್ಯವೇ ಇಲ್ಲ. ಆದರೆ ದ್ರೌಪದಿ ಇದೇ ಸಂದರ್ಭದಲ್ಲಿ ಸೆಟೆದು ನಿಂತು ಧೈರ್ಯ ತೋರಿ ದಿಟ್ಟ ಸ್ವರದಲ್ಲಿ ಪ್ರತಿಭಟಿಸುತ್ತಾಳಲ್ಲ ಅದೇ ನಿಜವಾದ ಧರ್ಮ-ಸ್ತ್ರೀ ಧರ್ಮ. ಎಂದಿಗೂ ಹೊಸದೆನಿಸುವ ನಶಿಸಬಾರದ ಧರ್ಮ. ನಿಜವಾದ ಮಾನ-ಪ್ರಾಣ ರಕ್ಷಣೆಗಾಗಿ ಕೊರಳೆತ್ತಬೇಕಾಗಿರುವ ಮನುಷ್ಯ ಧರ್ಮ. ಅವಳು ತನ್ನ ಗಂಡಂದಿರನ್ನು ಇಂಥ ಮಾನ ಹೋಗುವ ಸಂದರ್ಭದಲ್ಲೂ ತನ್ನ ಪರವಹಿಸದೆ 'ರಾಜನೀತಿ'ಯೆಂದು ತೆಪ್ಪಗೆ ಮುಚ್ಚಿಕೊಂಡು ಕುಳಿತದ್ದಕ್ಕಾಗಿ ತುಚ್ಛೀಕರಿಸುತ್ತಾಳೆ. ನಿಂದಿಸುತ್ತಾಳೆ.

ಈ ನಿಂದನೆಯೇ ಬಲಭೀಮನಿಗೆ ಅವನ ಪೌರುಷವನ್ನು ಬಡಿದೆಬ್ಬಿಸುವ ಒಂದು ಅಸ್ತ್ರವಾಗಿ ಪರಿಣಮಿಸುತ್ತದೆ. ಕೊನೆಗೆ ಸಭೆಯ ನಡುವೆ ಎದ್ದು ನಿಂತು ದ್ರೌಪದಿಯ ಪರವಹಿಸಿ ಧುರ್ಯೋಧನನ ವಿರುದ್ಧ ಸೇಡು ತೀರಿಸಿಕೊಳ್ಳುವ ಪ್ರತಿಜ್ಞೆ ಮಾಡುತ್ತಾನೆ. ಒಟ್ಟಿನಲ್ಲಿ ತನ್ನನ್ನು ನಂಬಿದ ಮಡದಿಯನ್ನು ಅಥವಾ ಯಾವುದೇ ಒಬ್ಬಳ ಸ್ತ್ರೀಯ ಮಾನ ಕಣ್ಣಂದೆ ಹರಾಜಾಗುತ್ತಿದ್ದರೂ ರಚಿಸುವ ಒಂದು ಪುರುಷಾರ್ಥದ ಧರ್ಮವಾಗಿ ಭೀಮಸೇನನ ಈ ನಡವಳಿಕೆ ಕಾಣಿಸುತ್ತದೆ. ಆದರೆ ಧರ್ಮರಾಜನದ್ದು ಮಾತ್ರ 'ಧರ್ಮ'ವೆನಿಸುವುದಿಲ್ಲ.

ಹೀಗೆಯೇ ನನಗೀಗ ಪೇಜಾವರ ಶ್ರೀಗಳು ಆಚರಿಸುತ್ತಿರುವ 'ದಲಿತರ ಬಹಿಷ್ಕಾರಕ್ಕಾಗಿ ಉಪವಾಸ' ಕೂಡ ಸಂಪೂರ್ಣ 'ಧರ್ಮ'ಎಂದು ಪ್ರಶ್ನಾತೀತವಾಗಿ ಒಪ್ಪಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಯಾವುದು ನನ್ನ ಹೃದಯಕ್ಕೀಗ ಒಂದು ನಿಷ್ಪಕ್ಷಪಾತವಾದ 'ಧರ್ಮ' ವೆನಿಸುತ್ತದೋ ಅದನ್ನು ಮಾತ್ರ ಆಲಿಸುತ್ತಾ ಆ 'ಎದೆದನಿ'ಯ ಶಾಸ್ತ್ರಕ್ಕೆ ಅನುಗುಣವಾಗಿ ಮಾತ್ರ ನಾನಿದನ್ನು ಬರೆಯುತ್ತಿದ್ದೇನೆ. ಪೇಜಾವರ ಶ್ರೀಗಳು ನೋಡುವುದಕ್ಕೆ ನನ್ನ ತಾತ ಶ್ರೀನಿವಾಸಚಾರ್ ಇದ್ದಂತೆಯೇ ಇದ್ದಾರೆ.

ನನ್ನ ತಾತ ಪ್ರೈಮರಿ ಶಾಲೆಯ ಒಳ್ಳೆಯ ಮೇಷ್ಟ್ರಾಗಿದ್ದರು. ಸರ್ಕಾರಿ ಶಾಲೆ. ಎಲ್ಲ ಜನಾಂಗದ ಮಕ್ಕಳೂ ಅಲ್ಲಿದ್ದರು ಎಲ್ಲ ಮಕ್ಕಳಿಗೂ ಸಮಾನವಾಗಿ ಪಾಠ ಮಾಡುತ್ತಾ- ಅಗತ್ಯವಿದ್ದರೆ ಏಟು ಕೊಡುತ್ತಾ ನುರಿತ ಶಿಷ್ಯರೆನಿಸಿ ಕೊಂಡಿದ್ದರೆಂಬ ನೆನಪು ನನಗೆ. ಆಗಿನ್ನೂ ನನಗೆ ಐದಾರು ವರ್ಷಗಳಷ್ಟು 1971ರಲ್ಲಿ ನಮ್ಮ ತಾತ ಅಕಾಲಿಕ ವಾಗಿ ತೀರಿಕೊಂಡು ಬಿಟ್ಟರು. ಆದರೆ ತಾನು ಇರುವವರೆಗೂ ಕೂಡ ತನ್ನದು ಶ್ರೀವೈಷ್ಣವ ಧರ್ಮವಾಗಿದ್ದರೂ ಅದನ್ನು ಪ್ರತ್ಯೇಕವಾಗಿ ಮೇಲೆಂದು ಭಾವಿಸಿದ್ದು ನನಗೆ ನೆನಪಿಲ್ಲ. ವಿಶಿಷ್ಟಾದ್ವೈತ' ವೆಂದರೆ ಶ್ರೇಷ್ಠ ಚಿಂತನೆಯೆಂದೇ ಅವರು ನಂಬಿದ್ದಂತೆ ಮನುಷ್ಯತ್ವದಿಂದ ನಡೆದುಕೊಳ್ಳುತ್ತಿದ್ದುದು ನನಗೆ ನೆನಪು ಅವರ 'ಶಿಕ್ಷಕ ಧರ್ಮ'ದಲ್ಲಿ ಸಮಾನತೆಯಿತ್ತು.

ಆದರೆ ಪೇಜಾವರರ ಸದ್ಯದ ನಡವಳಿಕೆಗಳಲ್ಲಿ ನನಗೆ ಇಂಥ ಎಲ್ಲರಿಗೂ 'ಸಮಾನ ಶಿಕ್ಷಣದ ಗೌರವ ಕೊಡುವ ಸರಳ ಧರ್ಮ ಕಾಣಿಸುತ್ತಿಲ್ಲ. ಯಾವ ಕಲದಿಂದ ದಲಿತ'ರಿಗೆ ಈ ಬಹಿಷ್ಕಾರ-ಈ ಅಸ್ಪೃಶ್ಯತೆಯ ಹಿಂಸೆಯನ್ನು ನಮ್ಮ ಭಾರತದಲ್ಲಿ 'ಹಿಂದೂ ಧರ್ಮ'ದ ಅಭೇದ್ಯತಂತ್ರಗಳಾಗಿ ಉಣಿಸಲಾಗುತ್ತಿದೆ. ನಿಜವಾಗಿ 'ಧಾರ್ಮಿಕ' ವೆನ್ನಿಸಿಕೊಂಡವರೆಲ್ಲಾ ಮನಸ್ಸು ಮಾಡಿದ್ದರೆ ಈ ದುಷ್ಟ ಪದ್ಧತಿಯನ್ನು ಎಂದೋ ಸೊಲ್ಲಡಗಿಸಬಹುದಿತ್ತಲ್ಲವೇ? ಈಗ ಮಧ್ಯ-ಮಾಂಸ ತಿನ್ನದ ದಲಿತರಿಗೆ 'ಬ್ರಾಹ್ಮಣದೀಕ್ಷೆ-ಮಧ್ವಮತ ದೀಕ್ಷೆ' ಕೊಡುತ್ತೇನೆಂದು ಇವರು ದಲಿತಕೇರಿಗಳಿಗೆ ಹೋಗಿ ಅವರಿಂದ ದೂರ ನಿಂತು ಮಾತನಾಡಿ-ಅವರ ಮನೆಗಳಲ್ಲಿ ಆಗ ತಾನೇ ಶುಚಿಮಾಡಿದ ನೆಲದ ಮೇಲೆ ಕುಳಿತು ಅವರು ಬೇಯಿಸಿದ ಊಟವನ್ನು ಉಣ್ಣದೆ-ಅವರೊಟ್ಟಿಗೆ ಕೂತು ಸಮಾನವಾಗಿ ಊಟವನ್ನು ಮಾಡದೆ ಹೆಸರಿಗೆ ಮಾತ್ರ ಅವರನ್ನು 'ಬ್ರಾಹ್ಮಣ'ರನ್ನಾಗಿ ಮಾಡುತ್ತೇನೆಂಬ ದೀಕ್ಷೆಯನ್ನು ಕೊಡುತ್ತೇನೆಂದರೆ ನನಗಿದು ಅಸ್ಪೃಶ್ಯತೆ ನಿವಾರಣೆಯಾಗದ ಒಂದು ರಾಜನೀತಿಯ ತಂತ್ರದಂತೆ ಮಾತ್ರ ಕಾಣುತ್ತದೆ. ಈ ತಂತ್ರದಲ್ಲಿ ಮಾಧ್ವಮತವನ್ನು ಬೆಳೆಸಬೇಕೆಂಬ ಮತೀಯ ಭಾವನೆಯೇ ಢಾಳಾಗಿ ಕಾಣುತ್ತಿದೆಯೇ ವಿನಃ ಮನಸ್ಸು ಕರಗುವ 'ಧರ್ಮ' ನನಗಂತೂ ಕಾಣುತ್ತಿಲ್ಲ.

ನಿಜವಾದ 'ಧರ್ಮ'ದಲ್ಲಿ ಬೇರೇನೂ ಇರುವುದಿಲ್ಲ. ಕೇವಲ ಧರ್ಮವಿರುತ್ತದೆ ಅಷ್ಟೇ ಅಲ್ಲಿ "ಬ್ರಾಹ್ಮಣೀಕರಣ' ವಿರುವುದಿಲ್ಲ. ಮನುಷ್ಯ ಧರ್ಮವಿರುತ್ತದೆ. ಯಾರು ಸಮಾಜದ ಕೆಳಸ್ತರದಲ್ಲಿರುವರೋ ಅವರ ಆತ್ಮಗೌರವಕ್ಕೆ ಕಿಂಚಿತ್ತಾದರೂ ಕ್ರಿಯಾಶೀಲ ಪರಿಶ್ರಮವಿರುತ್ತದೆ. ಅವರ ಆತ್ಮೋನ್ನತಿ ಅವರಿಂದಲೇ ಆರಂಭ ಎಂಬ ಸ್ವಂತಿಕೆಯ ಧೀ ಸಶಕ್ತಿಯ ಸ್ವತಂತ್ರ ಮನೋಭಾವದ ದೀಪ್ತಿಯಿರುತ್ತದೆ. ಇದನ್ನೇ ಬುದ್ಧ 'ಧರ್ಮ' ಎಂದು ಕರೆದಿದ್ದು, ಅಂದರೆ ಮನುಷ್ಯನ ಎಲ್ಲ ರೀತಿಯ ವಿಕಾಸವೂ ಆಗುವ ಮಾನವ ಧರ್ಮ, ಇದಕ್ಕಾವ ಹೆಸರು?.... □

'ದಾಂಪತ್ಯ'ದ ಧರ್ಮವೆಂಬುದು ಅತ್ಯಂತ ಖಾಸಗೀ ವಿಚಾರ. ಇದರಲ್ಲಿ ಪರಸ್ಪರರನ್ನು ಅರಿತು ಗೌರವಿಸುವುದೇ ಮೊದಲ ಧರ್ಮವಗುತ್ತದೆಯೇ ವಿನಃ ಮೂರನೆಯವರು ತೀರ್ಮಾನ ಮಾಡಿ ನೀಡುವ ಸಾಕ್ಷಿ ಅಲ್ಪವೆನಿಸುತ್ತದೆ. ರಾಜನಾದರೇನು? ಸಾಮಾನ್ಯನಾದರೇನು? ಸಂಗಾ ತಿಯ ದೋಷ-ನಿರ್ದೋಷಗಳನ್ನು ಬೀದಿಗೆ ತಂದು ಬಯಲುಮಾಡಿ ತೀರ್ಮಾನಿಸುತ್ತಾರೆಯೇ ಒಲ್ಲೆನೆಂದೆನ್ನಿಸಿದರೆ ಬಿಟ್ಟುಬಿಡುತ್ತಾರೆ. ಅದು ಬಿಟ್ಟು 'ಪದವಿ'ಗಾಗಿ 'ಸ್ತ್ರೀ ಸ್ಥಾನ ಮಾನ'ದ ಅಗತ್ಯವನ್ನು ಮಧ್ಯೆ ಎಳೆದು ತರುವುದನ್ನು 'ಅನುಕೂಲ ಸಿಂಧು' ರಾಜಕಾರಣ ಎಂದು ಕರೆಯಬಹುದೇ ವಿನಃ ಧರ್ಮವೆಂದು ಹೇಗೆ ಕರೆಯು ವುದು? ಒಂದು ಭಾರಿಯಾದರೂ ಧರ್ಮರಾಜ ಸಭೆಯ ನಡುವೆ ಎದ್ದು ಗುಡುಗಿದ್ದರೂ 'ಹಾಗೆ ಮಾಡಬೇಡ ದುಶ್ಯಾಸನ. ಇದು ಧರ್ಮವಲ್ಲ' ಎಂದು ಪ್ರತಿಭಟಿಸಿದ್ದರೂ ಧರ್ಮರಾಜನನ್ನು ಅವನ ಹೆಸರಿಗೆ ತಕ್ಕಂತೆ ಸ್ವಲ್ಪ ಒಪ್ಪಿಕೊಳ್ಳ ಬಹುದಿತ್ತು. ಊಹುಂ ಧರ್ಮರಾಜ ಅಳ್ಳಾಡುವುದಿಲ್ಲ. ಅವನು ಸತ್ಯದ ಪರ! ದ್ಯೂತದಲ್ಲಿ ಅವನು ದ್ರೌಪದಿಯನ್ನು ಸೋತಿದ್ದಾನೆ.

ಜಾತಿ ಐಡೆಂಟಿಟಿ ಹಾಗೂ ಮೀಸಲಾತಿ

ಕೊನೆಗೂ ಕೇಂದ್ರ ಸರಕಾರ ಜಾತಿ ಜನಗಣತಿಯನ್ನು ಮುಂದಿನ ವರುಷದಿಂದಲೇ ಆರಂಭಿಸಲು ಒಪ್ಪಿಕೊಂಡಿರುವುದು ಬಹಳಷ್ಟು ಜನರಿಗೆ ಸಂತೋಷವನ್ನುಂಟು ಮಾಡಿರುವುದು ವಾಸ್ತವ. ಇಷ್ಟರ ತನಕ ಜನಗಣತಿಯುಲ್ಲಿ "ಜಾತಿಯನ್ನು" ಮಾನದಂಡವನ್ನಾಗಿಸಬೇಕೆ ಅಥವಾ ಬೇಡವೇ? ಎಂಬ ಜಿಜ್ಞಾಸೆ ಇತ್ತು. ಇದಕ್ಕಿಂತಲೂ ಹೆಚ್ಚಾಗಿ ಜನಗಣತಿ ಉಪಯೋಗಿಸಿದ ಮಾನದಂಡಗಳ ಕುರಿತು ಬಹಳಷ್ಟು ಟೀಕೆ ಟಿಪ್ಪಣಿಗಳು ಬಂದವು. ಜನಗಣತಿಯಲ್ಲಿ ಮೊಬೈಲ್, ಕಂಪ್ಯೂಟರ್, ಇಂಟರ್ ನೆಟ್ ಸಂಖ್ಯೆಗಳ ಲೆಖ್ಖಚಾರಗಳ ಹಿಂದಿನ ಅಜೆಂಡಾಗಳು ತೀವ್ರತರವಾದ ಟೀಕೆಗೆ ಗುರಿಯಾದವು. ಅಲ್ಲದೇ ಈ ಎಲ್ಲಾ ಮಾಹಿತಿಗಳನ್ನು ಬಯೋಮೆಟ್ರಿಕ್ಸ್‌ಗೆ ಯಾಕೆ ನೀಡಬೇಕು? ಇದರಿಂದ ಲಾಭ ಪಡೆಯುವವರು ಯಾರು?– ಕಂಪೆನಿಗಳೇ? ಅಥವಾ ಸರಕಾರವೇ? ಇತ್ಯಾದಿ ಚರ್ಚೆಗಳು ಕೂಡ ಬಂದವು.

ಈ ಎಲ್ಲಾ ಚರ್ಚೆಗಳ ನಡುವೆ ನಾಲ್ಕು ಅಂಶಗಳು ಬಹಳ ಮುಖ್ಯವಾಗಿದ್ದವು. ಒಂದನೇದಾಗಿ ಜಾತಿ ಜನಗಣತಿ ಐಡೆಂಟಿಟಿ ಅಥವಾ ಗುರುತಿಸುವಿಕೆ ರಾಜಕಾರಣ ಒಂದು ಭಾಗ ಎಂಬ ವಾಸ್ತವದ ಅರಿವು, ಎರಡನೇದಾಗಿ ಜಾತಿಯ ಜನಗಣತಿ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ತಳಹದಿಯನ್ನು ಇನ್ನಷ್ಟು ವಿಸ್ತರಿಸುತ್ತದೆ ಎಂಬ ನಂಬಿಕೆ, ಮೀಸಲಾತಿ ಎಂಬುದು ಈ ಐಡೆಂಟಿಟಿ ರಾಜಕಾರಣ ಒಂದು ಭಾಗ ಹಾಗೂ ಐಡೆಂಟಿಟಿ ರಾಜಕಾರಣ ಮುಗಿಯದ ಪ್ರಕ್ರಿಯೆ ಎಂಬ ಧೃಡವಾದ ನಂಬಿಕೆ .

ಐಡೆಂಟಿಟಿಯ ರಾಜಕಾರಣದ ತಾತ್ವಿಕ ತಳಹದಿಯನ್ನು ವಿಶ್ಲೇಷಿಸುವಾಗ ಅದನ್ನು ಪಾಶ್ಚಾತ್ಯ ಸಂಕಥನ, ಚಿಂತನೆ, ಹಾಗೂ ಭೂಮಿಕೆಗಳನ್ನು ಕೇಂದ್ರೀಕರಿಸಿ ವಾದಿಸಲಾಗುತ್ತದೆ.ಅಲ್ಲದೇ ಅದನ್ನು ವರ್ಗ ವಿಶ್ಲೇಷಣೆಗೆ ಪರ್ಯಾಯವಾಗಿ ಹುಟ್ಟಿಕೊಂಡ ತತ್ವವೆಂದು ಪ್ರತಿಬಿಂಬಿಸಲಾಗುತ್ತಿದೆ, ಪಾಶ್ಚಾತ್ಯ ಚಿಂತನೆಗಳಿಗೆ ಐಡೆಂಟಿಟಿ ರಾಜಕಾರಣವು ಒಂದು ಆಧುನಿಕತೆಯ ಭಾಗ, ಸಾಮಾಜಿಕ ಹೋರಾಟಗಳ ಫಲಶ್ರುತಿ, ಧಮನೀಯ ಸಮುದಾಯಗಳ ಹೊಸ ರೂಪ ಎಂದೆಲ್ಲಾ ಪ್ರತಿಬಿಂಬಿಸಲಾಗುತ್ತಿದೆ.

ಭಾರತದ ಸಂದರ್ಭವಲ್ಲಿ ಐಡೆಂಟಿಟಿ ರಾಜಕಾರಣಕ್ಕೆ ಮೀಸಲಾತಿ ಕಾರಣವಾದದ್ದನ್ನು ಪಾಶ್ಚಾತ್ಯ ಚಿಂತನೆಗಳು ಒಪ್ಪಿಕೊಳ್ಳುವುದಿಲ್ಲ. ಅದು ದೇಸಿಯ ನೆಲೆಗಟ್ಟಿನಲ್ಲಿ ಜಾತಿಯ ಆಯಾಮವನ್ನು ಪಡೆಯುವುದನ್ನು ಅದು ಒಪ್ಪಿಕೊಳ್ಳುವುದಿಲ್ಲ, ಅಲ್ಲದೇ ಭಾರತದ ಸಂದರ್ಭದಲ್ಲಿ ಅದು ರಾಜಕೀಯ ನಿರ್ಮಿತಿಯಾಗಿರುವುದನ್ನು ಕೂಡ ಅದು ಒಪ್ಪಿಕೊಳ್ಳುವುದಿಲ್ಲ.

ಈ ಎಲ್ಲಾ ವಾದಗಳಲ್ಲಿ ಮೂರು ಅಂಶಗಳಾದ "ಆಧುನಿಕತೆಯ ಭಾಗ", ಸಾಮಾಜಿಕ ಚಳುವಳಿಗಳ ಫಲಶ್ರುತಿ – ಸಮುದಾಯಗಳ ಹೊಸ ರೂಪಗಳನ್ನು ಭಾರತದ ಸಂದರ್ಭದಲ್ಲಿ ಒಪ್ಪಿಕೊಳ್ಳಬಹುದು. ಇದು ಕರ್ನಾಟಕ ಸಂದರ್ಭದಲ್ಲಿ ನಿಚ್ಚಳವಾಗಿ ಕಂಡುಬಂದರೂ ಒಂದು ವ್ಯತ್ಯಾಸವಿದೆ. ಕರ್ನಾಟಕದಲ್ಲಿ ಐಡೆಂಟಿಟಿಗಳು ರಾಜಕೀಯದ ನಿರ್ಮಿತಿಯಲ್ಲದೇ, ಸಾಮಾಜಿಕ ಹೋರಾಟದ ಫಲಶ್ರುತಿ ಎಂದರೂ ತಪ್ಪಾಗಲಾರದು. ಅಂದರೆ ರಾಜಕೀಯ ಹಾಗೂ ಸಾಮಾಜಿಕ ಹೋರಾಟಗಳು ಜತೆ ಜತೆಯಾಗಿ ಈ ನಿಟ್ಟಿನಲ್ಲಿ ಕೆಲಸಮಾಡಿದ್ದವು. ವಿಚಿತ್ರವೆಂದರೆ 'ಅದು ಹುಟ್ಟಿಕೊಂಡ್ಡದ್ದು ವಸಾಹತುಶಾಹಿಯ ಸಂದರ್ಭದಲ್ಲಿ, ಊಳಿಗಮಾನ್ಯ ಚೌಕಟ್ಟಿನ ನೆಲೆಗಳಲ್ಲಿ.

ಕರ್ನಾಟಕದಲ್ಲಿ ಐಡೆಂಟಿಟಿ ರಾಜಕಾರಣ.

ಕರ್ನಾಟಕದ ಐಡೆಂಟಿಟಿ ರಾಜಕಾರಣಕ್ಕೆ ಒಂದು ನಿರ್ಧಿಷ್ಟವಾದ ಇತಿಹಾಸವಿದೆ. ಅದರ ಇತಿಹಾಸ ಸ್ವಾತಂತ್ರ್ಯಪೂರ್ವದ ವಸಾಹತುಶಾಹಿ ಸಂಧರ್ಭದಲ್ಲಿ ನೋಡಬಹುದು. ಇದನ್ನು 1920ರ ದಶಕದ ಬ್ರಾಹ್ಮಣೇತರ ಚಳುವಳಿಯ ಸಂದರ್ಭದಲ್ಲಿ ನೋಡಿದರೂ, ಅದರ ಇತಿಹಾಸವನ್ನು ಆಕಾಲಕ್ಕೆ ಮಾತ್ರ ಸೀಮಿತಗೊಳಿಸಬಾರದು. ಬ್ರಾಹ್ಮಣೇತರ ಚಳುವಳಿಯ ಮೂಲವಿರುವುದು 1830ರ ನಗರ ರೈತರ ದಂಗೆಯಲ್ಲಿ. ಇಡೀ ಮೈಸೂರು ಪ್ರಾಂತ್ಯವನ್ನೇ ತಲ್ಲಣಗೊಳಿಸಿದ ಖ್ಯಾತಿ ಈ ನಗರ ರೈತರ ದಂಗೆಗೆ ಇದೆ. ಯಾಕೆಂದರೆ ಈ ದಂಗೆ ಮುಂದೆ ಮೈಸೂರು ಪ್ರಾಂತ್ಯ ವಸಾಹತುಶಾಹಿಯ ನೇರ ಆಡಳಿತಕ್ಕೆ ಒಳಪಡಲು ಕಾರಣವಾಯಿತು. ಇದರ ತೀಕ್ಷಣತೆ ಎಷ್ಟಿತ್ತೆಂದರೆ ಅಂದಿನ 9 ಫೌಜುದಾರು ಪ್ರದೇಶದಲ್ಲಿ ನಿರಂತರವಾಗಿ ಮೂರು ವರುಷಗಳ ಕಾಲ ಈ ದಂಗೆ ನಡೆಯಿತು. ಈ ದಂಗೆಗೆ ಮೂಲ:ತವಾಗಿ ಅಂದಿನ "ಶರತ್"ವ್ಯವಸ್ಥೆ * ಅತೀ ಹೆಚ್ಚು ಗೇಣಿಗಾಗಿ ಭೂಮಿಯನ್ನು ಹರಾಜು ಹಾಕುವುದು – ಕಾರಣವೆಂದರೂ ಬ್ರಾಹ್ಮಣೇತರ ಅತೃಪ್ತಿಯನ್ನು ಇಲ್ಲಿ ದಾಖಲೀಸುವುದು ಅತೀ ಅವಶ್ಯಕ. ನಗರ ರೈತರ ದಂಗೆಯನ್ನು ತನಿಖೆ ನಡೆಸಿದ ಅಂದಿನ ಬ್ರಿಟಿಷ್ ಅಧಿಕಾರಿ ಹೆಚ್ ಸ್ಟೋಕ್ಸ್ ತನ್ನ ರಿಪೋರ್ಟ್‌ನಲ್ಲಿ ಈ ರೀತಿ ದಾಖಲಿಸಿದ್ದಾನೆ: 'Anti Brahmin opposition came against the power and profit. Under the Ikkeri Princes the Brabmin ascendancy was established"

1920 ಬ್ರಾಹ್ಮಣೇತರ ಚಳುವಳಿಯ ಫಲಶ್ರುತಿ ಎಂದರೆ ಅದು ಕರ್ನಾಟಕದಲ್ಲಿ ಐಡೆಂಟಿಟಿ ರಾಜಕಾರಣಕ್ಕೆ ನಾಂದಿ ಹಾಡಿದ್ದು. ಮಿಲ್ಲರ್ ಕಮಿಟಿ ರಚನೆ ಹಾಗೂ ಶಿಫಾರಸ್ಸುಗಳ ಅನುಷ್ಠಾನ ಇದರ ಆರಂಭದ ಘಟ್ಟವೆನ್ನಬಹುದು.

ವಾಸ್ತವವಾಗಿ ಈ ಐಡೆಂಟಿಟಿಯ ರಾಜಕೀಯದಲ್ಲಿರುವ ಬಹುದೊಡ್ಡ ಸಮಸ್ಯೆಯೆಂದರೆ ಸಮುದಾಯಗಳ ವರ್ಗೀಕರಣ– ಯಾವ ವರ್ಗಗಳನ್ನು ಹಿಂದುಳಿದ ವರ್ಗಗಳೆಂದು ವರ್ಗೀಕರಿಸುವುದು?. ಎರಡನೇದಾಗಿ ಸರಕಾರಿ ಪಟ್ಟಿಯಲ್ಲಿ ಸಮುದಾಯಗಳನ್ನು ಗುರುತಿಸುವಾಗ ಯಾವ ಮಾನದಂಡಗಳನ್ನು ಉಪಯೋಗಿಸಬೇಕು? ಮೂರನೇದಾಗಿ ಐಡೆಂಟಿಟಿಯ ರಾಜಕೀಯಕ್ಕೆ ಶಾಶ್ವತ ಪರಿಹಾರ ಹುಡುಕಲು ಸಾಧ್ಯವೇ? ಈ ಸಮಸ್ಯೆಗಳು ಉದ್ಭವಿಸಲು ಕಾರಣಗಳಿವೆ: ಹಿಂದುಳಿದ ವರ್ಗಗಳೆಂಬುವುದು ಒಂದು ನಿರ್ಧಿಷ್ಟ ಸಂಖ್ಯೆಯ ಜಾತಿಯಲ್ಲ, ಅದು ನೂರಾರು ಜಾತಿಗಳನ್ನೊಳಗೊಂಡ ಸಮುದಾಯ. ಇತಿಹಾಸದ ದುರಂತವೆಂದರೆ ಸಾಮಾಜಿಕವಾಗಿರುವ ಮಧ್ಯಮ ಜಾತಿಗಳು. ಭಲಾಢ್ಯ

ಕರ್ನಾಟಕದ ಐಡೆಂಟಿಟಿ ರಾಜಕಾರಣಕ್ಕೆ ಒಂದು ನಿರ್ಧಿಷ್ಟವಾದ ಇತಿಹಾಸ ವಿದೆ. ಅದರ ಇತಿಹಾಸ ಸ್ವಾತಂತ್ರ್ಯಪೂರ್ವದ ವಸಾಹತುಶಾಹಿ ಸಂಧರ್ಭ ದಲ್ಲಿ ನೋಡಬಹುದು. ಇದನ್ನು ೧೯೨೦ರ ದಶಕದ ಬ್ರಾಹ್ಮಣೇತರ ಚಳುವಳಿಯ ಸಂದರ್ಭದಲ್ಲಿ ನೋಡಿದರೂ, ಅದರ ಇತಿಹಾಸವನ್ನು ಆ ಕಾಲಕ್ಕೆ ಮಾತ್ರ ಸೀಮಿತಗೊಳಿಸಬಾರದು. ಬ್ರಾಹ್ಮಣೇತರ ಚಳುವಳಿಯ ಮೂಲವಿರುವುದು ೧೮೩೦ರ ನಗರ ರೈತರ ದಂಗೆಯಲ್ಲಿ. ಇಡೀ ಮೈಸೂರು ಪ್ರಾಂತ್ಯವನ್ನೇ ತಲ್ಲಣಗೊಳಿಸಿದ ಖ್ಯಾತಿ ಈ ನಗರ ರೈತರ ದಂಗೆಗೆ ಇದೆ. ಯಾಕೆಂದರೆ ಈ ದಂಗೆ ಮುಂದೆ ಮೈಸೂರು ಪ್ರಾಂತ್ಯ ವಸಾಹತುಶಾಹಿಯ ನೇರ ಆಡಳಿತಕ್ಕೆ ಒಳಪಡಲು ಕಾರಣವಾಯಿತು. ಇದರ ತೀಕ್ಷಣತೆ ಎಷ್ಟಿತ್ತೆಂದರೆ ಅಂದಿನ ೯ ಫೌಜುದಾರು ಪ್ರದೇಶದಲ್ಲಿ ನಿರಂತರವಾಗಿ ಮೂರು ವರುಷಗಳ ಕಾಲ ಈ ದಂಗೆ ನಡೆಯಿತ್ತು.

ಜಾತಿಗಳೂ ಕೂಡ ಸರಕಾರಿ ಅಥವಾ ರಾಜಕೀಯ ಐಡೆಂಟಿಟಿಯ ನಿರ್ಮಿತಿಯ ಸಂದರ್ಭದಲ್ಲೆ "ಹಿಂದುಳಿದ ವರ್ಗಗಳಾಗಿ" ಪರಿವರ್ತಿತವಾಗುತ್ತವೆ.–ಇದು ಸಮುದಾಯಗಳ ರೂಪಾಂತರವೂ ಹೌದು. ಕರ್ನಾಟಕದ ಸಂದರ್ಭದಲ್ಲಿ ಇದನ್ನು "ಕಾಷ್ಟ"ಕರಣವೆನ್ನ ಬಹುದು

ಎರಡನೇದಾಗಿ ಮಾನದಂಡಗಳು ಕಾಲ ಕಾಲಕ್ಕೆ ತಕ್ಕಂತೆ ಬದಲಾಗುತ್ತಾ ಹೋದರೂ ಅಕ್ಷರಜ್ಞಾನ, ಹಾಗೂ ಸರಕಾರಿ ಉದ್ಯೋಗ. ಎರಡೂ ಮಾನ ದಂಡಗಳು ಶಾಶ್ವತವಾಗಿ ಉಳಿದವು: ಭೂಮಿಯ ಮೇಲಿನ ಹಿಡಿತ ಕೆಲ ವೊಮ್ಮೆ ನಿರ್ಮಿತಿಗೆ ಕಾರಣವಾದದ್ದು ಇದೆ.

ಆಸಕ್ತಿಯ ವಿಷಯವೇನೆಂದರೆ ಅಂದಿನ ಸಂದರ್ಭದಲ್ಲಿ ಮಿಲ್ಲರ್ ಕಮಿಟಿ ಎರಡು ರೀತಿಯ ಐಡೆಂಟಿಟಿಗಳನ್ನು ನಿರ್ಮಿಸಿತ್ತು– "ಹಿಂದುಳಿದ ಸಮುದಾಯ" ಹಾಗೂ "ಮುಂದುವರಿದ ಸಮುದಾಯ." ಇದಕ್ಕಾಗಿ ಅದು ಉಪಯೋಗಿಸಿದ ಮಾನದಂಡ ಮಾತ್ರ ವಿಚಿತ್ರವಾಗಿತ್ತು– ಇಂಗ್ಲೀಷ್ ಭಾಷೆಯ ಜ್ಞಾನ ಇಲ್ಲಿ ಪ್ರಮುಖವಾಗಿತ್ತು ಅದರ ಪ್ರಕಾರ ಯಾವ ಸಮುದಾಯ ಆಂಗ್ಲ ಭಾಷೆಯಲ್ಲಿ ಪ್ರತಿಶತ 5ಕ್ಕಿಂತ ಕಡಿಮೆಯಷ್ಟು ಪರಿಣಿತ ಹೊಂದಿರುವ ಸಂಖ್ಯೆಯನ್ನು ಹೊಂದಿರುತ್ತಿತ್ತೋ ಅದನ್ನು ಕಮಿಟಿ "ಹಿಂದುಳಿದ" ವರ್ಗವೆಂದು ಪರಿಗಣಿಸಿತ್ತು.

ಉಳಿದವುಗಳು "ಮುಂದುವರಿದ ಸಮುದಾಯವೆಂದು" ತೀರ್ಮಾನಿಸಲಾಗಿತ್ತು. ಮುಂದುವರಿದ ಜಾತಿಗಳಲ್ಲಿ ಬ್ರಾಹ್ಮಣರು, ಆಂಗ್ಲೋ ಇಂಡಿಯನ್ಸ್ ಹಾಗೂ ಐರೋಪ್ಯರು ಇದ್ದರೆ, ಉಳಿದವರು "ಹಿಂದುಳಿದ" ವರಾಗಿದ್ದರು. ಅಂತಿಮ ವಿಶ್ಲೇಷಣೆಯಲ್ಲಿ ಬ್ರಾಹ್ಮಣರು ಹಾಗೂ ಬ್ರಾಹ್ಮಣೇತರು ಎಂಬ ಎರಡು ವೈರುಧ್ಯ ಐಡೆಂಟಿಟಿಗಳು ನಿರ್ಮಿತವಾಗಿದ್ದವು. ಅಷ್ಟು ಮಾತ್ರವಲ್ಲದೇ ಅಂದಿನ ವ್ಯವಸ್ಥೆ 75ಶೇಕಡಾ ದಷ್ಟು ಮೀಸಲಾತಿಯನ್ನು ಹಿಂದುಳಿದ ವರ್ಗಗಳಿಗೆ ಸೀಮಿತಗೊಳಿಸಿತ್ತು. ಇಲ್ಲಿರುವ ದುರಂತವೆಂದರೆ ಮೀಸಲಾತಿ ಹಿಂದುಳಿದ ವರ್ಗಗಳಿಗೆ ನೀಡಿದರೂ ಅದರ ಲಾಭವನ್ನು ಪಡೆದವರು ಭಲಾಢ್ಯ ಜಾತಿಗಳು. ಅಲ್ಲದೇ ಇದು ಕಾಲ್ಪನಿಕ ಸಾಮಾಜಿಕ ಸಮ್ಮಿಶ್ರತೆಗೆ ದಾರಿ ಮಾಡಿ ಕೊಟ್ಟಿತ್ತು.

1956ರಲ್ಲಿ ಅಂದಿನ ಕಾಂಗ್ರೆಸ್ ಸರಕಾರ ತನ್ನ ಸಾಮಾಜಿಕ ನೆಲೆಗಳನ್ನು ಭದ್ರಗೊಳಿಸಲು ಹಿಂದುಳಿದ ವರ್ಗಗಳ ಪಟ್ಟಿಯನ್ನು ಇನ್ನಷ್ಟು ವಿಸ್ತರಿಸಿತ್ತು. ಈ ರೀತಿಯ ರಾಜಕೀಯವನ್ನು ಮುಂದೆ ಬೇರೆ ಬೇರೆ ಸರಕಾರಗಳು ಅನುಸರಿಸಿದವು. ಅದರಂತೆ ಹಿಂದುಳಿದ ವರ್ಗಗಳ ಸಂಖ್ಯೆ 165ಕ್ಕೆ ಸೀಮಿತಗೊಳಿಸಿದರೂ, ಅಂದಿನ ರಾಜಕೀಯ ವ್ಯವಸ್ಥೆ ಇಡೀ ಹಿಂದುಳಿದ ವರ್ಗಗಳನ್ನು 14 ಗುಂಪುಗಳಾಗಿ ವಿಭಜಿಸಿತ್ತು. ಇದೇ ಸಂದರ್ಭದಲ್ಲಿ ಮೀಸಲಾತಿಯನ್ನು 57 ಶೇಕಡಾಕ್ಕೆ ಸೀಮೀತಗೊಳಿಸಿತ್ತು. ಇದ್ದನ್ನು ಮುಂದೆ ರಾಜ್ಯದ ಸರ್ವೋಚ್ಚ ನ್ಯಾಯಾಲಯ ತಳಿ ಹಾಕಿದ ಪ್ರಯುಕ್ತ ಅಂದಿನ ರಾಜಕೀಯ ವ್ಯವಸ್ಥೆ ನಾಗನ್ ಗೌಡ ಆಯೋಗವನ್ನು ರಚಿಸಿತ್ತು.

ಈ ಸಂದರ್ಭದಲ್ಲಿ ಅದು "ಹಿಂದುಳಿದ ವರ್ಗ" ಗಳನ್ನು ಗುರುತಿಸಲು ಮೂರು ಮಾನದಂಡಗಳನ್ನು ಉಪಯೋಗಿಸಿತ್ತು: ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿಗಳ ಸ್ಥಾನಮಾನ, ಸಮುದಾಯದ ಒಟ್ಟಾರೆ ಅಕ್ಷರ ಜ್ಞಾನ, ಸಾರ್ವಜನಿಕ ವಲಯಗಳಲ್ಲಿ ಸಮುದಾಯದ ಒಟ್ಟಾರೆ ಪ್ರತಿನಿಧಿತ್ವ, ಈ ಸಂದರ್ಭದಲ್ಲಿ ಅದು ಗುರುತಿಸಿದ ಜಾತಿಗಳ ಸಂಖ್ಯೆ 214. ಈ ಆಯೋಗ ಲಿಂಗಾಯತರನ್ನು ಮುಂದುವರಿದ ಜಾತಿಯನ್ನಾಗಿ ಗುರುತಿಸಿದ್ದೇ ಅದು ಮಾಡಿದ ತಪ್ಪು ಎನ್ನಬಹುದು. ಅಲ್ಲದೇ ದಕ್ಷಿಣ ಕನ್ನಡದ ಬಂಟರನ್ನೂ ಕೂಡ ಮುಂದುವರಿದ ಸಮುದಾಯವನ್ನಾಗಿ ಗುರುತಿಸಿದ್ದು ಇಲ್ಲಿ ದಾಖಲಿಸಬೇಕು.

ಹಾವನೂರು ಆಯೋಗ ಜಾತಿಗಳ ಐಡೆಂಟಿಟಿಗಳನ್ನು ನಿರ್ಮಿಸುವ ಸಂದರ್ಭದಲ್ಲಿ ಹೊಸ ಮಾನದಂಡಗಳನ್ನು ಉಪಯೋಗಿಸದ್ದನ್ನು ಮರೆಯಬಾರದು– ರಾಜಕೀಯ ವ್ಯವಸ್ಥೆಯಲ್ಲಿ ಸಮುದಾಯದ ಪ್ರತಿನಿಧಿತ್ವದ ಸಂಖ್ಯೆ, ವಿದ್ಯಾಭ್ಯಾಸದ ಮಟ್ಟ ಇತ್ಯಾದಿ. ಈ ಮಾನದಂಡಗಳನ್ನು ಇಟ್ಟುಕೊಂಡು ಆಯೋಗ ಸಮುದಾಯಗಳನ್ನು ಹಾಗೂ ಜಾತಿಗಳನ್ನು ಮೂರು ಭಾಗಗಳನ್ನಾಗಿ ಗುರುತಿಸಿತ್ತು: ಹಿಂದುಳಿದ ಜಾತಿ, ಹಿಂದುಳಿದ ವರ್ಗ ಹಾಗೂ ಹಿಂದುಳಿದ ಬುಡಕಟ್ಟು.. ಮೊದಲನೇ ಗುಂಪಿನಲ್ಲಿ 15 ಜಾತಿಗಳನ್ನು ಅದು ಗುರುತಿಸಿದರೆ, ಎರಡನೇ ಗುಂಪಿನಲ್ಲಿ 128 ಜಾತಿಗಳನ್ನು ಹಾಗೂ ಮೂರನೇ ಗುಂಪಿನಲ್ಲಿ 62 ಜಾತಿಗಳನ್ನು ಗುರುತಿಸಿತ್ತು. ವಿಚಿತ್ರವೆಂದರೆ ಅದು ಲಿಂಗಾಯತರನ್ನು ಹಿಂದುಳಿದ ಪಟ್ಟಿಯಿಂದ ಹೊರಗಿಟ್ಟಿತ್ತು.

ಐಡೆಂಟಿಟಿ ರಾಜಕೀಯಕ್ಕೆ ಹೊಸ ರೂಪವನ್ನು ಹಾಗೂ ಸಂಕಥನವನ್ನು ನೀಡಿದ್ದು 1970ರ ದಶಕದಲ್ಲಿ ರಚನೆಗೊಂಡ ಹಾವನೂರು ಆಯೋಗ. ಈ ಆಯೋಗ ಮಾಡಿದ ಪಟ್ಟಿಗಳೇ ಮುಂದೆ ಮಂಡಲ್ ಆಯೋಗಕ್ಕೆ ಮಾದರಿಯಾದದ್ದು ಅದರ ವಿಶಿಷ್ಟ ಕೊಡುಗೆ ಅನ್ನಬಹುದು. ಇದು ರಾಜಕೀಯದಲ್ಲಿ ಹೊಸ ಸಾಮಾಜಿಕ ಸಮ್ಮಿಶ್ರತೆಗೆ ದಾರಿ ಮಾಡಿಕೊಟ್ಟಿತ್ತು. ಇದನ್ನು MOVD ಅನ್ನಬಹುದು – muslims, Other Backward Classes, Vokkaligas, Dalits. ಈ ರಾಜಾಕರಣ ಕಾಂಗ್ರೆಸ್‌ಗೆ ಒಂದು ಗಟ್ಟಿಯಾದ ತಳಹದಿಯನ್ನು ಸೃಷ್ಟಿಸಲು ಸಹಕಾರಿಯಾಯಿತು.

ಹಾವನೂರು ಆಯೋಗ ಜಾತಿಗಳ ಐಡೆಂಟಿಟಿಗಳನ್ನು ನಿರ್ಮಿಸುವ ಸಂದರ್ಭದಲ್ಲಿ ಹೊಸ ಮಾನದಂಡಗಳನ್ನು ಉಪಯೋಗಿಸದ್ದನ್ನು ಮರೆಯಬಾರದು–ರಾಜಕೀಯ ವ್ಯವಸ್ಥೆಯಲ್ಲಿ ಸಮುದಾಯದ ಪ್ರತಿನಿಧಿತ್ವದ ಸಂಖ್ಯೆ, ವಿದ್ಯಾಭ್ಯಾಸದ ಮಟ್ಟ ಇತ್ಯಾದಿ. ಈ ಮಾನದಂಡಗಳನ್ನು ಇಟ್ಟುಕೊಂಡು ಆಯೋಗ ಸಮುದಾಯಗಳನ್ನು ಹಾಗೂ ಜಾತಿಗಳನ್ನು ಮೂರು ಭಾಗಗಳನ್ನಾಗಿ ಗುರುತಿಸಿತ್ತು. ಹಿಂದುಳಿದ ಜಾತಿ, ಹಿಂದುಳಿದ ವರ್ಗ ಹಾಗೂ ಹಿಂದುಳಿದ ಬುಡಕಟ್ಟು.ಮೊದಲನೇ ಗುಂಪಿನಲ್ಲಿ 15 ಜಾತಿಗಳನ್ನು ಅದು ಗುರುತಿಸಿದರೆ, ಎರಡನೇ ಗುಂಪಿನಲ್ಲಿ 128 ಜಾತಿಗಳನ್ನು ಹಾಗೂ ಮೂರನೇ ಗುಂಪಿನಲ್ಲಿ 62 ಜಾತಿಗಳನ್ನು ಗುರುತಿಸಿತ್ತು. ವಿಚಿತ್ರವೆಂದರೆ ಅದು ಲಿಂಗಾಯತರನ್ನು ಹಿಂದುಳಿದ ಪಟ್ಟಿಯಿಂದ ಹೊರಗಿಟ್ಟಿತ್ತು. ಮತ್ತೊಂದು ವಿಚಿತ್ರವೆಂದರೆ ಮುಂದೆ 19 ಜಾತಿಗಳು ರಾಜಕೀಯ ಒತ್ತಡದಿಂದಾಗಿ ಹಿಂದುಳಿದ ಜಾತಿಯ ಪಟ್ಟಿಯಲ್ಲಿ ಸೇರಿಬಿಟ್ಟವು.

ಹಾವನೂರು ಆಯೋಗದ ನಂತರ ನೇಮಕಗೊಂಡ ವೆಂಕಟಸ್ವಾಮಿ ಆಯೋಗ ಐಡೆಂಟಿಟಿ ರಾಜಕಾರಣಕ್ಕೆ ಹೊಸ ರೂಪತೆಯನ್ನು ನೀಡಲು ಯತ್ನಿಸಿದರೂ, ವಿಫಲವಾಯಿತು.. ಅದು ಒಕ್ಕಲಿಗರಲ್ಲಿ ಒಂದು ವರ್ಗ ಹಾಗೂ ಲಿಂಗಾಯತರನ್ನು "ಮುಂದುವರಿದ" ಸಮುದಾಯವೆಂದು ಗುರುತಿಸಿದ್ದೇ ಅದರ ವಿಫಲತೆಗೆ ಕಾರಣವಾಯಿತು. ಅಂದಿನ ಜನತಾ ಪಕ್ಷದ ಸಾಮಾಜಿಕ ತಳಹದಿ ಈ ಜಾತಿಗಳ ನಡುವೆ ಇದ್ದ ಕಾರಣ ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ತರಲು ಸಾಧ್ಯವಾಗಲಿಲ್ಲ. ಜಾತಿಗಳನ್ನು ಪ್ರವರ್ಗ "ಎ", ಪ್ರವರ್ಗ "ಬಿ"ಎಂಬ ವರ್ಗೀಕರಣವನ್ನು ಆರಂಭಿಸಿದ್ದೇ ಈ ಆಯೋಗವೆಂದರೆ ತಪ್ಪಾಗಲಾರದು. ಈ ರೀತಿಯ ವರ್ಗಿಕರಣಕ್ಕೆ ಮುಂದೆ "ಸಿ","ಡಿ" ಹಾಗೂ "ಇ"ಪ್ರವರ್ಗಗಳನ್ನು ಸೇರಿಸಲಾಯಿತು.

ಇದಕ್ಕೆ ಪೂರಕವಾಗಿದ್ದದ್ದು ಚಿನ್ನಪ್ಪ ರೆಡ್ಡಿ ಆಯೋಗದ ಶಿಫಾರಸ್ಸುಗಳು. ಅದು ಜಾತಿಗಳನ್ನು ಗುರುತಿಸುವ ಸಂದರ್ಭದಲ್ಲಿ ಮೂರು ಪ್ರವರ್ಗಗಳನ್ನು ಮಾಡಿತ್ತು: ಪ್ರವರ್ಗ1, ಪ್ರವರ್ಗ2 ಹಾಗೂ ಪ್ರವರ್ಗ3, ಪ್ರವರ್ಗ1 ರಲ್ಲಿ ಅದು 52 ಜಾತಿಗಳನ್ನು, ಪ್ರವರ್ಗ2ರಲ್ಲಿ 14 ಜಾತಿ ಹಾಗೂ ಸಮುದಾಯಗಳನ್ನು ಗುರುತಿಸಿತ್ತು. ಪ್ರವರ್ಗ3 ಮೂಲತಃವಾಗಿ ಆರ್ಥಿಕ ಗುಂಪು.ಇದರ ಇನ್ನೊಂದು ವಿಶಿಷ್ಟತೆ ಎಂದರೆ ಅದು "ಕೆನೆಪದರ"ದ ವಾದವನ್ನು ಸೂಕ್ಷವಾಗಿ ಅಳವಡಿಸಲು ಯತ್ನಿಸಿದ್ದು: ಈ ಆಯೋಗದ ಶಿಫಾರಸ್ಸು ಅಂದಿನ ಆಡಳಿತ ಪಕ್ಷ ತಿರಸ್ಕರಿಸಿದರೂ, ಸರಕಾರ ಜಾತಿಗಳ ಗುರುತಿಸುವಿಕೆಯ ಪ್ರಕ್ರಿಯೆಯನ್ನು ನಿಲ್ಲಿಸಲಿಲ್ಲ. ಇದರ ಫಲಶ್ರುತಿಯಾಗಿ 1994ರಲ್ಲಿ ಜಾತಿಗಳನ್ನು ನಾಲ್ಕು ಪ್ರವರ್ಗಗಳನ್ನಾಗಿ ವಿಭಜಿಸಲಾಯಿತು: ಪ್ರವರ್ಗ 1– 81 ಜಾತಿಗಳು ಹಾಗೂ ಅವುಗಳ ಉಪಜಾತಿಗಳು, ಪ್ರವರ್ಗ 2– 114 ಜಾತಿಗಳು ಹಾಗೂ ಅವುಗಳ ಉಪಜಾತಿಗಳು, ಪ್ರವರ್ಗ3–6 ಜಾತಿಗಳು \ಹಾಗೂ ಗ್ರಾಮೀಣ ಗುಂಪುಗಳು, ಪ್ರವರ್ಗ4–14 ಗುಂಪುಗಳು. ಇದರಲ್ಲಿರುವ ಆಭಾಸವೆಂದರೆ ಅದು ಲಿಂಗಾಯತರನ್ನು ಒಂದೆಡೆ ಪ್ರವರ್ಗ 1ರಲ್ಲಿ "ಅತ್ಯಂತ ಹಿಂದುಳಿದವ ರೆಂದು" ಗುರುತಿಸಿದರೆ, ಪ್ರವರ್ಗ 2ರಲ್ಲಿ "ಹಿಂದುಳಿದ ವರ್ಗ"ವೆಂದು ಗುರುತಿಸಿತ್ತು. ಇದೇ ನಿಟ್ಟಿನಲ್ಲಿ 1996ರಲ್ಲಿ ಮತ್ತೊಂದು ರೀತಿಯ ವರ್ಗಿಕರಣ ಮಾಡಲಾಯಿತು. ಎಂ, ಪಿ ಪ್ರಕಾಶ್ ನೇತೃತ್ವದ ಕ್ಯಾಬಿನೇಟ್ ಉಪಸಮಿತಿ ಜಾತಿಗಳನ್ನು ಮೀಸಲಾತಿ ಮುಖಾಂತರ ಗುರುತಿಸಲು ನಾಲ್ಕು ಪ್ರವರ್ಗಗಳನ್ನು ಮಾಡಿತ್ತು: ಪ್ರವರ್ಗ1, ಪ್ರವರ್ಗ2ಎ, ಪ್ರವರ್ಗ2ಬಿ, ಪ್ರವರ್ಗ 3ಎ, ಪ್ರವರ್ಗ3ಎ, ಮತ್ತು ಪ್ರವರ್ಗ3ಬಿ. ಈ ರೀತಿಯ ವರ್ಗಿಕರಣ ಇವತ್ತೂ ಚಾಲ್ತೀಯಲ್ಲಿದೆ. ವಾಸ್ತವವಾಗಿ ಈ ರೀತಿಯ ವರ್ಗೀಕರಣವನ್ನು ಸಾಚಾರ್ ವರದಿ ಕೂಡ "ಮಾದರಿ"ಯನ್ನಾಗಿ ಗುರುತಿಸಿದೆ. ಇದಕ್ಕೆ ಕಾರಣಗಳಿಲ್ಲವೆಂದಲ್ಲ. ಇದು ಜಾತಿಗಳನ್ನು ವಿವಿಧ ಪ್ರವರ್ಗವಡಿಯಲ್ಲಿ ಮಾತ್ರ ಗುರುತಿಸದೇ, ಧರ್ಮದೊಳಗಿನ ಜಾತಿಗಳನ್ನು ಕೂಡ. ಗುರುತಿಸುತ್ತದೆ. ಮುಸ್ಲಿಂಮರಲ್ಲಿ ಕೆಲವು ಹಿಂದು

ಳಿದ ಜಾತಿಗಳಾದ ಚಪ್ಪರ್ ಬಂದ್ ಇತ್ಯಾದಿಯವರನ್ನು ಪ್ರವರ್ಗ1ರಲ್ಲಿ ಗುರುತಿಸಿದರೆ, ಇತರರನ್ನು ಪ್ರವರ್ಗ2ಬಿ ಯಲ್ಲಿ ಗುರುತಿಸುತ್ತದೆ–, ಅಲ್ಲದೇ "ದಲಿತ ಕ್ರಿಶ್ಚಿಯನ್" ಎಂಬ ವರ್ಗವನ್ನು ಕೂಡ ಗುರುತಿಸುತ್ತದೆ. ಈ ರೀತಿಯ ಗುರುತಿಸುವಿಕೆಯ ಪ್ರಕ್ರಿಯೆ 1970ರ ದಶಕದಿಂದಲೇ ಆರಂಭಗೊಂಡಿದ್ದನ್ನು ನಾವು ಮರೆಯಬಾರದು. ಇಲ್ಲಿ ದೇವರಾಜ ಅರಸ್‌ರವರ ಕೊಡುಗೆ ಅಪಾರ. ಬಹುಷ: ಅವರ ದಿಟ್ಟ ಹೆಜ್ಜೆ ಐಡೆಂಟಿಟಿ ರಾಜಕೀಯಕ್ಕೆ ಹೊಸ ಸಂಕಥನ, ಹೊಸ ದೃಷ್ಟಿಕೋನ, ಹೊಸ ರಾಜಕೀಯ ಶಕ್ತಿ ನೀಡಲು ಸಾಧ್ಯವಾಯಿತು. ಇವತ್ತಿನ ಬೌದ್ಧಿಕ ವಲಯ ಕೂಡ ಚಾರಿತ್ರಿಕವಾಗಿ ಈ ಮೀಸಲಾತಿ ರಾಜಕೀಯ ಹಾಗೂ ಐಡೆಂಟಿಟಿ ರಾಜಕೀಯದ ಉತ್ಪತ್ತಿ.

ಐಡೆಂಟಿಟಿ ರಾಜಕಾರಣದ ವಿಪರ್ಯಾಸವೆಂದರೆ ಒಮ್ಮೆ ಸಮುದಾಯವನ್ನು ಸರಕಾರಿ ಪಟ್ಟಿಯಲ್ಲಿ ಸೇರಿಸಿದ ನಂತರ ಅದನ್ನು ಮತ್ತೊಮ್ಮೆ ಸರಕಾರಿ ಪಟ್ಟಿಯಿಂದ ಹೊರಗಿಡಲು ಸಾಧ್ಯವಿಲ್ಲ. ಯಾಕೆಂದರೆ ಈ ರೀತಿಯ ರಾಜಕೀಯ ಆಡಳಿತ ಪಕ್ಷದ ಸಾಮಾಜಿಕ ತಳಹದಿಯನ್ನೇ ಬುಡಮೇಲು ಮಾಡುವ ಸಾಧ್ಯತೆಗಳು ಹೆಚ್ಚಿರುತ್ತದೆ ಎಂಬ ಹೆದರಿಕೆ ಇದ್ದೇ ಇರುತ್ತದೆ.ಅಲ್ಲದೇ ಅವು ರಾಜಕೀಯ ತಲ್ಲಣ ಹಾಗೂ ರಾಜಕೀಯ ಅಸ್ಥಿರತೆಯನ್ನು ಸೃಷ್ಟಿಸಬಹುದೆಂಬ ಗುಮಾನಿ ಹಾಗೂ ಭಯ ಇದ್ದೇ ಇರುತ್ತದೆ. ಆದ ಕಾರಣ ಇವತ್ತೀಗೂ ಕೂಡ ಒಂದೇ ಒಂದು ಜಾತಿ ಸರಕಾರಿ ಪಟ್ಟಿಯಿಂದ ತೆಗೆದು ಹಾಕಲು ಸಾಧ್ಯವಾಗಲಿಲ್ಲ. ಇಲ್ಲಿ ನಾಗನ್‌ಗೌಡ ಆಯೋಗಕ್ಕೆ ಆದ ಅಪಮಾನ ಹಾಗೂ 1980ರ ದಶಕದಲ್ಲಿ ನಡೆದ ಗಲಭೆಗಳು ಇದಕ್ಕೆ ಸಾಕ್ಷಿ.

ಇನ್ನೊಂದು ವಿಪರ್ಯಾಸವೆಂದರೆ ಸಮುದಾಯಗಳು ಸಾಮಾಜಿಕವಾಗಿ ತಮ್ಮನ್ನು ತಾವು ನಿರ್ಮಿಸುವ ಸಂದರ್ಭದಲ್ಲಿ ಸರಕಾರಿ ಅಥವಾ ರಾಜಕೀಯ ನಿರ್ಮಿತಿಗೆ ಸರಿಹೊಂದಲೇ ಬೇಕಾಗಿಲ್ಲ. ಬಹಳಷ್ಟು ಸಲ ಅವು ತದ್ವಿರುದ್ಧವಾಗಿರುತ್ತವೆ. ಇದಕ್ಕೆ ಲಿಂಗಾಯತರು ಹಾಗೂ ವಿಶ್ವಕರ್ಮರು ಉತ್ತಮ ಉದಾಹರಣೆ. ತಮ್ಮನ್ನು ತಾವು ಸಾಮಾಜಿಕವಾಗಿ ನಿರ್ಮಿಸುವಾಗ ಮೇಲ್ಜಾತಿಗಳೆಂದೂ, ಅಥವಾ ಬ್ರಾಹ್ಮಣರಿಗೆ ಸಮಾನರೆಂದೂ ಗುರುತಿಸುತ್ತವೆ. ಆದರೆ ರಾಜಕೀಯ ನಿರ್ಮಿತಿಯಲ್ಲಿ ತಮ್ಮನ್ನು ತಾವು "ಹಿಂದುಳಿದವುಗಳೆಂದು" ವಾದಿಸುತ್ತವೆ.

ಈ ಸಂದರ್ಭದಲ್ಲಿ ಒಂದು ಪ್ರಶ್ನೆ ಅನಿವಾರ್ಯ. ಕೆಲವು ಜಾತಿಗಳು ಸೀಮಿತ ಸ್ಥಳ ಅಥವಾ ಪ್ರದೇಶಗಳಿಗೆ ಸೀಮಿತಗೊಂಡಾಗ ಅವುಗಳ ಐಡೆಂಟಿಟಿಗಳಿಗೇನಾಗಬಹುದು? ಅವುಗಳ ಐಡೆಂಟಿಟಿಗಳೂ ಕೂಡ ಸೀಮಿತಗೊಳ್ಳುತ್ತವೆಯೇ? ಸಾಮಾಜಿಕವಾಗಿ ಐಡೆಂಟಿಟಿಗಳೂ ಸೀಮಿತಗೊಂಡರೂ ರಾಜಕೀಯ ಸಂದರ್ಭದಲ್ಲಿ ಹಾಗೂ ಚೌಕಟ್ಟಿನಲ್ಲಿ ಅವುಗಳು ಸೀಮಿತಗೊಳ್ಳುವುದಿಲ್ಲ, ಹೊರತು ಅವುಗಳು ಅಖಿಲ ಕರ್ನಾಟಕ ಅಥವಾ ಅಖಿಲ ಭಾರತದ ವ್ಯಾಪ್ತಿಯನ್ನು ಪಡೆಯುತ್ತವೆ.

ಇಲ್ಲಿ ಅವುಗಳಿಗೆ ರಾಷ್ಟ್ರೀಯ ಮಟ್ಟದ ಐಡೆಂಟಿಟಿಗಳು ದೊರೆಯುತ್ತದೆ. ಉದಾಹರಣೆಗೆ ಗುಡಿಗಾರ ಜಾತಿ ಇವತ್ತು ಶಿವಮೊಗ್ಗ ಹಾಗೂ ದಕ್ಷಿಣ ಕನ್ನಡಕ್ಕೆ ಸೀಮಿತಗೊಂಡಿದೆ, ಅದೇ ರೀತಿ ಬಂಟರು, ಭಂಡಾರಿಗಳೂ ಕೂಡ ದಕ್ಷಿಣ ಕನ್ನಡಕ್ಕೆ ಸೀಮಿತಗೊಂಡಿದ್ದಾರೆ, ಆರ್ಯವೈಶ್ಯರು ದಕ್ಷಿಣ ಕರ್ನಾಟಕಕ್ಕೆ ಸೀಮಿತಗೊಂಡಿದ್ದಾರೆ. ಇವರನ್ನು ವ್ಯವಸ್ಥೆ ಸರಕಾರಿ ಪಟ್ಟಿಯಲ್ಲಿ ಗುರುತಿಸಿದ ನಂತರ ಅವುಗಳ ಐಡೆಂಟಿಟಿಗಳಿಗೆ ವಿಶಾಲವಾದ ಮಾನ್ಯತೆ ದೊರೆಯುವುದು ವಾಸ್ತವ. ಆದ ಕಾರಣ ಪ್ರತೀಯೊಂದು ಜಾತಿ ಸರಕಾರಿ ಪಟ್ಟಿಯಲ್ಲಿ ಬರುವುದು ಅವಶ್ಯಕ ಮತ್ತು ಅನಿವಾರ್ಯ– ಅತೀ ಚಿಕ್ಕ ಜಾತಿಗಳಾಗಲೀ, ದೊಡ್ಡ ಜಾತಿಗಳಾಗಲಿ ಸರಕಾರಿ ಪಟ್ಟಿಯಲ್ಲಿ ಬರಲೇ ಬೇಕು. ಇಲ್ಲದಿದ್ದರೆ ಅವುಗಳು ರಾಜಕೀಯವಾಗಿ ಸತ್ತು ಹೋಗುತ್ತವೆ. ಸಾಮಾಜಿಕವಾಗಿ ಅಂಚಿಗೆ ತಳ್ಳಲ್ಪಡುತ್ತವೆ.

ಅದರರ್ಥ ಜಾತಿಗಳು ರಾಷ್ಟ್ರೀಯ ಮಟ್ಟದಲ್ಲಿ ಏಕ ರೂಪಿಯಾಗಿ ತಮ್ಮನ್ನು ತಾವು ಗುರುತಿಸಿಕೊಳ್ಳುತ್ತವೆ ಎಂಬರ್ಥವಲ್ಲ. ಅದು ಸಾಧ್ಯನೂ ಇಲ್ಲ. ಬಿಹಾರದ ಯಾದವರು ಕರ್ನಾಟಕದ "ಒಡೆಯರು"ಅಲ್ಲ, ಆದರೂ ಚಾರಿತ್ರಿಕವಾಗಿ ಇಬ್ಬರೂ "ಯದು" ,"ಯಾದವ ವಂಶ" ದವರು ಎಂದು ತಮ್ಮನ್ನು ತಾವು ನಿರ್ಮಿಸಿಕೊಳ್ಳಬಹುದು.

ಇದಕ್ಕೆ ತೀರಾ ವಿಭಿನ್ನವಾದ ಇನ್ನೊಂದು ಅಂಶವನ್ನು ಇಲ್ಲಿ ದಾಖಲಿಸಬೇಕು.. ಇದನ್ನು ರಾಜಕೀಯ ದ್ವಿಪಲ್ಲಟನ ಎಂದು ಕರೆಯಬಹುದು. ಕೆಲವು ಜಾತಿಗಳು ಸಾಮಾಜಿಕವಾಗಿ "ಭಲಾಢ್ಯ" ಅಥವಾ ಪ್ರಭಲವೆಂದು ಗುರುತಿಸಿಕೊಳ್ಳಲು "ಸಾಮಾನ ಜಾತಿಗಳು" ಎಂಬ ಚೌಕಟ್ಟುಗಳನ್ನು ನಿರ್ಮಿಸುವುದು ಸರ್ವೆಸಾಮಾನ್ಯ. ಇದಕ್ಕೆ ಉತ್ತಮ ಉದಾಹರಣೆ ದಕ್ಷಿಣ ಕನ್ನಡದ ಬಂಟರು ಹಾಗೂ ದಕ್ಷಿಣ ಕರ್ನಾಟಕದ ಒಕ್ಕಲಿಗರು. "ಬಂಟರು ಯಾನೆ ನಾಡವರು" ಎಂಬ ಶ್ಲೋಗನ್ ಒಂದೆಡೆಯಾದರೆ, "ಬಂಟರು ಒಕ್ಕಲಿಗರಿಗೆ ಸಮಾನರು" ಎಂಬ ಶ್ಲೋಗನ್ ಇನ್ನೊಂದೆಡೆ. ಆದರೆ ರಾಜಕೀಯ ವ್ಯವಸ್ಥೆಗೆ ಇವರಿಬ್ಬರೂ ಸಮಾನರಲ್ಲ. ರಾಜಕೀಯವಾಗಿ ಐಡೆಂಟಿಟಿಗಳನ್ನು ನಿರ್ಮಿಸುವಾಗ ಅಥವಾ ಗುರುತಿಸುವಾಗ ಬಂಟರು ಕೆಲವೊಮ್ಮೆ "ಮುಂದುವರಿದ ಸಮುದಾಯ"ಗಳಾಗುತ್ತಾರೆ.

ಐಡೆಂಟಿಟಿ ರಾಜಕಾರಣದ ವಿಪರ್ಯಾಸವೆಂದರೆ ಒಮ್ಮೆ ಸಮುದಾಯವನ್ನು ಸರಕಾರಿ ಪಟ್ಟಿಯಲ್ಲಿ ಸೇರಿಸಿದ ನಂತರ ಅದನ್ನು ಮತ್ತೊಮ್ಮೆ ಸರಕಾರಿ ಪಟ್ಟಿಯಿಂದ ಹೊರಗಿಡಲು ಸಾಧ್ಯವಿಲ್ಲ. ಯಾಕೆಂದರೆ ಈ ರೀತಿಯ ರಾಜಕೀಯ ಆಡಳಿತ ಪಕ್ಷದ ಸಾಮಾಜಿಕ ತಳಹದಿಯನ್ನೇ ಬುಡಮೇಲು ಮಾಡುವ ಸಾಧ್ಯತೆಗಳು ಹೆಚ್ಚಿರುತ್ತದೆ ಎಂಬ ಹೆದರಿಕೆ ಇದ್ದೇ ಇರುತ್ತದೆ,.ಅಲ್ಲದೇ ಅವು ರಾಜಕೀಯ ತಲ್ಲಣ ಹಾಗೂ ರಾಜಕೀಯ ಅಸ್ಥಿರತೆಯನ್ನು ಸೃಷ್ಟಿಸಬಹುದೆಂಬ ಗುಮಾನಿ ಹಾಗೂ ಭಯ ಇದ್ದೇ ಇರುತ್ತದೆ. ಆದ ಕಾರಣ ಇವತ್ತೀಗೂ ಕೂಡ ಒಂದೇ ಒಂದು ಜಾತಿ ಸರಕಾರಿ ಪಟ್ಟಿಯಿಂದ ತೆಗೆದು ಹಾಕಲು ಸಾಧ್ಯವಾಗಲಿಲ್ಲ. ಇಲ್ಲಿ ನಾಗನಗೌಡ ಆಯೋಗಕ್ಕೆ ಆದ ಅಪಮಾನ ಹಾಗೂ 1980ರ ದಶಕದಲ್ಲಿ ನಡೆದ ಗಲಭೆಗಳು ಇದಕ್ಕೆ ಸಾಕ್ಷಿ.

ಇನ್ನು ಕೆಲವೊಮ್ಮೆ ಅವು "ಹಿಂದುಳಿದ ವರ್ಗ" ಗಳಾಗುತ್ತವೆ.

ಐಡೆಂಟಿಟಿಯ ರಾಜಕಾರಣದಲ್ಲಿ ಮೀಸಲಾತಿ ಅತೀ ಮುಖ್ಯವೆಂದರೂ, ಅದರ ಹಿನ್ನಲೆಯಲ್ಲಿ ಜಾತಿಗಳ ಒತ್ತಡಗಳನ್ನು ಕಡೆಗಣಿಸಬಾರದು.

ಇದರ ಫಲಶ್ರುತಿಯಾಗಿ ಇವತ್ತು ಕರ್ನಾಟಕದಲ್ಲಿ ಹೆಚ್ಚುಕಡಿಮೆ 80–90 ಶೇಕಡಾ ಜನಸಂಖ್ಯೆ ಮೀಸಲಾತಿ ರಾಜಕಾರಣದೊಳಗೆ ಸೇರಿಕೊಳ್ಳಲು ಸಾಧ್ಯವಾಗಿರುವುದು. ಇಲ್ಲಿರುವ ದುರಂತವೆಂದರೆ ಪ್ರತಿಯೊಂದು ಜಾತಿ * ಅದು ಪ್ರಭಲ ಜಾತಿ ಇರಬಹುದು, ಸವರ್ಣಿಯರಿರಬಹುದು, ಆಥವಾ ಮುಂದುವರಿದ ಜಾತಿಗಳಿರಬಹುದು * ಅವುಗಳು "ಹಿಂದುಳಿದ ವರ್ಗ"ಗಳೆಂದು ಗುರುತಿಸಲ್ಪಡಲು ಇಷ್ಟಪಡುವುದನ್ನು –ರಾಜಕಾರಣವನ್ನು ಮಾಡುವುದನ್ನು ನಾವು ನೋಡಬಹುದು. ಯಾಕೆಂದರೆ "ಹಿಂದುಳಿದ ವರ್ಗ" ವೆಂಬ ಐಡೆಂಟಿಟಿ ಸಮುದಾಯಗಳಿಗೆ, ಜಾತಿಗಳಿಗೆ ಯಾವತ್ತೂ ಲಾಭದಾಯಕವಾಗಿರುವುದು ಅಷ್ಟೇ ಸತ್ಯ.

ಅವುಗಳಿಗೆ ರಾಜಕೀಯ ಶಕ್ತಿಯನ್ನು, ಆರ್ಥಿಕ ಶಕ್ತಿಯನ್ನು ನೀಡುತ್ತದೆಯಲ್ಲದೇ ರಾಜಕೀಯ ಹಾಗೂ ಇನ್ನಿತರ ಚೌಕಟ್ಟುಗಳಲ್ಲಿ ಜಾತಿಗಳ ಯಜಮಾನಿಕೆಗೆ ದಾರಿ ಮಾಡಿಕೊಡುತ್ತದೆ ಎಂಬುದು ಅಷ್ಟೇ ಸತ್ಯ. ಆದರೆ ಮೀಸಲಾತಿ 50 ಶೇಕಡಾಕ್ಕೆ ಸೀಮಿತಗೊಂಡಿರುವ ಕಾರಣ ಐಡೆಂಟಿಟಿ ರಾಜಕಾರಣ ತಾಕಲಾಟಗಳಿಗೆ ಕಾರಣವಾಗಿರುವುದನ್ನು ಮರೆಯಬಾರದು– ಒಂದು ಸಂದರ್ಭದಲ್ಲಿ 75 ಶೇಕಡಾದಷ್ಟು(ಮಿಲ್ಲರ್ ಕಮಿಟಿ) ಮೀಸಲಾತಿ ಇದ್ದದ್ದನ್ನು ನಾವು ಕಡೆಗಣಿಸಬಾರದು. 50 ಶೇಕಡಾ ಮೀಸಲಾತಿ ಜಾತಿಗಳ ನಡುವೆ ತೀವ್ರತರ ಪೈಪೋಟಿಗೆ, ಅಸಹನೆಗೆ, ಸಂಘರ್ಷಗಳಿಗೆ ದಾರಿ ಮಾಡಿಕೊಡುವುದು ಸಹಜ. ಬಹುಷ: ತಮಿಳು ನಾಡಿನ ಮೀಸಲಾತಿ ಮಾದರಿ ಕರ್ನಾಟದಲ್ಲಿ ಅಳವಡಿಸಿದರೆ ಐಡೆಂಟಿಟಿ ರಾಜಕಾರಣಕ್ಕೆ ಹೊಸತನ ಬರಬಹುದು. ಇದೇ ಸಂದರ್ಭದಲ್ಲಿ ಕರ್ನಾಟಕವನ್ನು "ಮೀಸಲಾತಿ ರಾಜ್ಯ"ವೆಂದು ಕರೆದರೆ ಅತಿಶಯೋಕ್ತಿಯಾಗಲಾರದು. .

ಮೀಸಲಾತಿ ರಾಜಕಾರಣ ಜಾತಿಗಳಿಗೆ ಪ್ರವರ್ಗದ ಐಡೆಂಟಿಟಿ ನೀಡಿದರೆ, ಇನ್ನೊಂದೆಡೆ ಅದು ಸಮುದಾಯಗಳನ್ನು "ವಂಚಿತ" ಸಮುದಾಯಗಳನ್ನಾಗಿಸಿದ್ದು ಅಷ್ಟೇ ಸತ್ಯ. ಇದಕ್ಕೆ ಪರಿಶಿಷ್ಟ ಪಂಗಡದೊಳಗೆ ಇರುವ ಬುಡಕಟ್ಟುಗಳು ಉತ್ತಮ ಉದಾಹರಣೆ..

ಐಡೆಂಟಿಟಿ ರಾಜಕಾರಣವೊಂದು ಮುಗಿಯದ ಪ್ರಕ್ರಿಯೆ..ಕರ್ನಾಟಕದ ಹೊರಗೆ ಇರುವ ಹಲವು ಜಾತಿಗಳನ್ನು ಐಡೆಂಟಿಟಿ ರಾಜಕಾರಣ ಇವತ್ತೀಗೂ ಗಣನೆಗೆ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ ಎಂಬುದು ಸತ್ಯ. ಮಹಾರಾಷ್ಟ್ರದಲ್ಲಿರುವ ಲಿಂಗಾಯತರು ಇದಕ್ಕೆ ಉತ್ತಮ ಉದಾಹರಣೆ. ಅವುಗಳ ಐಡೆಂಟಿಟಿಯನ್ನು ಇವತ್ತೀಗೂ ರಾಜಕೀಯ ವ್ಯವಸ್ಥೆ ಗುರುತಿಸಲು ಸಾಧ್ಯವಾಗಲಿಲ್ಲ. ಅಷ್ಟು ಮಾತ್ರವಲ್ಲದೆ ಎಷ್ಟೋ ಜಾತಿಗಳು ಸರಕಾರಿ ಪಟ್ಟಿಯಿಂದ ಹೊರಗಿವೆ ಯಾಕೆಂದರೆ ಅವುಗಳು ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಶಕ್ತಿಶಾಲಿ ಅಥವಾ ಭಲಾಢ್ಯ ಜಾತಿಗಳಲ್ಲ. ವಿಚಿತ್ರವೆಂದರೆ ವರುಷ ಕಳೆದಂತೆಲ್ಲಾ ಹೊಸ ಹೊಸ ಜಾತಿಗಳು ಸರಕಾರಿ ಪಟ್ಟಿಯಲ್ಲಿ ಸೇರ್ಪಡೆಯಾಗುವುದರ ರಾಜಕೀಯವನ್ನು ಅರ್ಥ ಮಾಡಿಕೊಳ್ಳಬೇಕು. ಇದರ ಅರ್ಥವೆಂದರೆ ಜಾತಿಗಳ ಸಂರಚನೆ, ಜಾತಿಗಳ ಐಡೆಂಟಿಟಿ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ, ಅದೊಂದು ಅಪೂರ್ಣಗೊಂಡಿರುವ ಪ್ರಕ್ರಿಯೆ. □

ದೇಶಭಕ್ತಿ, ಗೋರಕ್ಷಣೆ ಮತ್ತು 'ಹಿಂದೂ ರಾಷ್ಟ್ರ'

(23ನೇ ಪುಟದಿಂದ)

ಯನ್ನು ಜಾರಿಗೊಳಿಸಿದಲ್ಲಿ ರಾಜ್ಯದ ರೈತರು, ದಲಿತರು, ಅಲ್ಪಸಂಖ್ಯಾತರು ಮತ್ತು ಜಾನುವಾರು ಉತ್ಪನ್ನಗಳನ್ನು ಆಧರಿಸಿರುವ ಇತರ ಜನರು ತೀವ್ರ ಸಂಕಷ್ಟಕ್ಕೊಳಗಾಗಲಿರುವುದು ನೂರಕ್ಕೆ ನೂರರಷ್ಟು ಖಚಿತ. ಅಷ್ಟೇ ಅಲ್ಲ, ವಿವಿಧ ಮೃಗಾಲಯಗಳಲ್ಲಿರುವ ಮೂಕಪ್ರಾಣಿಗಳಿಗೂ ಗೋಮಾಂಸ ನಿಷಿದ್ಧವೆಂದಾದಲ್ಲಿ ಅದರ ಪರಿಣಾಮಗಳನ್ನು ಈಗಲೆ ಊಹಿಸಬಹುದು. ಮೃಗಾಲಯಗಳಲ್ಲಿರುವ ವನ್ಯಮೃಗಗಳ ಜಾಗವನ್ನು ಗೋವುಗಳು ಆಕ್ರಮಿಸುವ ಪರಿಸ್ಥಿತಿ ನಿರ್ಮಾಣವಾಗಬಹುದು. ತಾವು "ವೀರ" ಸಾವರ್ಕರ್‌ರ ಶಿಷ್ಯರೆಂದು ಹೇಳಿಕೊಳ್ಳುತ್ತಿರುವವರು ಗುರುವಾಕ್ಯಗಳನ್ನು ಪರಿಪಾಲಿಸುವುದನ್ನು ಬಿಟ್ಟು "ರಾಷ್ಟ್ರಕ್ಕೆ ನೂರು ಪಟ್ಟು ಹಾನಿ" ಉಂಟುಮಾಡಲಿರುವ ಜಾನುವಾರು ಹತ್ಯೆ ನಿಷೇಧ ಕಾಯಿದೆಯನ್ನು ತರಲು ಹೊರಟಿರುವುದು ಒಂದು ವಿಪರ್ಯಾಸವೇ ಸರಿ.

ವಾಸ್ತವಾಂಶ ಏನೆಂದರೆ ಅಮಾಯಕ ಹಿಂದೂಗಳ ಧಾರ್ಮಿಕ ಶ್ರದ್ಧೆಯನ್ನು ದುರುಪಯೋಗ ಪಡಿಸಿಕೊಂಡು, ಅವರನ್ನು ಭಾವನಾತ್ಮಕವಾಗಿ ಪ್ರಚೋದಿಸಿ, ಸಮಾಜವನ್ನು ಒಡೆಯುವುದೆ ಈ ಘನಘೋರ ಕಾಯಿದೆಯ ಉದ್ದೇಶವಾಗಿದೆ. "ಹಿಂದೂ ರಾಷ್ಟ್ರ" ಸ್ಥಾಪನೆಯ ದಶಕಗಳ ಕನಸನ್ನು ನನಸಾಗಿಸುವ ಹಾದಿಯಲ್ಲಿ ಇದೊಂದು ನಿರ್ಣಾಯಕ ಮಜಲಾಗಿರುವುದರಿಂದಲೆ ಸಂಘ ಪರಿವಾರ ತನ್ನೆಲ್ಲಾ ಶಕ್ತಿಯನ್ನು ಬಳಸಿ ಇಂತಹುದೊಂದು ಕಾಯಿದೆಗೆ ಮುಂದಾಗಿದೆ. ಈ ಸನ್ನಿವೇಶದಲ್ಲಿ ನಾಡಿನ ಪ್ರಜ್ಞಾವಂತ ಜನತೆ ಡಾ। ಅಂಬೇಡ್ಕರ್‌ರ ಎಚ್ಚರಿಕೆಯನ್ನು ನೆನೆಸಿಕೊಳ್ಳುತ್ತ ಕರ್ನಾಟಕದ ಈ ಜಾನುವಾರು ಹತ್ಯೆ ನಿಷೇಧ ಮಸೂದೆಯನ್ನು ತಿಪ್ಪೆಗುಂಡಿಗೆ ಎಸೆಯಬೇಕಾಗಿದೆ:

"ಹಿಂದೂ ರಾಷ್ಟ್ರ ಎನ್ನುವುದು ಸ್ಥಾಪಿಸಲ್ಪಟ್ಟರೆ ಅದು ಈ ದೇಶಕ್ಕೆ ಬಂದೊದಗುವ ಅತ್ಯಂತ ಭೀಕರ ಅನಾಹುತ. ಅದು ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಗೆ ಅಪಾಯಕಾರಿಯಾಗಿರುವುದರಿಂದ ಅದಕ್ಕೂ ಪ್ರಜಾತಂತ್ರಕ್ಕೂ ಹೊಂದಾಣಿಕೆಯಾಗುವುದಿಲ್ಲ. ಎಷ್ಟೇ ಬೆಲೆ ತೆತ್ತಾದರೂ "ಹಿಂದೂ ರಾಷ್ಟ್ರ"ವನ್ನು ತಡೆಗಟ್ಟಬೇಕು."

ಆಧಾರ: ಆರೆಸ್ಸೆಸ್ ಮತ್ತು ಬಿಜೆಪಿ – ಎ.ಜಿ. ನೂರಾನಿ
ಸಾವರ್ಕರ್ ಮತ್ತು ಹಿಂದುತ್ವ – ಎ.ಜಿ. ನೂರಾನಿ
ಸಾವರ್ಕರ್ – ಸತ್ಯ ಮತ್ತು ಮಿಥ್ಯ – ಸಂಶುಲ್ ಇಸ್ಲಾಂ
ಆಹಾರ, ಅಹಿಂಸೆ ಮತ್ತು ಧರ್ಮ *
ಡಾ। ಎಂ.ಜಿ. ಇನಾಮದಾರ
ಗೋಹತ್ಯೆ ನಿಷೇಧದ ಸುತ್ತಲಿನ ರಾಜಕೀಯ –
ಪ್ರೊ ಬಿ. ಗಂಗಾಧರಮೂರ್ತಿ
ಕೋಮುವಾದದ ಕರಾಳ ಮುಖಗಳು * ಎಸ್.ಆರ್.ಭಟ್,
ಜಿ.ರಾಜಶೇಖರ್, ಕೆ.ಫಣಿರಾಜ್.
"ಔಟ್‌ಲುಕ್" ನಿಯತಕಾಲಿಕ.
"ದ ಹಿಂದು" ದಿನಪತ್ರಿಕೆ.
"ವಾರ್ತಾಭಾರತಿ" ದಿನಪತ್ರಿಕೆ. □

ಪಶ್ಚಿಮ ಬಂಗಾಳ: ರಕ್ತಸಿಕ್ತ ಚುನಾವಣೆ ಕಾದಿದೆಯೇ?

(25ನೇ ಪುಟದಿಂದ)

ವರದಿಗಳು ಬಹಿರಂಗ ಪಡಿಸುತ್ತವೆ:

* ಪಥೋರ್‌ಜುರಿ ಗ್ರಾಮದಲ್ಲಿರುವ ಕಾಸಿ ಜೊಯ್ರಾ ಪಂಚಾಯತ್ ಕಚೇರಿಯಲ್ಲಿ 60–70 ಕಾರ್ಯಕರ್ತರಿದ್ದಾರೆ. ಅವರ ಬಳಿ ಎಸ್‌ಎಲ್‌ಆರ್, ಬಂದೂಕು, ಸ್ಟೆನ್ ಗನ್, ರಿವಾಲ್ವರ್, ಪಿಸ್ತೂಲು ಇತ್ಯಾದಿ ಅತ್ಯಾಧುನಿಕ ಆಯುಧಗಳಿವೆ. ಸಿಪಿಐ(ಎಂ) ನಾಯಕನೊಬ್ಬನ ಸೋದರ ಮತ್ತಿಬ್ಬರು ಸೇರಿ ಈ ಶಿಬಿರವನ್ನು ನೋಡಿಕೊಳ್ಳುತ್ತಿದ್ದಾರೆ.

* ಒಂದು ಶಿಬಿರ ಬಡುತಾಲಾದ ಪಕ್ಷದ ಕಚೇರಿಯಲ್ಲಿದೆ. ಅಲ್ಲಿ ಆಯುಧಗಳು ಹಾಗೂ ಮದ್ದುಗುಂಡುಗಳಿವೆ. ದಿನದ 24 ಗಂಟೆಗಳ ಕಾಲವೂ ಅಲ್ಲಿ 30–40 ಕಾರ್ಯಕರ್ತರಿರುತ್ತಾರೆ. ಈ ಶಿಬಿರವನ್ನು ನಿಯಂತ್ರಿಸುತಿರುವ ಮೂವರು ವ್ಯಕ್ತಿಗಳ ಪೈಕಿ ಒಬ್ಬ ಸ್ಥಳೀಯ ಸಮಿತಿಯ ಕಾರ್ಯದರ್ಶಿ.

* ಗೋಲ್‌ತೊರೆಯ ವಲಯ ಕಚೇರಿಯಲ್ಲೂ ಒಂದು ಶಿಬಿರವನ್ನು ಸ್ಥಾಪಿಸಲಾಗಿದೆ. ಇಲ್ಲಿ ಸುಮಾರು 70–80 ಕಾರ್ಯಕರ್ತರಿದ್ದಾರೆಂದು ತಿಳಿದುಬಂದಿದೆ. ಇಲ್ಲಿ ಎಸ್‌ಎಲ್‌ಆರ್, ಬಂದೂಕು, ಸ್ಟೆನ್ ಗನ್, ರಿವಾಲ್ವರ್, ಪಿಸ್ತೂಲು, ಕೈಬಾಂಬು ಇತ್ಯಾದಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿವೆ. ಶಿಬಿರದ ನಾಯಕರಾರೆಂದು ಇನ್ನು ತಿಳಿಯಬೇಕಷ್ಟೆ.

* ಕಾಸಿಯ ಪ್ರಾಥಮಿಕ ಶಾಲಾ ಕಟ್ಟಡದಲ್ಲಿ ಹಾಗೂ ಪಕ್ಷದ ಸ್ಥಳೀಯ ಶಾಖಾ ಕಚೇರಿಯಲ್ಲಿ ಶಿಬಿರವಿದೆ. ತೇತುಲ್‌ಡಂಗಾ ಮತ್ತು ನಿಶಿಂತಾಪುರ ಗ್ರಾಮಗಳಲ್ಲಿರುವ ಎರಡೂ ಶಿಬಿರಗಳಲ್ಲಿ 70–80 ಕಾರ್ಯಕರ್ತರಿದ್ದು ಅವರಲ್ಲಿ ಎಸ್‌ಎಲ್‌ಆರ್, ಸ್ಟೆನ್ ಗನ್, ಪಿಸ್ತೂಲು, ಒರಟು ಬಾಂಬು ಇತ್ಯಾದಿ ಆಯುಧಗಳಿವೆ. ಇದಲ್ಲದೆ ಎಕೆ 47 ಬಂದೂಕುಗಳೂ ಕೈಬಾಂಬುಗಳೂ ಇವೆಯೆಂದು ವರದಿಗಳು ತಿಳಿಸುತ್ತವೆ.

* ಶಸ್ತ್ರಾಸ್ತ್ರಗಳು ಮುಖ್ಯವಾಗಿ ಬಿಹಾರದ ಮುಂಗೇರ್‌ನಿಂದ ಅಸಾನ್ಸೋಲ್ ಮಾರ್ಗವಾಗಿ ಇಲ್ಲಿಗೆ ತಲಪುತ್ತಿವೆ. ರಾಜ್ಯದ ಸಚಿವರೊಬ್ಬರ(ಹೆಸರನ್ನು ಉಲ್ಲೇಖಿ ಸಲಾಗಿಲ್ಲ) ಸೋದರನಾದ ನಿರ್ಮಲ್ ಘೋಷ್‌ರ ಪುತ್ರ ತಪನ್ ಘೋಷ್ – ಗಾರ್ಬೆಟ್ಟಾದ ಸುಕುರ್ ಅಲಿ ಎಂಬೀರ್ವರು ಪಶ್ಚಿಮ ಮಿಡ್ನಾಪುರ ಜಿಲ್ಲೆಯ ವಿವಿಧ ಶಿಬಿರಗಳಲ್ಲಿರುವ ಕಾರ್ಯಕರ್ತರಿಗೆ ತರಬೇತಿ ನೀಡುತ್ತಿದ್ದಾರೆ.

* ಇತ್ತೀಚೆಗಷ್ಟೆ ಗಾರ್ಬೆಟ್ಟಾ ಮತ್ತು ಕೇಶ್‌ಪುರ ಕ್ಷೇತ್ರಗಳಲ್ಲಿರುವ ಶಿಬಿರಗಳಿಗೆ ಬೃಹತ್ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಸಾಗಿಸಲಾಗಿದೆಯೆನ್ನುವ ಗುಪ್ತಚರ ವರದಿಗಳು ಬಂದಿವೆ. ಈ ಸಾಗಾಟದಲ್ಲಿ ಪೊಲೀಸರು ಸಕ್ರಿಯವಾಗಿ ಪಾಲ್ಗೊಂಡಿದ್ದರೆಂದೂ ಅವರ ಸಹಕಾರದಿಂದಲೆ ಇದು ನಡೆದಿದೆಯೆಂದೂ ವರದಿ ತಿಳಿಸುತ್ತದೆ. ಮೂರು ಆಂಬುಲೆನ್ಸ್ ಮತ್ತು ಎರಡು ಕಾರುಗಳನ್ನು ಆಯುಧ ಸಾಗಾಟಕ್ಕಾಗಿ ಬಳಸಲಾಗಿದೆ.

* ಜಾರ್ಖಂಡ, ಬಿಹಾರ ಮತ್ತು ಪಶ್ಚಿಮ ಬಂಗಾಳಗಳಿಂದ ಕೂಡಾ ಶಸ್ತ್ರಾಸ್ತ್ರಗಳು ಸರಬರಾಜಾಗುತ್ತಿವೆ. ಶಸ್ತ್ರಾಸ್ತ್ರಗಳನ್ನು ಗೋಣಿ ಚೀಲಗಳಲ್ಲಿ ತುಂಬಿಸಿ ರೈಲುಗಳ ಮೂಲಕ ಸಾಗಿಸಲಾಗುತ್ತಿದೆ. ಇದಕ್ಕೆ ಸ್ಥಳೀಯ ಪೊಲೀಸರ ಹಾಗೂ ಸಂಬಂಧಪಟ್ಟ ಕ್ಷೇತ್ರಗಳ ಜಿಆರ್‌ಪಿಗಳ ಪರೋಕ್ಷ ಸಮ್ಮತಿಯಿದೆ. ರೈಲುಗಳ ಮೇಲೆ ನಿಗಾ ವಹಿಸಲಾಗುತ್ತಿದೆ.

* ಪಶ್ಚಿಮ ಮಿಡ್ನಾಪುರ ಜಿಲ್ಲೆಯ ಬೆನೆಚಪ್ರಾ ಗ್ರಾಮಕ್ಕೆ ಸಮೀಪದ ಅರಣ್ಯದೊಳಗಿರುವ ಕೆಲವು ಕಾರ್ಯಕರ್ತರು ಅಲ್ಲಿ ಶಸ್ತ್ರಾಸ್ತ್ರಗಳ ತಯಾರಿಕೆಯಲ್ಲಿ ತೊಡಗಿದ್ದಾರೆ.

ಸಿಪಿಐ(ಎಂ)ನ ಪಶ್ಚಿಮ ಮಿಡ್ನಾಪುರದ ಕಾರ್ಯದರ್ಶಿ ದೀಪಕ್ ಸರ್ಕಾರ್‌ರನ್ನು ಗುಪ್ತದಳದ ವರದಿಗಳ ಕುರಿತು ಪ್ರಶ್ನಿಸಿದಾಗ ಆತ ಇದನ್ನೆಲ್ಲ ನಿರಾಕರಿಸಿದ್ದಾರೆ. ದೀಪಕ್ ಸರ್ಕಾರ್ ಪ್ರಕಾರ: "ಇದೊಂದು ಜನರ ಸಾಮೂಹಿಕ ಪ್ರತಿಭಟನೆಗೆ ಕಳಂಕ ಹಚ್ಚುವ ಉದ್ದೇಶದಿಂದ ಮಾಡಲಾಗಿರುವ ಹಗರಣ."

ಭಾದುತಲ್ಲಾದಲ್ಲಿನ ಪಕ್ಷದ ಕಚೇರಿಯಲ್ಲಿ ತೆಹೆಲ್ಕಾ ಜೊತೆ ಮಾತನಾಡಿದ ಸಿಪಿಐ(ಎಂ) ಮುಖಂಡ ಶಾಂತಿ ಭುಯಿನ್, ತಮ್ಮ ಪಕ್ಷ 50 ಗ್ರಾಮಗಳನ್ನು "ಮರುಸ್ವಾಧೀನ" ಪಡಿಸಿಕೊಂಡ ಬಗ್ಗೆ ಕೊಚ್ಚಿಕೊಂಡರು. "ಸಿಪಿಐ(ಎಂ) ನಾಯಕತ್ವದಡಿ ಗ್ರಾಮಸ್ಥರು ಮತ್ತೆ ಒಂದುಗೂಡುತ್ತಿದ್ದಾರೆ. ಅವರೆಲ್ಲರೂ ನಮ್ಮೊಂದಿಗಿರುವುದನ್ನು ಮಾವೊವಾದಿಗಳಿಗೆ ತೋರಿಸಿಕೊಡುತ್ತಿದ್ದಾರೆ"ಂದು ತಿಳಿಸಿದರು. ಇದಕ್ಕೆ ನಿದರ್ಶನವಾಗಿ ಜಾರಾ ಹಳ್ಳಿಯಲ್ಲಿ ನಡೆದಿದ್ದ ಘಟನೆಯನ್ನು ಉಲ್ಲೇಖಿಸಿದರು. ಮಾವೊವಾದಿಗಳು ಬೆದರಿಕೆಯೊಡ್ಡಿದಾಗ ಪರಾರಿಯಾಗಿದ್ದ ಸಿಪಿಐ(ಎಂ)ನ ಚುನಾಯಿತ ಪ್ರಧಾನ ತನ್ನ ಹಳ್ಳಿಗೆ ವಾಪಸ್ಸಾಗುವ ಪರಿಸ್ಥಿತಿ ಕಳೆದ ತಿಂಗಳು ನಿರ್ಮಾಣವಾಯಿತು. ಪಂಚಾಯತ್ ಕಚೇರಿಯನ್ನು 9 ತಿಂಗಳ ಕಾಲ ಮುಚ್ಚಲಾಗಿತ್ತು.

ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಸಮರ ಬಿಸಿಯೇರುತ್ತಿದ್ದಂತೆ ಅದರ ದುಷ್ಪರಿಣಾಮ ಪ್ರಜಾತಾಂತ್ರಿಕ ವ್ಯವಸ್ಥೆಯ ಮೇಲಾಗುತ್ತಿದೆ. ತೃಣಮೂಲ ಕಾಂಗ್ರೆಸ್ ನೀಡುವ ಅಂಕಿಸಂಖ್ಯೆಗಳ ಪ್ರಕಾರ ಟಿಎಂಸಿಯ ಸುಮಾರು 1000ಕ್ಕೂ ಅಧಿಕ ಚುನಾಯಿತ ನಾಯಕರು ಹುದ್ದೆ ತ್ಯಜಿಸಿ ಪಲಾಯನ ಮಾಡಿದ್ದಾರೆ. 2008ರ ಮುನಿಸಿಪಾಲಿಟಿ ಚುನಾವಣೆಗಳಲ್ಲಿ ಟಿಎಂಸಿಯ ಅಶೀಶ್ ಮಂಡಲ್‌ಗೆ ಗ್ರಾಮವೊಂದರ ಸರಪಂಚನ ಸ್ಥಾನ ದೊರೆಕಿದ್ದು ಒಂದು ಆಶ್ಚರ್ಯಕರ ಗೆಲುವಾಗಿತ್ತು. ಅಶೀಶ್ ಮನೆಗೆ ಬಂದ ಸಿಪಿಐ(ಎಂ) ಕಾರ್ಯಕರ್ತರು "ಬಾಗಿಲು ತೆರೆಯದಿದ್ದರೆ ಮನೆಯನ್ನೆ ಸುಟ್ಟುಹಾಕುವೆವು" ಎಂದು ಬೆದರಿಕೆ ಹಾಕಿ ಶರಣಾಗತಿಗೆ ಒಂದು ವಾರದ ಗಡುವು ಕೊಟ್ಟಿದ್ದರು. ಅಶೀಶ್ ಮಂಡಲ್ ಈಗ ಮಿಡ್ನಾಪುರ ನಗರದಲ್ಲಿ ಟಿಎಂಸಿ ಸ್ಥಾಪಿಸಿರುವ ನಿರಾಶ್ರಿತರ ಶಿಬಿರವೊಂದರಲ್ಲಿದ್ದಾರೆ. ತೆಹೆಲ್ಕಾ ಆತನನ್ನು ಮಾತನಾಡಿಸಿದಾಗ ಆತ ಹೇಳಿದ್ದಿಷ್ಟು: "ಪೊಲೀಸರನ್ನು ಸಂಪರ್ಕಿಸಿದಾಗ 'ನಮ್ಮಲ್ಲಿ ಸಾಕಷ್ಟು ಪಡೆಗಳಿಲ್ಲ. ನಮ್ಮಿಂದೇನೂ ಮಾಡಲಾಗುವುದಿಲ್ಲ'ವೆಂದರು. ನನ್ನ ಹೆಂಡತಿ, ಮಕ್ಕಳಿನ್ನೂ ಗ್ರಾಮದಲ್ಲೇ ಇದ್ದಾರೆ. ಒಂದು ವೇಳೆ ಅವರನ್ನೆಲ್ಲ ಕೊಂದುಹಾಕಿದರೆಂದಾದರೆ ನಾನೂ ಒಬ್ಬ ಮಾವೊವಾದಿಯಾಗುವೆ." □

ಪ್ರಚಲಿತ ಕರ್ನಾಟಕ: ಕೆಲವು ಟಿಪ್ಪಣಿಗಳು



ಡಾ. ಟಿ.ಆರ್. ಚಂದ್ರಶೇಖರ್

ಕರ್ನಾಟಕದಲ್ಲಿ ಲಿಂಗ ಸಮಾನತೆಯ ಪ್ರಶ್ನೆಯು ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಮಹಿಳೆಯರ ಅಭಿವೃದ್ಧಿಯನ್ನು ಅನೂಚಾನವಾಗಿ ಹರಿದುಕೊಂಡು ಬರುತ್ತಿರುವ ನೆಲೆಯಲ್ಲಿಯೇ ಅವರನ್ನು ಕಟ್ಟಿಹಾಕುವತೆರದಲ್ಲಿ ಪರಿಭಾವಿಸಿಕೊಂಡು ಬರಲಾಗುತ್ತಿದೆ. ಮಹಿಳೆಯರ ಅಭಿವೃದ್ಧಿ ಎನ್ನುವುದನ್ನು ಆಳುವ ಪಕ್ಷವು ಸೀರೆ, ಮಕ್ಕಳು, ಮದುವೆ ಮುಂತಾದ ನೆಲೆಯಲ್ಲಿಯೇ ಲೆಕ್ಕಹಾಕುತ್ತಿದೆ. ಅದನ್ನು ಮೀರಿ ನಮಗೆ ಅವರನ್ನು ತಾತ್ವೀಕರಿಸಿಕೊಳ್ಳುವುದು ಸಾಧ್ಯವಾಗಿಲ್ಲ. ಮಹಿಳೆಯರಿಗೆ ಸೀರೆ ಕೊಡುವುದನ್ನು ಅಭಿವೃದ್ಧಿ ಕಾರ್ಯಕ್ರಮವೆಂದು ಕರೆಯಲು ಸಾಧ್ಯವೆ? 'ಮಹಿಳೆಯರ ಅಭಿವೃದ್ಧಿಯನ್ನು ಮಾಡ ಬೇಕು' ಎನ್ನುವುದು ಬೇರೆ: 'ಅವರು ತಮ್ಮ ಅಭಿವೃದ್ಧಿಯನ್ನು ಮಾಡಿ ಕೊಳ್ಳಬೇಕು' ಎಂಬುದು ಬೇರೆ.

ಪ್ರಸ್ತಾವನೆ

(1) ಇಂದು ಕರ್ನಾಟಕವು ಅನೇಕ ಬಗೆಯ ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ಅವುಗಳಲ್ಲಿ ಮುಕ್ಕಾಲು ಪಾಲು ಮನುಷ್ಯ ನಿರ್ಮಿತ. ಅನೇಕ ಬಾರಿ ಈ ಅಂಕಣದಲ್ಲಿ ಹೇಳಿರುವಂತೆ ಇಂದು ನಾವು ಇಲ್ಲದ ಸಮಸ್ಯೆಗಳನ್ನು ಸಮಸ್ಯೆಗಳಾಗಿ ಮಾಡುತ್ತಿದ್ದೇವೆ. 'ಬರಬರುತ್ತಾ ರಾಯರ ಕುದುರೆ ಕತ್ತೆಯಾಯಿತು' ಎನ್ನುವಂತೆ ನಮ್ಮ ವಿದ್ವಾಂಸ-ಪ್ರಧಾನಮಂತ್ರಿ 'ಎಲ್ಲ' ರಾಜಕಾರಣಿಗಳಂತೆ ವರ್ತಿಸತೊಡಗಿದ್ದಾರೆ. ಸುಪ್ರೀಮ್ ಕೋರ್ಟು ಸರ್ಕಾರಕ್ಕೆ ಆದೇಶಿಸುವಂತಿಲ್ಲವೆಂದು ಅದರ ಮೇಲೆ ಹರಿಹಾಯ್ದಿದ್ದಾರೆ.

ಅವರ ಮಾತು ಸರಿಯಿರಬಹುದು. ಆದರೆ ಅದರ ಸಲಹೆಯನ್ನಾದರೂ ಕೇಳಬೇಕಲ್ಲವೆ? ಸುಪ್ರೀಮ್ ಕೋರ್ಟಿನ ತೀರ್ಪಿನ ಬಗ್ಗೆ ತಕ್ಷಣದಲ್ಲಿ ಪ್ರತಿಕ್ರಿಯೆ ನೀಡುವ ಪ್ರಧಾನ ಮಂತ್ರಿ ತನ್ನ ಸಚಿವ ಸಂಪುಟದ ಸಚಿವರಿಗೆ ಆದೇಶ ನೀಡದಷ್ಟು ಅಸಹಾಯಕರಿದ್ದಂತೆ ಕಾಣುತ್ತದೆ. ಸುಪ್ರೀಮ್ ಕೋರ್ಟು ಹೇಳಿದ್ದಾದರೂ ಏನು? ಆಹಾರ ಪದಾರ್ಥವನ್ನು ಕೊಳೆಯಲು ಬಿಡದೆ ಅದನ್ನು ಬಡವರಿಗೆ ಹಂಚಿ ಎಂದು ಅದು ಹೇಳಿದೆ. ಬಡವರ ಪರವಾಗಿ ಸುಪ್ರೀಮ್ ಕೋರ್ಟು ಹೇಳಿದ್ದೇ ತಪ್ಪಾಯಿತೆ?. ಬಡವರ ಬಗ್ಗೆ ಮಾತನಾಡುವುದೇ ಸರ್ಕಾರಗಳಿಗೆ ಅಪಥ್ಯವಾಗುತ್ತಿರುವಂತೆ ಭಾಸವಾಗುತ್ತದೆ.

ಗೋದಾಮುಗಳಲ್ಲಿ ಆಹಾರ ಪದಾರ್ಥ ಕೊಳೆತು ಹೋಗುವುದನ್ನು ಸರ್ಕಾರ ಸಹಿಸಿಕೊಳ್ಳುತ್ತಿದೆ ಎನ್ನುವುದೇ ಆಶ್ಚರ್ಯ. ಅವುಗಳನ್ನು ಕೆಡದಂತೆ ದಾಸ್ತಾನಿಡಲು ನಮಗೆ ಯಾಕೆ ಸಾಧ್ಯವಾಗುತ್ತಿಲ್ಲ? ಗೋದಾಮುಗಳ ಮೇಲೆ ಸರ್ಕಾರವು ಹಣ ತೊಡಗಿಸುತ್ತಿಲ್ಲ. ಆಹಾರ ಪದಾರ್ಥವನ್ನು ದಾಸ್ತಾನಿಡಲು ಅಗತ್ಯವಾದ ಗೋದಾಮುಗಳ ನಿರ್ಮಾಣದ ಕಾರ್ಯವನ್ನು ಖಾಸಗಿಯವರಿಗೆ ಸರ್ಕಾರ ನೀಡಿಬಿಟ್ಟಿದೆ. ಅದು ತಪ್ಪಬೇಕು. ಆ ಕಾರ್ಯದಲ್ಲಿ ಸರ್ಕಾರ ಹಣ ತೊಡಗಿಸಬೇಕು. ಇದು ಬಂಡವಾಳದ ಕೊರತೆಯ ಪ್ರಶ್ನೆಯಲ್ಲ. ಬಡವರ ಸಂಗತಿ ಸರ್ಕಾರಕ್ಕೆ ಮುಖ್ಯವಾಗುತ್ತಿಲ್ಲ. ಇದು ತಪ್ಪಬೇಕು.

(2) ನಮ್ಮ ಕರ್ನಾಟಕದಲ್ಲಿ ಸಮಸ್ಯೆಗಳನ್ನು ಸೃಷ್ಟಿಸಲಾಗುತ್ತಿದೆ. ಯಾರೂ ಕೇಳದಿದ್ದರೂ ಸರ್ಕಾರವು ತನಗೆ ತಾನೆ ಇದು ಜನಾದೇಶ ಎಂದು ಘೋಷಿಸಿಕೊಂಡು ಜಾನುವಾರು ಹತ್ಯಾ ನಿಷೇಧ ಕಾನೂನನ್ನು ಜಾರಿಗೊಳಿಸಲು ಇನ್ನಿಲ್ಲದಂತೆ ಪ್ರಯತ್ನಿಸುತ್ತಿದೆ. ಹಗರಣಗಳ ಸರಮಾಲೆಯೇ ಸರ್ಕಾರದ ಕೊರಳಿಗೆ ಸುತ್ತಿಕೊಳ್ಳುತ್ತಿದೆ. ಮೊನ್ನೆ ನಡೆದ ಉಪ ಚುನಾವಣೆಯಲ್ಲಿ ಎರಡೂ ಕ್ಷೇತ್ರ ಸೇರಿ ಅರ್ಧಕ್ಕಿಂತಲು ಕಡಿಮೆ ಮತ ಪಡೆದ ಆಳುವ ಪಕ್ಷವು ಅರ್ಧಕ್ಕಿಂತಲೂ ಹೆಚ್ಚಿಗೆ ವಿರೋಧ ಪಕ್ಷಗಳಿಗೆ ಮತಗಳು ಬಂದಿದ್ದರೂ ವಿರೋಧ ಪಕ್ಷದವರನ್ನು ಹಿಗ್ಗಾಮುಗ್ಗಾ ಟೀಕಿಸಲಾಗುತ್ತಿದೆ.

ರಾಜಕೀಯ ಪ್ರೌಡಿಮೆಯನ್ನು ಮರೆಯುವ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರು ಎದೆಯೊಡೆದವರಂತೆ ವರ್ತಿಸುತ್ತಿದ್ದಾರೆ. ಅದರ ಅಗತ್ಯವಿಲ್ಲ. ಅವರನ್ನು ಇನ್ನೂ ತನ್ನ ಪಕ್ಷದ ನಾಯಕರೆಂದು ಘೋಷಿಸುವುದಕ್ಕೆ ಅವರ ಪಕ್ಷವು ಮೀನಮೇಷ ಎಣಿಸುತ್ತಿದೆ. ಅದರ ಫಲ ಸರಣಿ ಸೋಲು. ಹಣಬಾರದ ನಾಯಕರನ್ನಿಟ್ಟುಕೊಂಡು ಚುನಾವಣೆಯನ್ನು ಗೆಲ್ಲಲು ಸಾಧ್ಯವಿಲ್ಲ. ಈ ಡೆಡ್‌ವೈಟ್‌ಗಳನ್ನು ಅದು ಮೊದಲು ಕಿತ್ತೆಸೆಯಬೇಕು.

(3) ಚುನಾವಣೆಯಲ್ಲಿನ ಲೆಕ್ಕಾಚಾರ ತುಂಬಾ ವಿಚಿತ್ರವಾಗಿರುತ್ತದೆ. ಕಡೂರು – ಗುಲ್ಬರ್ಗಾ ಶಾಸನ ಸಭಾ ಕ್ಷೇತ್ರಗಳು ಸೇರಿ ಚಲಾಯಿಸಿದ ಮತಗಳು ಒಟ್ಟು 2,43,403. ಇದರಲ್ಲಿ ಎರಡೂ ಕ್ಷೇತ್ರ ಸೇರಿ ಆಳುವ ಪಕ್ಷಕ್ಕೆ ಬಂದ ಒಟ್ಟು ಮತಗಳ ಸಂಖ್ಯೆ 91,694 (ಶೇ37.67). ಆದರೆ ಎರಡೂ ಕ್ಷೇತ್ರ ಸೇರಿ ಆಳುವ ಪಕ್ಷದ ವಿರುದ್ಧ ಬಂದ ಮತಗಳ ಒಟ್ಟು ಸಂಖ್ಯೆ 1,51709(ಶೇ62.33). ಇದನ್ನು ಹೇಗೆ ಅರ್ಥಮಾಡಿಕೊಳ್ಳುವುದು? ಆದ್ದರಿಂದ ಆಳುವ ಪಕ್ಷವು ನಾನೇ ಸರ್ಕಾರ, ನನಗೆ ಜನಾದೇಶ ಸಿಕ್ಕಿದೆ ಎಂದು ಮೆರೆಯುವ ಅಗತ್ಯವಿಲ್ಲ. ಹೀಗೆ ಮೆರೆದವರೆಲ್ಲ ಏನಾದರು ಎಂಬುದು ಕರ್ನಾಟಕದಲ್ಲಿ ಇನ್ನೂ ಹಸಿರು ಹಸಿರಾಗಿದೆ.

(4). ಕರ್ನಾಟಕದಲ್ಲಿ ಲಿಂಗ ಸಮಾನತೆಯ ಪ್ರಶ್ನೆಯು ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಮಹಿಳೆಯರ ಅಭಿವೃದ್ಧಿಯನ್ನು ಅನೂಚಾನವಾಗಿ ಹರಿದುಕೊಂಡು ಬರುತ್ತಿರುವ ನೆಲೆಯಲ್ಲಿಯೇ ಅವರನ್ನು ಕಟ್ಟಿಹಾಕುವ ತೆರದಲ್ಲಿ ಪರಿಭಾವಿಸಿಕೊಂಡು ಬರಲಾಗುತ್ತಿದೆ. ಮಹಿಳೆಯರ ಅಭಿವೃದ್ಧಿ ಎನ್ನುವುದನ್ನು ಆಳುವ ಪಕ್ಷವು ಸೀರೆ, ಮಕ್ಕಳು, ಮದುವೆ ಮುಂತಾದ ನೆಲೆಯಲ್ಲಿಯೇ ಲೆಕ್ಕ ಹಾಕುತ್ತಿದೆ. ಅದನ್ನು ಮೀರಿ ನಮಗೆ ಅವರನ್ನು ತಾತ್ವೀಕರಿಸಿಕೊಳ್ಳುವುದು ಸಾಧ್ಯವಾಗಿಲ್ಲ.

ಮಹಿಳೆಯರಿಗೆ ಸೀರೆ ಕೊಡುವುದನ್ನು ಅಭಿವೃದ್ಧಿ ಕಾರ್ಯಕ್ರಮವೆಂದು ಕರೆಯಲು ಸಾಧ್ಯವೆ? 'ಮಹಿಳೆಯರ ಅಭಿವೃದ್ಧಿಯನ್ನು ಮಾಡಬೇಕು' ಎನ್ನುವುದು ಬೇರೆ. 'ಅವರು ತಮ್ಮ ಅಭಿವೃದ್ಧಿಯನ್ನು ಮಾಡಿಕೊಳ್ಳಬೇಕು' ಎಂಬುದು ಬೇರೆ. ಈಗ ನಮ್ಮ ಸಂದರ್ಭದಲ್ಲಿ ಮಹಿಳೆಯರ ಅಭಿವೃದ್ಧಿಯನ್ನು ಮೊದಲನೆಯ ಮಾದರಿಯಲ್ಲಿ ನಡೆಸಿಕೊಂಡು ಬರಲಾಗುತ್ತಿದೆ. ಆದರೆ ಅದು ಎರಡನೆಯ ಮಾದರಿಯಲ್ಲಿ ನಡೆಯಬೇಕು. ಅಲ್ಲಿ ಮಹಿಳೆಯರ ಕರ್ತೃತ್ವಕ್ಕೆ ಅವಕಾಶವಿರುತ್ತದೆ. ಈ ಕರ್ತೃತ್ವವನ್ನು ಸಬಲಗೊಳಿಸುವ ದಿಶೆಯಲ್ಲಿ ನಮ್ಮ ನೀತಿಗಳು ಕೆಲಸ ಮಾಡಬೇಕು. ಆದರೆ ನಮ್ಮ ನೀತಿ ನಿರೂಪಣೆಯು ಮೊದಲನೆಯ ಮಾದರಿಯನ್ನು ಅವಲಂಬಿಸಿಕೊಂಡು ಬರುತ್ತಿದೆ. ಇಲ್ಲಿ ಲಿಂಗ ಸಮಾನತೆಯನ್ನು ಸಾಧಿಸಿಕೊಳ್ಳಲು ಬರುವುದಿಲ್ಲ.

(5) ಗಣಿಗಾರಿಕೆ ಬಗ್ಗೆ ರಾಜ್ಯ ಸರ್ಕಾರಗಳು ಒಂದು ರೀತಿಯಲ್ಲಿ ಪರಿಸರಕ್ಕೆ ಮತ್ತು ದುಡಿಮೆಗಾರರಿಗೆ ಮೋಸ ಮಾಡುತ್ತಿದ್ದರೆ ಕೇಂದ್ರ ಸರ್ಕಾರವು ಮತ್ತೊಂದು ರೀತಿಯಲ್ಲಿ ಜನರಿಗೆ ಅನ್ಯಾಯ ವೆಸಗುತ್ತಿದೆ. ಗಣಿಗಾರಿಕೆಯ ಸಮಸ್ಯೆಯು ಕರ್ನಾಟಕಕ್ಕೆ ಮಾತ್ರ ಸಂಬಂಧಿಸಿದ ಸಮಸ್ಯೆಯಲ್ಲ. ಅದು ಆಂಧ್ರ, ಒರಿಸ್ಸಾ, ಜಾರ್ಖಂಡ್, ಮಧ್ಯಪ್ರದೇಶ ಮುಂತಾದ ರಾಜ್ಯಗಳಲ್ಲಿಯೂ ಆತಂಕಕಾರಿಯಾಗಿ ಬಿಟ್ಟಿದೆ. ಅದರ ಪರಿಸರಕ್ಕೆ ಸಂಬಂಧಿಸಿದ ಅಪಾಯ–ಆತಂಕಕಾರಿ ಸಂಗತಿಗಳ ಬಗ್ಗೆ ಸರ್ಕಾರಗಳು ಕುರುಡಾಗಿ ಬಿಟ್ಟಿವೆ.

ನಮ್ಮ ರಾಜ್ಯನ್ನೇ ತೆಗೆದುಕೊಂಡರೆ ಇಲ್ಲಿ ಸಕ್ರಮವಾಗಿ ಒಂದೂ ಗಣಿಗಾರಿಕೆ ನಡೆಯುತ್ತಿಲ್ಲವೆಂಬುದು ಈಗ ನಿಚ್ಚಳವಾಗಿದೆ. ಈಗ ಗಣಿ ಇಲಾಖೆ – ಸರ್ಕಾರ ಗಣಿಗಳ ಅಕ್ರಮಗಳ ಬಗ್ಗೆ ಕಣ್ಣು

ತೆರೆದಂತೆ ಕಾಣುತ್ತದೆ. ಗಣಿ ಕಂಪೆನಿಗಳ ಮೇಲೆ ಈಗ ಧಾಳಿ ಮಾಡಲಾಗುತ್ತಿದೆ. ಎಲ್ಲ ಕಂಪೆನಿಗಳು ಒಂದಲ್ಲ ಒಂದು ರೀತಿಯಲ್ಲಿ ಕಾನೂನನ್ನು ಉಲ್ಲಂಘಿಸಿ ಗಣಿಗಾರಿಕೆ ನಡೆಸುತ್ತಿವೆ. ಅವೆಲ್ಲವೂ ಈಗ ಧಾಳಿಗೆ ತುತಾಗುತ್ತಿವೆ. ಕೇಂದ್ರ ಸರ್ಕಾರವು ಈಗ ಗಣಿಗಾರಿಕೆಗೆ ಸಂಬಂಧಿಸಿದಂತೆ ಹೊಸ ಕಾಯಿದೆಯನ್ನು ಜಾರಿಗೊಳಿಸಿ ಸ್ಥಳೀಯರಿಗೆ ಗಣಿಯಲ್ಲಿನ ವರಮಾನದಲ್ಲಿ ಶೇ26ರಷ್ಟನ್ನು ನೀಡುವ ಬಗ್ಗೆ ಯೋಚಿಸುತ್ತಿರುವಂತಿದೆ. ಇದೆಲ್ಲ ಜನರಿಗೆ ಮೋಸ ಮಾಡುವ ಪರಿಯಾಗಿದೆ. ಏಕೆಂದರೆ ಎಲ್ಲಿಯವರೆಗೆ ಗಣಿಗಾರಿಕೆಯು ಖಾಸಗಿ ವಶದಲ್ಲಿರುತ್ತದೋ ಅಲ್ಲಿಯವರೆಗೆ ಅಲ್ಲಿ ಅಕ್ರಮಗಳನ್ನು ನಿಲ್ಲಿಸುವುದು ಸಾಧ್ಯವಿಲ್ಲ.

ಗಣಿಗಾರಿಕೆಯೆನ್ನುವುದು ಮಾಫಿಯಾ ದಂದೆ. ಅಲ್ಲಿ ಕಾನೂನುಬದ್ಧ ವ್ಯವಹಾರವೆಂಬುದು ಇಲ್ಲ. ವೇದಾಂತ ಒರಿಸ್ಸಾದಲ್ಲಿ ಏನು ಮಾಡುತ್ತಿದೆ? ಕಲ್ಲಿದ್ದಿಲು ಗಣಿ ಪ್ರದೇಶದಲ್ಲಿನ ಮಾಫಿಯಾದ ಬಗ್ಗೆ ಹೇಳುವ ಅಗತ್ಯವಿಲ್ಲ. ಅಲ್ಲಿ ಎಷ್ಟು ಮಂದಿ ಕಾರ್ಮಿಕ ಮುಂದಾಳುಗಳು, ಸಾಮಾಜಿಕ ಕಾರ್ಯಕರ್ತರು ಕೊಲೆಗೀಡಾಗಿದ್ದಾರೆ? ಇದೆಲ್ಲವೂ ಸರ್ಕಾರಕ್ಕೆ ತಿಳಿಯದೇನು?.ಇಷ್ಟೆಲ್ಲಾ ಆದ ಮೇಲೂ ಗಣಿಗಾರಿಕೆಯನ್ನು ಅಧಿಕಾರಿಗಳ ಮೂಲಕ, ಇಲಾಖೆಯ ಮೂಲಕ ನಿಯಂತ್ರಿಸುತ್ತೇವೆಂಬುದು ಕೇವಲ ಭ್ರಮೆ. ಇದಕ್ಕಾಗಿ ಎಷ್ಟು ಅಧಿಕಾರಿಗಳನ್ನು ನೇಮಿಸಲು ಸಾಧ್ಯ? ಎಷ್ಟು ಚದರ ಕಿಲೋಮೀಟರ್‌ನಲ್ಲಿ ಗಣಿಗಾರಿಕೆ ನಡೆಯುತ್ತಿದೆ? ಗಣಿಗಾರಿಕೆ ಮಾಡುತ್ತಿರುವ ಕೋಟ್ಯಾಧಿಪತಿಗಳನ್ನು ಯಕಶ್ಚಿತ್ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿ ಎದುರಾಕಿಕೊಳ್ಳಲು ಸಾಧ್ಯವೇ?

ಇದಾವುದೂ ಕಾರ್ಯಸಾಧುವಲ್ಲ. ಇದಕ್ಕೆ ಒಂದೇ ದಾರಿ. ಅದು ಗಣಿಗಾರಿಕೆಯನ್ನು ಸಾರ್ವಜನಿಕ ವಲಯದಲ್ಲಿ ಮಾತ್ರ ನಡೆಸುವುದು ಮತ್ತು ಅದಿರ ರಫ್ತುವನ್ನು ನಿಷೇಧಿಸುವುದು. ಪರಿಸರದ ಬಗ್ಗೆ ಏನಾದರೂ ಕಾಳಜಿಯಿದ್ದರೆ ತಕ್ಷಣ ಖಾಸಗಿ ಗಣಿಗಾರಿಕೆಯನ್ನು ನಿಷೇಧಿಸಬೇಕು. ಈಗಾಗಲೆ ಗಣಿಗಾರಿಕೆಯನ್ನು ಪರಿಸರಕ್ಕೆ ಪೂರಕವಾಗಿ ನಡೆಸುತ್ತಿರುವ ಸರ್ಕಾರಿ ಸ್ವಾಮ್ಯದ ಎನ್.ಎಮ್.ಡಿ.ಸಿ ಇದೆ. ಅದಕ್ಕೆ ಹೆಚ್ಚು ಬಂಡವಾಳ ಕೊಟ್ಟು ಅದರ ಉತ್ಪಾದನಾ ಸಾಮರ್ಥ್ಯವನ್ನು ವಿಸ್ತರಿಸಬಹುದು.

(6). ಈ ಹಿಂದೆ ನಾನು ಈ ಅಂಕಣದಲ್ಲಿ 2011ರ ಜನಗಣತಿಯ ಜೊತೆಯಲ್ಲಿ ಜಾತಿಗಣತಿಯನ್ನು ನಡೆಸಬೇಕೆಂಬುದನ್ನು ಒತ್ತಾಯಿಸಿ ಅದಕ್ಕೆ ಅಗತ್ಯವಾದ ವಾದವನ್ನು ಮಂಡಿಸಿದ್ದೆ. ರಾಜ್ಯದ ಹಿಂದುಳಿದ ವರ್ಗಗಳ ನಾಯಕರು ಮತ್ತು ಸಾಮಾಜಿಕ ನ್ಯಾಯದ ಪ್ರತಿಪಾದಕರೆಲ್ಲರೂ ಇದನ್ನು ಒತ್ತಾಯಿಸುತ್ತಿದ್ದಾರೆ. ಸಾರ್ವಜನಿಕ ಒತ್ತಾಯವನ್ನು ಮನ್ನಿಸಿ ಕೇಂದ್ರ ಸರ್ಕಾರವು ಜಾತಿಗಣತಿಯ ಬಗ್ಗೆ ತೀರ್ಮಾನ ತೆಗೆದುಕೊಂಡಿದೆ. ಆದರೆ ಅದನ್ನು ಅನುಪಯುಕ್ತಗೊಳಿಸುವ ಒಂದೇ ಉದ್ದೇಶದಿಂದ ಕೇಂದ್ರ ಸರ್ಕಾರವು 'ಹಾವು ಸಾಯಬಾರದು ಮತ್ತು ಕೋಲು ಮುರಿಯಬಾರದು' ಎನ್ನುವಂತೆ ಜನಗಣತಿಯಿಂದ ಜಾತಿಗಣತಿಯನ್ನು ಬೇರ್ಪಡಿಸಿ ಪ್ರತ್ಯೇಕವಾಗಿ ಕೇವಲ ಜಾತಿವಾರು ತಲೆ ಎಣಿಕೆಯನ್ನು ಮಾತ್ರ ಮಾಡುವ ತೀರ್ಮಾನ ಮಾಡಿದೆ.

ಇದು ಅತ್ಯಂತ ಅಪಾಯಕಾರಿಯಾದ ತೀರ್ಮಾನವಾಗಿದೆ ಮತ್ತು ಜಾತಿಗಣತಿಯ ಮೂಲ ಉದ್ದೇಶವನ್ನು ಇದು ಅರ್ಥರಹಿತವನ್ನಾಗಿ ಮಾಡಿಬಿಡುತ್ತದೆ. ಜಾತಿಗಣತಿಯೆಂದರೆ ಕೇವಲ ತಲೆ ಎಣಿಕೆಯಲ್ಲ. ಜಾತಿಗಳ ಆರ್ಥಿಕ, ಸಾಮಾಜಿಕ, ರಾಜಕೀಯ ಸ್ಥಿತಿಗತಿಗಳ ಅಧ್ಯಯನ ಇದಾಗಿದೆ. ಯಾವ ಜಾತಿ ಯಾವ ವಿಷಯದಲ್ಲಿ ಹಿಂದುಳಿದಿದೆ, ಯಾವ ಜಾತಿ ಯಾವ ವಿಷಯದಲ್ಲಿ ಮುಂದುವರಿದಿದೆ ಎಂಬುದೆಲ್ಲ ಜನಗಣತಿ+ಜಾತಿಗಣತಿ ನಡೆಸಿದಾಗ ಗೊತ್ತಾಗುತ್ತದೆ. ಅದರ ಆಧಾರದ ಮೇಲೆ ಸರ್ಕಾರವು ತನ್ನ ಬಡತನ ನಿವಾರಣಾ ಕಾರ್ಯಕ್ರಮಗಳನ್ನು ವೈಜ್ಞಾನಿಕವಾಗಿ ರೂಪಿಸಲು ಸಾಧ್ಯ. ಕೇವಲ ತಲೆ ಎಣಿಕೆಯೆಂದರೆ ಅದು ಜಾತಿ ಆಧರಿತ ಮೀಸಲಾತಿಯನ್ನು ಒತ್ತಾಯಿಸಲು ಒತ್ತಾಸೆಯನ್ನು ಮಾತ್ರ ನೀಡುತ್ತದೆ. ಜಾತಿಗಣತಿಯ ಉದ್ದೇಶ ಅದಲ್ಲ.

> **ನಮ್ಮ ಸಮಾಜದ ಸಂದರ್ಭದಲ್ಲಿ ಅಭಿವೃದ್ಧಿಯೆನ್ನುವುದು ಸಾಮಾಜಿಕ ಶ್ರೇಣೀಕರಣಕ್ಕೆ ಅನುಗುಣವಾಗಿ ಸಂಭವಿಸುತ್ತಿದೆ. ಅಭಿವೃದ್ಧಿಯು ಉನ್ನತ ವರ್ಗಕ್ಕೆ ಹೆಚ್ಚಿನ ಫಲಗಳನ್ನು ಒದಗಿಸುತ್ತಿದ್ದರೆ ಮಧ್ಯಮ ವರ್ಗಕ್ಕೆ ಅಲ್ಪಸ್ವಲ್ಪ ಸೌಲಭ್ಯ ದೊರೆಯುವಂತೆ ಮಾಡುತ್ತಿದೆ. ಆದರೆ ಕೆಳವರ್ಗಕ್ಕೆ, ದಲಿತರಿಗೆ, ಮಹಿಳೆಯರಿಗೆ ಅಲ್ಲಿ ಯಾವುದೇ ಅನುಕೂಲ ದೊರೆಯುತ್ತಿಲ್ಲ. ಉನ್ನತ ಹಂತದಲ್ಲಿ ಜನರ ಬದುಕು ಸಮೃದ್ಧತೆಯಿಂದ ಐಷಾರಾಮದ ಹಂತಕ್ಕೆ ಸಾಗುತ್ತಿದ್ದರೆ ಕೆಳಹಂತದಲ್ಲಿ ಜನರ ಬದುಕು ಜರ್ಜರಿತವಾಗುತ್ತಿದೆ.**

ನಮ್ಮ ಸಮಾಜದ ಸಂದರ್ಭದಲ್ಲಿ ಅಭಿವೃದ್ಧಿಯೆನ್ನುವುದು ಸಾಮಾಜಿಕ ಶ್ರೇಣೀಕರಣಕ್ಕೆ ಅನುಗುಣವಾಗಿ ಸಂಭವಿಸುತ್ತಿದೆ. ಅಭಿವೃದ್ಧಿಯು ಉನ್ನತ ವರ್ಗಕ್ಕೆ ಹೆಚ್ಚಿನ ಫಲಗಳನ್ನು ಒದಗಿಸುತ್ತಿದ್ದರೆ ಮಧ್ಯಮ ವರ್ಗಕ್ಕೆ ಅಲ್ಪಸ್ವಲ್ಪ ಸೌಲಭ್ಯ ದೊರೆಯುವಂತೆ ಮಾಡುತ್ತಿದೆ. ಆದರೆ ಕೆಳವರ್ಗಕ್ಕೆ, ದಲಿತರಿಗೆ, ಮಹಿಳೆಯರಿಗೆ ಅಲ್ಲಿ ಯಾವುದೇ ಅನುಕೂಲ ದೊರೆಯುತ್ತಿಲ್ಲ. ಉನ್ನತ ಹಂತದಲ್ಲಿ ಜನರ ಬದುಕು ಸಮೃದ್ಧತೆಯಿಂದ ಐಷಾರಾಮದ ಹಂತಕ್ಕೆ ಸಾಗುತ್ತಿದ್ದರೆ ಕೆಳಹಂತದಲ್ಲಿ ಜನರ ಬದುಕು ಜರ್ಜರಿತವಾಗುತ್ತಿದೆ. ಜಾತಿಗಣತಿಯಿಲ್ಲದೆ ಅಭಿವೃದ್ಧಿಯು ಯಾವ ರೀತಿಯಲ್ಲಿ ಕೆಳಜಾತಿ-ವರ್ಗಗಳಿಗೆ ಹರಿಯುತ್ತಿಲ್ಲ-ಒದಗುತ್ತಿಲ್ಲ ಎಂಬುದನ್ನು ಪರಿಮಾಣಾತ್ಮಕವಾಗಿ ಮಾಪನ ಮಾಡುವುದು ಸಾಧ್ಯವಿಲ್ಲ.

ಜಾತಿಗಣತಿಯನ್ನು ವಿರೋಧಿಸುತ್ತಿರುವವರ ಮನಸ್ಸಿನಲ್ಲಿ ಎಲ್ಲಿ ಅದು ಅಭಿವೃದ್ಧಿಯನ್ನು ಉನ್ನತ ಜಾತಿಗಳು ಯಾವ ಪ್ರಮಾಣದಲ್ಲಿ ಗುತ್ತಿಗೆ ಹಿಡಿದಿವೆ ಎಂಬುದನ್ನು ತೋರಿಸಿ ಬಿಡುತ್ತದೋ ಎಂಬುದರ ಬಗ್ಗೆ ಭಯವಿರುವಂತೆ ಕಾಣುತ್ತಿದೆ. ಕೆಳಜಾತಿಗಳು ಯಾವ ಪ್ರಮಾಣದಲ್ಲಿ ಅಭಿವೃದ್ಧಿಯಿಂದ ವಂಚಿತವಾಗಿದ್ದಾವೆ ಎಂಬುದನ್ನು ಕೆಲವೇ ಕೆಲವು ಸೂಚಿಗಳಾದರೂ ಅವುಗಳ ಮೂಲಕ ಅದು ತೋರಿಸುತ್ತದೆ. ಇದನ್ನು ಅರಗಿಸಿಕೊಳ್ಳಲಾಗದ ಜನರು ಜಾತಿಗಣತಿಯ ಬಗ್ಗೆ ವಿರೋಧಿ ಧೋರಣೆ ತಳೆದಿರಬಹುದು.

ಜನಗಣತಿಯ ಜೊತೆಯಲ್ಲಿ ಜಾತಿಗಣತಿಯನ್ನು ಮಾಡಬೇಕು. ಇಲ್ಲದಿದ್ದರೆ ಇಡೀ ಕಾರ್ಯದ ಉದ್ದೇಶವೇ ವಿಫಲವಾಗಿಬಿಡುತ್ತದೆ. ಜಾತಿಗಳ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸೂಚಿಗಳಿಗೆ ಸಾಪೇಕ್ಷವಾಗಿ ಜಾತಿಗಣತಿಯನ್ನು ನಡೆಸಿದಾಗ ಮಾತ್ರ ನಾವು ಏನನ್ನು ಅದರಿಂದ ನಿರೀಕ್ಷಿಸುತ್ತಿದ್ದೇವೆಯೋ ಅದು ಈಡೇರುತ್ತದೆ. ಪ್ರತಿಯೊಂದು ಜಾತಿಯಲ್ಲಿನ (ತಲೆ)ಸಂಖ್ಯೆಯಷ್ಟು ಎಂಬುದು ಅದರಷ್ಟಕ್ಕೆ ಅದು ಅನುಪಯುಕ್ತ. ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಾಕ್ಷರತೆಯಲ್ಲಿ, ರಾಜಕೀಯ ಪ್ರಾತಿನಿಧ್ಯದಲ್ಲಿ, ಆಸ್ತಿ-ಪಾಸ್ತಿ ಮಾಲಿಕತ್ವದಲ್ಲಿ, ದುಡಿಮೆ ಸ್ವರೂಪದಲ್ಲಿ ಜಾತಿಗಳ ಸ್ಥಾನವೇನು ಎಂಬುದು ನಮಗೆ ತಿಳಿಯಬೇಕು.

ಅದಕ್ಕಾಗಿ ಜಾತಿಗಣತಿಯನ್ನು ಜನಗಣತಿಯ ಜೊತೆಯಲ್ಲಿ ಸಂಯೋಜಿಸಿ ನಡೆಸಬೇಕು. ಇದರಿಂದ ಎರಡು ಉಪಯೋಗವಿದೆ. ಮೊದಲನೆಯದು ಯಾವ ಜಾತಿಗಳು ಅಭಿವೃದ್ಧಿಯಲ್ಲಿ ತೀವ್ರ ಹಿಂದುಳಿದಿದ್ದಾವೆ ಮತ್ತು ಎಷ್ಟು ಹಿಂದುಳಿದಿದ್ದಾವೆ ಎಂಬುದು ತಿಳಿಯುತ್ತದೆ. ಎರಡನೆಯದಾಗಿ ಯಾವ ಜಾತಿಗಳು ಈಗಾಗಲೆ ಅಭಿವೃದ್ಧಿಯ ಕನಿಷ್ಠ ಮಟ್ಟವನ್ನು ದಾಟಿದ್ದಾವೆ ಎಂಬುದು ಗೊತ್ತಾಗುತ್ತದೆ. ಹೀಗೆ ಕನಿಷ್ಠ ಅಭಿವೃದ್ಧಿಮಟ್ಟದಿಂದ ಮೇಲೇರಿರುವ ಜಾತಿಗಳನ್ನು ಮೀಸಲಾತಿ ವ್ಯಾಪ್ತಿಯಿಂದ ಹೊರಗಾಕಬಹುದು. ಇದು ರಾಜಕೀಯವಾಗಿ ಕಾರ್ಯಸಾಧುವಾದ ಸಂಗತಿಯೇನಲ್ಲ. ಆದರೆ ರಾಜಕೀಯವಾಗಿ ನಿಷ್ಠೂರದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇಂತಹ ರಾಜಕೀಯ ಇಚ್ಛಾಶಕ್ತಿಯಿಲ್ಲದ ಕಾರಣಕ್ಕೆ ಜಾತಿಗಣತಿಯನ್ನೇ ತಿರಸ್ಕರಿಸುವುದು ಸಲ್ಲ.

ಈಗಾಗಲೆ ಹೀಗೆ ಅಭಿವೃದ್ಧಿಯಲ್ಲಿ ಒಂದು ಕನಿಷ್ಠವಾದ ಮಟ್ಟವನ್ನು ದಾಟಿದ ಸಂದರ್ಭದಲ್ಲಿ ಹೆಚ್ಚಿನ ಅನುದಾನವನ್ನು ಅವುಗಳಿಗೆ ಸರ್ಕಾರವು ನಿಲ್ಲಿಸಿರುವ ಉದಾಹರಣೆಯಿದೆ. ಡಾ.ಡಿ.ಎಂ.ನಂಜುಡಪ್ಪ ಸಮಿತಿ ವರದಿಯ ಶಿಫಾರಸ್ಸಿನ ಪ್ರಕಾರ ನಮ್ಮ ರಾಜ್ಯದಲ್ಲಿ ಅಭಿವೃದ್ಧಿ ಒಂದು ಕನಿಷ್ಠಮಟ್ಟವನ್ನು ದಾಟಿದ ಉಡುಪಿ, ದಕ್ಷಿಣಕನ್ನಡ ಮತ್ತು ಕೊಡಗು ಜಿಲ್ಲೆಗಳಿಗೆ ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಹೆಚ್ಚುವರಿ ವಿಶೇಷ ಅನುದಾನವನ್ನು ಕೊಡುತ್ತಿಲ್ಲ. ಉಳಿದ 27 ಜಿಲ್ಲೆಗಳಿಗೆ ವಿವಿಧ ಪ್ರಮಾಣದಲ್ಲಿ ಹೆಚ್ಚುವರಿ ವಿಶೇಷ ಅನುದಾನವನ್ನು ನೀಡಲಾಗುತ್ತಿದೆ. ಇದನ್ನು ಮುಂದುವರಿದ ಮೂರು ಜಿಲ್ಲೆಗಳು ಒಪ್ಪಿಗೊಂಡಿವೆ. ಅದೇ ರೀತಿಯಲ್ಲಿ ಜಾತಿಗಳಿಗೆ ಸಂಬಂಧಿಸಿದಂತೆಯೂ ದಿಟ್ಟ ತೀರ್ಮಾನಗಳನ್ನು ತೆಗೆದುಕೊಳ್ಳಬಹುದು. ಸಮಾಜ ಅಂತಹ ತೀರ್ಮಾನಗಳಿಗೆ ಒಪ್ಪಿಗೆ ನೀಡಬೇಕು.

(7) ರೈತರ ಜಮೀನನ್ನು ಸರ್ಕಾರ ಪರಭಾರೆ ಮಾಡಿಕೊಳ್ಳುತ್ತಿರುವ ಸಮಸ್ಯೆಯು ದಿನದಿನಕ್ಕೆ ಕಗ್ಗಂಟಾಗಿ ಪರಿಣಮಿಸುತ್ತಿದೆ. ಇದರ ಬಗ್ಗೆ ನಾವು ಗಂಭೀರವಾಗಿ ಯೋಜಿಸಬೇಕಾಗಿದೆ. ಇತ್ತೀಚಿಗೆ ಬಳ್ಳಾರಿ ನಗರದ ಹತ್ತಿರದ ಚಾಗನೂರು ಹಳ್ಳಿಯ ಬಳಿಯಲ್ಲಿ ವಿಮಾನ ನಿಲ್ದಾಣಕ್ಕಾಗಿ 800ಎಕರೆ ರೈತರ ಜಮೀನನ್ನು ವಶಪಡಿಸಿಕೊಳ್ಳುವ ಕ್ರಮವನ್ನು ಸರ್ಕಾರ ನಡೆಸಿದೆ. ಈ 800ಎಕರೆ ಜಮೀನನ್ನು ನೋಡುವ ಅವಕಾಶ ನನಗೆ ಒದಗಿ ಬಂತು. ಈ ವಿಮಾನ ನಿಲ್ದಾಣಕ್ಕಾಗಿ ಜಮೀನನ್ನು ಪರಭಾರೆ ಮಾಡಿಕೊಳ್ಳುತ್ತಿರುವುದನ್ನು ವಿರೋಧಿಸಿ ರೈತಚಳುವಳಿ,ಕೋರ್ಟುದಾವೆ ಮುಂತಾದವುಗಳನ್ನು ನಡೆಸುತ್ತಿರುವ ವಕೀಲ ಶ್ರೀ ಎಂ.ಮಲ್ಲಕಾರ್ಜುನರೆಡ್ಡಿ ಅವರನ್ನು ಭೇಟಿ ಮಾಡಿದ್ದೆ.

ಈ ಹೋರಾಟದಲ್ಲಿ ಅವರು ಅನೇಕ ಬಗೆಯ ಹಿಂಸೆಯನ್ನು ಅನುಭವಿಸಿದ್ದಾರೆ. ಅವರು ಅಚ್ಚ ಹಸಿರಾಗಿದ್ದ

[illegible]ವ ಗದ್ದೆಗಳನ್ನು, ಹತ್ತಿ ಬೆಳೆಯನ್ನು ಬೆಳೆದ ಹೊಲಗ[illegible]ನ್ನು, ಮೆಣಸಿನಕಾಯಿ [illegible]ೀಕು ಸಮೃದ್ಧವಾಗಿರುವ ಪ್ರದೇಶ[illegible]ನ್ನು ತೋರಿಸಿ ಇದು ಒಣ ಬೇಸಾಯದ ಪ್ರದೇಶವಾ[illegible] ಸಾರ್ ಎನ್ನುವ ಪ್ರಶ್ನೆಯನ್ನು ನನಗೆ ಕೇಳಿದರು. ಈ ವಿಮಾನ ನಿಲ್ದಾಣಕ್ಕೆ ವಶಪಡಿಸಿಕೊಳ್ಳಲು ಆಯ್ಕೆ ಮಾಡಿಕೊಂಡಿರುವ ಜಮೀನಿನಲ್ಲಿ ತುಂಗಭದ್ರಾ ಅಣೆಕಟ್ಟೆಯ ಅಧಿಕೃತ ಕಾಲುವೆ ಹರಿಯುತ್ತಿದೆ. ಈಗಲೂ ಯಾರು ಬಂದರೂ ಅದನ್ನು ನೋಡಬಹುದು. ಇದಲ್ಲದೆ ಜನರು ತಾವೇ ಹರಿದು ಹೋಗುವ ನೀರನ್ನು ತಡೆದು ನೀರಾವರಿ ಉಪಯೋಗ ಮಾಡಿಕೊಳ್ಳಲು ಅಲ್ಲಿ ಹರಿಯುವ ಹಳ್ಳವೊಂದಕ್ಕೆ ಚೆಕ್ ಡ್ಯಾಮ್‌ಕಟ್ಟಿ ನೀರನ್ನು ತಡೆದು ಸುಮಾರು 400-500 ಎಕರೆ ಜಮೀನಿಗೆ ನೀರುಣಿಸುವ ಕೆಲಸ ಮಾಡಿದ್ದಾರೆ. ವಿಮಾನ ನಿಲ್ದಾಣಕ್ಕೆ ಇಲ್ಲಿನ ಜಮೀನನ್ನು ವಶಪಡಿಸಿಕೊಂಡರೆ ಅವೆಲ್ಲವೂ ನಿರ್ನಾಮವಾಗಿಬಿಡುತ್ತವೆ. ಸರ್ಕಾರಿ ಕಾಲುವೆಯನ್ನು ಮುಚ್ಚಿಬಿಟ್ಟರೆ ಅಲ್ಲಿಂದ ಮುಂದಿನ ಜಮೀನುಗಳಿಗೆ ನೀರು ಹರಿಯುವುದಿಲ್ಲ.

ಅಂದರೆ ಜಮೀನು ಕಳೆದುಕೊಂಡವರದು ಒಂದು ರೀತಿಯ ಸಮಸ್ಯೆಯಾದರೆ ತಮ್ಮ ಜಮೀನಿಗೆ ಇನ್ನು ನೀರು ಹರಿಯುವುದಿಲ್ಲ ಎಂಬುದು ಉಳಿದ ರೈತರ ಇನ್ನೊಂದು ಸಮಸ್ಯೆ. ಈಗಾಗಲೆ ನಮ್ಮ ರಾಜ್ಯದ ಆಹಾರೋತ್ಪಾದನೆಯ ವಾರ್ಷಿಕ ಬೆಳವಣಿಗೆ ಪ್ರಮಾಣ ಕಳೆದ ಹತ್ತಾರು ವರ್ಷಗಳಿಂದ ತೀವ್ರ ಮಂದವಾಗಿದೆ ಮತ್ತು ಕೆಲವೊಂದು ಸಂದರ್ಭದಲ್ಲಿ ಕುಸಿಯುತ್ತಿದೆ. ವಿಮಾನ ನಿಲ್ದಾಣಗಳಿಗೆ, ಉದ್ದಿಮೆಗಳಿಗೆ, ರಸ್ತೆಗಳಿಗೆ, ಅಣೆಕಟ್ಟೆಗಳಿಗೆ, ನಗರಾಭಿವೃದ್ಧಿಗೆ ಕೃಷಿ ಜಮೀನನ್ನು ವಶಪಡಿಸಕೊಳ್ಳುತ್ತಾ ನಡೆದರೆ ನಮ್ಮ ಕೃಷಿಯು ನಿಸ್ತೇಜವಾಗುವುದು ಖಚಿತ. ಬಳ್ಳಾರಿ ಜಿಲ್ಲೆಯಲ್ಲಿ ಈಗಾಗಲೆ ತೋರಣಗಲ್ಲಿನಲ್ಲಿ ಒಂದು ಖಾಸಗಿ ವಿಮಾನ ನಿಲ್ದಾಣವಿದೆ. ಈ ಪ್ರದೇಶದಲ್ಲಿ ಒಣ ಭೂಮಿ, ಬೀಳುಭೂಮಿ ಸಾಕಷ್ಟಿದೆ.

ಅದನ್ನು ಬಿಟ್ಟು ಫಲವತ್ತಾದ, ಹಸಿರನ್ನು ಹೊದ್ದ, ನೀರಾವರಿ ಅನುಕೂಲ ಪಡೆದ, ರೈತರ ಜಮೀನನ್ನು ಯಾಕೆ ಕಬಳಿಸಲಾಗುತ್ತಿದೆ? ಇಲ್ಲಿ ಒಳ ಉದ್ದೇಶವೇನಾದರೂ ಇದೆಯೇ? ಇದೆಲ್ಲಕ್ಕಿಂತ ಈಗ ವಿಮಾನ ನಿಲ್ದಾಣಕ್ಕೆ ಜಮೀನನ್ನು ವಶಪಡಿಸಿಕೊಳ್ಳುತ್ತಿರುವ ಪ್ರದೇಶದಲ್ಲಿ ಇತಿಹಾಸಪೂರ್ವ ಜನವಸತಿಯ ತಾಣ ಪತ್ತೆಯಾಗಿರುವ ಸಂಗನಕಲ್ಲು ಅವಶೇಷಗಳ ಸ್ಥಳವಿದೆ. ಅದಕ್ಕೆ ವಿಮಾನ ನಿಲ್ದಾಣವು ಅಪಾಯಕಾರಿಯಾಗಿ ಪರಿಣಮಿಸುತ್ತಿದೆ. ಅಲ್ಲಿ ಪ್ರಾಗೈತಿಹಾಸಿಕ ವರ್ಣಚಿತ್ರಗಳು, ಕಲ್ಲಿನ ಆಯುಧಗಳು ಮುಂತಾದವು ದೊರೆತಿವೆ. ಇಷ್ಟೆಲ್ಲಾ ಅಪಾಯ, ಆತಂಕ, ವಿನಾಶವನ್ನು ಒಳಗೊಂಡ ಜಮೀನನ್ನು ಯಾಕೆ ವಶಪಡಿಸಿಕೊಳ್ಳಲಾಗುತ್ತಿದೆ? ಅಲ್ಲಿಯೇ ವಿಮಾನ ನಿಲ್ದಾಣವನ್ನು ಯಾಕೆ ನಿರ್ಮಿಸಬೇಕು? ಇದು ಪ್ರಚಲಿತ ಕರ್ನಾಟಕ ಎದುರಿಸುತ್ತಿರುವ ಒಂದು ಮಾನವ ನಿರ್ಮಿತ ಅಪಾಯ.

(8) ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆಯ ಸಮಸ್ಯೆಯ ಬಗೆಗಿನ ಚರ್ಚೆ ಮಾಡದೇ ಪ್ರಚಲಿತ ಕರ್ನಾಟಕ ಕುರಿತ ಅಧ್ಯಯನ ಮುಗಿಯುವುದಿಲ್ಲ. ಇದೊಂದು ಪ್ರಚಲಿತ ಮತ್ತು ಒಳಗೊಳಗೆ ಕುದಿಯುತ್ತಿರುವ ಅಗ್ನಿಕುಂಡ. ಆದರೆ ಸರ್ಕಾರಗಳು ಇದನ್ನು ಯಾವಾಗಲೂ ಗಂಭೀರವಾಗಿ ಪರಿಗಣಿಸಿದ್ದು ಇಲ್ಲವೇ ಇಲ್ಲ. ಈ ಸಮಸ್ಯೆಯನ್ನು ಅಧ್ಯಯನ ಮಾಡಿ ಪರಿಹಾರವನ್ನು ಶಿಫಾರಸ್ಸು ಮಾಡಲು ಡಾ.ಡಿ.ಎಂ. ನಂಜುಂಡಪ್ಪ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು 2000ದಲ್ಲಿ ಸರ್ಕಾರ ನೇಮಿಸಿತು.

ಅದು ತನ್ನ ಬೃಹತ್ ವರದಿಯನ್ನು 2002ರಲ್ಲಿ ಸರ್ಕಾರಕ್ಕೆ ಸಲ್ಲಿಸಿತು. ಅದರ ಶಿಫಾರಸ್ಸುಗಳ ಅನುಷ್ಠಾನಕ್ಕೆ ಸರ್ಕಾರ 2007-08ರಲ್ಲಿ ಕ್ರಮ ತೆಗೆದುಕೊಂಡಿತು. ಈ ಸಮಿತಿಯ ಶಿಫಾರಸ್ಸುಗಳ ಅನುಷ್ಠಾನದ ಮೇಲೆ ಉಸ್ತುವಾರಿ ನೋಡಿಕೊಳ್ಳಲು ಸರ್ಕಾರ 2008ರಲ್ಲಿ ಒಂದು ಸಮಿತಿಯನ್ನು ನೇಮಿಸಿತು. ಡಾ.ಡಿ.ಎಂ.ನಂಜುಂಡಪ್ಪ ಸಮಿತಿಯು ತನ್ನ ವರದಿಯಲ್ಲಿ ಹತ್ತಾರು ಶಿಫಾರಸ್ಸುಗಳನ್ನು ಮಾಡಿದೆ. ಆದರೆ ಸರ್ಕಾರ ಮತ್ತು ಅದರ ಅನುಷ್ಠಾನದ ಮೇಲೆ ನಿಗಾ ಇಡಲು ಸರ್ಕಾರವೇನು ಸಮಿತಿಯನ್ನು ನೇಮಿಸಿದೆ. ಅದು ಡಾ.ಡಿ.ಎಂ.ನಂಜುಂಡಪ್ಪ ಸಮಿತಿ ವರದಿಯ ಶಿಫಾರಸ್ಸುಗಳನ್ನು ಒಂದೇ ಒಂದಕ್ಕೆ ಸೀಮಿತಗೊಳಿಸಿರುವ ವಾಸ್ತವ ನಮ್ಮ ಮುಂದಿದೆ. ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆಯನ್ನು ಸರ್ಕಾರ – ಈ ಸಮಿತಿಯ ಶಿಫಾರಸ್ಸುಗಳ ಅನುಷ್ಠಾನ ಸಮಿತಿ ಎರಡೂ ಗಂಭೀರವಾಗಿ ಪರಿಗಣಿಸಿಲ್ಲ ಎಂಬುದಕ್ಕೆ ಕೆಳಗಿನ ಪ್ರಜಾವಾಣಿ ಪತ್ರಿಕೆಯಲ್ಲಿನ ವಾಚಕರವಾಣಿ ಅಂಕಣದಲ್ಲಿನ ನಾಗರಿಕರೊಬ್ಬರು ಬರೆದ ಪತ್ರವು(23.08.2010) ಸಾಕ್ಷಿಯಾಗಿದೆ.

ಒಮ್ಮೆ ಈ ರಸ್ತೆಗೆ ಬನ್ನಿ!

"ಸಾಧನ ಸಮಾವೇಶಗಳನ್ನು ಮಾಡಿ ಸರ್ಕಾರದ ಸಾಧನೆಯನ್ನು ಹೇಳಿಕೊಳ್ಳುವುದಲ್ಲದೆ ದೆಹಲಿ ನಾಯಕರನ್ನು ಕರೆತಂದು ಸರ್ಕಾರಿಂದ ಸಾಧನೆಯನ್ನು ಹೇಳಿಸುತ್ತಿರುವ ಮುಖ್ಯಮಂತ್ರಿಯವರೇ, ಸರ್ಕಾರದ ಬಗ್ಗೆ ಜನತೆ ಏನು ಹೇಳುತ್ತಾರೆ ಸ್ವಲ್ಪ ಕಿವಿಕೊಟ್ಟು ಕೇಳಿ.

ನಿಮ್ಮ ಜಿಲ್ಲೆಯವಳಾದ ನಾನು ನೌಕರಿ ನಿಮಿತ್ತ ರಾಯಚೂರು ಜಿಲ್ಲೆಯ ದೇವದುರ್ಗದಲ್ಲಿ ವಾಸವಿದ್ದು ಬ್ಯಾಂಕಿನ ಕೆಲಸಕ್ಕಾಗಿ ರಾಯಚೂರಿಗೆ ಪ್ರಯಾಣ ಮಾಡುತ್ತಿರುತ್ತೇನೆ. ದೇವದುರ್ಗ-ರಾಯಚೂರು ಮಾರ್ಗದ ಮುಖ್ಯ ರಸ್ತೆ ಯಾವ ಪರಿ ಹದಕೆಟ್ಟಿದೆಯೆಂದರೆ ಹಳ್ಳದಿಣ್ಣೆಗಳಿಂದ ಕೂಡಿದ ಕೆಸರು ಗದ್ದೆಯಂತಾಗಿದೆ. ಪ್ರಯಾಣಿಕರು ಮೇಲೆ ಕೆಳಗೆ ಎಗರಿ, ಒಬ್ಬರ ಮೇಲೆ ಒಬ್ಬರು ಬಿದ್ದು, ಪ್ರಯಾಣಿಸಬೇಕು. ಈ ಪ್ರಯಾಣದ ವೇಳೆ ಬಸ್ಸಿನಲ್ಲಿರುವ ಪ್ರಯಾಣಿಕರೆಲ್ಲರೂ ಸರ್ಕಾರದ ಗುಣಗಾನ ಮಾಡಿದರು. ಸಹಪ್ರಯಾಣಿಕರೊಬ್ಬರು ಸ್ಥಳೀಯ ಶಾಸಕರು, ಸಂಸದರು – ಸರ್ಕಾರವನ್ನು ಬಾಯಿಗೆ ಬಂದಂತೆ ವಾಮಾಗೋಚರ ಬೈಯುತ್ತಿದ್ದರು. ಚಾಲಕರ ಗೋಳಂತೂ ಕೇಳುವುದೇ ಬೇಡ. ಎದುರಿಗೆ ಬರುವ ವಾಹನಗಳಿಗೆ ಸೈಡ್ ಕೊಡಲು ಸ್ಥಳಾವಕಾಶವಿಲ್ಲ. ದಿನನಿತ್ಯ ಹೆಲಿಕಾಪ್ಟರ್‌ನಲ್ಲಿ ಓಡಾಡುವ ನೀವು ಒಮ್ಮೆ ದಿಢೀರನೆ ಈ ರಸ್ತೆಯಲ್ಲಿ ಬನ್ನಿ. ನಿಮ್ಮ ಅಭಿವೃದ್ಧಿ, ಸಾಧನೆ, ಏನೆಂಬುದು ನಿಮ್ಮ ಮುಖಕ್ಕೆ ರಾಚುತ್ತದೆ.

ಮಾನ್ಯ ಸಿಎಂ. ಅವರೇ ಚುನಾವಣಾ ಭಾಷಣ ಮಾಡಿ ತಾಲ್ಲೂಕಿನ ಅಭಿವೃದ್ಧಿಗೆ ನೂರು ಕೋಟಿ ಬಿಡುಗಡೆ ಮಾಡುತ್ತೇನೆ ಎನ್ನುತ್ತೀರಿ. ಆ ಕೋಟಿಗಳೆಲ್ಲ ಎಲ್ಲಿ ಹೋದವು?" ಗೀತಾ. ಕೆ.ಎಲ್. ಶಿವಮೊಗ್ಗ.

ಡಾ.ಡಿ.ಎಂ. ನಂಜುಂಡಪ್ಪ ಸಮಿತಿ ವರದಿಯ ಶಿಫಾರಸ್ಸಾದ ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಯನ್ನು

ಸಮಿತಿಯ ಅನುದಾನ ಹಂಚಿಕೆ ಸೂತ್ರದನ್ವಯ ಹಂಚಿದ್ದರೆ ರಾಜ್ಯದ ಅತ್ಯಂತ ಹಿಂದುಳಿದ ದೇವದುರ್ಗ ತಾಲ್ಲೂಕಿಗೆ 2007-08ರಲ್ಲಿ ರೂ 36.42ಕೋಟಿ, 2008-09ರಲ್ಲಿ ರೂ59.05ಕೋಟಿ ಮತ್ತು 2009-10ರಲ್ಲಿ ರೂ 59.68ಕೋಟಿ ಅನುದಾನ ದೊರೆಯ ಬೇಕಾಗಿತ್ತು. ಆದರೆ ಇದನ್ನು ಸರ್ಕಾರವಾಗಲಿ ಡಾ.ಡಿ.ಎಂ. ನಂಜುಂಡಪ್ಪ ಸಮಿತಿಯ ಶಿಫಾರಸ್ಸುಗಳ ಅನುಷ್ಠಾನ ಉಸ್ತುವಾರಿ ಸಮಿತಿಯಾಗಲಿ ಮಾಡಿಲ್ಲ. ಹೇಳಿಕೊಳ್ಳಲು ಮಾತ್ರ ಡಾ.ಡಿ. ಎಂ. ನಂಜುಂಡಪ್ಪ ಸಮಿತಿ ವರದಿ ಮತ್ತು ಅದರ ಅನುಷ್ಠಾನಕ್ಕಾಗಿ ಒಂದು ಸಮಿತಿ. ಆದರೆ ಸಮಿತಿಯು ಇಡೀ ರಾಜ್ಯದಲ್ಲಿ ಅಭಿವೃದ್ಧಿಯಲ್ಲಿ ಕಟ್ಟಕಡೆಯ 175ನೆಯ ಸ್ಥಾನದಲ್ಲಿರುವ ದೇವದುರ್ಗ ತಾಲ್ಲೂಕಿಗಾದರೂ ಅನುದಾನ ನೀಡುವ ಕ್ರಮ ತೆಗೆದುಕೊಳ್ಳಬಹುದಾಗಿತ್ತು. ಯಾರಿಗೂ ಅದರ ಬಗ್ಗೆ ಕಬರಿಲ್ಲದಂತಾಗಿದೆ.

ದಕ್ಷಿಣ ಕರ್ನಾಟಕದ ಜನರಿಗೆ ಸರ್ಕಾರವು ಇದ್ದ ಬದ್ದ ಹಣವನ್ನೆಲ್ಲ ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಿಗೆ ಹರಿಸುತ್ತಿದೆಯೆಂಬ ಭಾವನೆ ಬಂದಿದೆ. ಆದರೆ ವಾಸ್ತವವಾಗಿ ಹಣವನ್ನು ಹರಿಸುತ್ತಿರುವುದಾಗಿ ಹೇಳಿಕೊಳ್ಳಲಾಗುತ್ತಿದೆ ವಿನಾ ಅದನ್ನು ಅಲ್ಲಿಗೆ ನೀಡುತ್ತಿಲ್ಲ. ಮೇಲೆ ಕೆ.ಎಲ್. ಗೀತಾ ಬರೆದಪತ್ರವು ಇದಕ್ಕೆ ಸಾಕ್ಷಿಯಾಗಿದೆ. ಈ ವಿಷಯದ ಬಗ್ಗೆ ನಾನು ಈ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೇನೆ(ನೋಡಿ .ನವೆಂಬರ್, 2009). ಕಳೆದ ಮೂರು ವರ್ಷಗಳಲ್ಲಿ ಡಾ.ಡಿ.ಎಂ. ನಂಜುಂಡಪ್ಪ ಸಮಿತಿ ಶಿಫಾರಸ್ಸಾದ ಎಂಟು ವರ್ಷದ ವಿಶೇಷ ಅಭಿವೃದ್ಧಿ ಯೋಜನೆ ಬಾಬ್ತು ಸರ್ಕಾರ ರಾಯಚೂರು ಜಿಲ್ಲೆಗೆ ರೂ. 495 ಕೋಟಿ ಅನುದಾನ ನೀಡಬೇಕಾಗಿತ್ತು. ಅದರಲ್ಲಿ ದೇವದುರ್ಗ ತಾಲ್ಲೂಕಿನ ಪಾಲು ರೂ 155.14ಕೋಟಿ. ಇದು ಅದಕ್ಕೆ ಬಂದಿದ್ದರೆ ದೇವದುರ್ಗ-ರಾಯಚೂರು ನಡುವಿನ ರಸ್ತೆಯನ್ನುರಿಪೇರಿ ಮಾಡಬಹುದಿತ್ತು. ಈ ರಸ್ತೆಯ ಸ್ಥಿತಿಯು ಕಳೆದ ಹತ್ತಾರು ವರ್ಷಗಳಿಂದ ಹಾಳಾಗಿದೆ. ಜನರು ನೇರವಾಗಿ ದೇವದುರ್ಗದಿಂದ ರಾಯಚೂರಿಗೆ ಹೋಗುವುದಕ್ಕೆ ಪ್ರತಿಯಾಗಿ ಸುತ್ತೂ ಬಳಸಿ ಹೆಚ್ಚು ಹಣ ಕೊಟ್ಟು ಹೆಚ್ಚುಸಮಯ ನೀಡಿ ಪ್ರಯಾಣ ಮಾಡುತ್ತಿದ್ದಾರೆ.

ಯಾಕೆ ಹೀಗೆ? ದೇವದುರ್ಗ-ರಾಯಚೂರು ನಡುವಿನ ರಸ್ತೆಯ ದುರವಸ್ಥೆ ಕುರಿತು ಶಿವಮೊಗ್ಗದಿಂದ ರಾಯಚೂರಿಗೆ ಬಂದ ಹೆಣ್ಣು ಮಗಳೊಬ್ಬಳು ಪತ್ರಿಕೆಯಲ್ಲಿ ಬರೆಯಬೇಕಾಯಿತು. ಆ ಜಿಲ್ಲೆಯ ಜನರಿಗೆ ಇಂತಹ ವಿಷಯವನ್ನು ರಾಜಕೀಕರಣ ಮಾಡುವುದು ತಿಳಿದಿಲ್ಲ. ರಾಜಕೀಕರ

ವಿಮಾನ ನಿಲ್ದಾಣಗಳಿಗೆ, ಉದ್ದಿಮೆಗಳಿಗೆ, ರಸ್ತೆಗಳಿಗೆ, ಅಣೆಕಟ್ಟೆಗಳಿಗೆ, ನಗರಾಭಿವೃದ್ಧಿಗೆ ಕೃಷಿ ಜಮೀನನ್ನು ವಶಪಡಿಸಕೊಳ್ಳುತ್ತಾ ನಡೆದರೆ ನಮ್ಮ ಕೃಷಿಯು ನಿಸ್ತೇಜವಾಗುವುದು ಖಚಿತ. ಬಳ್ಳಾರಿ ಜಿಲ್ಲೆಯಲ್ಲಿ ಈಗಾಗಲೆ ತೋರಣಗಲ್ಲಿನಲ್ಲಿ ಒಂದು ಖಾಸಗಿ ವಿಮಾನ ನಿಲ್ದಾಣವಿದೆ. ಈ ಪ್ರದೇಶದಲ್ಲಿ ಒಣ ಭೂಮಿ, ಬೀಳು ಭೂಮಿ ಸಾಕಷ್ಟಿದೆ. ಅದನ್ನು ಬಿಟ್ಟು ಫಲವತ್ತಾದ, ಹಸಿರನ್ನು ಹೊದ್ದ, ನೀರಾವರಿ ಅನುಕೂಲ ಪಡೆದ, ರೈತರ ಜಮೀನನ್ನು ಯಾಕೆ ಕಬಳಿಸಲಾಗುತ್ತಿದೆ?

ಣವೆನ್ನುವುದನ್ನು ಇಲ್ಲಿ ವಿಸ್ತೃತವಾದ ಅರ್ಥದಲ್ಲಿ ಬಳಸಲಾಗಿದೆ. ರಾಜಕೀಕರಣವೆಂದರೆ ಜನರು ತಮ್ಮ ಅಧಿಕಾರವನ್ನು ಒತ್ತಾಯಿಸುವುದು, ಅದಕ್ಕಾಗಿ ಸಂಧಾನ ನಡೆಸುವುದು, ಅಭಿವೃದ್ಧಿಯಲ್ಲಿ ಪಾಲು ಕೇಳುವುದು, ಹಂಗಿಗೆ ಪ್ರತಿಯಾಗಿ ಹಕ್ಕುಗಳ ಪರಿಭಾಷೆಯಲ್ಲಿ ಮಾತನಾಡುವುದು. ಜಿಲ್ಲೆಯಲ್ಲಿನ ಸಾಕ್ಷರತೆಯ ಪ್ರಮಾಣ ಶೇ50ಕ್ಕಿಂತ ಕಡಿಮೆಯಿರುವುದರಿಂದ ತಮ್ಮ ಹಕ್ಕುಗಳೇನು, ಅವುಗಳನ್ನು ಹೇಗೆ ಒತ್ತಾಯಿಸುವುದು, ಅಧಿಕಾರದ ಜೊತೆಯಲ್ಲಿ ಅನುಸಂಧಾನ ನಡೆಸುವುದು ಹೇಗೆ ಎಂಬುದರ ತಿಳುವಳಿಕೆ ಜನರಿಗಿಲ್ಲ.

ಪ್ರಾದೇಶಿಕ ಅಸಮಾನತೆಯ ಮೂಲದಲ್ಲಿ ಇಂತಹ ರಾಜನೀತಿಕವಾದ ಸಂಗತಿಗಳಿವೆ. ಅದು ಕೇವಲ ಸಂವಿಧಾನದ ರಕ್ಷಣೆಯನ್ನು ಕೇಳುವುದಕ್ಕೆ ಸಂಬಂಧಿಸಿದುದಲ್ಲ. ಸಿಇಟಿಯಲ್ಲಿ ಮೀಸಲಾತಿಯನ್ನು ಒತ್ತಾಯಿಸುವುದಲ್ಲ. ಪ್ರಾದೇಶಿಕ ಅಸಮಾನತೆಯ ಪ್ರಶ್ನೆಯ ಮೂಲದಲ್ಲಿ ಪರಿಶಿಷ್ಟರ ಸಮಸ್ಯೆಗಳು ಅಡಗಿವೆ. ದುಡಿಯುವ ಮಹಿಳೆಯರ ದಂದುಗಗಳು ಇವೆ. ಇವು ಅಭಿವೃದ್ಧಿಯಲ್ಲಿ ಮುಖ್ಯವಾಗಬೇಕು. ಯಾವುದನ್ನು ಕೆಳವರ್ಗದ, ಕೆಳಜಾತಿಗಳ ರಾಜಕೀಕರಣವೆಂದು ಕರೆಯಲಾಗುತ್ತಿದೆಯೋ ಅದನ್ನು ಬಲಪಡಿಸುವ ಅಗತ್ಯವಿದೆ. ಅಲ್ಲದಿದ್ದರೆ ಪ್ರಾದೇಶಿಕ ಅಸಮಾನತೆಯ ಪ್ರಶ್ನೆಯು ಉಳ್ಳವರ ಖಯಾಲಿಯ ಬೇಡಿಕೆಯಾಗಿ ಬಿಡುತ್ತದೆ. ಜನರ ಪ್ರಶ್ನೆಯಾಗುವುದಿಲ್ಲ.

ಡಾ.ಡಿ.ಎಂ. ನಂಜುಂಡಪ್ಪ ಸಮಿತಿಯು ನೀಡಿದ ಒಂದು ಮುಖ್ಯವಾದ ಶಿಫಾರಸ್ಸೆಂದರೆ ಸರ್ಕಾರವು ತನ್ನ ಪ್ರಾದೇಶಿಕ ಅಭಿವೃದ್ಧಿ ನೀತಿಯನ್ನು ಪ್ರಕಟಿಸಬೇಕು ಎಂಬುದಾಗಿದೆ. ಆದರೆ ಇದುವರೆವಿಗೂ ಸರ್ಕಾರ ಅದರ ಬಗ್ಗೆ ಚಕಾರವೆತ್ತುತ್ತಿಲ್ಲ. ಇಂತಹ ನೀತಿಯಿದ್ದರೆ ಪ್ರಾದೇಶಿಕ ಸಮಾನತೆಯ ಉದ್ದೇಶಕ್ಕೆ ಒತ್ತಾಸೆ ದೊರೆಯುತ್ತದೆ. ಇದಕ್ಕೆ ಬಂಡವಾಳ ಬೇಕಾಗಿಲ್ಲ. ಆದರೆ ಸರ್ಕಾರವು ಇಂತಹ ಘೋಷಣೆಗೆ ಸಿದ್ಧವಿಲ್ಲ. ಅದಕ್ಕೆ ನಾನು ಹೇಳಿದ್ದು– ಸರ್ಕಾರಗಳು ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆಯನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ.

ಕರ್ನಾಟಕವು ಇಂದು ವರಮಾನದ ದೃಷ್ಟಿಯಿಂದ ಅಭಿವೃದ್ಧಿ ಹೊಂದಿದ ರಾಜ್ಯವಾಗಿದೆ. ಅಲ್ಲಿ ಥಳಥಳನೆ ಹೊಳೆಯುವ ರಸ್ತೆಗಳಿವೆ. ಬೆಂಗಳೂರಿನಲ್ಲಿ ಹವಾ ನಿಯಂತ್ರಿತ ಬಸ್ಸುಗಳನ್ನು ಪ್ರಯಾಣಿಕರ ಸೇವೆಗೆ ಬಿಡಲಾಗಿದೆ. ಇನ್ನು ಮೇಲೆ ಆರ್ಡಿನರಿ ಬಸ್ಸುಗಳು ಇಲ್ಲವಾಗಿಬಿಡುತ್ತವೆ. ಇದು ಯಾರ ಹಿತಾಸಕ್ತಿಗಳನ್ನು ಕಾಯುವ ಉದ್ದೇಶದಿಂದ ಮಾಡಲಾಗುತ್ತಿದೆ? ಮೂವತ್ತು–ನಲವತ್ತು ರೂಪಾಯಿಕೊಟ್ಟು ಕೂಲಿಕಾರರು ಅಂತಹ ಬಸ್ಸುಗಳಲ್ಲಿ ಪ್ರಯಾಣಿಸಲು ಸಾಧ್ಯವೇ? ನಗರಸಾರಿಗೆಯಲ್ಲಿ ಜನರು ಎಷ್ಟು ಗಂಟೆಗಳ ಕಾಲ ಪ್ರಯಾಣಿಸುತ್ತಾರೆ? ಅತ್ಯಂತ ಕಡಿಮೆ ಸಮಯ ಪ್ರಯಾಣ ಮಾಡುವ ನಗರ ಸಾರಿಗೆಗೆ ಹವಾ ನಿಯಂತ್ರಿತ ಬೆಂಜ್‌ಬಸ್ಸುಗಳು ಯಾಕೆಬೇಕು? ನಮ್ಮ ಸರ್ಕಾರಗಳಿಗೆ ಕರ್ನಾಟಕವೆಂದರೆ ಬೆಂಗಳೂರು ಮಾತ್ರ ಎನ್ನುವಂತಾಗಿದೆ.- ಈ ಬಗೆಯ ಕಾರ್ಯಕ್ರಮಗಳಿಂದ ಜನರ ಬದುಕನ್ನು ಸಮೃದ್ಧಗೊಳಿಸುವುದು ಸಾಧ್ಯವಿಲ್ಲ. ಸರ್ಕಾರವು ತನ್ನ ನೀತಿಗಳನ್ನು ಪೂರ್ಣವಾಗಿ ಬದಲಾಯಿಸಿಕೊಳ್ಳಬೇಕು. ಅವು ಜನರಿಗೆ ಅಭಿಮುಖವಾಗಿರಬೇಕು. ಅಲ್ಲಿ ಕೂಲಿಕಾರರ, ಮಹಿಳೆಯರ, ಬಡವರ, ಪರಿಶಿಷ್ಟರ ಸಂಗತಿಗಳು ಮುಖ್ಯವಾಗಬೇಕು. ಅಂತಹ ಕರ್ನಾಟಕವನ್ನು ಕಟ್ಟುವ ದಿಶೆಯಲ್ಲಿ ನಾವು ಯೋಜಿಸಬೇಕಾಗಿದೆ. □

ಎಚ್ಚರಿಕೆ



ತರಗೆಲೆ ಎಂದು
ತಾತ್ಸಾರ ಮಾಡ ಬೇಡ
ತಾಕತ್ತಿದ್ದರೆ
ಬೆಂಕಿಯಲ್ಲಿ ಸುಟ್ಟುಬಿಡು

ಬೆಳಕಗಿ
ಶಾಖವಾಗಿ
ಮರುಜೀವ ಪಡೆಯುವೆ

ತರಗೆಲೆ ಎಂದು
ತಾತ್ಸಾರ ಮಾಡಬೇಡ
ತಾಕತ್ತಿದ್ದರೆ
ಭೂಮಿ ಒಳಗೆ ಹೂತುಬಿಡು

ಮಣ್ಣಲ್ಲಿ ಲೀನವಾಗಿ
ಸೀಮೆಗೊಬ್ಬರವಾಗಿ
ಗಿಡ ಮರ ಬಳ್ಳಿಗೆ
ಉಸಿರು ಚೈತನ್ಯವಾಗಿ
ಮರು ಜೀವ ಪಡೆಯುವೆ

ತರಗೆಲೆ ಎಂದು
ತಾತ್ಸಾರ ಮಾಡಬೇಡ
ನಿಮ್ಮ ಕಾಲ್ಗಳಡಿಯಲ್ಲಿ ಸಿಲುಕಿ
ನುಜ್ಜು–ಗುಜ್ಜಾದಾಗೆಲ್ಲ
ಥರ–ಪರ ಧಿಕ್ಕಾರಕೂಗುವೆ

ತರಗೆಲೆ ಎಂದು
ತಾತ್ಸಾರ ಮಾಡಬೇಡ
ಸುಂಟರಗಾಳಿಯೊಳಗೂಡಿ
ರುದ್ರನಾಟ್ಯ ವಾಡುತ್ತಾ ನಿಮ್ಮ
ಮೂತಿ ಮುಖಗಳಿಗೆ
ಅಪ್ಪಳಿಸುವೆ....

○ ಲಕ್ಷಣ್

ದಲಿತ ಸಾಧಕ ಸಾಧು ಥೋರಟ್

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಸತ್ಯಪ್ರಕಾಶ್ ಎಂ ಆರ್

ಪುಣೆ ಮೂಲದ ದಲಿತ ಉದ್ಯಮಿ ಸಾಧು ಥೋರಟ್ ಅವರ ಶ್ರೀಮಂತಿಕೆಯನ್ನು ನೀವು ನೋಡಬೇಕು. ಅವರ ಬಳಿಯಿರುವ ಆನೆ ಗಾತ್ರದ ಎರಡು ಕಾರುಗಳು, ಏಳನೆಯ ಮಹಡಿಯಲ್ಲಿರುವ ಅವರ ಅಪಾರ್ಟ್‌ಮೆಂಟ್‌ಗೆ ಕ್ಷಣಾರ್ಧದಲ್ಲಿ ಹೋಗಲು ಅಳವಡಿಸಿರುವ ಅತ್ಯಾಧುನಿಕ ಲಿಫ್ಟ್‌ಗಳು. ಎಲ್ಲವೂ ಅದ್ಭುತ. ಲಿಫ್ಟ್‌ನಲ್ಲಿ ಅವರ ಮನೆಯ ಬಾಗಿಲಿಗೆ ಬಂದಾಗ ನನಗೆ ಸ್ವಲ್ಪ ಆಶ್ಚರ್ಯವಾಯಿತು. ಯಾಕೆಂದರೆ ಅವರ ಮನೆಯ ಬಾಗಿಲ ಬಳಿ ಎರಡು ಸಂಖ್ಯೆಗಳಿದ್ದವು. "ಬಹುಶಃ ಥೋರಟ್ ಎರಡು ಫ್ಲ್ಯಾಟ್‌ಗಳನ್ನು ಖರೀದಿಸಿ ಒಗ್ಗೂಡಿಸಿದಂತೆ ಕಾಣುತ್ತದೆ" ಎಂದ ನನ್ನ ಜೊತೆಯಲ್ಲಿದ್ದ ಉದ್ಯಮಿ ಮಿಲಿಂದ್ ಕಾಂಬಳೆ ಕರೆಗಂಟೆಯನ್ನು ಒತ್ತಿದರು.

ಮೂಲತಃ ಸಿವಿಲ್ ಇಂಜಿನಿಯರ್ ಆದ ಕಾಂಬಳೆ ಸುಮಾರು 70 ಕೋಟಿ ಮೌಲ್ಯದ ಫರ್ಚೂನ್ ಕನ್‌ಸ್ಟ್ರಕ್ಷನ್ಸ್ ಸಂಸ್ಥೆಯ ಮಾಲೀಕರೂ ಹೌದು. ಹೀಗಾಗಿ ಎರಡು ಫ್ಲ್ಯಾಟ್‌ಗಳಿಗೆ ಒಂದೇ ಬಾಗಿಲಿರುವುದರ ಮರ್ಮ ಅವರಿಗೆ ಸುಲಭವಾಗಿ ಅರ್ಥವಾಯಿತು. ಸಾಮಾನ್ಯವಾಗಿ ಆರ್ಥಿಕವಾಗಿ ಸದೃಢರಾಗಿರುವವರು ಎರಡು ಫ್ಲ್ಯಾಟ್‌ಗಳನ್ನು ಖರೀದಿಸಿ, ಅವುಗಳನ್ನು ಒಗ್ಗೂಡಿಸಿ ಆರು ಬೆಡ್‌ರೂಂಗಳ ಮನೆಯನ್ನಾಗಿಸುವುದು ಚಾಲ್ತಿಯಲ್ಲಿದೆ. ಇಂತಹ ಮನೆಯ ಮುಖ್ಯ ಕೊಠಡಿ ಬಹುತೇಕ ಒಂದು ಮಿನಿ ಥಿಯೇಟರ್‌ನಷ್ಟು ವಿಶಾಲವಾಗಿರುತ್ತದೆ.

ಮನೆಯ ಒಳಗೆ ಪ್ರವೇಶಿಸುತ್ತಿದ್ದಂತೆ ಸಾಧು ಥೋರಟ್ ನಮ್ಮನ್ನು ಅತ್ಯಂತ ವಿನಯಪೂರ್ವಕವಾಗಿ ಬರಮಾಡಿಕೊಂಡರು. ಆತ್ಮವಿಶ್ವಾಸದ ಖನಿಯಂತಿದ್ದ ಅವರ ಪತ್ನಿ ನಮಗೆ ಟೀ ಮತ್ತು ತಿಂಡಿಯನ್ನು ನೀಡಿ ಸತ್ಕರಿಸಿದರು. ಥೋರಟ್ ಇತ್ತೀಚಿಗೆ ಪೂರ್ಣಗೊಳಿಸಿದ್ದ ಕಟ್ಟಡ ಕಾಮಗಾರಿಯ ಬಗ್ಗೆ ನಾನು ಪ್ರಸ್ತಾಪಿಸಿದೆ. "ಪುಣೆಯ ಎಲೈಟ್ ಪ್ರದೇಶದಲ್ಲಿ ಸುಮಾರು 3.5 ಎಕರೆ ಜಾಗದಲ್ಲಿ ನಿರ್ಮಿಸಲಾಗಿರುವ ಈ ಹೌಸಿಂಗ್ ಕಾಂಪ್ಲೆಕ್ಸ್ ಸುಮಾರು ಅರ್ಧ ಡಜನ್ ಏಳು ಅಂತಸ್ತಿನ ಟವರ್‌ಗಳನ್ನು ಹೊಂದಿದ್ದು ಸುಮಾರು 200 ಫ್ಲ್ಯಾಟ್‌ಗಳನ್ನು ಹೊಂದಿದೆ. ದಶಕದ ಹಿಂದೆ ಖರೀದಿಸಿದ ತಮ್ಮದೇ ಆದ ಈ ಜಾಗದಲ್ಲಿ ನಿರ್ಮಿಸಲಾಗಿರುವ ಕಟಡ್ಡದಲ್ಲಿ ಪ್ರತಿ ಫ್ಲ್ಯಾಟ್ ಸುಮಾರು 35 ಲಕ್ಷ ರೂ.ಗೆ ಮಾರಾಟವಾಗಿವೆ."

ನಿಮ್ಮ ಮುಂದಿನ ಯೋಜನೆ ಏನು ಎಂಬ ನನ್ನ ಪ್ರಶ್ನೆಗೆ "ಫೈವ್ ಸ್ಟಾರ್ ಹೋಟೆಲ್" ಎಂದು ಥೋರಟ್ ಥಟ್ಟನೆ ಉತ್ತರಿಸಿದರು. ಎರಡೂ ಬದಿಯಿಂದ ಕಟ್ಟಡದ ಮೇಲ್ಭಾಗಕ್ಕೆ ಹೋಗಿದ್ದ ಮೆಟ್ಟಿಲುಗಳನ್ನು ಗಮನಿಸಿದ ನಾನು ಮೇಲೆ ಹೋಗಿ ಮಾತನಾಡೋಣ ಎಂದಾಗ, ಥೋರಟ್ ನಮ್ಮಿಬ್ಬರನ್ನು ಮನೆಯ ಮೇಲೆ ಕರೆದುಕೊಂಡು ಹೋದರು. ಹೌಸಿಂಗ್ ಕಾಂಪ್ಲೆಕ್ಸ್‌ನ ಪಶ್ಚಿಮದ ಕಡೆ ತೋರಿಸುತ್ತಾ "ಹೋಟೆಲ್‌ಗಾಗಿ ನನ್ನ ಬಳಿ ಇರುವ ಜಾಗ ಇದು" ಎಂದರು. "ಈ ಜಾಗ ಸುಮಾರು ಎಂಟು ಎಕರೆಯಷ್ಟು ವ್ಯಾಪಿಸಿದೆ" ಎಂದು ವಿವರಿಸಿದರು.

ಇಂತಹ ದೊಡ್ಡ ಯೋಜನೆಗೆ ಬ್ಯಾಂಕ್‌ನಿಂದ ಸಾಲ ಪಡೆಯುವುದು ಎಷ್ಟು ಸುಲಭ ಅಥವಾ ಕಷ್ಟ? ಎಂದು ನಾನು ಕುತೂಹಲದಿಂದ ಪ್ರಶ್ನಿಸಿದಾಗ "ನನ್ನ ಬಳಿ ಸುಮಾರು 100 ಕೋಟಿ ಹಣವಿದೆ. ಉಳಿದ ಹಣ ಒದಗಿಸಲು ಬ್ಯಾಂಕ್‌ಗಳೇ ಸ್ವತಃ ನನ್ನ ಬಳಿಗೆ ಓಡಿ ಬರುತ್ತವೆ" ಎಂದು ಥೋರಟ್ ಉತ್ತರಿಸಿದರು.

ನಿಮಗೆ ಇಂಗ್ಲಿಷ್ ಅರ್ಥವಾಗುತ್ತದೆಯೇ ಎಂದು ನಾನು ಥೋರಟ್ ಸಾಹೇಬರಿಗೆ ಕೇಳಿದೆ. ಥೋರಟ್ ಅವರ ಸಂಬಂಧಿಕರಾದ ನಿವೃತ್ತ ಪೊಲೀಸ್ ಸೂಪರಿಂಟೆಂಡೆಂಟ್ ಕೆ.ಡಿ ಮಿಶ್ರ ಅವರು ಥೋರಟ್ ಅವರ ಶೈಕ್ಷಣಿಕ ಅರ್ಹತೆಯ ಬಗ್ಗೆ ನನಗೆ ಹೇಳಿದ್ದರಾದರೂ, ಈ ಕುರಿತು ನಾನೇ ನೇರವಾಗಿ ತಿಳಿದುಕೊಳ್ಳಲು ಈ ಪ್ರಶ್ನೆ ಕೇಳಿದೆ. "ಇಂಗ್ಲಿಷ್ ಭಾಷೆಯಲ್ಲಿ ನನ್ನ ಬ್ಯಾಂಕ್ ಅಕೌಂಟ್ ನಂಬರ್ ಗುರುತಿಸಲು ನನಗೆ ಗೊತ್ತಾಗುತ್ತದೆ, ಉಳಿದದ್ದನ್ನು ನನ್ನ ಮ್ಯಾನೇಜರ್‌ಗಳು ನೋಡಿಕೊಳ್ಳುತ್ತಾರೆ" ಎಂದು ಥೋರಟ್ ಉತ್ತರಿಸಿದರು.

ಥೋರಟ್ ಅವರು ಅನಕ್ಷರಸ್ಥರು ಎಂದು ನನಗೆ ಮತ್ತೆ ಮನವರಿಕೆಯಾಯಿತು. 1959ರಲ್ಲಿ ಮಹಾರಾಷ್ಟ್ರದ ಒಸ್ಮಾನಾಬಾದ್ ಜಿಲ್ಲೆಯಲ್ಲಿ ಜನಿಸಿದ ಥೋರಟ್ ಹಳ್ಳಿಯ ಫ್ಯೂಡಲ್ ವಾತಾವರಣ ತೊರೆದು ಪುಣೆ ನಗರಕ್ಕೆ ಚಿಕ್ಕಂದಿನಲ್ಲಿಯೇ ಬಂದವರು. ಕೃಷಿ ಕಾರ್ಮಿಕರ ಮಗನಾಗಿ ಹುಟ್ಟಿದ ಥೋರಟ್ ಪ್ರತಿದಿನ ಹಸಿವನ್ನು ನೀಗಿಸಿಕೊಳ್ಳಲು ಹೋರಾಡಬೇಕಿತ್ತು. ಹಸಿವಿಗಿಂತ, ಅವಮಾನ ಮತ್ತು ಜಾತಿನಿಂದನೆ ಥೋರಟ್ ಅವರಿಗೆ ಹತಾಷೆಯನ್ನುಂಟು ಮಾಡಿತ್ತು. ಹಳ್ಳಿಯ ಸ್ನೇಹಿತನೊಬ್ಬನ ನೆರವಿನಿಂದ ಪುಣೆಗೆ ಹೇಗೂ ಬಂದ ಅವರು, ರೈಲ್ವೆ ಪ್ಲ್ಯಾಟ್‌ಫಾರ್ಮ್‌ಗಳಲ್ಲಿ ಹಲವಾರು ರಾತ್ರಿಗಳನ್ನು ಕಳೆದಿದ್ದಾರೆ. ಆಗ ತಮ್ಮ ದಲಿತ ಸ್ನೇಹಿತನೊಬ್ಬನ ಮನೆಯಲ್ಲಿ ಬಟ್ಟೆ ಬರೆ ಇರಿಸಿದ್ದರು.

ಕಟ್ಟಡ ಕಾರ್ಮಿಕನಾಗಿ ವೃತ್ತಿ ಜೀವನ ಆರಂಭಿಸಿದ ಥೋರಟ್, ಬಹಳ ಬೇಗ ಬೃಹತ್ ಕಟ್ಟಡಗಳಲ್ಲಿ ಕೆಲಸ ಮಾಡಲು ಆರಂಭಿಸಿದರು. ಸ್ವಲ್ಪ ಹಣ ಗಳಿಸಿದ ಅವರು ಗಿರಣಿ ಕೇಂದ್ರವನ್ನು ಸ್ಥಾಪಿಸಿದರು. ನಂತರ ಅದನ್ನು ಮಾರಾಟಮಾಡಿ ಆ ಹಣದಿಂದ ಪ್ರತ್ಯೇಕ ಭೂಮಿಯನ್ನು ಖರೀದಿಸಿದರು. 1990ರ ನಂತರ ಭೂಮಿ ಖರೀದಿ ಮತ್ತು ಮಾರಾಟದ ಉದ್ಯಮ ಲಾಭದಾಯಕವಾಗಿತ್ತು. ಥೋರಟ್ ಅವರಿಗೆ ರಿಯಲ್ ಎಸ್ಟೇಟ್ ಉದ್ಯಮದ ಆರ್ಥಿಕ ಆಯಾಮ ಬಹಳ ಬೇಗ ಅರ್ಥವಾಗಿತ್ತು.

ಮಗನ ಬಗ್ಗೆ ವಿಚಾರಿಸಿದಾಗ "ಅವನು ಈಗ ಒಂದು ಸ್ವಂತ ಉದ್ಯಮ ನಡೆಸುತ್ತಿದ್ದಾನೆ. ಆತ ನಡೆಸುವ ಪ್ಲಾಸ್ಟಿಕ್ ವಸ್ತುಗಳನ್ನು ಉತ್ಪಾದಿಸುವ ಕಾರ್ಖಾನೆಯಲ್ಲಿ ನೂರಾರು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ." "ನನ್ನ ಮೊಮ್ಮಕ್ಕಳು ಅಮೆರಿಕಾದಲ್ಲಿ ವಿದ್ಯಾಭ್ಯಾಸ ಮಾಡಬೇಕು ಎಂಬುದು ನನ್ನ ಹಂಬಲ" ಎಂದು ಮೊಮ್ಮಕ್ಕಳ ಭವಿಷ್ಯದ ಬಗ್ಗೆ ಚಿಂತನೆ ಮಾಡಿದ್ದಾರೆ. ದಲಿತ ಅನಕ್ಷರಸ್ಥ ಪೋಷಕರ ಅನಕ್ಷರಸ್ಥ ಮಗನಾಗಿ ಹುಟ್ಟಿ ಹಸಿವು, ಅವಮಾನಗಳನ್ನು ಅನುಭವಿಸಿದ ವ್ಯಕ್ತಿ ಇಂದು ಬ್ರಾಹ್ಮಣರು, ಮರಾಠರಿಗೆ ಕೆಲಸ ಕೊಟ್ಟಿರುವುದು ನಿಜಕ್ಕೂ ಅದ್ಭುತವಾದ ಸಾಧನೆಯೇ ಸರಿ. ತಮ್ಮ ಜೀವಿತಾವಧಿಯಲ್ಲಿಯೇ ಸಾಧು ಥೋರಟ್ ದಂತಕಥೆ ಯಾಗಿದ್ದಾರೆ. ಸರ್ಕಾರ ಮತ್ತು ಸಮಾಜ ಸಾಧು ಥೋರಟ್ ಅವರಂತಹ ಸಾಧಕರಿಗೆ ಪದ್ಮ ಪ್ರಶಸ್ತಿಯನ್ನು ನೀಡಿ ಯಾಕೆ ಗೌರವಿಸುವುದಿಲ್ಲವೋ ಗೊತ್ತಿಲ್ಲ.

* * *

೧೯೫೯ರಲ್ಲಿ ಮಹಾರಾಷ್ಟ್ರದ ಒಸ್ಮಾನಾಬಾದ್ ಜಿಲ್ಲೆಯಲ್ಲಿ ಜನಿಸಿದ ಥೋರಟ್ ಹಳ್ಳಿಯ ಫ್ಯೂಡಲ್ ವಾತಾವರಣ ತೊರೆದು ಪುಣೆ ನಗರಕ್ಕೆ ಚಿಕ್ಕಂದಿನಲ್ಲಿಯೇ ಬಂದವರು. ಕೃಷಿ ಕಾರ್ಮಿಕರ ಮಗನಾಗಿ ಹುಟ್ಟಿದ ಥೋರಟ್ ಪ್ರತಿದಿನ ಹಸಿವನ್ನು ನೀಗಿಸಿಕೊಳ್ಳಲು ಹೋರಾಡಬೇಕಿತ್ತು. ಹಸಿವಿಗಿಂತ, ಅವಮಾನ ಮತ್ತು ಜಾತಿನಿಂದನೆ ಥೋರಟ್ ಅವರಿಗೆ ಹತಾಷೆಯನ್ನುಂಟು ಮಾಡಿತ್ತು. ಹಳ್ಳಿಯ ಸ್ನೇಹಿತನೊಬ್ಬನ ನೆರವಿನಿಂದ ಪುಣೆಗೆ ಹೇಗೂ ಬಂದ ಅವರು, ರೈಲ್ವೆ ಪ್ಲ್ಯಾಟ್‌ಫಾರ್ಮ್‌ಗಳಲ್ಲಿ ಹಲವಾರು ರಾತ್ರಿಗಳನ್ನು ಕಳೆದಿದ್ದಾರೆ. ಆಗ ತಮ್ಮ ದಲಿತ ಸ್ನೇಹಿತನೊಬ್ಬನ ಮನೆಯಲ್ಲಿ ಬಟ್ಟೆ ಬರೆ ಇರಿಸಿದ್ದರು ಥೋರಟ್. ಕಟ್ಟಡ ಕಾರ್ಮಿಕನಾಗಿ ವೃತ್ತಿ ಜೀವನ ಆರಂಭಿಸಿದ ಥೋರಟ್, ಬಹಳ ಬೇಗ ಬೃಹತ್ ಕಟ್ಟಡಗಳಲ್ಲಿ ಕೆಲಸ ಮಾಡಲು ಆರಂಭಿಸಿದರು. ಸ್ವಲ್ಪ ಹಣಗಳಿಸಿದ ಅವರು ಗಿರಣಿ ಕೇಂದ್ರವನ್ನು ಸ್ಥಾಪಿಸಿದರು.

ಕೃಷಿ ಕ್ಷೇತ್ರದ ಸುಧಾರಣೆ

ಒಂದು ವ್ಯವಸ್ಥಿತವಾದ ಆಲೋಚನೆ ಇಲ್ಲದೆ ಹೋದರೆ ನಮ್ಮ ಸಾರ್ವಜನಿಕ ಯೋಜನೆಗಳು ಬಾಲಿವುಡ್ ನಟ ಗೋವಿಂದ ವಿಚಿತ್ರವಾಗಿ ಬರ್ಮುಡಾ ಮೇಲೆ ಟೈ, ಕೋಟು ಮತ್ತು ಹ್ಯಾಟ್ ತೊಟ್ಟ ಹಾಗೆ ಅಸಂಬದ್ಧವಾಗಿರುತ್ತವೆ.

ಬಹುಶಃ ಗೋವಿಂದನ ವಸ್ತ್ರ ವಿನ್ಯಾಸಕಾರರೇ ಭಾರತದ ಆರ್ಥಿಕ ಸುಧಾರಣೆಯ ವಿನ್ಯಾಸಕಾರರಿರಬೇಕು! ಕೈಗಾರಿಕೆ ಮತ್ತು ಸೇವಾ ವಲಯದಲ್ಲಿ ಮಾತ್ರ ಸುಧಾರಣೆ ತಂದು ಕೃಷಿ ಕ್ಷೇತ್ರದಲ್ಲಿ ಸುಧಾರಣೆ ಕೈಗೊಳ್ಳದೇ ಹೋದರೆ ಇನ್ನೇನು ತಾನೆ ಹೇಳಲು ಸಾಧ್ಯ? ಕೃಷಿ ಕ್ಷೇತ್ರದಲ್ಲಿ ಸುಧಾರಣೆ ತರಲು ಸಾಧ್ಯವಾಗದಿದ್ದರೆ ಹೊಸ ಇಂಡಿಯಾ ಮತ್ತು ಭಾರತದ ನಡುವೆ ಆಂತರಿಕ ಯುದ್ಧ ನಡೆಯುವುದಂತೂ ಖಂಡಿತ ನಿಜ.

2008ರ ಸೆಪ್ಟೆಂಬರ್‌ನಲ್ಲಿ ಮಹಾರಾಷ್ಟ್ರದ ರಾಯ್‌ಗಡ್ ಜಿಲ್ಲೆಯ ಸುಮಾರು 22 ಗ್ರಾಮಗಳ ರೈತರು ಕೃಷಿ ಭೂಮಿಯನ್ನು ಮಾರಾಟ ಮಾಡುವುದಿಲ್ಲ ಎಂದು ತಮ್ಮ ಅಭಿಮತ ವ್ಯಕ್ತಪಡಿಸಿದರು. ಈಗಾಗಲೇ ವಿಶೇಷ ಆರ್ಥಿಕ ವಲಯದ ಹೆಸರಿನಲ್ಲಿ ಭೂಮಿಯನ್ನು ವಶಪಡಿಸಿಕೊಳ್ಳಲಾಗಿದ್ದು 4,000ಕೋಟಿ ರೂ. ಮೌಲ್ಯದ ಯೋಜನೆ ನೆನೆಗುದಿಗೆ ಬಿದ್ದಿದೆ. ಇದರಿಂದಾಗಿ ಸಾವಿರಾರು ಜಾತಿರಹಿತ ಉದ್ಯೋಗಾವಕಾಶಗಳಿಂದ ಜನರು ವಂಚಿತರಾದಂತಾಯಿತು. ಇದೇ ಕಾರಣಕ್ಕಾಗಿ ಸಿಂಗೂರ್‌ನಿಂದ ಟಾಟಾ ಸಂಸ್ಥೆ ಹೊರಬರಬೇಕಾಯಿತು.

ಅಲೀಗಢದಲ್ಲಿ ಇತ್ತೀಚೆಗೆ ನಡೆದ ನಾಟಕೀಯ ಬೆಳವಣಿಗೆ ಕೂಡ ಇದೇ ಟ್ರೆಂಡ್ ಸೂಚಿಸುತ್ತದೆ. ಅಭಿವೃದ್ಧಿಪರ ಯೋಜನೆಗಳಿಗಾಗಿ ಭೂಮಿಯನ್ನು ಮಾರಾಟ ಮಾಡಲು ರೈತರು ಹಿಂದೇಟು ಹಾಕುತ್ತಿರುವುದು ನಿಜಕ್ಕೂ ದುರಂತ. ಸೂಕ್ತ ಸ್ಥಳಾವಕಾಶಗಳಿಲ್ಲದೆ ಸಾವಿರಾರು ಕೋಟಿ ರೂ.ಗಳ ಯೋಜನೆಗಳನ್ನು ನಿಲ್ಲಿಸಲಾಗುತ್ತಿದೆ. ಹೊಸ ಉದ್ಯಮಗಳ ಸ್ಥಾಪನೆಗೆ ಭೂಮಿಯನ್ನು ಪಡೆದುಕೊಳ್ಳುವುದಂತೂ ಉದ್ಯಮಿಗಳ ಪಾಲಿಗೆ ಕರಾಳ ಕನಸಾಗಿ ಪರಿಣಮಿಸಿದೆ. ಇದರಿಂದಾಗಿ ನಿಜವಾದ ಅರ್ಥದಲ್ಲಿ ತೊಂದರೆಗೊಳಗಾಗುವುದು ಉದ್ಯಮಿಗಳಲ್ಲ, ಕೆಳವರ್ಗದವರು.

ದೇಶದ ಸರಿಸುಮಾರು 52% ಮಾನವ ಸಂಪನ್ಮೂಲ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರೂ, ಒಟ್ಟಾರೆ ರಾಷ್ಟ್ರೀಯ ಸಮಗ್ರ ಉತ್ಪನ್ನದಲ್ಲಿ 17% ಮಾತ್ರ ಕೃಷಿಯ ಕೊಡುಗೆ ಇದೆ. ರೈತರು ರಸಗೊಬ್ಬರ, ನೀರಾವರಿ, ಕೀಟನಾಶಕಗಳು ಮತ್ತು ಬಿತ್ತನೆ ಬೀಜಗಳು, ಹೀಗೆ ಎಲ್ಲದರಲ್ಲಿಯೂ ಸಬ್ಸಿಡಿ ಪಡೆಯುತ್ತಾರೆ. ಇದಷ್ಟೇ ಅಲ್ಲದೆ ತಮ್ಮ ಉತ್ಪನ್ನಗಳಿಗೆ ಬೆಂಬಲ ಬೆಲೆಯನ್ನೂ ಅಪೇಕ್ಷಿಸುತ್ತಾರೆ. ಉದಾಹರಣೆಗೆ ಒಂದು ಕ್ವಿಂಟಾಲ್ ಗೋಧಿಗೆ ಮಾರುಕಟ್ಟೆಯಲ್ಲಿ 1,000ರೂ. ಬೆಲೆಯಿದ್ದರೆ, ಸರ್ಕಾರ 1,200ರೂ.ಗೆ ಖರೀದಿಸುತ್ತದೆ. ಇದರಿಂದಾಗಿ ಮಾರುಕಟ್ಟೆಯಲ್ಲಿ ಕೃತಕವಾಗಿ ಆಹಾರ ಪದಾರ್ಥಗಳ ಬೆಲೆ ಹೆಚ್ಚಾಗುತ್ತದೆ. ಪ್ರತಿ ವರ್ಷ ಬಿಲಿಯನ್‌ಗಟ್ಟಲೆ ಹಣ ಸಬ್ಸಿಡಿಯ ಹೆಸರಿನಲ್ಲಿ ರೈತರ ಕೈ ಸೇರುತ್ತದೆ.

ಕೈಗಾರಿಕಾ ವಲಯ ಕೃಷಿ ವಲಯಕ್ಕೆ ಸಬ್ಸಿಡಿಯ ಹಣವನ್ನು ಪರೋಕ್ಷವಾಗಿ ಭರಿಸುತ್ತಿದ್ದರೂ, ಕೃಷಿಕರು ಕೈಗಾರಿಕೆಗಳಿಗಾಗಿ ಭೂಮಿಯನ್ನು ನೀಡಲು ನಿರಾಕರಿಸುತ್ತಿದ್ದಾರೆ. ಫ್ಯೂಡಲ್ ಧೋರಣೆಯಲ್ಲಿ ಮುಳುಗಿ ಹೋಗಿರುವ ರೈತರು ತಮ್ಮ ಭೂಮಿಯನ್ನು ಸಮರ್ಪಕವಾಗಿ ಬಳಸಿಕೊಳ್ಳುವುದಿಲ್ಲ. ಧಾನ್ಯಗಳ ಪ್ರತಿ ಹೆಕ್ಟೇರ್ ಇಳುವರಿಯಲ್ಲಿ ಭಾರತ ಜಾಗತಿಕ ಮಟ್ಟದಲ್ಲಿ 50ನೆಯ ಶ್ರೇಣಿಯಲ್ಲಿದೆ. ಅದೇ ರೀತಿ ಪ್ರತಿ ಹೆಕ್ಟೇರ್ ಗೋಧಿ ಇಳುವರಿಯಲ್ಲಿ ಭಾರತ 10ನೆಯ ಸ್ಥಾನದಲ್ಲಿದೆ. ಅಕ್ಕಿ ಇಳುವರಿಯಲ್ಲಿ 17ನೆಯ ಸ್ಥಾನದಲ್ಲಿದೆ. ಆದರೆ ಕೃಷಿ ಚಟುವಟಿಕೆಗಳಲ್ಲಿ ಅಷ್ಟೇನೂ ಹೆಸರು ಗಳಿಸದ ಇಂಗ್ಲೆಂಡ್‌ನಲ್ಲಿ ಒಂದು ಹೆಕ್ಟೇರ್‌ಗೆ 7.78 ಮೆಟ್ರಿಕ್ ಟನ್‌ಗಳಷ್ಟು ಗೋಧಿ ಬೆಳೆದರೆ, ಕೃಷಿ ಪ್ರಧಾನ ಭಾರತದಲ್ಲಿ ಒಂದು ಹೆಕ್ಟೇರ್‌ಗೆ 2.62 ಮೆಟ್ರಿಕ್ ಟನ್‌ಗಳಷ್ಟು ಗೋಧಿ ಬೆಳೆಯಲಾಗುತ್ತದೆ.

ಭಾರತೀಯ ರೈತರು ತಮ್ಮ ಕಾಯಕದಲ್ಲಿ ಪರಿಣತರಲ್ಲ ಎಂಬುದಂತೂ ಸ್ಪಷ್ಟ. ಇಂತಹ ಧೋರಣೆಗಳಿಂದಲೇ ಭಾರತದಲ್ಲಿ ಈ ಹೊತ್ತು ಆಹಾರದ ಸಮಸ್ಯೆ ತಲೆದೋರಿರುವುದು, ಮಧ್ಯಮ ವರ್ಗ ಕಷ್ಟ ಅನುಭವಿಸುತ್ತಿರುವುದು. ಭಾರತದಲ್ಲಿ ಭೂಮಿ – ಕಾರ್ಮಿಕರ ಸಂಬಂಧ ಸಮರ್ಪಕವಾಗಿಲ್ಲ. ಕಾರ್ಮಿಕರಿಗೆ ಕಡಿಮೆ ಕೂಲಿ ನೀಡಲಾಗುತ್ತಿದೆ. ಭಾರತದ ಬಡತನಕ್ಕೆ ಮೂಲಕಾರಣ ಇಲ್ಲಿನ ಕೃಷಿ ವ್ಯವಸ್ಥೆ ಎಂದರೆ ತಪ್ಪಾಗಲಾರದು.

ತಮ್ಮ ಭೂಮಿಯನ್ನು ಸಮರ್ಪಕವಾಗಿ ಬಳಸದ ರೈತರ ಭೂಮಿಯನ್ನು ಪಡೆದುಕೊಳ್ಳಲು ಭಾರತ ಸರ್ಕಾರಕ್ಕೆ ಯಾಕೆ ಸಾಧ್ಯವಾಗುತ್ತಿಲ್ಲ? ಸುಮಾರು ಎರಡು ಶತಮಾನಗಳ ಹಿಂದೆ ಇಂಗ್ಲೆಂಡ್‌ನಲ್ಲಿಯೂ ಬಹುತೇಕ ಪ್ರಸ್ತುತ ಭಾರತದಲ್ಲಿರುವಂತೆ ಗೋಧಿ ಇಳುವರಿಯಾಗುತ್ತಿತ್ತು. ಆದರೆ ಕೃಷಿ ಕ್ಷೇತ್ರ ಕೈಗಾರಿಕೆಯ ಸ್ವರೂಪ ಪಡೆದುಕೊಂಡ ನಂತರ, ಆಹಾರ ಕೊರತೆ ಅನುಭವಿಸುತ್ತಿದ್ದ ಇಂಗ್ಲೆಂಡ್‌ನಲ್ಲಿ ಆಹಾರ ಯಥೇಚ್ಛವಾಗಿ ದೊರಕಲಾರಂಭಿಸಿತು. ಇಂಗ್ಲೆಂಡ್‌ನಂತೆ ಭಾರತದಲ್ಲಿ ಕೂಡ ಅಧಿಕ ಇಳುವರಿಯನ್ನು ಪಡೆಯಲು ಸಾಧ್ಯವಿದೆ. ಆದರೆ ಇದಕ್ಕೆ ಕೃಷಿಕ್ಷೇತ್ರ ಕೈಗಾರಿಕಾ ಸ್ವರೂಪ ಪಡೆದುಕೊಳ್ಳಬೇಕಾಗುತ್ತದೆ.

ತಾವು ಕೃಷಿಕರಲ್ಲ ಎಂಬ ಕಾರಣದಿಂದ ಅಮಿತಾಬ್‌ಬಚ್ಚನ್ ಮಹಾರಾಷ್ಟ್ರದಲ್ಲಿ ಖರೀದಿಸಿದ್ದ ಕೃಷಿ ಭೂಮಿಯನ್ನು ಹಿಂದಿರುಗಿಸಬೇಕಾಯಿತು. ಅಂದರೆ ಉದ್ಯಮಿಗಳು ಔದ್ಯಮಿಕವಾಗಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಸಾಧ್ಯವಿಲ್ಲ. ಯಾಕೆಂದರೆ ಇವರ್ಯಾರು ಕೃಷಿಕರಲ್ಲವಲ್ಲ.

ಭಾರತ ಕೃಷಿಯನ್ನು ಔದ್ಯಮಿಕವಾಗಿ ಕೈಗೊಂಡರೆ ಜಗತ್ತಿನ ಮೂರನೆಯ ಒಂದು ಭಾಗಕ್ಕೆ ಆಹಾರ ಒದಗಿಸಬಹುದು. ಆದರೆ ಭಾರತದಲ್ಲಿ ಓದು ಬರಹ ತಿಳಿಯದ, ಬಂಡವಾಳವಿಲ್ಲದ, ತಂತ್ರಜ್ಞಾನದ ಗಂಧ ಗಾಳಿಯಿಲ್ಲದ, ಲಾಭ ನಷ್ಟಗಳನ್ನು ಅಳತೆ ಮಾಡಲು ಗೊತ್ತಿಲ್ಲದ ಕೆಲವೇ ಮಂದಿ ಮಾತ್ರ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಅರ್ಹರಾಗಿದ್ದಾರೆ.

ಇಂತಹ ರೈತರು ಭಿಕ್ಷುಕರಿಗಿಂತ ಕಡೆಯಾಗಿ ಎಲ್ಲದಕ್ಕೂ ಸಬ್ಸಿಡಿ ಕೇಳುತ್ತಾರೆ. ಸರ್ಕಾರ ದಲಿತರು ಮತ್ತು ಬುಡಕಟ್ಟು ಜನಾಂಗಗಳಿಗಾಗಿ ಖರ್ಚು ಮಾಡುವುದಕ್ಕಿಂತ ಹೆಚ್ಚಾಗಿ ಭೂಮಾಲೀಕ ಜಾತಿಗಳಿಗಾಗಿ ಹೆಚ್ಚು ಖರ್ಚು ಮಾಡುತ್ತದೆ.

ಭಾರತ ಕೃಷಿಯನ್ನು ಔದ್ಯಮಿಕವಾಗಿ ಕೈಗೊಂಡರೆ ಜಗತ್ತಿನ ಮೂರನೆಯ ಒಂದು ಭಾಗಕ್ಕೆ ಆಹಾರ ಒದಗಿಸಬಹುದು. ಆದರೆ ಭಾರತದಲ್ಲಿ ಓದು ಬರಹ ತಿಳಿಯದ, ಬಂಡವಾಳವಿಲ್ಲದ, ತಂತ್ರಜ್ಞಾನದ ಗಂಧ ಗಾಳಿಯಿಲ್ಲದ, ಲಾಭ ನಷ್ಟಗಳನ್ನು ಅಳತೆ ಮಾಡಲು ಗೊತ್ತಿಲ್ಲದ ಕೆಲವೇ ಮಂದಿ ಮಾತ್ರ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಅರ್ಹರಾಗಿದ್ದಾರೆ. ಇಂತಹ ರೈತರು ಭಿಕ್ಷುಕರಿಗಿಂತ ಕಡೆಯಾಗಿ ಎಲ್ಲ ದಕ್ಕೂ ಸಬ್ಸಿಡಿ ಕೇಳುತ್ತಾರೆ. ಸರ್ಕಾರ ದಲಿತರು ಮತ್ತು ಬುಡಕಟ್ಟು ಜನಾಂಗಗಳಿಗಾಗಿ ಖರ್ಚು ಮಾಡುವುದಕ್ಕಿಂತ ಹೆಚ್ಚಾಗಿ ಭೂಮಾಲೀಕ ಜಾತಿಗಳಿಗಾಗಿ ಹೆಚ್ಚು ಖರ್ಚು ಮಾಡುತ್ತದೆ.

ದೇಶದ ಪ್ರಗತಿಯ ದಾರಿ ಇದೇನಾ? ಯುರೋಪ್ ಮತ್ತು ಅಮೆರಿಕಾ ಇದೇ ದಾರಿಯಲ್ಲಿ ಸಾಗಿ ಪ್ರಗತಿ ಸಾಧಿಸಿತೇ? ಕೃಷಿ ಕ್ಷೇತ್ರವನ್ನು ಸುಧಾರಣೆ ಮಾಡದೆ ಭಾರತ ಆಧುನಿಕ ಮತ್ತು ಸಮೃದ್ಧ ರಾಷ್ಟ್ರವಾಗಿ ಹೊರಹೊಮ್ಮಲು ಸಾಧ್ಯವಿದೆಯೇ? ಕೃಷಿ ಕ್ಷೇತ್ರದ ಸುಧಾರಣೆಯಾಗದೆ ಆರ್ಥಿಕ ಸುಧಾರಣೆ ಯಶಸ್ವಿಯಾಗಲು ಸಾಧ್ಯವಿದೆಯೇ? ನಮಗೆ ಕೃಷಿಯಾಧಾರಿತ ಭಾರತ ಬೇಕೆ ಅಥವಾ ಕೈಗಾರಿಕೆಗಳನ್ನು ಆಧರಿಸಿದ ಆಧುನಿಕ ಭಾರತ ಬೇಕೆ?

ಕೃಷಿಯಾಧಾರಿತ ಸಮಾಜ ಮತ್ತು ಕೃಷಿಕರ ಜವಾಬ್ದಾರಿಯ ಭಾರದಿಂದ ಭಾರತ ಮುಕ್ತವಾಗಬೇಕಾದರೆ ಕೃಷಿ ಕ್ಷೇತ್ರ ಸಮಗ್ರವಾಗಿ ಕೈಗಾರಿಕಾ ಸ್ವರೂಪ ಪಡೆದುಕೊಳ್ಳಬೇಕು. ಇದಕ್ಕೆ ಪೂರಕವಾಗಿ ಭೂ ಸ್ವಾಧೀನಕ್ಕೆ ಸಂಬಂಧಿಸಿದ ಕಾಯ್ದೆಗಳಲ್ಲಿ ಮಹತ್ವದ ಬದಲಾವಣೆಗಳಾಗಬೇಕು.

ಹಳ್ಳಿಯಲ್ಲಿಯೇ ಹುಟ್ಟಿ ಬೆಳೆದ ನನಗೆ ರೈತರು ಬಾಹ್ಯ ಪ್ರಪಂಚವನ್ನು ಯಾವ ದೃಷ್ಟಿಕೋನದಿಂದ ನೋಡುತ್ತಾರೆಂದು ತಿಳಿದಿದೆ. ಅತಿಯಾಸೆಯೇ ಇಲ್ಲಿನ ಜನರ ಅಸ್ತಿತ್ವದ ಹೆಗ್ಗುರುತು. ಒಂದು ಹೆಕ್ಟೇರಿಗೆ ಅವರು ಎಷ್ಟು ಹಣ ಕೇಳುತ್ತಾರೋ ಅಷ್ಟು ಹಣ ಕೊಡಿ. ಅವರಿಗೆ, ಅವರ ಮಕ್ಕಳಿಗೆ, ಕುಟುಂಬವರ್ಗದವರಿಗೆ ಮುಂದಿನ ಕೆಲವು ಪೀಳಿಗೆಯವರಿಗೆ ಪಿಂಚಣಿಯನ್ನೂ ಕೊಡಿ.

ಅವರ ಪಿಂಚಣಿ ಹಣವನ್ನು ಬೆಲೆ ಸೂಚ್ಯಾಂಕಕ್ಕೆ ಹೊಂದಾಣಿಕೆ ಮಾಡಿ. ಹೀಗೆ ಬಳಸಲಾಗದೆ ಉಳಿಸಿಕೊಂಡಿರುವ ಕೃಷಿ ಭೂಮಿಗೆ ಹಣದ ಮೂಲಕ ಮುಕ್ತಿ ಒದಗಿಸಬಹುದು. ಸೋಮಾರಿ ರೈತರಿಗೆ ಹಣ ನೀಡುವು

ದರಿಂದ ದೇಶಕ್ಕೇನೂ ನಷ್ಟವಾಗುವುದಿಲ್ಲ. ಯಾಕೆಂದರೆ ಈ ಹಣ ಮತ್ತೆ ಮಾರುಕಟ್ಟೆಗೆ ಹರಿದು ಬರಲಿದೆ.

ಈ ಸಮಸ್ಯೆಗೆ ಆದಷ್ಟು ಬೇಗ ನಾವು ಪರಿಹಾರ ಹುಡುಕಿಕೊಳ್ಳದಿದ್ದರೆ ರೈತರು ಹಿಂಸಾಚಾರದಲ್ಲಿ ತೊಡಗುತ್ತಾರೆ. ಹಿಂಸಾಚಾರ ಕೂಡ ರೈತರ ಅಸ್ತಿತ್ವದ ಅವಿಭಾಜ್ಯ ಅಂಗ. ಭಾರತದ ಕೈಗಾರಿಕೀಕರಣ ಮತ್ತು ನಗರೀಕರಣ ಪ್ರಕ್ರಿಯೆಗೆ ಅಂಟಿರುವ ಒಂದು ದೊಡ್ಡ ಶಾಪ ಕೃಷಿ ವಲಯ.

* * * * * * * *

ಜಗತ್ತಿನ ಇತರ ರಾಷ್ಟ್ರಗಳ ಸ್ಪರ್ಧೆಯನ್ನು ಎದುರಿಸಿ ಸಮೃದ್ಧಿ ಸಾಧಿಸಬೇಕಾದರೆ ಭಾರತದಲ್ಲಿ ಸಮಗ್ರ ಅಭಿವೃದ್ಧಿ ಕಾರ್ಯಗಳು ನಡೆಯಬೇಕು. ಆರ್ಥಿಕ ಸುಧಾರಣೆ ಮತ್ತು ಉದಾರೀಕರಣ ನೀತಿಗಳ ಜೊತೆಗೆ ಉದಾರವಾದ ಸಾಮಾಜಿಕ ವ್ಯವಸ್ಥೆ ಕೂಡ ಅಸ್ತಿತ್ವಕ್ಕೆ ಬರಬೇಕಿದೆ. ನಾವು ಒಂದು ಕಾಲಿನಲ್ಲಿ ಷೂ ಧರಿಸಿ ಇನ್ನೊಂದು ಕಾಲಿನಲ್ಲಿ ಬಾತ್‌ರೂಂ ಚಪ್ಪಲಿ ಧರಿಸಲು ಸಾಧ್ಯವಿದೆಯೇ?

ಉದಾರವಾದ ಸಾಮಾಜಿಕ ವ್ಯವಸ್ಥೆ ಅಸ್ತಿತ್ವಕ್ಕೆ ಬರಬೇಕಾದರೆ ಮೊದಲಿಗೆ ಜಾತಿ ವ್ಯವಸ್ಥೆ ನಿರ್ನಾಮವಾಗಬೇಕು. ಸಾರ್ವಜನಿಕ ವಲಯದಲ್ಲಿ ಜಾತಿಗೆ ಪ್ರಾಮುಖ್ಯತೆ ನೀಡುವುದನ್ನು ನಿಲ್ಲಿಸಬೇಕು. ಆದರೆ ಭಾರತದಲ್ಲಿ ಕೃಷಿ ಆಧಾರಿತ ಸಮಾಜ ಅಸ್ತಿತ್ವದಲ್ಲಿರುವವರೆಗೂ ಜಾತಿ ವ್ಯವಸ್ಥೆಯನ್ನು ಕೊನೆಗಾಣಿಸಲು ಸಾಧ್ಯವಿಲ್ಲ. ಉದಾರವಾದ ಸಾಮಾಜಿಕ ವ್ಯವಸ್ಥೆ ಜಾರಿಗೆತರುವ ನಿಟ್ಟಿನಲ್ಲಿ ಎಲ್ಲ ರಾಷ್ಟ್ರಗಳೂ ಕೃಷಿ ಪ್ರಧಾನ ಸಾಮಾಜಿಕ ವ್ಯವಸ್ಥೆಯನ್ನು ತೊರೆದಿವೆ. ಹಸಿವಿನಿಂದ ಮುಕ್ತವಾದ ಎಲ್ಲ ರಾಷ್ಟ್ರಗಳೂ ಕೂಡ ಕೃಷಿ ವ್ಯವಸ್ಥೆಯಿಂದ ಮುಕ್ತವಾಗಿವೆ. ಪ್ರಗತಿಯ ಪಥದಲ್ಲಿ ಸಾಗಿರುವ ಎಲ್ಲ ದೇಶಗಳೂ ಕೂಡ ಕೃಷಿ ವ್ಯವಸ್ಥೆಯ ಕಬಂಧ ಬಾಹುಗಳಿಂದ ಮುಕ್ತಿ ಪಡೆದಿವೆ.

ಸುಮಾರು 4.99 ಡಾಲರ್ ಜಿಡಿಪಿ ಹೊಂದಿರುವ ಚೀನಾ, ಈಗ ಜಪಾನ್ ದೇಶವನ್ನು ಹಿಂದಿಕ್ಕಿ ವಿಶ್ವದ ಎರಡನೆಯ ಅತಿದೊಡ್ಡ ಆರ್ಥಿಕ ವ್ಯವಸ್ಥೆಯಾಗಿ ಹೊರಹೊಮ್ಮಿದೆ. ಚೀನಾ 'ಭಾರತವನ್ನು ಸಂಪೂರ್ಣವಾಗಿ ನುಂಗಿ ಹಾಕಲಿದೆ' ಎಂದು ಕೆಲವು ಭಾರತೀಯ ಆರ್ಥಿಕ ತಜ್ಞರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಕೇವಲ ಎರಡು ದಶಕಗಳ ಹಿಂದೆ ಮುಂಚೂಣಿಯಲ್ಲಿದ್ದ ಭಾರತಕ್ಕೆ ಸೆಡ್ಡು ಹೊಡೆದು ಈ ಮಟ್ಟದ ಆರ್ಥಿಕ ಪ್ರಗತಿ ಸಾಧಿಸಲು ಚೀನಾಗೆ ಹೇಗೆ ಸಾಧ್ಯವಾಯಿತು?

1980ರಲ್ಲಿ ಚೀನಾದ 75% ಮಂದಿ ಕೃಷಿ ವಲಯದಲ್ಲಿ ತೊಡಗಿಸಿಕೊಂಡಿದ್ದರು. ಭಾರತದಲ್ಲಿ ಕೂಡ ಕೃಷಿಕರ ಪ್ರಮಾಣ ಸರಿ ಸುಮಾರು ಇಷ್ಟೇ ಇತ್ತು. ಇವತ್ತಿನ ಪಶ್ಚಿಮ ಬಂಗಾಳ ರಾಜ್ಯದಂತೆ ಕೃಷಿ ಪ್ರಧಾನ ರಾಷ್ಟ್ರವಾಗಿದ್ದಾಗ ಚೀನಾದಲ್ಲಿ ವಿಶ್ವದಲ್ಲಿಯೇ ಅತಿ ಹೆಚ್ಚಿನ ಬಡವರು ವಾಸಿಸುತ್ತಿದ್ದರು. ಆದರೆ ಈಗ ಚೀನಾದಲ್ಲಿ ಕೇವಲ 2.8% ಜನ ಮಾತ್ರ ಬಡತನ ರೇಖೆಗಿಂತ ಕೆಳಗಿದ್ದಾರೆ. ಆದರೆ ಸರ್ಕಾರಿ ಅಂಕಿ ಅಂಶಗಳ ಪ್ರಕಾರ ಭಾರತದಲ್ಲಿ ಈಗಲೂ 49% ಮಂದಿ ಬಡತನ ರೇಖೆಗಿಂತ ಕೆಳಗಿದ್ದಾರೆ. ಚೀನಾದ ಯಶಸ್ಸಿಗೆ ಹಲವಾರು ಕಾರಣಗಳಿರಬಹುದು. ಆದರೆ ಕೆಲವು ಅಂಕಿ ಅಂಶಗಳನ್ನು ನಾವು ಗಮನಿಸದಿರಲು ಸಾಧ್ಯವಿಲ್ಲ.

1980ರಲ್ಲಿ ಚೀನಾದ 75%ರಷ್ಟು ಮಂದಿ ಕೃಷಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದರೆ, ಈಗ ಕೇವಲ 39.5% ಮಾತ್ರ ಕೃಷಿಯನ್ನು ಅವಲಂಬಿಸಿದ್ದಾರೆ. ಆದರೆ ಭಾರತದಲ್ಲಿ ಈಗಲೂ ಕೂಡ 52% ಮಂದಿ ಕೃಷಿಯನ್ನು ಅವಲಂಬಿಸಿದ್ದಾರೆ. ಚೀನಾದ 41% ನಗರೀಕರಣಗೊಂಡಿದ್ದರೆ, ಭಾರತದಲ್ಲಿ ಇದರ ಪ್ರಮಾಣ 29% ಮಾತ್ರ ಇದೆ. 1950ರಲ್ಲಿ ಚೀನಾದ 15% ಮಾತ್ರ ನಗರೀಕರಣಗೊಂಡಿತ್ತು. ಒಂದು ಅಂದಾಜಿನ ಪ್ರಕಾರ 2025ರ ವೇಳೆಗೆ ಚೀನಾದ 64% ಭಾಗ ನಗರೀಕರಣಗೊಳ್ಳಲಿದೆ. ಇದೇ ವೇಳೆಗೆ ಭಾರತ 38% ಭಾಗ ಮಾತ್ರ ನಗರೀಕರಣಗೊಳ್ಳಲಿದೆ. ಅಂದರೆ ಭಾರತ ಆಗಲೂ ಕೂಡ ಕೃಷಿ ಪ್ರಧಾನ ದೇಶವಾಗಿಯೇ ಸಂಪ್ರದಾಯವಾದಿ ಧೋರಣೆಯಿಂದ ಸೊರಗಲಿದೆ.

ಚೀನಾದ ಯಶಸ್ಸಿನ ಹಿಂದೆ ಒಂದು ಸರಳವಾದ ಆರ್ಥಿಕ ಲೆಕ್ಕಾಚಾರವಿದೆ. ಬಿಲಿಯನ್‌ಗಟ್ಟಲೆ ಜನರಿಗೆ ಆಹಾರ ಒದಗಿಸುವ ಜವಾಬ್ದಾರಿ ಹೊತ್ತ ಚೀನಾ, ಬಡತನ ಮತ್ತು ಕೃಷಿಗೆ ಗಾಢವಾದ ಸಂಬಂಧವಿರುವ ಬಗ್ಗೆ ಜಾಗತಿಕ ಟ್ರೆಂಡ್ ಗುರುತಿಸುವಲ್ಲಿ ಶಕ್ತವಾಯಿತು. ಹೆಚ್ಚು ಕಾರ್ಮಿಕರನ್ನು ಬಯಸುವ ಕೃಷಿ ಚಟುವಟಿಕೆ ಆರ್ಥಿಕ ವ್ಯವಸ್ಥೆಯ ಮೂಲ ದ್ರವ್ಯವಾಗಿರುವವರೆಗೆ ಬಡತನಕ್ಕೆ ಕೊನೆಯಿಲ್ಲ ಎಂಬುದನ್ನು ಚೀನಾ ಮನಗಂಡಿತು.

ಚೀನಾದ ಕೈಗಾರಿಕೀಕರಣ ಮತ್ತು ನಗರೀಕರಣದ ಯಶಸ್ಸಿಗೆ ಅಲ್ಲಿ ಸುಲಭವಾಗಿ ಸಿಕ್ಕಿದ ಭೂಮಿಯೇ ಕಾರಣ. ಚೀನಾ ಸರ್ಕಾರವೇ ಅಲ್ಲಿನ ಭೂಮಿಯ ಒಡೆಯ. ಆದರೆ ಭಾರತದಲ್ಲಿ ನೂರಾರು ಸಾವಿರಾರು ಭೂ ಮಾಲೀಕರಿದ್ದಾರೆ. ಆಸ್ತಿಗಾಗಿ ಭಾರತದಲ್ಲಿ ತಂದೆ ಮಗನನ್ನೇ ಕೊಲ್ಲಬಹುದು, ಅಣ್ಣ ತಮ್ಮನನ್ನೇ ಕೊಲ್ಲಬಹುದು, ನೆರೆ ಹೊರೆಯವರನ್ನು ಕೊಲ್ಲಬಹುದು. ಭಾರತ ಸರ್ಕಾರ ಇಂತಹ ಭೂಮಾಲೀಕರನ್ನು ಎದುರು ಹಾಕಿಕೊಳ್ಳಲು ಸಾಧ್ಯವಿದೆಯೇ? 1952 ರಿಂದ ಭಾರತದ ಸರ್ಕಾರಗಳ ಅಂಕಿ ಅಂಶಗಳನ್ನು ಗಮನಿಸಿ. ಪ್ರತಿಬಾರಿ ಕೃಷಿ ಖಾತೆಗೆ ಸಚಿವರಾಗಿ ಬರುವವರು ಭೂ ಮಾಲೀಕರೇ ಆಗಿರುತ್ತಾರೆ. ಈ ವಿಚಾರದಲ್ಲಿ ಶರದ್ ಪವಾರ್ ಮಾತ್ರ ಖಳನಾಯಕ ಅಲ್ಲ, ಕಾಂಗ್ರೆಸ್ ಮಾತ್ರ ಅಪರಾಧಿ ಅಲ್ಲ.

ಚೀನಾದ ಆರ್ಥಿಕ ವ್ಯವಸ್ಥೆಗೆ, ದೇಶದ ಸುಮಾರು 39.5% ಜನರಿಗೆ ಉದ್ಯೋಗ ಒದಗಿಸಿರುವ ಕೃಷಿ ಕ್ಷೇತ್ರದ ಕೊಡುಗೆ ಕೇವಲ 10.6%. ಭಾರತದಲ್ಲಿ ಕೂಡ 52% ಮಂದಿಗೆ ಉದ್ಯೋಗ ಒದಗಿಸಿರುವ ಕೃಷಿ ಕ್ಷೇತ್ರದ ಕೊಡುಗೆ ಕೇವಲ 17%. ಇದಕ್ಕೆ ವ್ಯತಿರಿಕ್ತವಾಗಿ ಕೇವಲ 27.2% ಮಂದಿಗೆ ಉದ್ಯೋಗ ನೀಡಿರುವ ಕೈಗಾರಿಕೆಗಳು ಚೀನಾ ಆರ್ಥಿಕ ವ್ಯವಸ್ಥೆಗೆ 46.8% ಕೊಡುಗೆ ನೀಡುತ್ತಿದೆ. ಭಾರತದಲ್ಲಿ ಕೂಡ ಕೇವಲ 14% ಮಂದಿಗೆ ಉದ್ಯೋಗಾವಕಾಶ ಒದಗಿಸಿರುವ ಉದ್ಯಮ ಕ್ಷೇತ್ರ ದೇಶದ ಆರ್ಥಿಕ ವ್ಯವಸ್ಥೆಗೆ 28.2% ಕೊಡುಗೆಯನ್ನು ನೀಡುತ್ತಿದೆ. ಅದೇ ರೀತಿ ಸೇವಾವಲಯ ಕೂಡ ಚೀನಾದ 33.2% ಮಂದಿಗೆ ಉದ್ಯೋಗ ಒದಗಿಸಿದ್ದು, ದೇಶದ ಆರ್ಥಿಕ ವ್ಯವಸ್ಥೆಗೆ 42.6%ಕೊಡುಗೆ ನೀಡುತ್ತಿದೆ. ಭಾರತದಲ್ಲಿ ಸುಮಾರು 34% ಮಂದಿ ಸೇವಾ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ದೇಶದ ಆರ್ಥಿಕ ವ್ಯವಸ್ಥೆಗೆ 54.9% ಕೊಡುಗೆ ನೀಡುತ್ತಿದೆ.

ಇಳುವರಿಯಲ್ಲಿ ಮುಂಚೂಣಿಯಲ್ಲಿರುವ ರಾಷ್ಟ್ರಗಳಲ್ಲಿ ಒಂದು. ಇಂಗ್ಲೆಂಡ್‌ನಲ್ಲಿ ಕೇವಲ 1.4% ಮಂದಿ ಕೃಷಿಯಲ್ಲಿ ತೊಡಗಿಸಿಕೊಂಡಿದ್ದರೆ, ಫ್ರಾನ್ಸ್‌ನಲ್ಲಿ 3.8% ಹಾಗೂ ಜರ್ಮನಿಯಲ್ಲಿ 2.4%ರಷ್ಟು ಮಂದಿ ಮಾತ್ರ ಕೃಷಿಕರಾಗಿದ್ದಾರೆ.

ಅಭಿವೃದ್ಧಿ ಹೊಂದಿದ ದೇಶಗಳ ಮಾದರಿಯನ್ನು ಚೀನಾ ಅನುಸರಿಸುತ್ತಿದೆ. ಕೃಷಿ ಅವಲಂಬನೆಯಿಂದ ಮುಕ್ತಿ ಹೊಂದುವುದು ಈ ಮಾದರಿಯ ಮೊದಲ ಪಾಠ. ಭಾರತ ಕೂಡ ಇದೇ ಮಾದರಿಯನ್ನು ಅನುಸರಿಸಲು ಪ್ರಯತ್ನಿಸುತ್ತಿದೆ. ಆದರೆ ಚೀನಾ ಈ ವಿಚಾರದಲ್ಲಿ ಅಧಿಕ ಯಶಸ್ಸು ಸಾಧಿಸಲು ಸಾಧ್ಯವಾಗಿದೆ.

ಚೀನಾದ ಕೈಗಾರಿಕೀಕರಣ ಮತ್ತು ನಗರೀಕರಣದ ಯಶಸ್ಸಿಗೆ ಅಲ್ಲಿ ಸುಲಭವಾಗಿ ಸಿಕ್ಕಿದ ಭೂಮಿಯೇ ಕಾರಣ. ಚೀನಾ ಸರ್ಕಾರವೇ ಅಲ್ಲಿನ ಭೂಮಿಯ ಒಡೆಯ. ಆದರೆ ಭಾರತದಲ್ಲಿ ನೂರಾರು ಸಾವಿರಾರು ಭೂ ಮಾಲೀಕರಿದ್ದಾರೆ. ಆಸ್ತಿಗಾಗಿ ಭಾರತದಲ್ಲಿ ತಂದೆ ಮಗನನ್ನೇ ಕೊಲ್ಲಬಹುದು, ಅಣ್ಣ ತಮ್ಮನನ್ನೇ ಕೊಲ್ಲಬಹುದು, ನೆರೆ ಹೊರೆಯವರನ್ನು ಕೊಲ್ಲಬಹುದು.

ಭಾರತ ಸರ್ಕಾರ ಇಂತಹ ಭೂಮಾಲೀಕರನ್ನು ಎದುರು ಹಾಕಿಕೊಳ್ಳಲು ಸಾಧ್ಯವಿದೆಯೇ? 1952ರಿಂದ ಭಾರತದ ಸರ್ಕಾರಗಳ ಅಂಕಿ ಅಂಶಗಳನ್ನು ಗಮನಿಸಿ. ಪ್ರತಿ ಬಾರಿ ಕೃಷಿ ಖಾತೆಗೆ ಸಚಿವರಾಗಿ ಬರುವವರು ಭೂ ಮಾಲೀಕರೇ ಆಗಿರುತ್ತಾರೆ. ಈ ವಿಚಾರದಲ್ಲಿ ಶರದ್ ಪವಾರ್ ಮಾತ್ರ ಖಳನಾಯಕ ಅಲ್ಲ, ಕಾಂಗ್ರೆಸ್ ಮಾತ್ರ ಅಪರಾಧಿ ಅಲ್ಲ. ಎನ್‌ಡಿಎ ಸರ್ಕಾರ ಕೂಡ ಮಾಜಿ ಭೂ ಮಾಲೀಕರನ್ನೇ ಕೃಷಿ ಸಚಿವರಾಗಿ ಆಯ್ಕೆ ಮಾಡಿತ್ತು. ಬಾಬು ಜಗಜೀವನ್‌ರಾಂ ಅವರು ಕೃಷಿ ಸಚಿವರಾಗಿದ್ದಾಗ ಭಾರತದಲ್ಲಿ ಹಸಿರು ಕ್ರಾಂತಿಯಾಗಿತ್ತು. ಅವರು ಭೂ ಮಾಲೀಕರಾಗಿರಲಿಲ್ಲ, ಕೃಷಿ ಕಾರ್ಮಿಕರ ಕುಟುಂಬವನ್ನು ಅವರು ಪ್ರತಿನಿಧಿಸುತ್ತಿದ್ದರು.

ವಿಶ್ವದಾದ್ಯಂತ ಕೃಷಿಕರು ಮತ್ತು ಕೃಷಿ ವಲಯ– ಅಥವಾ ಕೃಷಿ ಪ್ರಧಾನ ವ್ಯವಸ್ಥೆ– ಬಡತನ ಮತ್ತು ಸಂಪ್ರದಾಯವಾದಿ ನಿಲುವುಗಳ ಮೂಲ ಕಾರಣವಾಗಿರುವು

ನಾವು ಕಲಿಯಬೇಕಾದ ಪಾಠಗಳು

ಕೃಷಿ ಪ್ರಧಾನ ವ್ಯವಸ್ಥೆ ಹೊಂದಿದ್ದ ಈ ಒಕ್ಕೂಟ ರಾಷ್ಟ್ರದಲ್ಲಿ ಕರಿಯರನ್ನು ತೀರ ಕೀಳಾಗಿ ಕಾಣಲಾಗುತ್ತಿತ್ತು. ಬಿಳಿಯರ ವರ್ಣಬೇಧ ನೀತಿಯಿಂದ ಬೇಸತ್ತ ಕರಿಯರು ಮುಕ್ತಿ ಮಾರ್ಗಕ್ಕಾಗಿ ಕಾಯುತ್ತಲೇ ಇದ್ದರು. ಇಂತಹ ಸಂದರ್ಭದಲ್ಲಿ ನಡೆದ ಮೊದಲನೆಯ ವಿಶ್ವಯುದ್ಧ (1914–1918) ಅಮೆರಿಕಾದ ಉತ್ತರ ಭಾಗದಲ್ಲಿ ಕೈಗಾರಿಕಾ ವಿಸ್ತರಣೆಗೆ ಕಾರಣವಾಯಿತು. ಕರಿಯರ ಸ್ವಾತಂತ್ರ್ಯ ಹೋರಾಟದಲ್ಲಿ ಹಲವಾರು ಮೈಲಿಗಲ್ಲುಗಳಿವೆ. ಅಮೆರಿಕಾದ ಹೊರಗಿರುವ ನಮಗೆ ಎರಡು ಮೈಲಿಗಲ್ಲುಗಳ ಬಗ್ಗೆ ಗೊತ್ತಿದೆ. 1863ರ ಸ್ವತಂತ್ರ ಘೋಷಣೆ ಮತ್ತು 1955–68ರ ನಡುವೆ ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಅವರ ನೇತೃತ್ವದಲ್ಲಿ ನಡೆದ ನಾಗರಿಕ ಹಕ್ಕುಗಳ ಚಳವಳಿ. ಆದರೆ ನಾವೆಲ್ಲರೂ ಮರೆತಿರುವ ಮೂರನೆಯ ಮಹತ್ವದ ಮೈಲಿಗಲ್ಲು; ಕರಿಯರ ಮಹಾ ವಲಸೆ.

ದಂತೂ ಸ್ಪಷ್ಟ. ಕೃಷಿ ಪ್ರಧಾನ ವ್ಯವಸ್ಥೆಗೆ ಇತಿಶ್ರೀ ಹಾಡದೆ ಭಾರತ ಜಾತಿರಹಿತ, ಹಸಿವು ಮುಕ್ತ ಸಮಾಜವಾಗುವುದು ಹೇಗೆ?

* * * * * * * * *

ಸುಮಾರು 400 ವರ್ಷಗಳ ಹಿಂದೆ, 1519ರಲ್ಲಿ ಕರಿಯ ಜೀತದಾಳುಗಳನ್ನು ಹೊತ್ತ ಹಡಗೊಂದು ಅಮೆರಿಕಾದ ಜೇಮ್ಸ್‌ಟೌನ್ (ಅಂದರೆ ಇಂದಿನ ವರ್ಜೀನಿಯಾ ರಾಜ್ಯ)ಗೆ ಬಂದಿಳಿಯಿತು. ಅಂದರೆ ಅಮೆರಿಕಾದ ಕರಿಯರ ಕಥೆ ಕೆಲವೇ ಶತಮಾನಗಳಷ್ಟು ಹಳೆಯದು ಅಷ್ಟೆ. ಕೇವಲ 400 ವರ್ಷಗಳಲ್ಲಿ ಕರಿಯರು ಎಲ್ಲ ರೀತಿಯ ಅವಮಾನ, ದೌರ್ಜನ್ಯ – ಹಸಿವನ್ನು ಅನುಭವಿಸಿದರು. ಹಿಂದೊಮ್ಮೆ ಅವರನ್ನು ಮನುಷ್ಯರೆಂದು ಕೂಡ ಪರಿಗಣಿಸಲಾಗುತ್ತಿರಲಿಲ್ಲ. ಅವರನ್ನು ಪ್ರಾಣಿಗಳ ಹಾಗೆ ಮಾರಾಟ ಮಾಡಲಾಗುತ್ತಿತ್ತು.

1800ರಲ್ಲಿ ಅಟ್ಲಾಂಟಿಕ್ ಜೀತ ವ್ಯಾಪಾರ ನೀತಿಯ ನಿರ್ಮೂಲನೆಯ ನಂತರ ಅಮೆರಿಕಾದ ಬಿಳಿಯರು ಕೆಲಸಗಾರರಿಲ್ಲದೆ ತೊಂದರೆ ಅನುಭವಿಸಿದರು. ಕೆಲಸಗಾರರ ಕೊರತೆಯನ್ನು ಸರಿದೂಗಿಸಲು ಕರಿಯ ಮಹಿಳೆಯರನ್ನು ಶಾಶ್ವತವಾಗಿ ಗರ್ಭಿಣಿಯರನ್ನಾಗಿಯೇ ಇರಿಸಲಾಯಿತು. ತಮ್ಮ ಜೀವಿತಾವಧಿಯಲ್ಲಿ ಓರ್ವ ಕಪ್ಪು ಮಹಿಳೆ ಎಷ್ಟು ಮಕ್ಕಳನ್ನು ಹಡೆಯಲು ಸಾಧ್ಯವೋ ಅಷ್ಟು ಮಕ್ಕಳನ್ನು ಹೆರುವ ಯಂತ್ರವಾಗಿ ಅವಳನ್ನು ಪರಿಗಣಿಸಲಾಯಿತು.

1863ರ ಜನವರಿ 1ರಂದು ಕರಿಯರ ಇತಿಹಾಸದಲ್ಲಿ ಮರೆಯಲಾಗದ ದಿನ. ಅಂದು ಅಬ್ರಹಾಂ ಲಿಂಕನ್ ಕರಿಯ ಪುರುಷರು ಮಹಿಳೆಯರು ಮತ್ತು ಮಕ್ಕಳನ್ನು ಅಮೆರಿಕಾದ ಸ್ವತಂತ್ರ ಪ್ರಜೆಗಳಾಗಿ ಘೋಷಿಸಿದರು. ಇನ್ನು 2009ರ ಜನವರಿ 20ರಂದು ಅಮೆರಿಕಾದ 44ನೆಯ ಅಧ್ಯಕ್ಷರಾದ ಬರಾಕ್ ಒಬಾಮ ಈ ಪಟ್ಟ ಅಲಂಕರಿಸಿದ ಮೊಟ್ಟ ಮೊದಲ ಕಪ್ಪು ಜನಾಂಗದ ಪ್ರತಿನಿಧಿಯಾಗಿ ಹೊಸ ಇತಿಹಾಸ ಬರೆದರು.

1863ರಿಂದ 2009ರ ನಡುವೆ ಅಮೆರಿಕಾದ ಸಮಾಜದಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಸುಮಾರು 11 ರಾಷ್ಟ್ರಗಳು ಅಮೆರಿಕಾದಿಂದ ಪ್ರತ್ಯೇಕಗೊಂಡು ಅಮೆರಿಕಾ ರಾಜ್ಯಗಳ ಒಕ್ಕೂಟ ಎಂಬ ರಾಷ್ಟ್ರವನ್ನು ರಚಿಸಿಕೊಂಡವು. ನಂತರ ಆಂತರಿಕ ಯುದ್ಧ ನಡೆಯಿತು. ಅಧ್ಯಕ್ಷೀಯ ಚುನಾವಣೆ ವೇಳೆ ಅಬ್ರಹಾಂ ಲಿಂಕನ್ ಜೀತಪದ್ಧತಿಯನ್ನು ವಿರೋಧಿಸಿದ್ದೇ ಅಲ್ಲದೆ, ಜೀತಪದ್ಧತಿ ಇಲ್ಲದ ರಾಜ್ಯಗಳಲ್ಲಿ ಈ ಅನಿಷ್ಟ ಕಾಣಿಸಿಕೊಳ್ಳಲು ಅವಕಾಶ ನೀಡುವುದಿಲ್ಲ ಎಂದು ಪ್ರಚಾರ ಮಾಡಿದರು. ಲಿಂಕನ್ ಚುನಾವಣೆಯಲ್ಲಿ ವಿಜಯ ಸಾಧಿಸಿದ ಬಳಿಕ ಏಳು ರಾಜ್ಯಗಳು ಯುಎಸ್ ಎನಿಂದ ಸ್ವತಂತ್ರವಾದವು. ನಂತರ ಇನ್ನು ನಾಲ್ಕು ರಾಜ್ಯಗಳು ಈ ಗುಂಪಿಗೆ ಸೇರಿಕೊಂಡವು. ರಾಜ್ಯಗಳ ಒಕ್ಕೂಟ ಯುದ್ಧದಲ್ಲಿ ಸೋತ ಬಳಿಕ 1965ರಲ್ಲಿ ಅಮೆರಿಕಾ ಸಂಸ್ಥಾನದಲ್ಲಿ ವಿಲೀನವಾಯಿತು.

ರಾಜ್ಯಗಳ ಒಕ್ಕೂಟವನ್ನು 'ಜೀತದ ರಾಜ್ಯ'ಗಳು ಎಂದೂ ಕರೆಯಲಾಗುತ್ತಿತ್ತು. ಜೀತದ ರಾಜ್ಯಗಳ ಆರ್ಥಿಕ ವ್ಯವಸ್ಥೆ ಮತ್ತು ಜನಸಂಖ್ಯಾ ಸ್ವರೂಪವನ್ನು ಭಾರತದ ದಲಿತರು ವಿಶೇಷವಾಗಿ ಗಮನಿಸಬೇಕು. ಒಕ್ಕೂಟದ ಬಹುತೇಕ ರಾಜ್ಯಗಳು ಕೃಷಿ ಪ್ರಧಾನವಾಗಿದ್ದು, ಗ್ರಾಮೀಣ ಹಿನ್ನೆಲೆ ಹೊಂದಿದ್ದವು. ಈ ರಾಜ್ಯಗಳಿಗೆ ಕಪ್ಪು ಜನಾಂಗದವರನ್ನು ಬಲವಂತವಾಗಿ ಎಳೆತಂದು ಹತ್ತಿ ಮತ್ತು ಕಬ್ಬಿನ ಗದ್ದೆಗಳಲ್ಲಿ ಕೆಲಸ ಮಾಡಿಸುತ್ತಿದ್ದರು. 1830ರಲ್ಲಿ ಕೂಡ ಈ ಒಕ್ಕೂಟದ ರಾಜ್ಯಗಳಲ್ಲಿ ವಿಶ್ವದಲ್ಲಿಯೇ ಅತ್ಯಧಿಕ ಪ್ರಮಾಣದಲ್ಲಿ ಹತ್ತಿ, ಕಬ್ಬು ಮತ್ತು ತಂಬಾಕು ಬೆಳೆಯಲಾಗುತ್ತಿತ್ತು.

1890ರಲ್ಲಿ ಅಮೆರಿಕಾದ ದಕ್ಷಿಣ ಭಾಗದಲ್ಲಿ ಸುಮಾರು 90% ಕಪ್ಪು ಜನರು ವಾಸಿಸುತ್ತಿದ್ದರೆ, 1960ರ ವೇಳೆಗೆ ಇದೇ ಭಾಗದಲ್ಲಿ ಕೇವಲ 10% ಮಾತ್ರ ವಾಸಿಸುತ್ತಿದ್ದರು. ಇನ್ನು ಅಮೆರಿಕಾದ ಉತ್ತರಭಾಗದಲ್ಲಿ ಹಿಂದೆ 9.7% ಮಾತ್ರ ಇದ್ದ ಕರಿಯರ ಜನಸಂಖ್ಯೆ ಈಗ 90%ರಷ್ಟಾಗಿದೆ.

ಕೃಷಿ ಪ್ರಧಾನ ವ್ಯವಸ್ಥೆ ಹೊಂದಿದ್ದ ಈ ಒಕ್ಕೂಟ ರಾಷ್ಟ್ರದಲ್ಲಿ ಕರಿಯರನ್ನು ತೀರ ಕೀಳಾಗಿ ಕಾಣಲಾಗುತ್ತಿತ್ತು. ಬಿಳಿಯರ ವರ್ಣಬೇಧ ನೀತಿಯಿಂದ ಬೇಸತ್ತ ಕರಿಯರು ಮುಕ್ತಿ ಮಾರ್ಗಕ್ಕಾಗಿ ಕಾಯುತ್ತಲೇ ಇದ್ದರು. ಇಂತಹ ಸಂದರ್ಭದಲ್ಲಿ ನಡೆದ ಮೊದಲನೆಯ ವಿಶ್ವಯುದ್ಧ (1914–1918) ಅಮೆರಿಕಾದ ಉತ್ತರ ಭಾಗದಲ್ಲಿ ಕೈಗಾರಿಕಾ ವಿಸ್ತರಣೆಗೆ ಕಾರಣವಾಯಿತು.

ಕರಿಯರ ಸ್ವಾತಂತ್ರ್ಯ ಹೋರಾಟದಲ್ಲಿ ಹಲವಾರು ಮೈಲಿಗಲ್ಲುಗಳಿವೆ. ಅಮೆರಿಕಾದ ಹೊರಗಿರುವ ನಮಗೆ ಎರಡು ಮೈಲಿಗಲ್ಲುಗಳ ಬಗ್ಗೆ ಗೊತ್ತಿದೆ. 1863ರ ಸ್ವತಂತ್ರ ಘೋಷಣೆ ಮತ್ತು 1955–68ರ ನಡುವೆ ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಅವರ ನೇತೃತ್ವದಲ್ಲಿ ನಡೆದ ನಾಗರಿಕ ಹಕ್ಕುಗಳ ಚಳವಳಿ. ಆದರೆ ನಾವೆಲ್ಲರೂ ಮರೆತಿರುವ ಮೂರನೆಯ ಮಹತ್ವದ ಮೈಲಿಗಲ್ಲು; ಕರಿಯರ ಮಹಾ ವಲಸೆ.

ಇತಿಹಾಸಕಾರರು ಅಮೆರಿಕಾದಲ್ಲಿ ಕರಿಯರ ಮಹಾ ವಲಸೆಯ ಎರಡು ಹಂತಗಳನ್ನು ಗುರುತಿಸುತ್ತಾರೆ. 1910–1930ರವರೆಗೆ ಸುಮಾರು 1.75 ದಶಲಕ್ಷದಷ್ಟು ಕರಿಯರು ಉತ್ತರ ಅಮೆರಿಕಾದ ಕೈಗಾರಿಕಾ ಪ್ರದೇಶಗಳಿಗೆ ವಲಸೆ ಬಂದದ್ದು. 1940–70ರವರೆಗೆ ಅಮೆರಿಕಾಧ ದಕ್ಷಿಣ ಭಾಗದಿಂದ ಕರಿಯರು ಬಹುತೇಕ ಉತ್ತರ ಭಾಗಕ್ಕೆ ವಲಸೆ ಬಂದದ್ದು. ಇವತ್ತಿಗೂ ಕೂಡ ಅಮೆರಿಕಾದ ದಕ್ಷಿಣ ಭಾಗ ಸಾಂಪ್ರದಾಯಿಕ ಧೋರಣೆ ಹೊಂದಿದ್ದು ರಿಪಬ್ಲಿಕನ್ ಪಕ್ಷದ ಭದ್ರ ಕೋಟೆಯಾಗಿದೆ.

ಐತಿಹಾಸಿಕ ಮೈಲಿಗಲ್ಲುಗಳಾಗಿ ನಿಂತಿರುವ ಈ ಘಟನೆಗಳ ಬಳಿಕ ಅಮೆರಿಕಾದ ಕರಿಯರು ಕೃಷಿಯಾಧಾರಿತ ಸಾಮಾಜಿಕ ವ್ಯವಸ್ಥೆಯನ್ನು ತೊರೆದು ನಗರಗಳಿಗೆ ಬಂದದ್ದು ಅವರ ಸ್ವಾತಂತ್ರ್ಯ ಮತ್ತು ಪ್ರಗತಿಯಲ್ಲಿ ಬಹುಮುಖ್ಯವಾದ ಪಾತ್ರ ವಹಿಸಿದೆ. 1802ರಲ್ಲಿ ನ್ಯೂಯಾರ್ಕ್‌ನಲ್ಲಿ ಮೊಟ್ಟ ಮೊದಲ ಹೋಟೆಲ್ ಆರಂಭವಾಯಿತು. ಅಂದರೆ ಕೇವಲ ಎರಡು ಶತಮಾನಗಳ ಹಿಂದೆ ಅಮೆರಿಕಾ ಕೂಡ ಬಹುತೇಕ ಕೃಷಿಯನ್ನು ಅವಲಂಬಿಸಿತ್ತು. ಅಮೆರಿಕಾದ ಕೈಗಾರಿಕೀಕರಣ ಮತ್ತು ನಗರೀಕರಣ ಹಾಗೂ ಕರಿಯರ ಯಶಸ್ಸನ್ನು ನಾವು ತಾಳೆ ಹಾಕಿ ನೋಡಿದರೆ, ಇವೆರಡಕ್ಕೂ ಸ್ಪಷ್ಟವಾದ ಸಂಬಂಧವಿರುವುದು ಮನವರಿಕೆಯಾಗುತ್ತದೆ. ಅಮೆರಿಕಾ ಹೆಚ್ಚು ಕೈಗಾರಿಕೀಕರಣಗೊಂಡಂತೆ ಕರಿಯರು ಹೆಚ್ಚು ಹೆಚ್ಚು ಸ್ವತಂತ್ರರಾಗುತ್ತಾ ಬಂದಿದ್ದಾರೆ.

ಅಮೆರಿಕಾದ ಕರಿಯರ ಇತಿಹಾಸದಿಂದ ಭಾರತ ಕಲಿಯಬೇಕಾಗಿರುವ ಪಾಠಗಳು ಸಾಕಷ್ಟಿವೆ. ಕೈಗಾರಿಕೀಕರಣ ಮತ್ತು ನಗರೀಕರಣಗೊಳ್ಳದೆ ಭಾರತ ಜಾತಿಮುಕ್ತವಾಗಲು ಸಾಧ್ಯವಿಲ್ಲ. ಉತ್ತರ ಪ್ರದೇಶದಲ್ಲಿ ನಡೆದ ಭೂ ವಿವಾದದ ಬಳಿಕ ಹೊಸ ಭೂ ಸ್ವಾಧೀನ ಕಾಯ್ದೆ ಬಗ್ಗೆ ಪ್ರಸ್ತಾಪಿಸುತ್ತಿರುವವರೆಲ್ಲರೂ ಯಾವ ರೀತಿಯ ಭಾರತವನ್ನು ಕಟ್ಟಬೇಕೆಂದಿದ್ದಾರೆ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕಾಗಿದೆ. ಭಾರತ ಜಾತಿಮುಕ್ತವಾಗಿ, ಯಶಸ್ವಿ ಆಧುನಿಕ ರಾಷ್ಟ್ರವಾಗಿ ಹೊರಹೊಮ್ಮಬೇಕಾದರೆ ಕೃಷಿ ಪ್ರಧಾನ ವ್ಯವಸ್ಥೆಯನ್ನು ಬಿಡಲೇಬೇಕು.

"ಗ್ರಾಮೀಣ ಜನರ ಬಗ್ಗೆ ಭಾರತೀಯ ಬುದ್ಧಿಜೀವಿಗಳಿಗಿರುವ ಪ್ರೀತಿ ದಯನೀಯವಾದುದು... ಹಳ್ಳಿ ಎಂದರೇನು? ಸ್ಥಳೀಯತೆಯಿಂದ ನಾರುತ್ತಿರುವ, ಸಂಕುಚಿತ ಮನೋಭಾವದಿಂದ ಬಳಲುತ್ತಿರುವ, ಕೋಮುವಾದದಿಂದ ಸೊರಗುತ್ತಿರುವ ಅಜ್ಞಾನದ ಕೂಪ"– ಡಾ. ಬಿ ಆರ್ ಅಂಬೇಡ್ಕರ್. □

ಬುದ್ಧಾಯಣ

೬೦

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಸಾವಸ್ಥಿಯ ಜೇತವನದಲ್ಲಿ ತಂಗಿದ್ದರು. ಅದಕ್ಕೂ ಪೂರ್ವಕಾಲದಲ್ಲಿ ಕಾಶೀ ರಾಷ್ಟ್ರವನ್ನು "ಅಸ್ಸಕ"ನೆಂಬ ರಾಜನು ಆಳುತ್ತಿದ್ದನು. ಪೋತಲಿ ಎಂಬುದು ಅವನ ರಾಜಧಾನಿಯಾಗಿತ್ತು. "ಉಬ್ಬರಿ" ಎಂಬುವಳು ಅವನ ಪಟ್ಟಮಹಿಷಿಯಾಗಿದ್ದಳು. ಆಕೆಯು ಅತ್ಯಂತ ಸುಂದರಿಯಾಗಿಯು ನೋಡುಗರ ಕಣ್ಣನ್ನು ಕೋರೈಸುವಂತಹ ಸೌಂದರ್ಯವತಿಯೂ ಆಗಿದ್ದ ಅವಳು ಮಧ್ಯವರ್ಣದವಳಾಗಿದ್ದಳು. ಅಂಥಹ ದರ್ಶನೀಯಳು ಮತ್ತು ಮನೋಜ್ಞ ಸುಂದರಿಯಾದ ಮಹಾರಾಣಿಯು ರಾಜನಿಗೆ ಬಲು ಅಚ್ಚು ಮೆಚ್ಚಿನವಳಾದ್ದಳು. ಸದಾ ಆಕೆ ಅವನ ಜೊತೆಯಲ್ಲಿಯೇ ಇರುತ್ತಿದ್ದಳು. ಅಂತಹ ಪ್ರೀತಿಪಾತ್ರಳಾದ ಮಡದಿಯು ಒಮ್ಮೆ ಅಕಾಲಿಕ ಮರಣಕ್ಕೆ ತುತ್ತಾಗಿ ಅಸುನೀಗುತ್ತಾಳೆ. ಈ ಅಗಲಿಕೆಯು ರಾಜನಿಗೆ ತಾಳಲಾರದ ದುಃಖಕ್ಕೆ ತಳ್ಳುತ್ತದೆ. ಶೋಕತಪ್ತನಾದ ರಾಜನು ತನ್ನ ರಾಣಿಯ ಶವವನ್ನು ತಬ್ಬಿಕೊಂಡು ಇನ್ನಿಲ್ಲದಂತೆ ರೋಧಿಸುತ್ತಾನೆ.

ಆಕೆಯ ಶವವನ್ನು ನಿಯಮದ ಪ್ರಕಾರ ಸಂಸ್ಕಾರ ಮಾಡಲು ರಾಜನು ಒಪ್ಪಿಗೆ ನೀಡುವುದಿಲ್ಲ. ಬದಲಿಗೆ ಆಕೆಯ ಶವವನ್ನು ಎಣ್ಣೆಯ ಕಡಾಯಿಯಲ್ಲಿ ಇರಿಸಿ ಅದನ್ನು ತನ್ನ ಮಂಚದ ಕೆಳಗೆ ಇಡಿಸಿ ರೋಧಿಸ ತೊಡಗಿದ. ಹೀಗೆ ಅಳುತ್ತಾ ಕರೆಯುತ್ತಾ ಏಳು ದಿನಗಳು ಕಳೆದವು. ಅರಮನೆಯ ಒಳಗೂ ಹೊರಗೂ ಕೋಲಾಹಲ ಉಂಟಾಯಿತು. ರಾಜನ ತಂದೆ ತಾಯಿಗಳು, ಬಂಧು ಬಾಂಧವರು, ಮಿತ್ರರು, ಮಂತ್ರಿಗಳು ಮತ್ತು ಬಾಹ್ಮಣ ಪುರೋಹಿತರು ರಾಜನನ್ನು ಸಂಧಿಸಿ;

"ಮಹಾರಾಜ, ಈ ಸಂಸಾರ ಅನಿತ್ಯ. ಇಲ್ಲಿ ಯಾರೂ ಶಾಶ್ವತರಲ್ಲ. ಎಲ್ಲರಿಗೂ ಮರಣ ಸಂಭವಿಸುತ್ತದೆ. ಇಲ್ಲಿ ಅಗಲಿಕೆಯೇ ಶಾಶ್ವತ. ಮರಣವು ಪ್ರಕೃತಿ ಸಹಜ ಧರ್ಮ. ಅವರವರ ಕರ್ಮಾನುಸಾರ ಬದುಕಿ ತನ್ನ ಹಳೆಯ ಕರ್ಮವು ಕ್ಷಯಿಸಿದ ಮೇಲೆ ಅವರು ಯಾರಿಗೆ ಎಷ್ಟೇ ಪ್ರೀಯರಾಗಿದ್ದರೂ ಅವರನ್ನು ಬಿಟ್ಟು ಅಗಲಲೇಬೇಕು. ಮತ್ತೆ ಹೊಸ ಕರ್ಮಾನುಸಾರ ಪುನರ್‌ಜನ್ಮವನ್ನು ಪಡೆಯಲೇಬೇಕು. ಮರಣ ಧರ್ಮವು ಹೀಗಿರುವಾಗ ದುಃಖವನ್ನು ತಡೆ ಹಿಡಿದುಕೊಂಡು ಶವ ಸಂಸ್ಕಾರಕ್ಕೆ ಅನುವು ಮಾಡಿಕೊಡಿ!" ಎಂದು ಅಂಗಲಾಚಿದರು.

ಅವರವರ ಕರ್ಮಾನುಸಾರ ಬದುಕಿ ತನ್ನ ಹಳೆಯ ಕರ್ಮವು ಕ್ಷಯಿಸಿದ ಮೇಲೆ ಅವರು ಯಾರಿಗೆ ಎಷ್ಟೇ ಪ್ರೀಯರಾಗಿದ್ದರೂ ಅವರನ್ನು ಬಿಟ್ಟು ಅಗಲಲೇಬೇಕು. ಮತ್ತೆ ಹೊಸ ಕರ್ಮಾನುಸಾರ ಪುರ್ನಜನ್ಮವನ್ನು ಪಡೆಯಲೇಬೇಕು. ಮರಣ ಧರ್ಮವು ಹೀಗಿರುವಾಗ ದುಃಖವನ್ನು ತಡೆ ಹಿಡಿದುಕೊಂಡು ಶವ ಸಂಸ್ಕಾರಕ್ಕೆ ಅನುವು ಮಾಡಿ ಕೊಡಿ!" ಎಂದು ಅಂಗಲಾಚಿದರು. ಯಾರು ಎಷ್ಟೇ ಪ್ರಯತ್ನವನ್ನು ಪಟ್ಟರೂ ಕೂಡ ಅವಿವೇಕಿಯಾದ ರಾಜನು ರಾಣಿಯ ಶವವನ್ನು ಸಂಸ್ಕಾರ ಮಾಡಲು ಒಪ್ಪಲ್ಲಿಲ್ಲ.

ಸಿ. ಹೆಚ್. ರಾಜಶೇಖರ್

ಈಗ ಅವನಿಂದ ನನಗೇನಾಗಬೇಕು ?

ಯಾರು ಎಷ್ಟೇ ಪ್ರಯತ್ನವನ್ನು ಪಟ್ಟರೂ ಕೂಡ ಅವಿವೇಕಿಯಾದ ರಾಜನು ರಾಣಿಯ ಶವವನ್ನು ಸಂಸ್ಕಾರ ಮಾಡಲು ಒಪ್ಪಲಿಲ್ಲ.

ಅಂತಹ ಸಂದರ್ಭದಲ್ಲಿ ಬೋಧಿಸತ್ವರು ಊರೂರು ಅಲೆಯುತ್ತಾ ಕಾಶೀ ರಾಜ್ಯವನ್ನು ಪ್ರವೇಶಿಸಿದರು. ರಾಜನ ಉದ್ಯಾನವನ ದಲ್ಲಿ ಬೀಡುಬಿಟ್ಟರು. ಈ ವಿಷಯವನ್ನು ಅರಿತ ರಾಜಪುರೋಹಿತನು ಬೋಧಿಸತ್ವರ ಬಳಿ ಬಂದು ಅವರಿಗೆ ವಂದಿಸಿ ಒಂದು ಕಡೆ ಕುಳಿತುಕೊಂಡನು. ಉಭಯ ಕುಶಲೋಪರಿಯು ಮುಗಿದ ಬಳಿಕ ಬೋಧಿಸತ್ವರು;

"ರಾಜಪುರೋಹಿತರೇ, ನಿಮ್ಮ ರಾಜನು ಧಾರ್ಮಿಕನೆ?"

"ಪೂಜ್ಯರೇ, ರಾಜನೇನೋ ಧಾರ್ಮಿಕ ಹೌದು. ಆದರೆ ಅವನ ಪಟ್ಟಮಹಿಷಿಯು ಅಕಾಲಿಕ ಮರಣಕ್ಕೆ ತುತ್ತಾಗಿ ಇಂದಿಗೆ ಏಳು ದಿನಗಳೇ ಕಳೆದವು. ಆದರೂ ರಾಜ ತನ್ನ ಪತ್ನಿಯ ಶವವನ್ನು ಸಂಸ್ಕಾರ ಮಾಡಲು ಒಪ್ಪುತ್ತಿಲ್ಲ. ಆಕೆಯ ಶವವನ್ನು ತನ್ನ ಮಂಚದ ಕೆಳಗೆ ಇಟ್ಟುಕೊಂಡು ರೋಧಿಸುತ್ತಿದ್ದಾನೆ"

"ಹಾಗಾದರೆ ಆತ ಹೇಗೆ ಧಾರ್ಮಿಕ ಆಗಬಲ್ಲ?"

"ಪೂಜ್ಯರೇ, ತಮ್ಮಂತಹ ಶೀಲವಂತರು ಮತ್ತು ಪ್ರಜ್ಞಾವಂತರು ಇರುವಾಗ ನಮ್ಮ ರಾಜನ ದುಃಖವನ್ನೇಕೆ ನೀಗಿಸಬಾರದು?" ಎನ್ನಲು ಬೋಧಿಸತ್ವರು ನಸುನಕ್ಕು;

"ನಿಮ್ಮ ರಾಜ ನಿಜಕ್ಕೂ ಅವಿವೇಕಿಯೇ ಸರಿ. ಆತನನ್ನು ನನ್ನ ಬಳಿ ಕರೆದುತಾ. ನಾನು ಆತನ ರಾಣಿಯನ್ನು ಅವನಿಗೆ ದರ್ಶನ ಮಾಡಿಸುತ್ತೇನೆ. ಆಕೆ ಈಗ ಹೇಗಿದ್ದಾಳೆ? ಎಲ್ಲಿದ್ದಾಳೆ? ಯಾರೊಂದಿಗೆ ಇದ್ದಾಳೆ? ಏನು ಮಾಡುತ್ತಿದ್ದಾಳೆ? ರಾಜನ ಬಗ್ಗೆ ಈಗ ಆಕೆ ಯಾವ ಅಭಿಪ್ರಾಯವನ್ನು ಹೊಂದಿದ್ದಾಳೆ ಎಂಬುದರ ಸತ್ಯ ದರ್ಶನವನ್ನು ಅವನಿಗೆ ತೋರಿಸುತ್ತೇನೆ!" ಎನ್ನಲು ಆತ ಅತ್ಯಂತ ಹರ್ಷಚಿತ್ತನಾಗಿ ರಾಜನ ಬಳಿ ಬಂದು ನಡೆದ ವಿಷಯವನ್ನು ವಿವರಿಸಿ ಹೇಳಿದ. ರಾಜನಿಗೆ ಆಶ್ಚರ್ಯದ ಜೊತೆಗೆ ಪರಮಾನಂದವಾಯಿತು. ಫಲಪುಷ್ಪ ಗಂಧಮಾಲೆಯೊಂದಿಗೆ ರಥವೇರಿ ರಾಜನು ಬೋಧಿಸತ್ವರ ಬಳಿ ಬಂದ. ಅವರಿಗೆ ಗೌರವವನ್ನು ಸಮರ್ಪಿಸಿ ತಾನು ತಂದ ಕಾಣಿಕೆಯನ್ನು ಅವರಿಗೆ ಅರ್ಪಿಸಿದ. ತನಗಾಗಿ ಸಿದ್ದಪಡಿಸಿದ್ದ ಪೀಠದಲ್ಲಿ ಕುಳಿತು;

"ಗುರುದೇವಾ, ನೀನು ನಿಜಕ್ಕೂ ನನ್ನ ಪಟ್ಟಮಹಿಷಿಯಾದ ಉಬ್ಬರಿಯನ್ನು ಕಂಡಿರುವೆಯಾ? ಆಕೆಯನ್ನು ನನಗೆ ತೋರಿಸಬಲ್ಲೆಯಾ? ಈಗ ಆಕೆ ಎಲ್ಲಿರುವಳು? ಹೇಗಿರುವಳು? ಏನನ್ನು ಮಾಡುತ್ತಿರುವಳು? ನನ್ನ ಬಗ್ಗೆ ಆಕೆಯ ಅಭಿಪ್ರಾಯವೇನು? ಆಕೆ ಮತ್ತೆ ನನ್ನೊಂದಿಗೆ ಬಂದು ಜೀವಿಸಬಲ್ಲಳೇ?"

"ಮಹಾರಾಜ ಭಾವಾವೇಶಕ್ಕೆ ಒಳಗಾಗಬೇಡ. ಸತ್ಯವನ್ನು ಅರಿಯುವವನು ಮೊದಲು ಸಮಚಿತ್ತದಿಂದ ಕೂಡಿದವನಾಗಿರಬೇಕು. ನನ್ನನ್ನು ಹಿಂಬಾಲಿಸು" ಎಂದ ಬೋಧಿಸತ್ವರು ಉದ್ಯಾನವನ್ನುವನ್ನು ಅಲೆಯುತ್ತಾ ಕೊನೆಗೊಂದು ಜೋಡಿ ಸಗಣಿ ಹುಳುಗಳು ಹರಿದುಹೋಗುವ ಕಡೆ ನಿಂತುಕೊಂಡರು. ಒಂದು ಗಂಡು ಸಗಣಿ ಹುಳದ ಹಿಂದೆ ಮತ್ತೊಂದು ಹೆಣ್ಣು ಸಗಣಿ ಹುಳುವು ಹಿಂಬಾಲಿಸುತ್ತಿತ್ತು. ಅದನ್ನು ಸೂಕ್ಷ್ಮವಾಗಿ ಕಂಡ ರಾಜನು ಅಸಹ್ಯಪಡುತ್ತಾ;

"ಎಲೈ ಮಹಾರಾಜ ,ಈಗ ನನಗೆ ನಿನ್ನಿಂದ ಏನು ಪ್ರಯೋಜನ? ನೀನು ನನ್ನನ್ನು ಮುದ್ದಿಸಬಲ್ಲೆಯಾ? ನನ್ನೊಂದಿಗೆ ಸುಖಿಸಬಲ್ಲೆಯಾ? ನನಗೆ ಈಗ ನನ್ನ ಸರ್ವಸ್ವವೆಲ್ಲ ಈ ಜನ್ಮದ ನನ್ನ ಪ್ರಿಯತಮನೇ ಆಗಿದ್ದಾನೆ. ನಾನು ಅವನನ್ನು ಸೇವಿಸುವುದೇ ಧರ್ಮವಾಗಿದೆ. ಸಮಯವೊಂದು ಒದಗಿ ಬಂದದ್ದೇ ಆದರೆ ನಾನು ನಿನ್ನ ಕೊರಳಿನ ರಕ್ತದಿಂದ ನನ್ನ ಪತಿ ಸಗಣಿ ಹುಳುವಿನ ಪಾದವನ್ನು ತೊಳೆಯ ಬಲ್ಲೆ. ಹೊಸ ಸುಖ ದುಃಖಗಳಿಂದ ಹಳೆಯ ಸುಖ ದುಃಖಗಳು ಮುಚ್ಚಿ ಹೋಗುತ್ತವೆ. ಆದುದರಿಂದ ಎಲೈ ಅಸ್ಸಕ ರಾಜನೇ, ನನಗೆ ನಿನಗಿಂತ ಈಗ ಈ ಕೀಟವೇ ಹೆಚ್ಚು ಪ್ರಿಯವಾಗಿದೆ. ಈ ಜನ್ಮದಲ್ಲಾದರೂ ನಾನು ನನ್ನ ಕರ್ಮವನ್ನು ಅರಿಯಲು ಪ್ರಯತ್ನಿಸುತ್ತೇನೆ.

"ಗುರುದೇವಾ, ಎಲ್ಲಿ ನನ್ನ ಮಹಾರಾಣಿ? ಎಲ್ಲಿ ಆ ನನ್ನ ಜಗದೇಕ ಸುಂದರಿ?"

"ಮಹಾರಾಜ, ನಿನ್ನ ಕಾಲಬುಡದಲ್ಲಿಯೇ ಇರುವ ನಿನ್ನ ಮಹಾರಾಣಿಯನ್ನು ಕಾಣಲಾರೆಯಾ? ಗುರುತಿಸಲಾರೆಯಾ? ಮಾತನಾಡಿಸಲಾರೆಯಾ?"

"ಯಾರು, ಈ ಯಕಃಶ್ಚಿತ್ ಸಗಣಿ ಹುಳುವು ನನ್ನ ಮಹಾರಾಣಿಯೇ? ನನ್ನ ಜಗದೇಕ ಸುಂದರಿಯೇ? ಕಡು ದುಃಖದಲ್ಲಿ ಇರುವ ನನಗೆ ಚಿತ್ತಭ್ರಮಣೆಯಾಗಿದೆಯೋ? ಅಥವಾ ನಿಮಗೋ?"

"ಮಹಾರಾಜ, ನಮ್ಮಿಬ್ಬರಿಗೂ ಅಲ್ಲ. ತಾವೇ ಖುದ್ದು ಆ ಹೆಣ್ಣು ಸಗಣಿ ಹುಳುವನ್ನು ಮಾತನಾಡಿಸಿ ನೋಡಿ!" ಎನ್ನಲು ಅವನು ಅಂಜುತ್ತಾ, ಅಳುಕುತ್ತಾ, ಅಸಹ್ಯಪಡುತ್ತಾ;

"ಎಲೈ ಯಕಃಶ್ಚಿತ್ ಸಗಣಿ ಹುಳುವೇ, ನೀನು ಯಾರು? ಇಲ್ಲಿಯ ತನಕ ಎಲ್ಲಿದ್ದೆ? ಇಲ್ಲಿಗೆ ಏಕೆ ಬಂದಿರುವೆ? ನಿನ್ನ ಪೂರ್ವಾಪರಗಳೇನು?"

"ಸ್ವಾಮೀ, ಇದೇನಿದು ಮನುಷ್ಯನು ಇಷ್ಟು ಬೇಗ ಸ್ವಾರ್ಥಿಯಾಗುವನೇ? ತಮ್ಮ ಅಚ್ಚುಮೆಚ್ಚಿನ ಮಡದಿ, ಜಗದೇಕ ಸುಂದರಿ, ಪ್ರಾಣಪ್ರಿಯೆ, ನಿಮ್ಮ ಪಟ್ಟಮಹಿಷಿಯಾದ "ಉಬ್ಬರಿ"ಯಲ್ಲವೇ ನಾನು? ನನ್ನನ್ನು ಗುರುತಿಸಲಾರದಷ್ಟು ಮತಿಭ್ರಷ್ಟರಾದಿರೇ?" ಎನ್ನಲು ರಾಜನಿಗೆ ನಿಂತ ನೆಲವೇ ಬಾಯ್ ತೆರೆದಂತಾಯಿತು. ಸಿಡಿಲು ಗುಡುಗು ಮಿಂಚುಗಳು ಒಮ್ಮೆಲೇ ಆಕಾಶದಲ್ಲಿ ಆರ್ಭಟಿಸಿದಂತಾಯಿತು. ಬೆವರುತ್ತಾ ತರತರನೆ ನಡುಗುತ್ತಿದ್ದ ಅವನು ಮೂಕವಿಸ್ಮಿತನಾಗಿ ನಿಂತಲ್ಲಿಂದ ಮೂರು ಹೆಜ್ಜೆ ಹಿಂದೆ ಸರಿದ. ತನ್ನ ದುಃಖದ ಕಟ್ಟೆಯು ಒಡೆಯಲು ಅಪಾರವಾಗಿ ರೋಧಿಸಿ ತನ್ನ ಕಣ್ಣೀರನ್ನೆಲ್ಲ ಬತ್ತಿಸಿಕೊಂಡ. ಬಳಿಕ ಬೋಧಿಸತ್ವರತ್ತ ತಿರುಗಿ;

"ಗುರುದೇವಾ, ಇದೇನಿದು? ಹೀಗೇಕೆ? ಇದರ ಹಿಂದಿನ ರಹಸ್ಯವೇನು? ಈ ಪರಿಯ ಶಿಕ್ಷೆ ನನ್ನ ಪಟ್ಟಮಹಿಷಿಗೇಕೆ? ಆಕೆ ಮಾಡಿದ ಪಾಪ ಕರ್ಮವಾದರೂ ಏನು?"ಎನ್ನಲು ಬೋಧಿಸತ್ವರು;

"ಮಹಾರಾಜ, ನಿನ್ನ ಪಟ್ಟಮಹಿಷಿಯು ನಿನ್ನೊಂದಿಗೆ ಜೀವಿಸುತ್ತಿದ್ದ ಕಾಲದಲ್ಲಿ ಈ ರೂಪವೇ ನನಗೆ ಶಾಶ್ವತ. ಈ ಅರಮನೆ, ಈ ರಾಜ ಮತ್ತು ಈ ವೈಭವವೇ ನನ್ನ ಸರ್ವಸ್ವವೆಂದು ಬಗೆದಳೆ ಹೊರೆತು ಯಾವುದೇ ಪುಣ್ಯ ಕರ್ಮವನ್ನು ಮಾಡಲಿಲ್ಲ. ದಾನ ಧರ್ಮದ ಹಾದಿಯಲ್ಲಿ ನೆಡೆಯಲ್ಲಿಲ್ಲ. ತನ್ನ ಶೀಲವನ್ನು ಮತ್ತು ಪ್ರಜ್ಞೆಯನ್ನು ವೃದ್ಧಿಸಿಕೊಳ್ಳಲಿಲ್ಲ. ಆ ಮೂಲಕ ತನ್ನನ್ನು ತಾನು ಏಕಾಗ್ರತೆಯಲ್ಲಿ ನೆಲೆ ನಿಲ್ಲಿಸಿಕೊಳ್ಳಲಿಲ್ಲ. ತನ್ನನ್ನು ತಾನು ಅರಿಯಲಿಲ್ಲ . ಪರರ ಕಂಬನಿಯನ್ನು ಆಕೆ ಎಂದಿಗೂ ಒರೆಸಲಿಲ್ಲ. ಬದಲಿಗೆ ರೂಪ, ಶಬ್ದ, ಗಂಧ, ರಸ, ಸ್ಪರ್ಶ – ದೈಹಿಕ ಸುಖಭೋಗದಲ್ಲಿಯೇ ಆನಂದವನ್ನು ಅನುಭವಿಸುತ್ತಾ ಸಂಚರಿಸಿದಳು. ಅದರ ಪ್ರತಿಫಲವೇ ಇಂದಿನ ಈ ಜನ್ಮ ಮತ್ತು ರೂಪ ಹಾಗೂ ಸ್ಥಿತಿ!" ಎಂದರು. ಅಷ್ಟಕ್ಕೂ ಸತ್ಯವನ್ನು ಅರಿಯದ ಆ ಅವಿವೇಕಿ ರಾಜನು ತನ್ನ ಹಿಂದಿನ ಜನ್ಮದ ರಾಣಿಯನ್ನು ಕುರಿತು;

"ಮಹಾರಾಣಿ ಆದದ್ದು ಆಗಿಹೋಯಿತು. ಈಗಲೂ ನಾನು ನಿನ್ನನ್ನು ಮೊದಲಿನಂತೆಯೇ ಪ್ರೀತಿಸುತ್ತೇನೆ. ನೀನೇಕೆ ನನ್ನೊಂದಿಗೆ ಬರಬಾರದು?" ಎನ್ನಲು ಮಹಾರಾಣಿಯ ಪುನರ್‌ಜನ್ಮವಾದ ಆ ಸಗಣಿ ಹುಳುವು;

"ಎಲೈ ಮಹಾರಾಜ ,ಈಗ ನನಗೆ ನಿನ್ನಿಂದ ಏನು ಪ್ರಯೋಜನ? ನೀನು ನನ್ನನ್ನು ಮುದ್ದಿಸಬಲ್ಲೆಯಾ? ನನ್ನೊಂದಿಗೆ ಸುಖಿಸಬಲ್ಲೆಯಾ? ನನಗೆ ಈಗ ನನ್ನ ಸರ್ವಸ್ವವೆಲ್ಲ ಈ ಜನ್ಮದ ನನ್ನ ಪ್ರಿಯತಮನೇ ಆಗಿದ್ದಾನೆ. ನಾನು ಅವನನ್ನು ಸೇವಿಸುವುದೇ ಧರ್ಮವಾಗಿದೆ. ಸಮಯವೊಂದು ಒದಗಿ ಬಂದದ್ದೇ ಆದರೆ ನಾನು ನಿನ್ನ ಕೊರಳಿನ ರಕ್ತದಿಂದ ನನ್ನ ಪತಿ ಸಗಣಿ ಹುಳುವಿನ ಪಾದವನ್ನು ತೊಳೆಯ ಬಲ್ಲೆ. ಹೊಸ ಸುಖ ದುಃಖಗಳಿಂದ ಹಳೆಯ ಸುಖ ದುಃಖಗಳು ಮುಚ್ಚಿ ಹೋಗುತ್ತವೆ. ಆದುದರಿಂದ ಎಲೈ ಅಸ್ಸಕ ರಾಜನೇ, ನನಗೆ ನಿನಗಿಂತ ಈಗ ಈ ಕೀಟವೇ ಹೆಚ್ಚು ಪ್ರಿಯವಾಗಿದೆ. ಈ ಜನ್ಮದಲ್ಲಾದರೂ ನಾನು ನನ್ನ ಕರ್ಮವನ್ನು ಅರಿಯಲು ಪ್ರಯತ್ನಿಸುತ್ತೇನೆ. ನನ್ನ ಪಾಪ ಕರ್ಮವನ್ನು ಸವೆಸುತ್ತೇನೆ. ನನಗೆ ಅನುವು ಮಾಡಿಕೊಡು. ಈಗ ನನಗೆ ನಿನ್ನಿಂದ ಆಗಬೇಕಾದ್ದು ಏನೂ ಇಲ್ಲ ಅಥವಾ ನೀನು ನನಗೆ ಏನಾಗಬೇಕು?"ಎಂದಿತು ಆ ಹೆಣ್ಣು ಸಗಣಿ ಹುಳುವು .

ಇದರಿಂದ ದಿಗ್ಮೂಢನಾದ ಮಹಾರಾಜನು ಮರು ಮಾತನಾಡದೆ ಮೌನವಾಗಿ ತನ್ನ ಅರಮನೆಯನ್ನು ತಲುಪಿದ. ಅಂತಃಪುರದ ತನ್ನ ಮಂಚದ ಕೆಳಗೆ ಇರಿಸಿದ್ದ ಶವವನ್ನು ತೆಗೆದು ಶವ ಸಂಸ್ಕಾರ ಮಾಡಿದ. ಅಲ್ಲಿಂದ ಹಿಂದಿರುಗಿ ಬರುವ ಮುನ್ನ ಬೋಧಿಸತ್ವರಿಗೆ ವಂದಿಸುತ್ತಾ; "ಹೌದು ಗುರುದೇವಾ, ನೀನು ನಿಜಕ್ಕೂ ಜನ್ಮ ಜನ್ಮಗಳ ರಹಸ್ಯವನ್ನು ಬಲ್ಲ ಶೀಲವಂತನೇ ಸರಿ. ಇಲ್ಲಿ ಅಗಲಿಕೆಯೇ ಶಾಶ್ವತ. ನೆನ್ನೆಗಿಂತ ಇಂದೇ ಪ್ರಸ್ತುತ. ಹೌದು ಈಗ ಆಕೆ ನನಗೇನಾಗಬೇಕು? ನಾನು ಆಕೆಗೆ ಏನಾಗಬೇಕು? ನಮ್ಮ ನಮ್ಮ ಕರ್ಮಗಳೇ ನಮ್ಮ ಬಂಧು ಬಳಗ ಮಿತ್ರ ಮತ್ತು ಶತ್ರು ಎಲ್ಲವೂ ಹೌದು. ನನ್ನ ಕಣ್ಣು ತೆರೆಸಿದ ನಿನಗೆ ಅನಂತ ವಂದನೆ...!! " ಎಂದು ಮುನ್ನೆಡೆದ. □

'SAMVADA' Kannada Monthly, october 2010 RNI-KAR KAN/2002/9246 CPMG/KA/BGW-706/2009-11
Office of Posting: Mail Business Center, Bangalore GPO, Date of Posting: 1st & 7th of Every Month

ಕೈಗಾರಿಕಾ ರಂಗದಲ್ಲಿ ಸಾಧನೆಗಳ ಸರಮಾಲೆ

ಸಮೃದ್ಧ ಕರ್ನಾಟಕದ ಸೌಹಾರ್ದಯುತ ಕೈಗಾರಿಕಾ ಬೆಳವಣಿಗೆ

ರಾಜ್ಯದ ಒಟ್ಟಾರೆ ಪ್ರಗತಿಗೆ ಕೈಗಾರಿಕಾ ರಂಗದ ಕೊಡುಗೆ ಅತ್ಯಂತ ಮಹತ್ವದ್ದು. ಉತ್ಪಾದನೆ, ಉದ್ಯೋಗಾವಕಾಶ ಸೃಷ್ಟಿ, ಜೀವನ ಮಟ್ಟ ಸುಧಾರಣೆಯಿಂದ ಒಟ್ಟಾರೆ ಆರ್ಥಿಕತೆಗೆ ಚೈತನ್ಯ ನೀಡುವ ಕೈಗಾರಿಕಾ ರಂಗಕ್ಕೆ ಸರ್ಕಾರವು ಹಲವು ಉತ್ತೇಜನಗಳನ್ನು ನೀಡಿ ಪೋಷಿಸಿದೆ. ರಾಜ್ಯಕ್ಕೆ ಹರಿದು ಬರುತ್ತಿರುವ ಬಂಡವಾಳ, ಸ್ಥಾಪನೆಯಾಗುತ್ತಿರುವ ಹೊಸ ಉದ್ಯಮಗಳು ಹಾಗೂ ರಫ್ತಿನ ಹೆಚ್ಚಳ ಈ ಸಾಧನೆಗೆ ಕನ್ನಡಿ ಹಿಡಿಯುತ್ತವೆ.

ಸಾಧನೆಯ ಪಕ್ಷಿನೋಟ

ಕ್ರಮ ಸಂಖ್ಯೆ	ಯೋಜನೆಗಳ ವಿವರ	ಆರ್ಥಿಕ ಸಾಧನೆ (ರೂ. ಲಕ್ಷಗಳಲ್ಲಿ)
1	ಏಕಗವಾಕ್ಷಿ ಹಾಗೂ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಮಂಜೂರಾದ – 354 ಯೋಜನೆಗಳು	11044782
2	ಹೊಸ ಔದ್ಯಮಿಕ ಸಮೂಹಗಳ ಸ್ಥಾಪನೆ (ವಿಶೇಷ ಘಟಕ ಯೋಜನೆ / ಗಿರಿಜನ ಉಪ ಯೋಜನೆ) 3669 ಫಲಾನುಭವಿಗಳು	1135.93
3	ಕೈಗಾರಿಕಾ ವಿಕಾಸ ಯೋಜನೆ – 385 ಫಲಾನುಭವಿಗಳು	370.00
4	ಖಾದಿ ಗ್ರಾಮೋದ್ಯೋಗ ಸಂಘಗಳ ಉತ್ಪಾದನೆಯ ಮೇಲಿನ ರಿಯಾಯಿತಿ – 107 ಸಂಘಗಳು	300.00
5	ಎಂ. ಎಸ್. ಎಂ. ಇ. ಕೈಗಾರಿಕೆಗಳ ನೊಂದಣಿ – 15705 ಘಟಕಗಳು	101617
6	ಬಂಡವಾಳ ಸಹಾಯಧನ ಬಿಡುಗಡೆ – 5203 ಘಟಕಗಳು	9999.07
7	ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಭೂ ಹಂಚಿಕೆ – 693 ಘಟಕಗಳು	1713 (ಎಕರೆಗಳು)
8	ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆ – 940 ಫಲಾನುಭವಿಗಳು	864.00

ಕ್ಷಿಪ್ರ ಪ್ರಗತಿಯ ಹಾದಿಯಲ್ಲಿ

- ವಿಶೇಷ ಆರ್ಥಿಕ ವಲಯ – ರಾಜ್ಯ ನೀತಿಯನ್ನು ಜಾರಿಗೊಳಿಸಿದೆ
- ರಾಜ್ಯ ಸರ್ಕಾರವು ಹೊಸ ಕೈಗಾರಿಕಾ ನೀತಿ – 2009 ಅನ್ನು ಜಾರಿಗೊಳಿಸಿರುತ್ತದೆ.
- ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಕೈಗಾರಿಕಾ ಭೂಮಿಯ ಬ್ಯಾಂಕ್ ಸ್ಥಾಪನೆಗೆ ಅನುದಾನವನ್ನು ಒದಗಿಸಲಾಗಿದೆ
- ಮಾನವ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ವೈಜ್ಞಾನಿಕವಾಗಿ ಮತ್ತು ಸುಸ್ಥಿರ ರೀತಿಯಲ್ಲಿ ಅಭಿವೃದ್ಧಿಪಡಿಸುವ ಮೂಲಕ ಭವ್ಯ ಕರ್ನಾಟಕವನ್ನು ನಿರ್ಮಿಸುವುದು.
- 2014 ಒಳಗಾಗಿ ರೂ. 300000 ಕೋಟಿ ಬಂಡವಾಳ ಹೂಡಿಕೆಯ ಹೊಸ ಉದ್ಯಮಗಳ ಸ್ಥಾಪನೆಯ ಮುಖೇನ 10 ಲಕ್ಷ ಮಂದಿಗೆ ಹೆಚ್ಚುವರಿ ಉದ್ಯೋಗ ಸೃಜನೆ
- ಕೈಗಾರಿಕೆಗಳ ಬಲಿಷ್ಠ ಬೆಳವಣಿಗೆಗೆ ಬೇಕಾದ ಅನುಕೂಲಕರ ಸನ್ನಿವೇಶ ಕಲ್ಪಿಸುವುದು.
- ರಾಜ್ಯದ ಒಟ್ಟು ಜಿ.ಡಿ.ಪಿ.ಯಲ್ಲಿ ಉತ್ಪಾದನಾ ಕ್ಷೇತ್ರದ ಪಾಲನ್ನು ಶೇಕಡ 20ಕ್ಕೆ ಹೆಚ್ಚಿಸುವುದು.
- ಕೈಗಾರಿಕೆಗೆ ಅಭಿವೃದ್ಧಿಗಾಗಿ ಸಲಹೆಗಳನ್ನು ನೀಡಲು " ವಿಷನ್ ಗ್ರೂಪ್" ಅನ್ನು ರಚಿಸಲಾಗಿದ್ದು, ವಿಷನ್ ಗ್ರೂಪ್ ಕಾರ್ಯ ಪ್ರವೃತ್ತವಾಗಿದೆ.
- ರಾಜ್ಯದಲ್ಲಿನ ನೈಸರ್ಗಿಕ ಸಂಪನ್ಮೂಲ ಆಧಾರದ ಮೇಲೆ ಉಕ್ಕು, ಸಿಮೆಂಟು, ಜವಳಿ, ಆಹಾರ, ಆಟೋಮೊಬೈಲ್, ಮಾಹಿತಿ ಹಾಗೂ ಜೈವಿಕ ತಂತ್ರಜ್ಞಾನ ವಲಯಗಳನ್ನು ಅಭಿವೃದ್ಧಿಪಡಿಸಲು ಸೂಕ್ತ ಕ್ರಮಗಳ ಅನುಷ್ಠಾನ – ಪ್ರತಿ ವಲಯಕ್ಕೆ ವಿಶೇಷ ಕಾರ್ಯಪಡೆ ಕಾರ್ಯಪ್ರವೃತ್ತವಾಗಿದೆ.
- ರಾಜ್ಯದ ವಿವಿಧ ಭಾಗಗಳ ಕೈಗಾರಿಕೋದ್ಯಮಿಗಳ ಸಮಸ್ಯೆಗಳನ್ನು ಅಲ್ಲಲ್ಲಿಯೇ ಬಗೆ ಹರಿಸಲು ಬೃಹತ್ ಕೈಗಾರಿಕಾ ಅದಾಲತ್ ಹಮ್ಮಿಕೊಂಡು ಕಾರ್ಯಗತಗೊಳಿಸಲಾಗುತ್ತದೆ
- ರಫ್ತು – ವ್ಯಾಪಾರ ಉತ್ತೇಜನ ಚಟುವಟಿಕೆಗೆ ವಿಟಿಪಿಸಿಯ ಅಧೀನ ಕಚೇರಿಯನ್ನು ಧಾರವಾಡದಲ್ಲಿ ಸ್ಥಾಪಿಸಿದೆ.
- 4 ಹೊರ ರಾಜ್ಯಗಳಲ್ಲಿ ಇಲಾಖೆಯ 4 ಹಿರಿಯ ಅಧಿಕಾರಿಗಳ ಪ್ರತ್ಯೇಕ ತಂಡಗಳು ಪ್ರವಾಸ ಕೈಗೊಂಡು ಅಲ್ಲಿನ ಅಭಿವೃದ್ಧಿ ಕುರಿತು ಅಧ್ಯಯನ ನಡೆಸಿದ್ದಾರೆ.



ಶ್ರೀ ಬಿ. ಎಸ್. ಯಡಿಯೂರಪ್ಪ
ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಮುರುಗೇಶ್ ರು. ನಿರಾಣಿ
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರು

ಶ್ರೀ ವೆಂಕಟರಮಣಪ್ಪ
ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು

ಕೈಗಾರಿಕಾ ಅದಾಲತ್

ಮೈಸೂರು ಮತ್ತು ಗುಲ್ಬರ್ಗ ವಿಭಾಗಗಳ ಕೈಗಾರಿಕಾ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ

ಈಗಾಗಲೆ ಬೆಳಗಾಂ ವಿಭಾಗದಲ್ಲಿ ಕೈಗಾರಿಕಾ ಅದಾಲತ್‌ನ್ನು 10ನೇ ಫೆಬ್ರವರಿ 2009 ರಂದು ಹುಬ್ಬಳ್ಳಿಯಲ್ಲಿ ಯಶಸ್ವಿಯಾಗಿ ನಡೆಸಿದ್ದು, 207 ಅಹವಾಲುಗಳನ್ನು ಸ್ವೀಕರಿಸಿದ್ದು 90 ಅಹವಾಲುಗಳನ್ನು ವಿಲೇವಾರಿ ಮಾಡಲಾಗಿದೆ.

ಕರ್ನಾಟಕದಲ್ಲಿ ಬೃಹತ್ ಕೈಗಾರಿಕಾ ಅದಾಲತ್‌ನ್ನು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರಾದ ಶ್ರೀ ಮುರುಗೇಶ್ ರು. ನಿರಾಣಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಗುವುದು. ಮೈಸೂರು ವಿಭಾಗದ 8 ಜಿಲ್ಲೆಗಳಾದ ಮಂಗಳೂರು, ಮಡಿಕೇರಿ, ಮೈಸೂರು, ಚಾಮರಾಜನಗರ, ಚಿಕ್ಕಮಗಳೂರು, ಹಾಸನ, ಮಂಡ್ಯ ಮತ್ತು ಉಡುಪಿ ಹಾಗೂ ಗುಲ್ಬರ್ಗ ವಿಭಾಗದ 5 ಜಿಲ್ಲೆಗಳಾದ ಬೀದರ್, ರಾಯಚೂರು, ಬಳ್ಳಾರಿ, ಗುಲ್ಬರ್ಗ, ಕೊಪ್ಪಳ ಉದ್ಯಮಿಗಳು ಹಾಗೂ ಸರ್ಕಾರಿ ಅಧಿಕಾರಿಗಳ ನಡುವಿನ ಈ ಮುಖಾಮುಖಿಯು, ಉದ್ಯಮಶೀಲರ ಹಾದಿಯನ್ನು ಸುಗಮಗೊಳಿಸಲು ನೆರವಾಗುವುದು.

ಮೈಸೂರು ಮತ್ತು ಗುಲ್ಬರ್ಗಾ ವಿಭಾಗಗಳಲ್ಲಿ ಕೈಗಾರಿಕಾ ಅಭಿವೃದ್ಧಿಯನ್ನು ತ್ವರಿತಗೊಳಿಸುವುದು ಮುಖ್ಯ ಉದ್ದೇಶವಾಗಿರುತ್ತದೆ. ಕೈಗಾರಿಕೋದ್ಯಮಿಗಳು ತಮ್ಮ ಸಮಸ್ಯೆ / ಅಹವಾಲನ್ನು ಸಂಬಂಧಿಸಿದ ಜಿಲ್ಲಾ ಕೈಗಾರಿಕಾ ಕೇಂದ್ರಗಳಿಗೆ ಲಿಖಿತ ರೂಪದಲ್ಲಿ ನೀಡಲು ವಿನಂತಿಸಲಾಗಿದೆ.

ಪ್ರಮುಖಾಂಶಗಳು

● ಉದ್ಯಮಿಗಳು ಹಾಗೂ ಅಧಿಕಾರಿಗಳ ನೇರ ಮುಖಾಮುಖಿ ● ಕಾನೂನಿನ ಚೌಕಟ್ಟಿನಲ್ಲಿ ಪರಿಹಾರ ● ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೆಚ್ಚು ಒತ್ತು ● ಏಕಗವಾಕ್ಷಿ ಪದ್ಧತಿ ಪರಿಣಾಮಕಾರಿ ಜಾರಿಗೆ ಚಿಂತನ ● ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳು, ಎಫ್.ಕೆ.ಸಿ.ಸಿ.ಐ., ಕಾಸಿಯಾ, ಚೇಂಬರ್ ಆಫ್ ಕಾಮರ್ಸ್, ಸಿ.ಐ.ಐ. ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಕೈಗಾರಿಕಾ ಕ್ಷೇತ್ರದ ಪ್ರಮುಖರು ಪಾಲ್ಗೊಳ್ಳಲಿದ್ದಾರೆ

ಅದಾಲತ್‌ನ ಕಾರ್ಯಸೂಚಿ

● ಭೂಮಿ, ವಿದ್ಯುತ್, ಹಣಕಾಸು, ನೀರು, ಕಾರ್ಮಿಕ ಸಮಸ್ಯೆಗಳು ಇತ್ಯಾದಿ ● ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ವಾಣಿಜ್ಯ ತೆರಿಗೆ ಮತ್ತು ಇತರ ಸಹಾಯ ಸವಲತ್ತುಗಳ ಬಗ್ಗೆ ಪರಿಹಾರ

ಮೈಸೂರು ವಿಭಾಗ	
ದಿನಾಂಕ	: 10.06.2009
ಸಮಯ	: ಬೆಳಿಗ್ಗೆ 10.30 ಗಂಟೆಗೆ
ಸ್ಥಳ	: ಡಾ॥ ಟಿ. ಎಂ. ಎ. ಪೈ ಇಂಟರ್‌ನ್ಯಾಷನಲ್ ಕನ್ವೆನ್ಷನ್ ಸೆಂಟರ್, ಎಂ. ಜಿ. ರಸ್ತೆ, ಮಂಗಳೂರು
ಅಹವಾಲುಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : 03.06.2009	

ಗುಲ್ಬರ್ಗ ವಿಭಾಗ	
ದಿನಾಂಕ	: 17.06.2009
ಸಮಯ	: ಬೆಳಿಗ್ಗೆ 10.30 ಗಂಟೆಗೆ
ಸ್ಥಳ	: ವಿಜಯಶ್ರೀ ಹೆರಿಟೇಜ್ ವಿಲೇಜ್ ಪ್ರೈವೇಟ್ ಲಿಮಿಟೆಡ್, ವಿ. ಆರ್. ಭೂರತ್ ನಗರ, ಹಂಪಿ ರಸ್ತೆ, ಹೊಸಪೇಟೆ
ಅಹವಾಲುಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : 10.06.2009	

ಕರ್ನಾಟಕ ವಾರ್ತೆ